गिरा, ಸ್ತ್ರೀಂ ಮಾತನಾಡುವ ಶಕ್ತಿ; ಮಾತು; ನಾಲಿಗೆ.

गिराना, ಸಂ ಬೀಳಿಸು; ಪತನವಾಗುವಂತೆ ಮಾಡು.

गिरानी, ಸ್ತ್ರೀಂ ತುಟ್ಟಿಯಾಗಿರುವಿಕೆ; ಬರಗಾಲ; ಕ್ಷಾಮ.

गिरामी, ವಿಂ ಪೂಜ್ಯರಾದ; ಪ್ರಸಿದ್ಧರಾದ.

गिरि, ಪುಂ ಪರ್ವತ; ಬೆಟ್ಟ.

गिरी, ಸ್ತ್ರೀಂ ಬೀಜದ ತಿರುಳು.

गिरीश, ಪುಂ ಶಿವ; ಹಿಮಾಲಯ; ದೊಡ್ಡ ಬೆಟ್ಟ.

गिरेबान, ಪುಂ ಭುಜದಮೇಲೆ ಧರಿಸುವ ಶಾಲುವಿನ ಸುತ್ತಂಚು.

गिरो, ವಿಂ दे० **गिरवी**.

गिरोह, पुं० ಸಮೂಹ; ಗುಂಪು.

गिर्जा / गिर्जाघर } पुं० ಕ್ರೈಸ್ತರ ದೇವಾಲಯ.

गिर्द, अव्य० ಅಕ್ಕಪಕ್ಕ; ಆಜು ಬಾಜು.

गिर्दावर, पुं० ನಿರೀಕ್ಷಕ; ಪರೀಕ್ಷಿಸುವವ.

गिर्दाब, पुं० ನೀರಿನ ಸುಳಿ.

गिल, स्त्री० ಮಣ್ಣು; ಗಚ್ಚು; ಗಾರೆ.

गिलकार, पुं० ಗಾರೆ ಕೆಲಸದವನು.

गिलकारी, स्त्री० ಗಾರೆಯ ಕೆಲಸ.

गिलटी, स्त्री० ಗೆಣ್ಣು; ಸಂಧಿ.

गिलना, स० ಹಲ್ಲು ತಾಗಿಸದೆ ನುಂಗಿಬಿಡು; ಮನಸ್ಸಿನೊಳಗೇನೇ ಇಟ್ಟುಕೊಳ್ಳು.

गिलबिला, वि० ಬಹಳ ಮೆತ್ತಗಿರುವ; ಹಣ್ಣುಹಣ್ಣಾದ.

गिलाबलाना, अ० ಅಸ್ಪಷ್ಟವಾಗಿ ಮಾತನಾಡು; ಗೊಣಗುಟ್ಟು.

गिलम, स्त्री० ಉಣ್ಣೆಯ ಹಾಸಗಂಬಳಿ; ಜಮಖಾನೆ.

गिलहरी, स्त्री० ಅಳಿಲು; ಅಣಿಲು.

गिला, पुं० ನಿಂದೆ; ದೂಷಣೆ.

गिलाज़ात, स्त्री० ಕೊಳೆಯಾಗುವಿಕೆ.

गिलाफ़, पुं० ದಿಂಬು ರಜಾಯಿ ಮುಂತಾದವುಗಳ ಚೀಲ; ಬತ್ತಳಿಕೆ; ಒರೆ.

गिलावा, पुं० ಗಾರೆ; ಗಿಲಾವು.

गिलास, पुं० ಲೋಟ; ಗ್ಲಾಸು.

गिलोय, स्त्री० ಗುಡುಚಿ ಬಳ್ಳಿ.

गिलौरी, स्त्री० ವೀಳ್ಯದೆಲೆ ಬೀಡ; ಪಾನ್‌ಪಟ್ಟಿ; ತಾಂಬೂಲ;—ख़ान ವೀಳ್ಯದಡಬ್ಬಿ.

गिल्ला, पुं० ನಿಂದೆ; ಜಗಳ.

गिल्टी, स्त्री० दे० गिलटी.

गिल्ली, स्त्री० दे० गुल्ली.

गीं, प्रत्य० ಪ್ರಭಾವಿತ; ಉದಾ. गमगीं.

गींजना, स० ಹಿಸುಕು; ಕಿವುಚು.

गीत, पुं० ಹಾಡು; ಪದ; ಗೀತ.

गीदड़, पुं० ನರಿ; ಶೃಗಾಲ. वि० ಅಂಜುಬುರುಕ; ಹೇಡಿ.

गीदी, वि० ಅಂಜುಬುರುಕ; ಹೇಡಿ.

गीध, पुं० ರಣಹದ್ದು; ಗಿಡಗ.

गीधना, अ० ಒಂದುಸಲ ಕಾರ್ಯಲಾಭವಾದುದನ್ನು ಕಂಡು ಯಾವಾಗಲೂ ಅಂತಹ ಪರಿಸ್ಥಿತಿಯನ್ನೇ ಇದಿರು ನೋಡುತ್ತಿರು.

गीबत, स्त्री० ಅನುಪಸ್ಥಿತಿ; ಗೈರುಹಾಜರಿ; ಚಾಡಿಹೇಳುವಿಕೆ.

गीर, प्रत्य० ಇಟ್ಟುಕೊಂಡಿರುವವ; ಉದಾ: जहांगीर, अलमगीर.

गीला, वि० ಒದ್ದೆಯಾಗಿರುವ; ತೊಯಿದು ಹೋಗಿರುವ.

गुंग / गुंगा } पुं० ಮೂಕತನ; ಮೂಗ.

गुंगी, स्त्री० ಇರ್ತಲೆ ಹಾವು; ಕುರುಡು ಹಾವು.

गुंचा, पुं० ಮುಗುಳು; ಮೊಗ್ಗು; ಆನಂದೋತ್ಸವ; ನೃತ್ಯ.

गुंज / गुंजन } स्त्री० ಭ್ರಮರಗಳ ಝೇಂಕಾರ.

गुंजना, अ० ಝೇಂಕರಿಸು.

गुंजा, पु० ಗುಲಗುಂಜಿ; ಮಂಜಾಡಿ; ಗುಂಜಾಫಲ.

गुंजाइश, स्त्री० ಅವಕಾಶ; ಎಡೆ; ಸ್ಥಾನ; ಸಂದರ್ಭ.

गुंजान, वि० ದಟ್ಟ; ನಿಬಿಡ; ಅವಿರಳ.

गुंजायमान, वि० ಝೇಂಕರಿಸುವ.

गुंजार, पु० ಝೇಂಕಾರ.

गुंडई, स्त्री० ಪೋಕರಿತನ; ಅನ್ಯಾಯ.

गुंडा, त्रि० ಪೋಕರಿ; ಪಾಪಿ.

गुंथना, अ० ಪೋಣಿಸಲ್ಪಡು; ಹಾರವನ್ನು ಪೋಣಿಸು.

गुंधना, स० ನಾದಲ್ಪಡು; ಹದಮಾಡಲ್ಪಡು.

गुँधवाना, स० ಹದಮಾಡಿಸು.

गुँधाई, स्त्री० ಹದಮಾಡುವಿಕೆ; ಹದಮಾಡಿದುದರ ಕೂಲಿ.

गुंफ } **गुंफन** } पु० ಗೊಂಚಲು; ಹೆಣೆದ ಅಥವಾ ಪೋಣಿಸಿದಗಂಟು; ಸಿಕ್ಕು; ತೊಡಕು.

गुंबज़ } **गुंबद** } पु० ದೇವಸ್ಥಾನಗಳ ಮೇಲಿನ ಗೋಲಾಕೃತಿಯ ಗೋಪುರ.

गुंबा, पु० ತಲೆಯಲ್ಲಿ ಏಟಿನಿಂದ ಎದ್ದ ಬಾಸುಂಡೆ.

गुइयाँ, स्त्री० ಗೆಳತಿ; ಸಖಿ.

गुच्छ, पु० ಗೊಂಚಲು; ಸಮೂಹ ಕಟ್ಟು; ಗುತ್ತಿ.

गुच्छक, पु० } **गुच्छा**, स्त्री० } दे० गुच्छ.

गुच्छेदार, वि० ಗೊಂಚಲುಗಳುಳ್ಳ.

गुज़र, पु० ಗತಿ; ಪ್ರವೇಶ; ಜೀವನೋಪಾಯ; ಕಾಲಕ್ಷೇಪ; ನಿರ್ವಾಹ;—जाना ಸಾಯು; ಮರಣಹೊಂದು.

गुज़र-गाह, स्त्री० ಮಾರ್ಗ; ದಾರಿ; ನದೀ ಘಟ್ಟ.

गुज़रना, अ० ಹೋಗು; ಕಾಲ ಕಳೆದು ಹೋಗು; ನಡೆ; ಸಾಗು; ನಿರ್ವಹಿಸು; ಸಾಯು.

गुज़र-बसर, पु० ಜೀವನ ನಿರ್ವಾಹ; ಕಾಲಕ್ಷೇಪ.

गुज़रान, पु० दे० गुज़र.

गुज़श्ता, वि० ಕಳೆದು ಹೋದ; ಕಳೆದ; ಹಿಂದಿನ.

गुज़राना, स० (ಕಾಲ) ಕಳೆಯು.

गुज़ारा, पु० ಜೀವನ ನಿರ್ವಾಹಕ್ಕಾಗಿ ಸಿಗತಕ್ಕ ವೇತನ; ಸುಂಕದಕಟ್ಟೆ.

गुज़ारिश, स्त्री० ಅರಿಕೆ; ನಿವೇದನೆ.

गुझिया, स्त्री० ಖರ್ಜಿಕಾಯಿ; ಒಂದು ಬಗೆಯ ತಿನಸು.

गुटकना, अ० ಪಾರಿವಾಳದಂತೆಕೂಗು. स० ನುಂಗು.

गुटका, पु० ಬಹಳ ಚಿಕ್ಕಪುಸ್ತಕ; ಬುಗರಿ.

गुटरगूँ, स्त्री० ಪಾರಿವಾಳದ ಕೂಗು.

गुटिका, स्त्री० ಗುಳಿಗೆ.

गुट्ट, पु० ದಳ; ಸಮೂಹ; ಗೋಷ್ಠಿ.

गुट्टा, वि० ಕುಳ್ಳ; ಗಿಡ್ಡ.

गुठली, स्त्री० ವಾಟೆ; ಗೊರಟು; ಯಾವುದಾದರೂ ಹಣ್ಣಿನ ದೊಡ್ಡ ಮತು ಗಟ್ಟಿಯಾದ ಬೀಜ.

गुडंबा, पु० ಮಾವಿನಹಣ್ಣಿನ ಮುರಬ್ಬ; ಗುಳಾಂಬ.

गुड़, पु० ಬೆಲ್ಲ.

गुड़गुड़ाना, अ० ಗುಳುಗುಳು ಯೆಂದು ಶಬ್ದಮಾಡು. स० ಹುಕ್ಕ ಸೇದು.

गुड़गुड़ी, स्त्री० ಗುಡಿಗುಡಿ; ಹುಕ್ಕ.

गुड़िया, स्त्री० ಬಟ್ಟೆಗಳಿಂದ ಮಾಡಿದ ಆಟದ ಗೊಂಬೆ; ಬೊಂಬೆ.

गुड़ी, स्त्री० ಚಿಟ್ಟೆಹುಳ; ಪತಂಗ; ದೊಡ್ಡ ಗಾಳೀಪಟ.

गुड्डा, पु० ಬಟ್ಟೆಯಲ್ಲಿ ಮಾಡಿದ ಬೊಂಬೆ; ದೊಡ್ಡಗಾಳೀಪಟ.

गुड्डी, स्त्री० दे० पतंग.

गुण, पु० ಗುಣ; ಧರ್ಮ; ಪ್ರಭಾವ; ಶೀಲ; ಸ್ವಭಾವ; ಫಲ.

गुणज्ञता, स्त्री० ಗುಣ ಪರೀಕ್ಷೆ.

गुनफल, पु० ಗುಣಿಸಿಬಂದ ಫಲ.

गुणांक, पु० ಗುಣಿಸಲ್ಪಡುವ ಸಂಖ್ಯೆ.

गुणा, पु० ಗುಣಿತ; ಮಡಿ.

गुणातीत, वि० ಬಹಳ ಗುಣಗಳುಳ್ಳ.

गुणी, वि० ಗುಣವಂತ. पु० ನಿಪುಣನಾದ ಮನುಷ್ಯ.

गुण्य, पु० ಗುಣಿಸುವ ಸಂಖ್ಯೆ.

गुण्यांक, पु० ಗುಣಿಸಲ್ಪಡುವ ಸಂಖ್ಯೆ.

गुत्थमगुत्था, पु० ಗುದ್ದಾಟ; ಮುಷ್ಟಾಮುಷ್ಟಿ; ಜಗಳ; ಸಿಕ್ಕು.

गुत्थी, स्त्री० ಸಿಕ್ಕು; ಗಂಟು; ತೊಡಕು.

गुथना, अ० ಪೋಣಿಸಲಡು.

गुथवाना, स० ಪೋಣಿಸಿಸು.

गुदगुदा, वि० ಮಾಂಸಲವಾದ; ಬಹಳ ಮೆತ್ತಗಿರುವ.

गुदगुदाना, अ० ಉಲ್ಲಾಸಪಡು; ತಿಕ್ಕಲಾಗು.

गुदगुदी, स्त्री० ತಿಕ್ಕಲಾಟ; ನಗುವಿನ ಸೊಕ್ಕು; ಆಹ್ಲಾದ; ಕಾಮೋದ್ದೀಪನ.

गुदड़िया, पु० ಹರಕು ಚಿಂದಿ ಬಟ್ಟೆಯನ್ನು ಹೊದ್ದುಕೊಂಡವನು; ಬಟ್ಟೆ ಚಿಂದಿಯ ವ್ಯಾಪಾರಿ; ಡೇರೆ ಗುಡಾರ ಮುಂತಾದವುಗಳನ್ನು ಬಾಡಿಗೆಗೆ ಕೊಡುವವ

गुदड़ी, स्त्री० ಹರಕು ಚಿಂದಿಯುಬಟ್ಟೆ; ಕಂಥೆ;—का लाल ಕೆಟ್ಟಸ್ಥಳದಲ್ಲಿ ಉತ್ತಮವಾದ ಪದಾರ್ಥವಿರುವಿಕೆ.

गुदड़ी-बाज़ार, पु० ಗುಜರಿಸಂತೆ.

गुदरना, अ० ದೂರವಾಗು; ತ್ಯಜಿಸು.

गुदा, स्त्री० ಮಲದ್ವಾರ.

गुदाज़, वि० ಮಾಂಸಲವಾದ; ಮೆತ್ತನೆಯ; ದಯಾಳು.

गुदाना, स० ಮಚ್ಚೆಹಾಕಿಸು.

गुदाम, पु० दे० गोदाम.

गुद्दी, स्त्री० ಹೆಗ್ಗತ್ತು; ತಲೆಯ ಹಿಂಭಾಗ; ಕೊರಳಿನ ಹಿಂಬಾಗ.

गुन, पु० दे० गुण.

गुनगुना, वि० ಉರುಗು ಬೆಚ್ಚಗಿರುವ ನೀರು.

गुनगुनाना, अ० ಅಸ್ಪಷ್ಟವಾಗಿ ಮಾತನಾಡು; ಗೊಣಗುಟ್ಟು.

गुनचा, पु० ಮೊಗ್ಗು.

गुनना, स० ಗುಣಿಸು; ಯೋಚಿಸು.

गुनह, पु० दे० गुनाह.

गुनहगार, वि० ಪಾಪಿ; ಅಪರಾಧಿ.

गुनहगारी, स्त्री० ಪಾಪ; ದೋಷ; ಅಪರಾಧ.

गुनही, पु० ಅಪರಾಧಿ.

गुना, पु० ಸಂಖ್ಯಾವಾಚಕ ಶಬ್ದಗಳ ಕೊನೆಯಲ್ಲಿ ಸೇರತಕ್ಕ ಪ್ರತ್ಯಯ; ಉದಾ;—दुगुना, चौगुना.

गुनाह, पु० ಅಪರಾಧ; ಪಾಪ.

गुनाही, पु० ಅಪರಾಧಿ; ದೋಷಿ.

गुनिया, पु० ಗುಣವಂತ.

गुपचुप, क्रि० ಸದ್ದಿಲ್ಲದೆ; ಸುಮ್ಮಗೆ.

गुप्त, वि० ಅಡಗಿರುವ; ಗೂಢವಾದ; ವೈಶ್ಯರ ಅಡ್ಡಹೆಸರು.

गुप्ती, स्त्री० ಒಳಗಡೆ ಕತ್ತಿಯಿರುವ ಊರುಗೋಲು.

गुफ़ा, स्त्री० ಗುಹೆ; ಕಂದರ.

गुफ़्तगू, स्त्री० ವಾತಾರ್ಲಾಪ; ಮಾತುಕತೆ.

गुबरैला, पु० ಸಗಣಿಹುಳ.

गुबार, पु० ಮಣ್ಣು; ಧೂಳು; ಮನಸ್ಸಿನೊಳಗಿನ ದ್ವೇಷ.

गुब्बारा, पु० ಆಕಾಶಬುಟ್ಟಿ.

गुम, पु० ಅಡಗಿರುವ; ಅಪ್ರಕಟವಾದ.

गुमटी, स्त्री० ರೈಲು ಅಡ್ಡಗೇಟು.

गुमनाम, वि० ಅಜ್ಞಾತ; ಹೆಸರಿಲ್ಲದ; ಅಪ್ರಸಿದ್ಧ.

गुमराह, वि० ಕುಮಾರ್ಗಿ; ದಾರಿತಪ್ಪಿದ.

गुमर, पु० ಹೆಮ್ಮೆ; ಅಭಿಮಾನ; ಮನಸ್ಸಿನೊಳಗಿನ ದ್ವೇಷ.

गुमान, पु० ಅಹಂಕಾರ; ಅಭಿಮಾನ.

गुमाना, स० ಕಳಕೊಳ್ಳು.

गुमानी, वि० ಅಹಂಕಾರಿ.

गुमाश्ता, पु० ಗುಮಾಸ್ತೆ; ಕರಣೀಕ.

गुम्मा, वि० ಮೌನವಾಗಿರುವ.

गुर, पु० ಬೆಲ್ಲ; ರಹಸ್ಯ; ಮೂಲಮಂತ್ರ.

गुरगा, पु० ಶಿಷ್ಯ; ದೂತ; ಗೂಢಚಾರ.

गुरदा, पु० ಪರಾಕ್ರಮ; ಒಂದು ವಿಧವಾದ ಚಿಕ್ಕ ತುಪಾಕಿ; ಮೂತ್ರಪಿಂಡ.

गुरबत, स्त्री० ಪ್ರಯಾಣ; ಪರದೇಶ.

गुरबा, स्त्री० ಬೆಕ್ಕು.

गुरबा, पु० ग़रीब का बहु०.

गुरिया, स्त्री० ಮಣಿ.

गुरवी, वि० ಅಹಂಕಾರಿ; ಗರ್ವಿ.

गुरु, वि० ಭಾರವಾದ. पु० ದೇವತೆಗಳ ಗುರು ಬೃಹಸ್ಪತಿ; ಶಿಕ್ಷಕ; ಅಧ್ಯಾಪಕ.

गुरुआइन, स्त्री० ಗುರುಪತ್ನಿ; ಉಪಾಧ್ಯಾಯಿನಿ.

गुरुआई, स्त्री० ಗುರುವಿನ ಧರ್ಮ.

गुरुभाई, वि० ಸಹಪಾಠಿ; ಒಂದೇ ಗುರುವಿನ ಬಳಿ ಅಧ್ಯಯನ ಮಾಡಿದವರು.

गुरुमुखी, स्त्री० ಪಂಜಾಬಿ ಭಾಷೆಯನ್ನು ಬರೆಯುವ ಲಿಪಿ.

गुरू, पु० ಗುರು; ಅಧ್ಯಾಪಕ; ಆಚಾರ್ಯ:—घंटाल ಬಹಳ ಚತುರ.

गुरेज़, स्त्री० ಓಡುವುದು.

गुरेरना, स० ದುರದುರನೆ ನೋಡು.

गुर्ग, पु० ಗುಳ್ಳೆನರಿ; ನರಿ.

गुर्द, वि० ಧೈರ್ಯಶಾಲಿ.

गुर्ज़, पु० ಗದೆ; ಬುರುಜು.

गुर्जर, पु० ಗುಜರಾತದೇಶ; ಗುರ್ಜರ ಎಂಬ ಜಾತಿಯ ಜನರು.

गुर्जरी, स्त्री० ಗುಜರಾತದೇಶದ ಮಹಿಳೆ.

गुर्राना, अ० ಗುರು ಗುಟ್ಟುವುದು; ಗುರ್ರೆನ್ನುವುದು.

गुर्वी, स्त्री० ಗರ್ಭಿಣಿ. वि० ಭಾರವಾದ.

गुर्सी, स्त्री० ಇದ್ದಲುಒಲೆ.

गुल, पु० ಗುಲಾಬಿಹೂವು; ಹೂವು; ನಗುವಾಗ ಗಲ್ಲದಮೇಲೆ ತೋರಿ ಬರುವ ಪುಷ್ಪಾಕೃತಿಯ ಗುರುತು; ದೀಪದಕುಡಿ;—खिलना ವಿಚಿತ್ರವಾದ ಘಟನೆ ಸಂಭವಿಸು; ಜಗಳ ಹುಟ್ಟು.

गुल, पु० ಸದ್ದು; ಗಲಾಟೆ;—करना ಗಲಾಟೆಮಾಡು.

गुलकंद, पु० ಗುಲಾಬಿ ಮುರಬ್ಬ; ಗುಲ್ಕಂದ.

गुलकारी, स्त्री० ಹೂಗಳನ್ನು ಚಿತ್ರಿಸುವ ಕೆಲಸ.

गुलगुल } वि० ಮೃದುವಾದ; ಸುಣ್ಣಗಿರುವ.
गुलगुला }

गुलगुलाना, स० ಸುಣ್ಣಗೆಕಿವುಚು.

गुलगूँ वि० ಗುಲಬಿ ಬಣ್ಣದ; ರೋಜಾಬಣ್ಣ.

गुलचांदनी, पु० ಇರುಳು ಮಲ್ಲಿಗೆ

गुलचा, पु० ಗಲ್ಲದಮೇಲೆ ಪ್ರೀತಿಯಿಂದ ಮೆತ್ತಗೆ ತಟ್ಟುವುದು.

गुलचाना, स० ಗಲ್ಲದಮೇಲೆ ಪ್ರೀತಿಯಿಂದ ಮೆತ್ತಗೆ ತಟ್ಟು.

गुलचीं, पु० ತೋಟಗಾರ; ಮಾಲಿ.

गुलछर्रा, पु० ಸುಖ; ಮಜಾ; ವಿಲಾಸ;—उड़ाना ಆನಂದಿಸು; ಮಜಾಮಾಡು.

गुलज़ार, पु० ತೋಟ; ಉದ್ಯಾನವನ. वि० ಕಂಗೊಳಿಸುವ; ಹಸರುಪಚ್ಚೆಯಿಂದೊಡಗೂಡಿದ; ರಮ್ಯವಾದ.

गुलझटी, स्त्री० ಗಂಟು; ಸಿಕ್ಕು; ಸುಕ್ಕು; ನಿರಿಗೆ.

गुलदाऊदी, स्त्री० ಸೇವಂತಿಗೆ.

गुलदस्ता, पु० ಹೂಗೊಂಚಲು.

गुलदान, पु० ಹೂಗಳ ಗುಚ್ಛಿಯನ್ನಿಡುವ ಪಾತ್ರೆ; ಹೂಜಾಡಿ.

गुलदाना, पु० ಸಿಹಿಬೂಂದಿ.

गुलदुम, स्त्री० ಬುಲ್‌ಬುಲ್ ಪಕ್ಷಿ.

गुलनार, पु० ದಾಳಿಂಬೆ ಹೂವು; ದಾಳಿಂಬೆಹೂವಿನ ಬಣ್ಣ; ಒಂದು ಜಾತಿಯ ದಾಳಿಂಬೆ.

गुलफ़ाम, वि० ಬಹಳ ಸುಂದರ; ಗುಲಾಬಿಹೂವಿನಂಥ.

गुलबदन, वि० ಕೋಮಲ.

गुलबर्ग, पु० ಗುಲಾಬಿ ಎಲೆ.

गुलमा, पु० ಹೊಡೆತ ಅಥವಾ ಗಾಯದಿಂದ ಉಂಟಾಗುವ ತಲೆಯ ಮೇಲಿನ ಬೀಗು ಅಥವಾ ಬಾವು; ಬಾತುಕೊಳ್ಳುವಿಕೆ.

गुलरू, वि० ಸುಂದರವಾದ.

गुलरेज, पु० ಹೂಬಾಣ.

गुलशन, पु० ತೋಟ; ಉದ್ಯಾನ.

गुलशब्बो, पु० ರಜನಿಗಂಧ; ಸ್ಪೈಕ್ ಕ್ರೈನ್.

गुलाब, पु० ಗುಲಾಬಿ;—**पाश** ಪನ್ನೀರುದಾನಿ;—**पाशी** ಪನ್ನೀರೆರೆಚುವುದು.

गुलाब-जामुन, पु० ಜಾಮೂನು.

गुलाबी, वि० ಗುಲಾಬಿಯ ಬಣ್ಣದ; ಪನ್ನೀರಿನಿಂದ ಕೂಡಿರುವ; ಸ್ವಲ್ಪ.

गुलाम, पु० ಆಳು; ದಾಸ; ಸೇವಕ; ನೌಕರ;—**का गुलाम** ದಾಸಾನುದಾಸ; ಅಡಿಯಾಳು.

गुलामी, स्त्री० ಗುಲಾಮಗಿರಿ; ಪರಾಧೀನತೆ.

गुलाल, पु० ಗುಲಾಲು; ಓಕುಳಿಯ ಪುಡಿ

गुल्ह, पु० ಕತ್ತು.

गुलिस्तां, पु० ಹೂದೋಟ.

गुलेनार, पु० दे० गुलनार.

गुलेल, स्त्री० ಪಕ್ಷಿಗಳನ್ನೂ ಕಪಿಗಳನ್ನೂ ಹೊಡೆಯಲು ಉಪಯೋಗಿಸುವ ಮಿಡಿಬಿಲ್ಲು.

गुलेलची, पु० ಮಿಡಿಬಿಲ್ಲು ಹೊಡೆಯುವವ.

गुलेला, पु० दे० गुलेल.

गुल्फ़, पु० ಕಾಲಿನ ಹರಡು; ಗಿರಿಗೆ.

गुल्म, पु० ಒಂದು ವಿಧವಾದ ಉದರವ್ಯಾಧಿ; ಗುಲ್ಮವ್ಯಾಧಿ.

गुल्ला, पु० ಮಿಡಿ ಬಿಲ್ಲಿಗೆ ಉಪಯೋಗಿಸುವ ಮಣ್ಣಿನ ಗೋಲಿ; ಬೊಬ್ಬೆ; ಗುಲ್ಲು.

गुल्लाला, पु० ಒಂದುಕೆಂಪುಹೂ.

गुल्ली, स्त्री० ಗೊರಟು; ಗಟ್ಟಿಯಾದ ಬೀಜ; ಚಿಣ್ಣಿ.

गुसल, पु० दे० गुस्ल.

गुसाँई, पु० दे० गोसाँई.

गुस्ताख़, वि० ಅಶಿಷ್ಟ; ದಿಟ್ಟತನದ; ಹಿರಿಯರನ್ನು ಅಲಕ್ಷಿಸುವ ಸ್ವಭಾವವುಳ್ಳ.

गुस्ताखी, स्त्री० ಅಶಿಷ್ಟತೆ; ದಿಟ್ಟತನ.

गुस्ल, पु० ಸ್ನಾನ; ಜಳಕ.

गुस्लख़ाना, पु० ಸ್ನಾನದ ಮನೆ.

गुस्सा, पु० ಕೋಪ; ಸಿಟ್ಟು.

गुस्सैल, **गुस्साव** } वि० ಮುಂಗೋಪಿ.

गुह, पु० ಗುಪ್ತವಾದ ಸ್ಥಳ; ಹೃದಯ.

गुहराना, स० ಕೂಗು; ಒದರು ಗಟ್ಟಿಯಾಗಿ ಕರೆ.

गुहा, स्त्री० दे० गुफा.

गुहार, स्त्री० ಮೊರೆಯಿಡು.

गुह्य, पु० ಗೋಪ್ಯವಾದ; ಗೂಢವಾದ.

गूंगा, पु० ಮೂಕ; ಮೂಗ. गूँगे का गुड़ ಅನುಭವಿಸಿಯೂ ಹೇಳಲಾಗದ.

गूंगी, स्त्री० ಮೂಕಳು.

गूंज, स्त्री० ಭ್ರಮರಗಳ ಝೇಂಕಾರ; ಪ್ರತಿಧ್ವನಿ.

गूंजना, अ० ಝೇಂಕರಿಸು; ಪ್ರತಿಧ್ವನಿಯು ಕೇಳಿಸು.

गूंथना, स० दे० गूथना.

गूंधना, स० ನೀರಿನಲ್ಲಿ ನೆನೆಸಿ ಕಲಸು; ನಾದು; ಹಿಸುಕು.

गूगल, पु० ಗೂಬೆ.

गूजर, पु० ಗೊಲ್ಲರಲ್ಲಿ ಒಂದು ಜಾತಿ.

गूढ़, वि० ಗೂಢ; ಗಂಭೀರ; ಕಠಿಣ.

गूढ़ोक्ति, स्त्री० ಒಬ್ಬನನ್ನು ಕುರಿತು ಮತ್ತೊಬ್ಬನಿಗೆ ನಾಟುವಂತೆ ಹೇಳುವ ಅಲಂಕಾರೋಕ್ತಿ.

गूथना, स० ಪೋಣಿಸು; ಟಾಂಕಿ ಹೊಲಿ.

गूदड़, पु० ಹಳೆಯಕಂತೆ; ಹರಕು ಬಟ್ಟೆ; ಚಿಂದಿ.

गूदर, पु० दे० गूदड़.

गूदा, पु० ಹಣ್ಣಿನ ತಿರುಳು.

गून, स्त्री० ದೋಣಿಯ ಹಗ್ಗ; ಒಂದು ಜಾತಿಯ ಹುಲ್ಲು; ದೊಡ್ಡ ಬಿಂದಿಗೆ.

गूना, पु० ಹಿತ್ತಾಳೆ ಅಥವಾ ಬಂಗಾರದಿಂದ ಮಾಡಿದ ಗಿಲೀಟು ರಂಗು.

गूमा, पु० ದ್ರೋಣಪುಷ್ಪಿ ಎಂಬ ಮೂಲಿಕೆ.

गूलर, पु० ಅತ್ತಿ; ಔದುಂಬರ:—का फूल ಅಮಾವಾಸ್ಯೆಯ ಚಂದ್ರ; ಅಸಂಭವ ಮಾತು.

गूह, पु० ಮಲ; ಗಲೀಜು.

गृह, पु० ಮನೆ; ಮಂದಿರ.

गृहस्थ, पु० ಗೃಹಸ್ಥ; ಸಜ್ಜನ.

गृहस्थी, स्त्री० ಗೃಹಸ್ಥಾಶ್ರಮ; ಮನೆಯ ಸಾಮಾನು

गृह्य, वि० ಗೃಹಸಂಬಂಧವಾದ.

गेंगटा, पु० ನಳ್ಳಿ.

गेंड़ना, स० ಹೊಲದ ಸುತ್ತಲೂ ಬದುವು ಹಾಕು.

गेंड़ली, स्त्री० ಕುಂಡಲ; ಸುರುಳಿ.

गेंड़ा, पु० ಕಬ್ಬು.

गेंडुआ, पु० ಕುದುರು; ಸಿಂಬೆ.

गेंडुरी } **गेंडुली** } स्त्री० ಗಡಿಗೆ ಬಿಂದಿಗೆಗಳ ಕೆಳಗಿಡತಕ್ಕ ಹಗ್ಗದಸಿಂಬೆ.

गेंद, स्त्री० ಚೆಂಡು; ಕಂದುಕ.

गेंदा, पु० ಚೆಂಡುಮಲ್ಲಿಗೆ ಹೂವು.

गेय, वि० ಹಾಡತಕ್ಕ; ಕೀರ್ತನೆ ಮಾಡತಕ್ಕ.

गेरना, स० ಹೊಯ್ಯು; ಬೀಳಿಸು; ಸುರಿಯು. अ० ಸುತ್ತಲೂಬರು.

गेरुआ, वि० ಕಾಷಾಯ; ಕಾವಿ ಬಣ್ಣದ.

गेरू, स्त्री० ಕಾವಿಕಲ್ಲು; ಕಾವಿ.

गेसू, ಪು० ಮುಂಗುರುಳು.

गेह, ಪು० ಮನೆ; ಗೃಹ.

गेहनी, ಸ್ತ್ರೀ० ಮನೆಯ ಜಮಾನಿ; ಗೃಹಿಣಿ; ಹೆಂಡತಿ.

गेहुँअन, ಪು० ಗೋಧಿನಾಗರ; ಗೋಧುಮೆ ಹಾವು.

गेहुँआ, ವಿ० ಗೋಧಿಯ ಬಣ್ಣದ.

गेहूँ, ಪು० ಗೋಧಿ; ಗೋದುವೆ.

गैंड़ा, ಪು० ಗಂಡಕಮೃಗ; ಖಡ್ಗಮೃಗ.

गैंती, ಸ್ತ್ರೀ० ಗುದ್ದಲಿ; ಪಿಕಾಸಿ.

गैन, ಪು० ಮಾರ್ಗ; ದಾರಿ.

ग़ैब, ಪು० ಪ್ರತ್ಯಕ್ಷವಲ್ಲದ;—दाँ ಭವಿಷ್ಯವಾದಿ.

ग़ैबत, ಸ್ತ್ರೀ० ಜಾಡಿ; ದೂರು.

गैबानी, ಸ್ತ್ರೀ० ದೊಡ್ಡ ಸಂಕಟ; ಕೆಟ್ಟ ನಡತೆಯ ಸ್ತ್ರೀ.

ग़ैबी, ವಿ० ಪರಿಚಯವಿಲ್ಲದ; ತಿಳುವಳಿಕೆಗೆ ಬಾರದ.

ग़ैर, ಪು० ಅನ್ಯಾಯ.

ग़ैर, ವಿ० ಅನ್ಯ; ಬೇರೆ; ಇತರ.

ग़ैरआबाद, ವಿ० ವಾಸವಿಲ್ಲದ; ಬೀಡು.

ग़ैरमनकूला, ವಿ० ಸ್ಥಿರ;-ಅಚಲ.

ग़ैरमामूली, ವಿ० ಅಸಾಧಾರಣವಾದ.

ग़ैरमुमकिन, ವಿ० ಅಸಂಭವ.

ग़ैरवाजिब, ವಿ० ಅನುಚಿತವಾದ.

ग़ैरहाज़िर, ವಿ० ಅನುಪಸ್ಥಿತ; ಹಾಜರಿಲ್ಲದ.

ग़ैरहाज़िरी, ಸ್ತ್ರೀ० ಅನುಪಸ್ಥಿತಿ; ಹಾಜರಿಲ್ಲದಿರುವಿಕೆ.

ग़ैरत, ಸ್ತ್ರೀ० ಲಜ್ಜೆ; ನಾಚಿಕೆ.

गैरिक, ಪು० ದೇ० गेरू.

गैल, ಸ್ತ್ರೀ० ಮಾರ್ಗ; ದಾರಿ; ಗಲ್ಲಿ.

गोंई, ಸ್ತ್ರೀ० ಎತ್ತಿನ ಜೋಡಿ.

गोंठ, ಸ್ತ್ರೀ० ಧೋತ್ರ ಅಥವಾ ವೇಷ್ಟಿಯ ಸೊಂಟದಲ್ಲಿ ಸಿಕ್ಕಿಸಿಕೊಳ್ಳುವ ಅಂಚು; ನಿರಿಗೆ.

गोंठना, ಸ० ಯಾವುದಾದರೂ ವಸ್ತುವಿನ ತುದಿಯನ್ನು ಸುರುಳಾಗಿ ದುಂಡಗೆ ಸುತ್ತು.

गोंड, ಪು० ಮಧ್ಯ ಹಿಂದುಸ್ಥಾನದ ಕಾಡು ಜನರು.

गोंड़ा, ಪು० ಬೇಲಿ; ಉಪನಗರ; ಮೊಹಲ್ಲಾ; ಹಳ್ಳಿ; ಅಂಗಳ.

गोंद, ಪು० ಗೋಂದು; ಅಂಟು.

गो, ಸ್ತ್ರೀ० ಆಕಳು; ಇಂದ್ರಿಯ; ವಾಣಿ; ಪೃಥ್ವಿ; ನಾಲಿಗೆ; ಸ್ವರ್ಗ; ಶಬ್ದ.

गो, ಅವ್ಯ० ಯದ್ಯಪಿ; ಇದ್ದರೂ.

गो, ಪ್ರತ್ಯ० ಮಾಡುವವ. ಉದಾ: कानूनगो.

गोइँठा, ಪು० ಬೆರಣಿ.

गोइंदा, ಪು० ಗೂಢಚಾರ.

गोइयाँ, ಪು० ಸಂಗಡಿಗ; ಜೊತೆಗಾರ; ಸಹಚಾರಿ.

गोई, ಸ್ತ್ರೀ० ಹೇಳಿಕೆ.

गोकुल, ಪು० ದನಗಳ ಮಂದೆ; ಗೋಶಾಲೆ.

गोकोस, ಪು० ಆಕಳು 'ಅಂಬಾ' ಎಂದು ಕರೆದರೆ ಕೇಳಿಸುವಷ್ಟು ದೂರ.

गोखग, ಪುಂ ಅಡ್ಡಾಡುವ ಪ್ರಾಣಿಗಳು.

गोगरू, ಪುಂ ತ್ರಿಪುಟಿ ಎಂಬ ಸಸ್ಯ; ಇದರಲ್ಲಿ ಕಡಲೆಯ ಗಾತ್ರದ ಮುಳ್ಳುಮುಳ್ಳಾದ ಕಾಯಿ ಬೆಳೆಯುತ್ತದೆ.

गोखा, ಪುಂ ಗವಾಕ್ಷ.

गोचर, ಪುಂ ಪಂಚೇಂದ್ರಿಯಗಳ ಮುಖಾಂತರ ಪ್ರಾಪ್ತವಾಗುವ ತಿಳಿವಳಿಕೆ; ಗೋಚರಾವು.

गोज़, ಪುಂ ಹೂಸು; ಅಪಾನವಾಯು.

गोजर, ಪುಂ ಜರಿ; ಲಕ್ಷ್ಮಿಚೇಳು.

गोजरा, ಪುಂ ಗೋಧಿ ಜಾತಿಯಧಾನ್ಯ.

गोजी, ಸ್ತ್ರೀಂ ಕೋಲು; ದೊಣ್ಣೆ.

गोझा, ಪುಂ ಖರ್ಜಿಕಾಯಿ; ಕರಿಗಡಬು.

गोट, ಸ್ತ್ರೀಂ } ಗೋಟು; ನಕ್ಕಿ; ಜರ
गोटा, ಪುಂ } ತಾರಿಲಡಿ. **गोट खेलना** ಹಾವುಬೆಣೆಯಾಡುವದು.

गोटी, ಪುಂ ಹುಡುಗರ ಆಟದ ಬೋಕಿ ಚೂರು; ಪಗಡೆಯ ಕಾಯಿ.

गोठ, ಸ್ತ್ರೀಂ ದೇಂ **गोशाला**.

गोठिल, ವಿಂ ಮುರಿದುಹೋದ.

गोड़, ಪುಂ ಕಾಲು; ಪಾದ.

गोड़गत, ಪುಂ ಕಾವಲುಗಾರ; ಹರಿಕಾರ.

गोड़ना ಸಂ ಅಗಿ; ತೋಡು.

गोड़ा, ಪುಂ ಮಂಚ ಬೆಂಚು ಮೊದಲಾದುವುಗಳ ಕಾಲು.

गोड़ारी, ಸ್ತ್ರೀಂ ಮಂಚದಲ್ಲಿ ಕಾಲಿಡುವ ಕಡೆ.

गोड़िया, ಸ್ತ್ರೀಂ ಚಿಕ್ಕಕಾಲು.

गोणी, ಸ್ತ್ರೀಂ ಗೋಣೀ ಚೀಲ.

गोत, ಪುಂ ವಂಶ; ಗೋತ್ರ.

गोता, ಪುಂ ಮುಳುಕ; ಗೋತ.

गोताखोर }
गोतामार } ಪುಂ ಮುಳುಗುವವನು.

गोतिया } ವಿಂ ಸಗೋತ್ರಿಯ; ಒಂದೇ
गोती } ವಂಶದ.

गोतीत, ವಿಂ ಜ್ಞಾನೇಂದ್ರಿಯಕ್ಕೆ ತಿಳಿಯಲಶಕ್ಯವಾದ.

गोत्र, ಪುಂ ವಂಶ; ಕುಲ.

गोद, ಸ್ತ್ರೀಂ ತೊಡೆ; ಮಡಿಲು; **—लेना** ದತ್ತು ತೆಗೆದುಕೊಳ್ಳು; **—देना** ಮಗನನ್ನು ದತ್ತುಕೊಡು; **—भरना** ಸಂತಾನೋತ್ಪತ್ತಿಯಾಗು.

गोदना, ಸಂ ಹಚ್ಚೆ ಕೊಚ್ಚಿಸು; ಕೆಣಕು; ಪಚ್ಚೆ.

गोदनी, ಸ್ತ್ರೀಂ ಹಚ್ಚೆ ಕೊಚ್ಚುವ ಸೂಜಿ.

गोदाम, ಪುಂ ಭಂಡಾರ; ಉಗ್ರಾಣ; ಗೋದಾಮು.

गोदी, ಸ್ತ್ರೀಂ ದೇಂ **गोद**.

गोधूम, ಪುಂ ಗೋಧಿ; ಗೋದುವೆ.

गोधूल } ಸ್ತ್ರೀಂ ಸಾಯಂಕಾಲ;
गोधूली } ಸಂಜೆ; ಬೈಗು; ಮುಚ್ಚಂಜೆ.

गोना ಸಂ ಮುಚ್ಚು; ಅಡಗಿಸು.

गोनी, ಸ್ತ್ರೀಂ ದೇಂ **गोणी**.

गोप, ಪುಂ ಗೌಳಿಗ; ಗೊಲ್ಲ.

गोपद, पुं० ಹಸುಗಳಿರುವ ಸ್ಥಳ; ಆಕಳಗೊರಸಿನ ಗುರುತು.

गोपदी, वि० ಆಕಳಗೊರಸಿನಷ್ಟು.

गोपन, पुं० ಬಚ್ಚಿಡುವಿಕೆ; ಅಡಗಿಸುವಿಕೆ; ರಕ್ಷಣೆ.

गोपना, स० ಬಚ್ಚಿಡು; ಅಡಗಿಸು.

गोपुर, पुं० ನಗರದ್ವಾರ; ಪಟ್ಟಣದ ಹೆಬ್ಬಾಗಿಲು; ಗೋಪುರ.

गोफा, पुं० ಚಿಗುರು; ತಳಿರು.

गोबर, पुं० ಸಗಣಿ; ಗೋಮಯ.

गोबर-गणेश, वि० ಕುರೂಪಿ; ಮೂರ್ಖ; ಅಕರ್ಮಣ್ಯ.

गोबरी, स्त्री० ಬೆರಣಿ.

गोबरैला, पुं० ಸಗಣಿಹುಳ.

गोबो, गोभी, स्त्री० ಕೋಸುಗೆಡ್ಡೆ.

गोमेद, पुं० ಗೋಮೇಧವೆಂಬಯಜ್ಞ; ನವರತ್ನಗಳಲ್ಲಿ ಒಂದು.

गोया, क्रि० ಎಂಬಂತೆ; ಎಂಬೋಲ್. **(मानों)**

गोर, स्त्री० ಗೋರಿ; ಸಮಾಧಿ.

गोरखधंधा, पुं० ರಗಳೆ; ತೊಡಕು.

गोरस, पुं० ಹಾಲು; ಮೊಸರು; ಮಜ್ಜಿಗೆ.

गोरा, वि० ಬಿಳಿಯ; ಸುಂದರವಾದ. पुं० ಸುಂದರಪುರುಷ; ಬಿಳಿಯವ.

गोराई, स्त्री० ಬಿಳುಪು; ಸೌಂದರ್ಯ.

गोरी, स्त्री० ಸುಂದರಿ.

गोरू, पुं० ಕೊಂಬುಳ್ಳ ಪ್ರಾಣಿ.

गोरोचन, पुं० ಆಕಳ ಎದೆಗುಂಡಿಗೆಯಲ್ಲಿರುವ ಹಳದಿಬಣ್ಣದ ಸುಗಂಧ ಪದಾರ್ಥ; ಗೋರೋಚನ.

गोलंदाज़, पुं० ತೋಪು ಅಥವಾ ಫಿರಂಗಿ ಹೊಡೆಯುವವನು.

गोलंदाज़ी, स्त्री० ತೋಪು ಹೊಡೆಯುವ ವಿದ್ಯೆ.

गोल, वि० ದುಂಡಗಿರುವ; ವೃತ್ತಾಕಾರದ;—**मिर्च** ಮೆಣಸು.

गोलक, पुं० ಗೋಲೋಕ; ವಿಧವೆಯ ಮಗ; ದೊಡ್ಡ ಮಣ್ಣಿನಪಾತ್ರ; ಕಣ್ಣಿನ ಬಿಳೀ ಗುಡ್ಡೆ.

गोल-बात, स्त्री० ಚೆನ್ನಾಗಿ ತಿಳಿಯದ ಮಾತು.

गोलमटोल, वि० ಕುಳ್ಳಗೆ ದಪ್ಪನಾಗಿರುವ; ಅಸ್ಪಷ್ಟವಾದ.

गोलमाल, पुं० ಗಡಿಬಡಿ; ಗೊಂದಲ.

गोला, पुं० ಗುಂಡು; ಚಿಕ್ಕಚಿಕ್ಕ ಗೋಲಿಗಳು; ಮೊಳೆಗಳು ಕುಪ್ಪಿ ಚೂರು ಮತ್ತು ಸಿಡಿಮದ್ದಿನಿಂದ ತಯಾರಿಸಿದ ಭಾರೀ ಗುಂಡು; ಜಿನಸಿನಮಂಡಿ; ದೋಣಿ ನಡೆಯಿಸುವ ಬಿದಿರು ಜಲ್ಲೆ.

गोलाई, स्त्री० ಗೋಲಾಕಾರ

गोलियाना, स० ದುಂಡಗೆ ಮಾಡು.

गोली, स्त्री० ಮಾತ್ರೆ; ಗೋಲಿ; ತುಪಾಕಿಯ ಚಿಕ್ಕ ಗುಂಡು; —**खाना** ಗುಂಡಿನೇಟು ತಿನ್ನು.

गोश, पुं० ಕಿವಿ; ಶ್ರವಣೇಂದ್ರಿಯ.

गोशमाली, स्त्री० ಕಿವಿಹಿಂಡುವಿಕೆ.

गोशवारा, पु० ಕರ್ಣಕುಂಡಲ; ಪಗಡಿಯ ಅಂಚು; ಮೊತ್ತ; ಜುಮ್ಲಾ ಗೋಶ್ವಾರೆ ಲೆಕ್ಕಾಚಾರ.

ग़ोशा, पु० ಮೂಲೆ; ಪಕ್ಕ; ಏಕಾಂತ; ಬಿಲ್ಲಿನ ತುದಿ.

ग़ोश्त, पु० ಮಾಂಸ.

गोष्ठ, पु० ಸಹಾಯ; ಸಮೂಹ; ಗೋಶಾಲೆ.

गोसफ़ंद, स्त्री० ಆಡು; ಮೇಕೆ.

गोसा, पु० ಬೆರಣಿ; ಕುರುಳು.

गोसाईं, पु० ಪರಮಾತ್ಮ; ಜಿತೇಂದ್ರಿಯ; ಸಂನ್ಯಾಸಿಗಳಲ್ಲಿ ಒಂದು ಭೇದ; ವಿರಕ್ತ; ಸಾಧು; ಸ್ವಾಮಿ.

गोसैयाँ, पु० ಸ್ವಾಮಿ; ಯಜಮಾನ.

गोह, स्त्री० ಹಲ್ಲಿಯ ಜಾತಿಗೆ ಸೇರಿದ ಕಾಡು ಮೊಸಳೆ; ಉಡ.

गोहन, पु० ಜೊತೆಗಾರ; ಸಂಗಡಿಗ.

गोहरा, पु० ಬೆರಣಿ.

गोहराना, स० ಕೂಗು; ಕರೆ.

गोहार, स्त्री० ದಮ್ಮಯ್ಯ ಎಂದು ಬೇಡಿಕೊಳ್ಳುವಿಕೆ; ಗೋಗರೆಯುವಿಕೆ.

गौं, स्त्री० ಸುಯೋಗ; ಸಂದರ್ಭ; ಆವಶ್ಯಕತೆ; ಸ್ವಾರ್ಥ;—निकलना ಕಾರ್ಯಸಿದ್ಧಿಯಾಗು.

गौंगीर, वि० ಸ್ವಾರ್ಥಪರ; ಸ್ವಾರ್ಥಿ.

गौख, स्त्री०, **गौखा**, पु० } ಗವಾಕ್ಷ; ಕಂಡಿ; ಕಿಟಿಕಿ.

ग़ौग़ा, पु० ಗಲಭೆ; ಗೊಂದಲ; ತುಮುಲಧ್ವನಿ; ಗಾಳಿಸುದ್ದಿ.

गौचरी, स्त्री० ಗೋಚರಾವು ತೆರಿಗೆ; ಹುಲ್ಲು ಬನ್ನಿ.

गौड़, पु० ವಂಗದೇಶದ ಒಂದು ಪ್ರಾಚೀನ ವಿಭಾಗ; ಬ್ರಾಹ್ಮಣರಲ್ಲಿಯ ಒಂದು ಪಂಗಡ; ಗೌಡದೇಶೀಯ.

गौज़, स्त्री० ಸಂಭಾಷಣೆ.

गौण, वि० ಅಪ್ರಧಾನವಾದ; ಮುಖ್ಯವಲ್ಲದ; ಸಹಾಯಕವಾದ.

गौद, पु० ಗೊನೆ; ಗೊಂಚಲು.

गौदुमा, वि० ಗೋವಿನ ಬಾಲದಾಕೃತಿಯ; ಏರಿಳಿತಗಳುಳ್ಳ.

गौनहार, स्त्री० ಮದುಮಗಳೊಂದಿಗೆ ಬರುವ ಸಖಿ.

गौना, पु० ಮಧುವನ್ನು ಮನೆಗೆ ಕರೆತರುವುದು; ಶೋಭನ ಪ್ರಸ್ತ.

गौर, वि० ಬಿಳಿಯ; ಗೌರವರ್ಣದ.

ग़ौर, पु० ಗಮನ; ಲಕ್ಷ್ಯಕೊಟ್ಟು ಗಮನಿಸುವಿಕೆ.

गौरांग, पु० ವಿಷ್ಣು; ಶ್ರೀಕೃಷ್ಣ; ಚೈತನ್ಯ ಮಹಾಪ್ರಭು.

गौरा, स्त्री० ಗೌರವರ್ಣದ ಸ್ತ್ರೀ; ಪಾರ್ವತಿ; ಅರಿಸಿನದಹಳದಿ.

गौरिया, स्त्री० ಒಂದು ಜಾತಿಯ ಕಪ್ಪು ಬಣ್ಣದ ಜಲಪಕ್ಷಿ.

गौरैया, स्त्री० ಹೆಣ್ಣು ಗುಬ್ಬಚ್ಚಿ.

गौस, पु० ಫಿರಿಯಾದಿ; ದೂರು.

गौहर, पु० ಮುತ್ತು.

ग्यारस, स्त्री० ಏಕಾದಶಿ ತಿಥಿ.

ग्रंथ, पु० ಪುಸ್ತಕ; ಗ್ರಂಥ; ಹಣ ಪೋಣಿಸುವಿಕೆ.

ग्रंथकर्ता / ग्रंथकार } पु० ಪುಸ್ತಕಗಳನ್ನು ಬರೆಯುವವ; ಗ್ರಂಥಕರ್ತ.

ग्रंथि, स्त्री० ಗಂಟು; ಗ್ರಂಥಿ; ಮಾಯಾಜಾಲ.

ग्रंथिबंधन, पु० ವಧೂವರರ ಸೆರಗಿಗೆ ಗಂಟುಹಾಕುವಿಕೆ.

ग्रसना, स० ಗಟ್ಟಿಯಾಗಿ ಹಿಡಿದು ಕೊಳ್ಳು; ಕಾಡಿಸು.

ग्रसित / ग्रस्त } वि० ಹಿಡಿತಕ್ಕೊಳಗಾದ; ಪೀಡಿಸಲ್ಪಟ್ಟ.

ग्रहणीय, वि० ಸ್ವೀಕರಿಸಲು; ಯೋಗ್ಯವಾದ.

ग्रामीण, वि० ಹಳ್ಳಿಯವನು; ಗವಾರ.

ग्राम्य, वि० ಹಳ್ಳಿಗೆ ಸಂಬಂಧಪಟ್ಟ; ಗ್ರಾಮ್ಯ; ಮೂರ್ಖ; ಅನಾಗರಿಕ.

ग्रास, पु० ಕವಳ; ತುತ್ತು; ಹಿಡಿಯುವಿಕೆ.

ग्रासना, स० ಹಿಡಿ; ನುಂಗು; ಕಾಡಿಸು.

ग्राह, पु० ಮೊಸಳೆ.

ग्राहक, पु० ಗಿರಾಕಿ; ಖರೀದಿ ಮಾಡುವವ.

ग्राह्य, वि० ಸ್ವೀಕರಿಸಲು ಯೋಗ್ಯವಾದ; ಮಾನ್ಯವಾದ.

ग्रीवा, पु० ಕೊರಳು; ಕುತ್ತಿಗೆ.

ग्लानि पु० ದುಃಖ; ಖಿನ್ನತೆ.

ग्वाल / ग्वाला } पु० ಗೊಲ್ಲ; ಗೌಳಿಗ.

ग्वालिन, स्त्री० ಗೊಲ್ಲತಿ; ಗೌಳಿಗಿತ್ತಿ.

ग्वैंड़ा, पु० ಹಳ್ಳಿಯಹತ್ತಿರದ ಹೊಲಗಳು.

घँघरा, पु० ಲಂಗ; ಪಾವಡೆ.

घँघराघोर, पु० ಮಡಿಮೈಲಿಗೆಯ ಭೇದವಿಲ್ಲದಿರುವಿಕೆ; ಭ್ರಷ್ಟಾಚಾರ.

घँघरी, स्त्री० दे० घघरी.

घँघोरना / घंघोलना } स० ಕಲಸು; ಕದಡು.

घंटा, पु० ಘಂಟೆ; ಒಂದು ದಿನದ ೧/೨೪ ನೇ ಭಾಗ; ಘಂಟೆಬಾರಿಸುವಧ್ವನಿ—दिखाना ಆಶೆ ತೋರಿಸಿ ನಿರಾಶೆಮಾಡುವುದು.

घंटा-घर, पु० ಗಡಿಯಾರದ ಗೋಪುರ.

घंटिका / घंटी } स्त्री० ಸಣ್ಣಘಂಟೆ; ಗೆಜ್ಜೆ.

घई, स्त्री० ಸುಳಿ; ಸುಳಿಗುಂಡಿ; ಆಧಾರಸ್ತಂಭ; वि० ಆಳವಾದ.

घघरा, पु० / घघरी, स्त्री० } ಲಂಗ; ನಿರಿಗೆಯ ಲುಂಗಿ.

घट, पु० ಕಳಸ; ಪಾತ್ರೆ ಶರೀರ. क्रि० ಕಡಿಮೆ ಇಳಿದು ಹೋದ.

घटक, पु० ವಿವಾಹಸಂಬಂಧವನ್ನು ನಿಶ್ಚಯಿಸುವವನು; ದಳ್ಳಾಳಿ; ಕಳಸ.

घटती स्त्री० ನ್ಯೂನತೆ; ಕೊರತೆ; ಕಡಿಮೆ.

घटना, अ० ಸಂಭವಿಸು; ಆರೋಪಿಸಲ್ಪಡು; ಕಡಿಮೆಯಾಗು.

घटबढ़, स्त्री० ಹೆಚ್ಚುಕಡಿಮೆ; ನ್ಯೂನಾಧಿಕ್ಯ.

घटवाई, पु० ನದಿಯಘಟ್ಟದಲ್ಲಿಸುಂಕವನ್ನು ವಸೂಲು ಮಾಡುವವ.

घटवार, पु० ಸುಂಕದವನು; ನಾವಿಕ; ನದಿಯಘಟ್ಟದಲ್ಲಿಕೂತುಕೊಂಡು ಭಿಕ್ಷೆ ಬೇಡುವ ಬ್ರಾಹ್ಮಣ.

घटहा, पु० ನದೀಸುಂಕದವನು; ಈಚೆ ದಡದಿಂದ ಆಚೆದಡಕ್ಕೆಹೋಗುವ ದೋಣಿ.

घटा, स्त्री० ಮೇಘಮಾಲೆ; ಸಮೂಹ; ಗುಂಪು.

घटाटोप, पु० ನಾಲ್ಕು ಕಡೆಗಳಿಂದಲೂ ಕವಿಯುತ್ತಿರುವ ಮೋಡಗಳು; ಯಾವುದಾದರೂ ವಸ್ತುವನ್ನು ಪೂರ್ಣವಾಗಿ ಮುಚ್ಚತಕ್ಕ ವಸ್ತ್ರ. ..

घटाना, स० ಕಳೆ; ಕಡಿಮೆಮಾಡು; ಲೆಕ್ಕಮಾಡಿ ಶಿಲ್ಕುಬಾಕಿ ತೆಗೆ.

घटाव, पु० ನ್ಯೂನತೆ; ಕೊರತೆ; —बढ़ाव ಹೆಚ್ಚುಕಡಿಮೆ.

घटिका, स्त्री० ಗಡಿಯಾರ; ೨೪ ನಿಮಿಷಗಳ ಒಂದು ಗಳಿಗೆ.

घटित, वि० ನಿರ್ಮಿತವಾದ; ತಯಾರಾದ.

घटिया, वि० ತುಚ್ಛ; ನೀಚ; ಗಟ್ಟಿಗ.

घटिहा, वि० ಮೋಸ; ಅಪ್ರಾಮಾಣಿಕ; ದುಷ್ಟ.

घट्ठा, पु० ಕಾಯಿಕಟ್ಟಿದಕೈ.

घड़ा, पु० ಜಲಪಾತ್ರೆ; ಗಡಿಗೆ.

घड़िया, स्त्री० ಮಣ್ಣಿನ ಮಿಳ್ಳೆ.

घड़ियाल, पु० ಪೂಜಾಕಾಲದಲ್ಲಿ ಬಾರಿಸುವ ಘಂಟೆ; ಮೊಸಳೆ.

घड़ी, स्त्री० ಗಳಿಗೆ; ಸಮಯ; ಗಡಿಯಾರ;—**घड़ी** पदेपदे; ಅಡಿಗಡಿಗೆ.

घड़ीसाज़, पु० ಗಡಿಯಾರವನ್ನು ಸರಿಮಾಡುವವನು.

घड़ौंची, स्त्री० ನೀರಿನ ಗಡಿಗೆಯನು ಇಡುವ ಮುಕ್ಕಾಲು ಮಣೆ ಅಥವಾ ಎತ್ತರವಾದ ಸ್ಥಳ.

घतिया, पु० ಮೋಸಗಾರ; ವಂಚಕ.

घतियाना, स० ಮೋಸಗೊಳಿಸು; ಕದಿ; ಮರೆಮಾಚು.

घन, पु० ಮೇಘ; ಸಮೂಹ; ಕರ್ಪೂರ; ಘನಫಲ. वि० ಘನವಾದ; ಗಟ್ಟಿ; ದೃಢ.

घनघनाना, अ० ಘಣಘಣ ಎಂದು ಶಬ್ದವಾಗು.

घनघनाहट, पु० ಘಣಘಣ ಎಂಬ ಶಬ್ದ.

घनघोर, वि० ಬಹಳದಟ್ಟವಾದ; ಭೀಷಣವಾದ.

घनचक्कर, पु० ಚಂಚಲ ಬುದ್ಧಿಯುವನು; ಮೂರ್ಖ; ಸೋಮಾರಿ.

घनसार, पु० ಕರ್ಪೂರ.

घना, वि॰ ನಿಬಿಡವಾದ; ದಟ್ಟವಾದ.

घनिष्ठ, वि॰ ಸಮೀಪದ; ಬಹಳ ಹೆಚ್ಚು; ಗಾಢ.

घने, घनेरा, घनेरे, वि॰ ಬಹಳ; ಅನೇಕ; ಅಸಂಖ್ಯ.

घपचिआना, अ॰ ಮೋಸದ ಬಲೆಗೆ ಬೀಳು.

घपची, स्त्री॰ ಎರಡೂಕೈಗಳ ಹಿಡಿತ.

घपला, पु॰ ಅವಾಂತರ; ಗಡಿಬಿಡಿ.

घपुआ, वि॰ } **घपूचन्द**, पु॰ } ಮೂರ್ಖ; ತಿಳಿಗೇಡಿ.

घबड़ाना } **घबराना** } अ॰ ಗಾಬರಿಗೊಳ್ಳು; ವ್ಯಾಕುಲಪಡು; ತಳಮಳಿಸು; ಬೆದರು. स॰ ಕಳವಳಗೊಳಿಸು; ಕಾಡು.

घबड़ाहट } **घबराहट** } स्त्री॰ ಘಾಬರಿ; ವ್ಯಾಕುಲತೆ; ಕಳವಳ.

घमंड, पु॰ ಅಹಂಕಾರ; ಹೆಮ್ಮೆ; ಜಂಬ.

घमंडी, वि॰ ಅಹಂಕಾರಿ; ಜಂಬಗಾರ.

घमकना, अ॰ ಗರ್ಜಿಸುವುದು. स॰ ಮೂದಲಿಸುವುದು.

घमखोर, वि॰ ಬಿಲಿಸಿನತಾಪವನ್ನು ಸಹಿಸುವವ.

घमघमाना, अ॰ ಗಂಭೀರವಾಗಿ ಶಬ್ದ ಮಾಡು.

घमर, पु॰ ನಗಾರಿ ಢೋಲು ಮೊದಲಾದವುಗಳ ಗಂಭೀರವಾದ ಶಬ್ದ.

घमसा, पु॰ ಬಿಸಿಲಿನತಾಪ; ಬೇಗೆ; ಝಳ.

घमसान } **घमासान** } पु॰ ಭಯಂಕರವಾದ ಯುದ್ಧ; ತುಮುಲ ಯುದ್ಧ.

घर, पु॰ ಮನೆ; ಗೃಹ; ಜನ್ಮಸ್ಥಳ; ವಂಶ;—**उजड़ना** ಮನೆಯೂ ಮನೆತನವೂ ನಾಶವಾಗು;—**करना** ವಾಸವಾಗು;—**का** ಸ್ವಂತದ;—**का न घाट का** ತ್ರಿಶಂಕು ಸ್ವರ್ಗದ; ಕೆಲಸಕ್ಕೆ ಬಾರದ;—**फूँक तमाशा देखना** ಐಶ್ವರ್ಯವನ್ನು ಕಳೆದುಕೊಂಡು ವಿಲಾಸಪ್ರಿಯನಾಗು;—**बसना** ಮನೆಯ ಸ್ಥಿತಿಯು ಉತ್ತಮಗೊಳ್ಳು; **आँख में घर करना** ಅತ್ಯಂತ ಪ್ರೇಮಪಾತ್ರನಾಗು.

घरद्वार, पु॰ ಮನೆಮಠ.

घरघराना, अ॰ ಕಫದಿಂದ ಗರ್‌ಗರ್ ಎಂದು ಗಂಟಲೊಳಗೆ ಶಬ್ದವಾಗು. पु॰ ಪರಿವಾರ; ವಂಶ.

घरवाल } **घरवालन** } वि॰ ಮನೆಹಾಳುಮಾಡುವ.

घरजाया, स्त्री॰ ಮನೆಗೆಲಸಮಾಡುವವಳು.

घरनी, स्त्री॰ ಹೆಂಡತಿ; ಮನೆಯಾಕೆ.

घरफोड़ी, स्त्री॰ ಕುಟುಂಬದಲ್ಲಿ ಜಗಳ ಹುಟ್ಟಿಸುವವಳು; ಘಾತಕಿ.

घरबार, पु॰ ಮನೆಮಠ.

घराऊ, वि॰ ಮನೆ ತನಕ್ಕೆ ಸೇರಿದ.

घराती, पु॰ ಮದುವೆಹೆಣ್ಣಿನ ಕಡೆಯವರು.

घराना, पुं० ವಂಶ; ಮನೆತನ.
घरी, स्त्री० ಸೇವಕಿ; ಮಿಡತೆಹುಳು.
घरेलू, वि० ಮನೆಯ; ಮನೆಗೆ ಸಂಬಂಧಪಟ್ಟ; ಮನೆತನದ.
घरैया, वि० ಮನೆಯವನು.
घरौंदा, पुं० ಕಾಗದ ಮಣ್ಣು ಮುಂತಾದ್ದರಿಂದ ಮಾಡಿದ ಮಕ್ಕಳ ಆಟದ ಮನೆ.
घर्षण, पुं० ತಿಕ್ಕಾಟ.
घलना, अ० ಕಳಚಿ ಬಿದ್ದುಹೋಗು; ಬಿಸಾಡಲ್ಪಡು; ಹೊಡೆದಾಟವಾಗು.
घलुआ, पुं० ಕುಸುರಿ; ಕೊಸರು.
घसखुदा, पुं० ಹುಲ್ಲು ಕೀಳುವವನು; ಮೂರ್ಖ; ತಿಳಿಗೇಡಿ.
घसना, अ० ತಿಕ್ಕು; ಉಜ್ಜು.
घसिटना, अ० ಎಳೆದುಹೋಗು.
घसियारा, पुं० ಹುಲ್ಲು ಮಾರುವವನು.
घसियारिन } स्त्री० ಹುಲ್ಲು ಮಾರುವವಳು.
घसियारी }
घसीटना, स० ಎಳೆ; ಜಗ್ಗು; ಕೀಳು; ಬೇಗಬೇಗ ಬರೆ.
घहराना, अ० ಗುಡುಗು; ಗರ್ಜಿಸು.
घाँघरा, पुं० } ನಿರಿಗೆಯ ಪಾವಡೆ; ಲಂಗ.
घांघरी, स्त्री० }
घाँटी, स्त्री० ಗಂಟಲೊಳಗಿನ ಕೊಳವಿ; ಕಂಠನಾಳ.
घाई, स्त्री० ಏಟು; ಹೊಡೆತ; ಆಘಾತ.
घाऊघप, वि० ಉಪಾಯವಲ್ಲಿ ಗಂಟು ಮುಳುಗಿಸುವವನು; ಕೂತಲ್ಲೇ ಸ್ವಕಾರ್ಯ ಸಾಧಿಸತಕ್ಕವನು.
घाघ, पुं० ಗೊಂಡಾ ಪ್ರದೇಶದ ಮನುಷ್ಯ; ಬಹಳ ಚತುರ.
घाघरा, पुं० ಲಂಗ.
घाट, पुं० ಘಟ್ಟ; ರೇವು; ಕಣಿವೆ; ಇಕ್ಕಟ್ಟಾದ ಪರ್ವತಮಾರ್ಗ; ದಿಕ್ಕು. स्त्री० ಮೋಸ; ಕೆಟ್ಟತನ; —घाट का पानी पीना ಅನೇಕ ಊರುಗಳನ್ನು ಸುತ್ತಾಡಿ ಅನೇಕ ವೃತ್ತಿಗಳನ್ನು ಅವಲಂಬಿಸುವುದು.
घाटा, पुं० ನಷ್ಟ; ನುಕ್ಸಾನು; —उठाना ನಷ್ಟವನ್ನು ವಹಿಸು; ನಷ್ಟಕ್ಕೀಡಾಗು;—भरना ನಷ್ಟದ ಹಣವನ್ನು ಕೈಯಿಂದ ತುಂಬು.
घाटि, पुं० ಕೊರತೆ; ಕಡಿಮೆ. स्त्री० ನೀಚಕಾರ್ಯ.
घाटिया, पुं० ನದೀ ಘಟ್ಟದಲ್ಲಿರುವ ಪುರೋಹಿತ.
घाटी, पुं० ಇಕ್ಕಟ್ಟಾದ ಪರ್ವತ ಮಾರ್ಗ; ಪರ್ವತದ ಶಿಖರ; ಚಿಕ್ಕಮೈದಾನ.
घात, पुं० ಪ್ರಹಾರ; ಹತ್ಯೆ.
घातक } पुं० ಹಿಂಸಕ; ಶತ್ರು.
घातकी }
घान, पुं० } ಒಂದಾವರ್ತಿ ಬೀಸು ಗಲ್ಲಿನಲ್ಲಿಹಾಕಿ ಬೀಸು ವಷ್ಟು ಕಾಳು.
घानी, स्त्री० }

घाम, पुं० ಬಿಸಿಲು; ಸೂರ್ಯನ ತಾಪ

घामड़, वि० ಮೂರ್ಖ; ಸೋಮಾರಿ; ಬಿಸಿಲಲ್ಲಿ ಬಳಲಿದವನು.

घाय, पुं० ಘಾಯ.

घायक, वि० ಘಾತಕ; ವಿನಾಶಕ.

घायल, वि० ಗಾಯಗೊಂಡವನು.

घार, स्त्री० ನೀರಿನ ಪ್ರವಾಹ ದಿಂದಾದ ಮಾರ್ಗ.

घाल, पुं० दे० घलुआ.

घालक, पुं० ಕೊಲೆಗಾರ; ವಿನಾಶಕ.

घालना, स० ಹಾಕು; ಇಡು; ಎಸೆ; ಮಾಡಿಬಿಡು; ಹಾಳುಮಾಡು.

घाव, पुं० ಗಾಯ;—**पर नमक छिड़कना** ನೊಂದ ಮನಸ್ಸನ್ನು ಮತ್ತಷ್ಟು ನೋಯಿಸು;—**भरना**, —**पूजना** ಹುಣ್ಣು ಮಾಯುವುದು.

घास, स्त्री० ಹುಲ್ಲು.

घिग्घी, स्त्री० ಬಿಕ್ಕಳಿಕೆ.

घिघियाना, अ० ಗಡಗಡನೆ ನಡುಗು; ದೈನ್ಯವಾಗಿ ಬೇಡು.

घिच-पिच } **घिचर-पिचर** } स्त्री० ಕಿಕ್ಕಿರಿಯುವಿಕೆ; ಇಕ್ಕಟ್ಟಾಗುವಿಕೆ.

घिन, स्त्री० ಜಗುಪ್ಸೆ; ಅಸಹ್ಯ.

घिनाना, अ० ಅಸಹ್ಯಪಡು.

घिनौना, वि० ಅಸಹ್ಯವಾದ; ಘೃಣಿತವಾದ.

घिया, पुं० ಸೋರೆಕಾಯಿ; ತುಪ್ಪದ ಹೀರೆ ಕಾಯಿ.

घिरना, अ० ಆವರಿಸು; ಸುತ್ತುಹಾಕಲಡು.

घिरनी, स्त्री० ಸುತ್ತು; ತಿರಗಣೆ; ಒಂದು ಜಾತಿಯ ಪಾರಿವಾಳ.

घिराई, स्त्री० ಸುತ್ತು; ತಿರಗುವಿಕೆ; ಆಕಳುಗಳನ್ನು ಮೇಯಿಸುವುದು ಅಥವಾ ಮೇಯಿಸುವ ಮಜೂರಿ.

घिरायंद, पुं० ಕೆಟ್ಟವಾಸನೆ.

घिराव, पुं० ಸುತ್ತು; ಬಳಸು.

घिसघिस, स्त्री० ಕಾರ್ಯದಲ್ಲಿ ಶಿಥಿಲತೆ; ಗಡಿಬಿಡಿ.

घिसना, स० ತಿಕ್ಕು; ಸವೆಯಿಸು.

घिसाई, स्त्री० ತಿಕ್ಕುವಿಕೆ; ತಿಕ್ಕಿದುದರ ಮಜೂರಿ.

घिसाव, पुं० ತಿಕ್ಕಾಟ.

घी, पुं० ತುಪ್ಪ. **पाँचों उँगली घी में होना** ಎಲ್ಲವಿಧದಲ್ಲೂ ಲಾಭ ಉಂಟಾಗು.

घीकुआँर, पुं० ಲೋಳಿಸರ.

, स्त्री० ಮುಂಡಿಗೆ; ಕೆಸವು.

स्त्री० ಗುಲಗುಂಜಿ; ಮಂಜೂಟಿ; ಗುಂಜಾಫಲ.

घुँघनी, स्त्री० ತುಪ್ಪ ಇಲ್ಲವೆ ಎಣ್ಣೆಯಲ್ಲಿ ಹುರಿದ ಕಡಲೆ, ಹೆಸರು, ಬಟಾಣಿ ಮುಂತಾದ ಕಾಳು; ಉಸಳಿ; ಹುರಿಗಾಳು.

घुँघारे } **घुँघराले** } वि० ಉಂಗುರದಂತೆ ಸುರುಳು ಸುರುಳಾದ; ಗುಂಗುರು.

घुँघरू, पुं० ಕಿರುಗೆಜ್ಜೆ.

घुंडी, स्त्री० ಗುಂಡಿ; ಬಟನು.

घुग्घू, पुं० ಗೂಗೆ.

घुघुआना, ಅಂ ಗೂಬೆಯಂತೆ ಕೂಗು.

घुटकना, ಸಂ ಗುಟುಕು ಗುಟುಕಾಗಿ ಕುಡಿ; ನುಂಗು.

घुटना, ಪುಂ ಮೊಣಕಾಲು; ಮಂಡಿ. ಅಂ ಉಸಿರುಕಟ್ಟಿ ಹೋಗು; ತಡೆದುಹೋಗು.

घुटन्ना, ಪುಂ ಚಡ್ಡಿ; ನಿಕ್ಕರ್.

घुटवाना, ಸಂ ಸವೆಯಿಸು; ಅರೆಯಿಸು; ಅವುಟಾಯಿಸು; ಬೋಳಿಸು.

घुटाई, ಸ್ತ್ರೀಂ ಅರೆಯುವ ಕೆಲಸ ಅಥವಾ ಅದರ ಮಜೂರಿ.

घुटाना, ಸಂ ಅರೆಯಿಸು.

घुट्टी, ಸ್ತ್ರೀಂ ಚಿಕ್ಕಮಕ್ಕಳಿಗೆ ಹಾಕುವ ಜೀರ್ಣೌಷಧಿ.

घुड़कना, ಸಂ ಗದರಿಸು; ದಟ್ಟಿಸು; ಜಬರಿಸು.

घुड़की, ಸ್ತ್ರೀಂ ಗದರಣೆ; ಗದರಿಸುವಿಕೆ; ಬೆದರಿಕೆ. **बंदर घुड़की** ಪುಸಿ ಬೆದರಿಕೆ.

घुड़दौड़, ಸ್ತ್ರೀಂ ಕುದುರೆಯ ಓಟ; ಕುದುರೆ ಜೂಜು.

घुड़सार } ಸ್ತ್ರೀಂ ಕುದುರೆ ಲಾಯ.
घुड़साल }

घुण } ಪುಂ ಮರ ಮತ್ತು ಧಾನ್ಯಗಳನ್ನು ಕೊರಿಯುವ ಕ್ರಿಮಿ; ಕುಟ್ಟೇಹುಳು.
घुन }

घुनना, ಅಂ ನುಸಿಹಿಡಿ; ಕುಟ್ಟೆಹಿಡಿ.

घुन्ना, ವಿಂ ದ್ವೇಷದಿಂದ ಕೇಡು ಬಗೆಯುವವನು.

घुप, ವಿಂ ನಿಬಿಡ; ಕಡು ಕತ್ತಲೆ.

घुमँड़ना, ಅಂ ದೇಂ **घुमड़ना**.

घुमक्कड़, ವಿಂ ಬಹಳ ತಿರುಗಾಡುವವನು.

घुमटा, ಪುಂ ತಲೆ ತಿರುಗುವಿಕೆ.

घुमड़ना } ಅಂ ಮೋಡಕವಿ; ಒಟ್ಟಿಗೆ ಸೇರು.
घुमड़ाना }

घुमर्ना, ವಿಂ ಅತ್ತಿತ್ತ ಬಹಳವಾಗಿ ಅಲೆದಾಡುವವನು; ತಿರುಕ.

घुमरी, ಸ್ತ್ರೀಂ ನೀರಿನಸುಳಿ; ತಲೆ ತಿರುಗುವಿಕೆ.

घुमाना, ಸಂ ಸುತ್ತಲೂ ತಿರುವು; ತಿರುಗಾಡಿಸು; ತಿರುಗಿಸು.

घुमाव, ಪುಂ ತಿರುಗಾಟ; ಬೀಸಾಟ.

घुरघुराना, ಅಂ ಗಂಟಲು ಕೆರೆ; ಗುರುಗುರು ಎಂಬ ಶಬ್ದವಾಗು.

घुलना, ಅಂ ದ್ರವಿಸು; ಕರಗು.

घुलाना, ಸಂ ಕರಗಿಸು; ಕೃಶವಾಗುವಂತೆ ಮಾಡು.

घुलावट, ಸ್ತ್ರೀಂ ಕರಗಿಸುವಿಕೆ; ಮಿಶ್ರಣ.

घुसना, ಅಂ ಪ್ರವೇಶಿಸು; ಹೊಗು; ನುಗ್ಗು.

घुसाना } ಸಂ ಒಳಕ್ಕೆ ಸೇರಿಸು; ಹೊಗಿಸು.
घुसेड़ना }

घूँघट, ಪುಂ ಗೋಷಾ; ಮುಸುಕು; ಪರದೆ.

घूँघर, ಪುಂ ಗುಂಗುರು ಕೂದಲು.

घूँघरी } ಸ್ತ್ರೀಂ ನೂಪುರ; ಕಾಲಿನ ಕಿರುಗೆಜ್ಜೆ.
घूँघरू }

घूँट, पु० ಗುಟುಕು.

घूँटना, स० ಕುಡಿ.

घूँसा, पु० ಮುಷ್ಟಿಯ ಹೊಡೆತ; ಗುದ್ದು.

घूसेबाजी, स्त्री० ಮುಷ್ಟಿಯುದ್ಧ.

घूटना, स० ಉಸಿರು ತಡೆ.

घूना, वि० ಬಹಳ ಜಾಣ; ಚತುರ.

घूम, स्त्री० ಸುತ್ತು; ತಿರುಗು; ದಾರಿಯ ಅಡ್ಡ ತಿರುಗೋಣ.

घूमना, अ० ತಿರುಗು; ತಿರುಗಾಡು; ಹಿಂತಿರುಗು; ಸುತ್ತಾಡು.

घूमनी, स्त्री० ತಲೆ ತಿರುಗುವಿಕೆ.

घूर, पु० ಕಸದಕುಪ್ಪೆ; ತಿಪ್ಪೆಯರಾಶಿ.

घूरना, अ० ದಿಟ್ಟಿಸಿನೋಡು.

घूरा, पु० दे० **घूर**.

घूस, पु० ಹೆಗ್ಗಣ. स्त्री० ಲಂಚ.

घृणा, स्त्री० ತಿರಸ್ಕಾರ; ಬೇಸರಿಕೆ; ಅಸಹ್ಯ.

घृणित, वि० ಅಸಹ್ಯಪಡತಕ್ಕ.

घेंट, पु० ಗಂಟಲು; ಕುತ್ತಿಗೆ.

घेघा, पु० ಗಂಟಲುನಾಳ; ಗಂಟಲುವಾಳ.

घेर, पु० ಪರಿಧಿ; ಸುತ್ತು.

घेरघार, स्त्री० ನಾಲ್ಕೂಕಡೆಗಳಿಂದ ಸುತ್ತಿಕೊಂಡಿರುವಿಕೆ; ವಿಸ್ತಾರ; ಮುಖಸ್ತುತಿ.

घेरना, स० ಮುತ್ತು; ಸುತ್ತುವರಿ; ಸುತ್ತುಗಟ್ಟು.

घेरा, पु० ಪರಿಧಿ; ಸುತ್ತಳತೆ; ಆಕ್ರಮಿಸಿದ ಸ್ಥಳ; ಮುತ್ತಿಗೆ.

घैला, पु० ಗಡಿಗೆ; ಬಿಂದಿಗೆ.

घोंघा, पु० ಕಪ್ಪೆಚಿಪ್ಪು; ಬಸವನಹುಳ.

घोंचा, पु० ಗೊಂಚಲು; ಕೊಂಬಿಲ್ಲದ ಎತ್ತು.

घोंटना, स० ಗುಟುಕು ಗುಟುಕಾಗಿ ಕುಡಿ; ಹಿಸುಕು; ಜೀರ್ಣಿಸು; **गला घोंटना** ಕತ್ತುಹಿಸುಕು.

घोंपना, स० ತುರುಕು; ಗಂಟು ಹಾಕು.

घोंसला, पु० ಪಕ್ಷಿಗಳ ಗೂಡು.

घोखना, स० ಬಾಯಿಪಾಠಮಾಡು; ಉರುಹಾಕು.

घोटना, स० ಉಜ್ಜು; ಅರೆ; ತಿಕ್ಕು; ಅಭ್ಯಾಸಮಾಡು.

घोटा, पु० ಅರೆಯುವ ಉಪಕರಣ.

घोटाला, पु० ಗಲಿಬಿಲಿ; ಗೊಂದಲ.

घोड़सार, **घोड़साल** } स्त्री० ಕುದುರೆಲಾಯ.

घोड़ा, पु० ಕುದುರೆ.

घोर, वि० ಕಠಿನವಾದ; ನಿಬಿಡವಾದ; ಮಹಾ; ಅತ್ಯಂತ.

घोरना, **घोलना** } स० ಕರಗಿಸು.

घोष, पु० ಗೊಲ್ಲ; ಗೋಶಾಲೆ; ಗರ್ಜನೆ.

घोषणा, स्त्री० ಬಹಿರಂಗ ಸೂಚನೆ.

घोसी, पु० ಗೊಲ್ಲ; ಹಾಲುಮಾರುವವನು; ಗೌಳಿಗ.

घौद, पु० ಹಣ್ಣಿನ ಗೊಂಚಲು.

घ्राण, ಸ್ತ್ರೀ० ಮೂಗು; ವಾಸನೆ ನೋಡುವ ಶಕ್ತಿ, ವಾಸನೆ.

च

चंग, ಸ್ತ್ರೀ० ಪತಂಗ; ಗಾಳೀಪಟ. ವಿ० ಸುಂದರವಾದ;—**पर चढ़ाना** ಅಲ್ಲಿ ಇಲ್ಲಿಯ ಮಾತುಗಳನ್ನಾಡಿ ಜನರನ್ನು ತನ್ನವಶಕ್ಕೆ ಎಳೆಕೊಳ್ಳು.

चंगा, ವಿ० ಆರೋಗ್ಯವಾದ; ಶೋಭಿಸುವ; ಸುಂದರ.

चंगुल, ಪು० ಪಶುಪಕ್ಷಿಗಳ ಪಂಜ; ಹಿಡಿತ;—**में फँसना** ಕೈಗೆ ಸಿಕ್ಕಿಹೋಗು; ವಶವರ್ತಿಯಾಗು.

चंगेर / **चंगेरी**, ಸ್ತ್ರೀ० ಹೂ ಬುಟ್ಟಿ.

चंचरीक, ಪು० ಭ್ರಮರ; ತುಂಬಿ.

चंचल, ವಿ० ಅಸ್ಥಿರ.

चंचला, ಸ್ತ್ರೀ० ಲಕ್ಷ್ಮಿ; ಮಿಂಚು.

चंचु / **चंचुपुट**, ಸ್ತ್ರೀ० ಕೊಕ್ಕು; ಚಂಚು.

चंचोरना, ಸ० ಹಲ್ಲಿನಿಂದ ಜಿಗಿದುರಸ ಹೀರುವುದು.

चंट, ವಿ० ಧೂರ್ತ; ದುಷ್ಟ.

चंड, ವಿ० ಘೋರ; ಕಠೋರ.

चंडाल, ಪು० ಹೊಲೆಯ; ಅಸ್ಪೃಶ್ಯ.

चंडाल चौकड़ी, ಸ್ತ್ರೀ० ಪುಂಡರಗುಂಪು.

चंडू, ಪು० ಅಫೀಮಿನಿಂದ ತಯಾರಾಗುವ ಒಂದು ಬಗೆಯ ಮಾದಕ ದ್ರವ್ಯ. ಇದನ್ನು ಹೊಗೆಯ ರೂಪದಲ್ಲಿ ಕುಡಿಯುತ್ತಾರೆ.

चंडूखाना, ಪು० ಹೆಂಡದಂಗಡಿ.

चंडूबाज़, ಪು० ಹೆಂಡಕುಡುಕ.

चंद, ವಿ० ಕೊಂಚ; ಕೆಲವು.

चंदन, ಪು० ಚಂದನ; ಗಂಧ.

चँदराना, ಸ० ತಿಳಿದು ತಿಳಿದು ಮೂರ್ಖನಾಗು; ಮಂಕುಮಾಡು.

चंदला, ವಿ० ತಲೆಗೂದಲುದುರಿದ.

चँदवा, ಪು० ಸಿಂಹಾಸನದ ಮೇಲುಗಡೆಯ ವರ್ತುಲಮಂಟಪ; ನವಿಲುಗರಿ ಕಣ್ಣು.

चंदा, ಪು० ಚಂದ್ರ; ವರ್ಗಣಿ; ಚಂದಾ; ವಂತಿಗೆ.

चंदिया, ಸ್ತ್ರೀ० ತಲೆಯ ಮಧ್ಯಭಾಗ; ನಡುನೆತ್ತಿ; ಚಂದ್ರ.

चँदोवा, ಪು० ದೇ० **चँदवा**.

चंद्रमा, ಪು० ಚಂದ್ರ.

चंद्रबिन्दु, ಪು० ಅರ್ಧಾನುಸ್ವಾರದ ಬಿಂದು; ಇದರ ರೂಪ ಹೀಗಿರುತ್ತೆ—ँ.

चंद्रिका, ಸ್ತ್ರೀ० ದೇ० **चाँदनी**.

चंपई, ವಿ० ಸಂಪಿಗೆಹೂವಿನ ಬಣ್ಣದ.

चंपक, ಪು० ಸಂಪಿಗೆ.

चंपत, ವಿ० ಅಂತರ್ಧಾನವಾದ; ಮಾಯವಾದ.

चंपना, ಅ० ಭಾರದಿಂದ ಕುಗ್ಗು; ನಾಚಿಕೆಯಿಂದ ತಲೆಬಗ್ಗಿಸು; ಉಪಕಾರಹೊಂದಿ ನಮ್ರನಾಗು.

चंपा, ಪು० ಸಂಪಿಗೆ.

चंपू, ಪು० ಗದ್ಯಪದ್ಯಮಯವಾದ ಕಾವ್ಯ.

चँवर, पुं० ಚಾಮರ.

चँवरदार, पुं० ಚಾಮರ ಬೀಸು ಸೇವಕ.

चँवरी, स्त्री० ಚೌರಿ; ಕುದರೆಬಾಲದ ಕೂದಲಿನಿಂದಮಾಡಿದ ಚಾಮರ.

चक, पुं० ಚಕ್ರವಾಕಪಕ್ಷಿ; ಚಕ್ರ.

चकई, स्त्री० ಹೆಣ್ಣು ಚಕ್ರವಾಕ.

चकचून, वि० ಚೂರುಮಾಡಿದ.

चकचौंध, स्त्री० दे० **चकाचौंध**.

चकती, स्त्री० ಚರ್ಮ, ವಸ್ತ್ರಮುಂತಾದ್ದರಿಂದ ಕತ್ತರಿಸಿ ತೆಗೆದಪಟ್ಟಿ; ದುಂಡಗಿನ ಅಥವಾ ಚೌಕವಾದ ಚಿಂದಿಚೂರು.

चकत्ता, पुं० ಮೈಮೇಲಿನ ಅಗಲವಾಗಿ ದುಂಡಗಿರುವ ಮಚ್ಚೆ; ಕಳೆ; ಹಲ್ಲಿನಗಾಯ.

चकनाचूर, वि० ಚೂರುಚೂರಾದ;

चकपक, वि० ಚಕಿತ; ಸ್ತಂಭಿತವಾದ.

चकपकाना, अ० ಚಕಿತನಾಗು.

चकफेरी, स्त्री० ಪ್ರದಕ್ಷಿಣೆ; ಸುತ್ತು.

चकबंदी, स्त्री० ಜಮೀನಿನ ಚಕ್ಕುಬಂದಿ; ಮೇರೆ.

चकबस्त, स्त्री० ಜಮೀನಿನ ಚಕ್ಕುಬಂದಿ; ಕಾಶ್ಮೀರ ಬ್ರಾಹ್ಮಣರಲ್ಲಿ ಒಂದು ಭೇದ.

चकमक, पुं० ಚಕಮುಕಿ ಕಲ್ಲು.

चकमा, पुं० ಮೋಸ; ಚಕ್ಕರ್; ಹಾನಿ.

चकमाकी, वि० ಚಕಮುಕಿಯಿರುವ स्त्री० ಬಂದೂಕು.

चकरा, पुं० ಸೀರಿನಸುಳಿ. वि० ಅಗಲ; ವಿಸ್ತಾರ.

चकराना, अ० ತಲೆತಿರುಗು; ಚಕಿತನಾಗು.

चकरानी, स्त्री० ಸೇವಕಿ.

चकरी, स्त्री० ಬೀಸುಗಲ್ಲು; ಬೀಸುಗಲ್ಲಿನ ಅರ್ಧಭಾಗ.

चकला, पुं० ರೊಟ್ಟಿ ಮಣೆ; ಅನೇಕ ಹಳ್ಳಿಗಳು ಅಥವಾ ಪಟ್ಟಣಗಳಿರುವ ಇಲಾಖೆ.

चकलाना, स० ಅಗಲಮಾಡು.

चकली, स्त्री० ಚಂದನ ತೇಯುವ ಕಲ್ಲು ಮಣೆ.

चकलेदार, पुं० ಕಂದಾಯ ವಸೂಲು ಮಾಡುವ ಅಧಿಕಾರಿ ಅಥವಾ ಇಲಾಖೆಯ ಮುಖ್ಯಾಧಿಕಾರಿ.

चकवा, पुं० ಚಕ್ರವಾಕ.

चकाचौंध, **चकाचौंधी** } स्त्री० ಪ್ರಕಾಶವು ಬಹಳ ಹೆಚ್ಚಾದಾಗ ಉಂಟಾಗುವ ಕಣ್ಣು ಕುಕ್ಕು ಅಥವಾ ತಳತಳಿ.

चकाबू, पुं० ಚಕ್ರವ್ಯೂಹ; ಚಿತ್ರ ಸಮಸ್ಯೆ.

चकित, वि० ಆಶ್ಚರ್ಯಯುಕ್ತ; ವಿಸ್ಮಯಗೊಂಡ.

चकोटना, स० ಚಿವುಟು; ಜಿಗುಟು; ನುಲಿ.

चकोतरा, पुं० ಚಕ್ಕೋತದ ಹಣ್ಣು; ಗಜನಿಂಬೆ.

चकोर, पुं०, **चकोरी**, स्त्री० } ಚಕೋರಪಕ್ಷಿ.

चकोह, पुं॰ ನೀರಿನ ಸುಳಿ.

चक्कर, पुं॰ ಚಕ್ರ; ಗಾಲಿ; ಪ್ರದಕ್ಷಿಣೆ; ಅಲೆಯುವಿಕೆ; ಸುಳಿ; ಜಂಜಾಲ; ಚಕ್ರದಂತೆ ತಿರುಗುವುದು; ಅತ್ತಿತ್ತ ಅಲೆದಾಡು;—में आना ಆಶ್ಚರ್ಯ ಮಗ್ನನಾಗು; ಭ್ರಮೆಗೊಳ್ಳು;—लगाना ಸುತ್ತಾಡು; ಅಲೆ.

चक्का, पुं॰ ಚಕ್ರ; ಗಾಲಿ.

चक्की, स्त्री॰ ಬೀಸುವ ಕಲ್ಲು.

चक्कू, पुं॰ दे॰ चाकू.

चक्रवात, पुं॰ ಸುಳಿಗಾಳಿ.

} पुं॰ ಕಣ್ಣು.

चखना, स॰ ರುಚಿನೋಡು; ತಿನ್ನು.

चख-चख, स्त्री॰ ಜಗಳ; ಗಲಭೆ.

चखाचखी, स्त्री॰ ವೈರ; ಹಗೆತನ; ವಿರೋಧ.

चखाना, स॰ ರುಚಿನೋಡಿಸು; ತಿನ್ನಿಸು.

चगड़, वि॰ ಜಾಣ.

चचा, पुं॰ ತಂದೆಯ ಸಹೋದರ; ಚಿಕ್ಕಪ್ಪ; ದೊಡ್ಡಪ್ಪ.

चचींड़ा, पुं॰ ಪಡವಲಕಾಯಿ.

चची, स्त्री॰ ತಂದೆಯ ಸಹೋದರನ ಹೆಂಡತಿ; ಚಿಕ್ಕಮ್ಮ; ದೊಡ್ಡಮ್ಮ.

चचेरा, वि॰ ತಂದೆಯ ಸಹೋದರನ ಕಡೆಯ ಸಂಬಂಧದ.

चचोड़ना, स॰ ಚೀಪು; ಹೀರು.

चट, क्रि॰ ಬೇಗನೆ; ಶೀಘ್ರ. पुं॰ ಕಳೆ; ದೋಷ;—से ತತ್‌ಕ್ಷಣವೇ.

चटक, पुं॰ ಗುಬ್ಬಿ; ಗುಬ್ಬಚ್ಚಿ. स्त्री॰ ಥಳಕು; ಹೊಳಪು; ಕಾಂತಿ.

चटकसटक, पुं॰ ಸಿಂಗಾರಸಡಗರ.

चटकना, अ॰ ಬಿರಿ; ರೇಗು; ನೆಟಿಕೆ ಮುರಿ.

चटकनी, स्त्री॰ ಬಾಗಿಲಿನ ಅಗುಳಿ.

चटकाना, स॰ ಬಿರಿಸು; ಕೋಪವನ್ನುಂಟುಮಾಡು.

चटकारा, वि॰ ಹೊಳೆಯುವ; ಚಂಚಲವಾದ.

चटकाहट, स्त्री॰ ಚಟ್ಟನೆಮುರಿಯುವ ಅಥವಾ ಬಿರಿಯುವ ಶಬ್ದ.

चटकीला, वि॰ ಥಳಥಳಿಸುವ.

चटखनी, स्त्री॰ दे॰ चटकनी.

चटचटाना, अ॰ ಚಟಚಟನೆ ಮುರಿ.

चटनी, स्त्री॰ ಚಟ್ನಿ; ಚಟ್ಟಣಿ.

चटपटा, वि॰ ತೀಕ್ಷ್ಣರುಚಿಯುಳ್ಳ.

चटपटाना, अ॰ ಬಹಳ ಅವಸರಪಡು; ತವಕಿಸು; ಆತುರಗೊಳ್ಳು.

चटपटी, स्त्री॰ ಆತುರ; ಅವಸರ; ವ್ಯಾಕುಲ.

चटशाला, चटसार, चटसाल } स्त्री॰ ಪಾಠಶಾಲೆ; ಚಿಕ್ಕ ವಿದ್ಯಾಲಯ; ಕೂಲಿ ಮಠ.

चटाई, स्त्री॰ ಚಾಪೆ.

चटाचट, वि॰ ಬಹಳ ಬೇಗನೆ.

चटाना, स० ನೆಕ್ಕಿಸು; ಸ್ವಲ್ಪ ಸ್ವಲ್ಪ ವಾಗಿ (ಬೇರೆಯವರ) ಬಾಯೊಳಗೆ ಹಾಕು; ಸಾಣೆಹಿಡಿಸು.

चटारन, पु० ಅನ್ನಪ್ರಾಶನೆ.

चटियल, वि० ಗಿಡಮರಗಳಿಲ್ಲದ ಪ್ರದೇಶ.

चटापटी, स्त्री० ಅವಸರ; ಭರ.

चटु, पु० ಮುಖಸ್ತುತಿ; ಪ್ರಿಯ ವಾಕ್ಯ.

चटुल, वि० ಚಪಲ; ಚಂಚಲ.

चटोरा, वि० ಜಿಹ್ವಾಚಾಪಲ್ಯವುಳ್ಳ ರುಚಿಗೆ ಮನಸೋತ.

चट्टान, स्त्री० ದೊಡ್ಡಬಂಡೆ; ಶಿಲಾಖಂಡ.

चट्टी, स्त्री० ಬೀಡು; ಪಾಳಯ; ಹಿಮ್ಮಡಿಯ ಭಾಗವು ತೆರೆದಿರುವ ಜೋಡು; ಚಪ್ಪಲಿ.

चट्टू, वि० ಹೊಟ್ಟೆಬಾಕ.

चड्डा, वि० ಮೂರ್ಖ.

चड्डी, स्त्री० ಒಂದು ವಿಧವಾದ ಲಂಗೋಟಿ; ಚಡ್ಡಿ.

चढ़त, स्त्री० ದೇವರಿಗೆ ಅರ್ಪಿಸಿದ ಕಾಣಿಕೆ; ಹೆಣ್ಣಿನ ಮನೆಗೆ ಹೋಗುವ ದಿಬ್ಬಣ.

चढ़ता, वि० ಏರುತ್ತಿರುವ; ಹತ್ತುವ.

चढ़ना, अ० ಏರು; ಹತ್ತು; ಮೀರು.

चढ़ाई, स्त्री० ಹತ್ತುವಿಕೆ; ಆಕ್ರಮಣ; ದಂಡಯಾತ್ರೆ.

चढ़ा-उतरी, स्त्री० ಅಡಿಗಡಿಗೆ ಹತ್ತುವಿಕೆ ಮತ್ತು ಇಳಿಯುವಿಕೆ.

चढ़ा-ऊपरी, चढ़ा-चढ़ी स्त्री० ಪಂದ್ಯಾಟ; ಸ್ಪರ್ಧೆ; ಪೈಪೋಟಿ.

चढ़ाना, स० ಏರಿಸು; ಹತ್ತಿಸು; ಅರ್ಪಿಸು.

चढ़ाव, पु० ಹತ್ತುವಿಕೆ; ಉನ್ನತಿ; —उतार ಏರಿಳಿತ; ಎತ್ತರತಗ್ಗು; ಹಳ್ಳದಿಣ್ಣೆ.

चढ़ावा, पु० ಮದುವೆ ದಿವಸ ವರನ ಕಡೆಯವರು ವಧುವಿಗೆ ತೊಡಿಸತಕ್ಕ ಆಭರಣ; ದೇವರಿಗೆ ಅರ್ಪಿಸುವ ಕಾಣಿಕೆ.

चतुर, वि० ಗಟ್ಟಿಗ; ಸಮರ್ಥ.

चतुरता, चतुराई स्त्री० ಯುಕ್ತಿ; ಸಾಮರ್ಥ್ಯ ಚಾತುರ್ಯ.

चद्दर, स्त्री० दे० **चादर.**

चना, पु० ಕಡಲೆ.

चपकन, स्त्री० ಒಂದು ವಿಧವಾದ ಅಂಗಿ.

चपकना, अ० दे० **चिपकना.**

चपटा, स्त्री० दे० **चिपटा.**

चपड़-चपड़, स्त्री० ನೀರುಕುಡಿಯುವಾಗ ಅಥವಾ ಏನಾದರೂ ತಿನ್ನುವಾಗ ನಾಯಿಯ ಬಾಯಿಯಿಂದ ಹೊರಡುವ ಶಬ್ದ.

चपड़ा, पु० ಅರಗು.

चपत, पु० ಕೆನ್ನೆ ಅಥವಾ ತಲೆಯ ಮೇಲೆ ಹಾಕತಕ್ಕ ಅಂಗೈಯ ಏಟು.

चपना, अ० ಕುಗ್ಗಿಹೋಗು; ನಾಚಿಕೆಪಡು; ನಾಶವಾಗು.

चपरगट्टू, वि० ನಾಶಕರ; ಭಾಗ್ಯ.
चपरना, अ० ಪರಸ್ಪರ ಸೇರು.
चपरा, क्रि० ಬೇಗಬೇಗನೆ.
चपरास, स्त्री० ಜವಾನರು ಕಾಲಾಳುಗಳು ಅಥವಾ ಸಿಪಾಯಿಗಳು ತೊಟ್ಟುಕೊಳ್ಳುವ ಲೋಹದ ಬಿಲ್ಲೆ.
चपरासी, पु० ಜವಾನ; ಪ್ಯಾದ; ಸಿಪಾಯಿ.
चपरि, क्रि० ಜಾಗ್ರತೆ; ಸ್ಫೂರ್ತಿಯಿಂದ.
चपल, वि० ಕ್ಷಣಿಕವಾದ; ಅಸ್ಥಿರವಾದ.
चपला, वि० ಬಹಳ ಚುರುಕಾದ. स्त्री० ಲಕ್ಷ್ಮಿ; ವಿದ್ಯುತ್; ವ್ಯಭಿಚಾರಿಣಿ.
चपली, स्त्री० ಜೋಡು; ಹಿಮ್ಮಡಿಯ ಭಾಗವು ತೆರೆದಿರುವ ಮೆಟ್ಟು.
चपाती, स्त्री० ತೆಳುವಾದ ರೊಟ್ಟಿ.
चपाना, स० ಹಗ್ಗಗಂಟುಹಾಕು; ಕುಗ್ಗಿಸು; ನಾಚಿಕೆಪಡಿಸು.
चपेट, पु० ಅಂಗೈಯೇಟು; ಹೊಡೆತ; ಆಘಾತ.
चपेटना, स० ದಬಾಯಿಸು; ಕುಗ್ಗಿಸು.
चपेटा, पु० दे० **चपेट**.
चप्पड़, पु० ಮರದತೊಗಟೆ.
चप्पल, पु० ಒಂದು ಜಾತಿಯ ಪಾದರಕ್ಷೆ; ಜೋಡು.
चप्पा, पु० ನಾಲ್ಕನೆಯಭಾಗ; ಸ್ವಲ್ಪವಾದ ಭೂಭಾಗ.
चप्पू, पु० ದೋಣಿನಡಿಸುವ ಹುಟ್ಟು ಅಥವಾ ದಂಡಕೋಲು.
चफाल, स्त्री० ನೀರು, ಕೆಸರುಗಳಿಂದ ಆವರಿಸಿದ ದ್ವೀಃ
चबाना, स० ಹಲ್ಲಿನಿಂದ ಅಗಿ; ಮೆಲ್ಲು; ನೆಮಲು.
चबूतरा, पु० ಜಗಲಿಕಟ್ಟೆ; ದೊಡ್ಡ ವಿಶ್ರಾಂತಿ ಕಟ್ಟೆ.
चबेना, पु० ಹುರಿಗಡಲೆ; ಹುರಿಗಾಳು.
चबेनी, स्त्री० ಫಲಹಾರದ ತಿನಸು;
चभाना, स० ಉಣಿಸು.
चभोरना, स० ಮುಳುಗಿಸು; ಒದ್ದೆ ಮಾಡು.
चमक, पु० ಪ್ರಕಾಶ; ಕಾಂತಿ; ಹೊಳಪು.
चमक-दमक स्त्री० ಥಳುಕುಬೆಳಕು; ಸೊಬಗುಸಿಂಗಾರ.
चमकदार, वि० ಹೊಳೆಯುವ; ಪ್ರಕಾಶಮಾನವಾದ.
चमकना, अ० ಪ್ರಕಾಶಿಸು; ಹೊಳೆ.
चमकाना, स० ಹೊಳೆಯಿಸು; ಬೆಳಗಿಸು.
चमकीला, वि० ಹೊಳೆಯುವಂಥಾ.
चमगीदड़, पु० ಗಬ್ಬಿಲ; ಬಾವಲಿ.
चमचम, वि० दे० **चमाचम**.
चमचमाना, अ० दे० **चमकना**.
चमचा, पु० ಚಿಕ್ಕಸೌಟು; ಚಮಚೆ.
चमची, स्त्री० ಚಿಕ್ಕಚಮಚೆ.
चमजूई, स्त्री० ಅಂಟಿದಮೇಲೆ ಬಿಡದ ಉಣ್ಣೆ ಜಾತಿಯ ಕ್ರಿಮಿ.

चमड़ा, पु० } ಚರ್ಮ; ತೊಗಲು;
ड़ी, स्त्री० } ಚಕ್ಕಳ.

चमत्कार, पु० ವಿಚಿತ್ರವಾದ ಕೆಲಸ; ಅದ್ಭುತಕಾರ್ಯ.

चमन, पु० ಹೂದೋಟ; ಉದ್ಯಾನ.

चमर, पु० ಚಾಮರ.

चमरख, स्त्री० ಚರಕದ ಸೂಜಿಗೆ ಜೋಡಿಸಿಡುವ ಚರ್ಮದ ಅಥವಾ ಮೌಂಜೀ ಹುಲ್ಲಿನ ಕಿವಿ.

चमरी, स्त्री० ಚಮರಿ ಮೃಗ; ಚಾಮರ.

चमरौटी, स्त्री० ಅಂತ್ಯಜರಹಟ್ಟಿ.

चमला, पु० ಭಿಕ್ಷಾಪಾತ್ರೆ.

चमाचम, वि० ಥಳಥಳನೆ; ಕಾಂತಿ ಯುತವಾಗಿ.

चमार, पु० ಮೊಚ್ಚೆಗಾರ; ಚಮಾರ.

चमू, स्त्री० ಸೈನ್ಯ; ದಂಡು.

चमेली, स्त्री० ಮಲ್ಲಿಗೆ.

चमोटा, पु० ಕ್ಷೌರದ ಕತ್ತಿಯನ್ನು ಮಸೆಯುವ ತೊಗಲಿನ ಪಟ್ಟಿ.

चमोटी, स्त्री० ಬಾರುಕೋಲು; ಕೊರಡೆ.

चम्मच, पु० दे० **चमचा.**

चयन, पु० ಸಂಗ್ರಹ; ರಾಶಿ; ಕೋಟಿ; ಚೌಕಿ.

चर, पु० ದೂತ; ಜೀವಜಂತು. **वि०** ಅಸ್ಥಿರವಾದ.

चरई, स्त्री० ಕಲಗಚ್ಚಿನ ಬಾನೆ; ತೊಟ್ಟಿ.

चरक, पु० ದೂತ; ಚಾಕರ; ಗೂಢ ಚಾರ; ಆಯುರ್ವೇದ ವಿದ್ಯೆಯ ಒಬ್ಬ ಆಚಾರ್ಯ.

चरका, पु० ಚಿಕ್ಕಘಾಯ; ನಷ್ಟ; ಮೋಸ.

चरख, पु० ಚಕ್ರ; ಗಾಲಿ; ತಿರಗಣಿ.

चरखा, पु० ಚರಕ; ರಾಟಿ.

चरखी, स्त्री० ಚಿಕ್ಕರಾಟಿ.

चरचराना, अ० ಚರ್ ಚರ್ರೆಂದು ಸದ್ದಾಗು.

चरचा, स्त्री० दे० **चर्चा.**

चरणोदक, पु० ಚರಣಾಮೃತ.

चरन, पु० दे० **चरण.**

चरना, स० ಮೇಯು. (ದನ)

चरनि, स्त्री० ನಡೆಯುವಿಕೆ; ಗಮನ.

चरनी, स्त्री० ಪಶುಗಳಿಗೆ ಮೇವು ಹಾಕುವ ಕಟ್ಟೆ; ದೊಡ್ಡಿ.

चरपरा, वि० ತೀಕ್ಷ್ಣವಾದ ರುಚಿ ಯುಳ್ಳ; ಚುರುಕಾದ.

चरब, वि० ಜಿಡ್ಡಾದ; ಚುರುಕಾದ.

चरबा, पु० ಪ್ರತಿ; ನಕಲು; ನಕಲು ತೆಗೆಯುವ ಕಾಗದ.

चरबाक, पु० ಚತುರ; ಚಂಚಲ.

चरबी, स्त्री० ಕೊಬ್ಬು; ಚರ್ಬಿ; ಮೇದಸ್ಸು.

चरम, वि० ಅಂತಿಮ; ಕೊನೆಯ; ಅತ್ಯಂತ.

चरमकाल, स्त्री० ಅಂತ್ಯಕಾಲ.

चरमसीमा, स्त्री० ಕೊನೆಯ; ಎಲ್ಲೆ ಮಿತಿ.

चरवाई, स्त्री० ದನದಮೇವು.
चरवाहा, पु० ದನಮೇಯಿಸುವವನು.
चरवाही स्त्री० ದನಮೇಯಿಸುವಿಕೆ ಅಥವಾ ಮೇಯಿಸಿದ ಮಜೂರಿ.
चरस, पु० ಚರ್ಮದ ಚೀಲ; ಒಂದು ಮಾದಕ ಪದಾರ್ಥ.
चरसा, पु० ಭೂಮಿಯ ಅಳತೆ.
चराई, स्त्री० ಮೇಯುವಿಕೆ; ಮೇಯಿಸುವಿಕೆ ಅಥವಾ ಮೇಯಿಸಿದ ಮಜೂರಿ.
चरागाह, पु० दे० **चरनी.**
चराना, स० ಮೇಯಿಸು; ಮೋಸ ಮಾಡು.
चरिंदा, पु० ಹುಲ್ಲು ತಿನ್ನುವ ಪಶು.
चरित, पु० ಆಚರಣೆ; ಕೃತ್ಯ; ಜೀವನ ಚರಿತ್ರೆ.
चरितार्थ, वि० ಕೃತಾರ್ಥ; ಕೃತ ಕೃತ್ಯ.
चरित्तर, पु० ಧೂರ್ತತೆ; ದಿಟ್ಟತನ.
चरित्र, पु० ಸ್ವಭಾವ; ಜೀವನ ಚರಿತ್ರೆ; ಕೃತ್ಯ.
चरित्रवान, वि० ನೈತಿಕಬಲವುಳ್ಳ.
चरी, स्त्री० ಮೇವಿನಬೀಡು; ದಾಸಿ; ಕೂಲಿಯವಳು.
चरेरा, वि० ಕಠಿಣವಾದ; ಒರಟಾದ.
चर्ख, पु० ಆಕಾಶ; ಭಾಗ್ಯ; ಚಕ್ರ.
चर्खा, पु० दे० **चरखा.**
चर्खी, स्त्री० दे० **चरखी.**
चर्चा, पु० ವರ್ಣನೆ; ಚರ್ಚೆ.
चर्परा, वि० दे० **चरपरा.**
चर्बी, स्त्री० दे० **चरबी.**
चर्राना, अ० ವಾತರೋಗದಿಂದನೋವಾಗು.
चर्स, पु० दे० **चरस.**
चल, वि० दे० **चंचल.**
चलचलाव, पु० ಸಾಯುವುದು; ಹೊರಹೊರಡುವುದು.
चलता, वि० ನಡೆಯುತ್ತಿರುವ; ಚಲಾವಣೆಯಲ್ಲಿರುವ.
चलतापुर्जा, वि० ಕಾರ್ಯದಕ್ಷ.
चलता-फिरता, वि० ಅಲೆದಾಡುವ.
चलती, स्त्री० ಅಧಿಕಾರ; ಮರ್ಯಾದೆ; ಸ್ಥಾನಮಾನ.
चलन, पु० ಗತಿ; ನಡವಳಿಕೆ; ಪದ್ಧತಿ; ವರ್ತನೆ.
चलनसार, वि० ಚಲಾವಣೆಯಲ್ಲಿರುವ; ನಡೆವಳಿಕೆಯಲ್ಲಿರುವ; ಬಾಳಿಕೆ ಬರುವ.
चलना, अ० ಹೋಗು; ಹೊರಡು; ನಡೆದು ಹೋಗು; ಚಲಿಸು. **पेट चलना** ಭೇದಿಯಾಗು. **चल बसना** ಸಾಯು.
चलनी, स्त्री० दे० **छलनी.**
चलविचल, वि० ಅವ್ಯವಸ್ಥಿತ; ಸ್ಥಾನ ಭ್ರಷ್ಟವಾದ; ಕ್ರಮತಪ್ಪಿದ.
चलाऊ, वि० ಬಾಳಿಕೆ ಬರುವಂಥಾ; ಗಟ್ಟಿಯಾದ.
चलाचली, स्त्री० ಹೊರಡುವ ಅವಸರ ಅಥವಾ ಗಡಿಬಿಡಿ.

चलान, स्त्री० ಕಳುಹಿಸಲ್ಪಡುವಿಕೆ ಅಥವಾ ಹೋಗುವಿಕೆ; ಕಳಹಿಸುವಿಕೆ ಅಥವಾ ನಡೆಸುವಿಕೆ; ಅಪರಾಧಿಯನ್ನು ಪತ್ತೆಮಾಡಿ ಕಛೇರಿಗೆ (ನ್ಯಾಯಾಲಯಕ್ಕೆ) ಕಳುಹಿಸುವಿಕೆ.

चलाना, स० ನಡೆಯಿಸು; ಚಲಾಯಿಸು.

चलायमान, वि० ಚಂಚಲ; ವಿಚಲಿತವಾದ.

चलावा, पु० ರಿವಾಜು; ನಡೆವಳಿಕೆ; ಪದ್ಧತಿ.

चलित, वि० ಸ್ಥಿರವಲ್ಲದ.

चवन्नी, स्त्री० ನಾಲ್ಕಾಣೆಯನಾಣ್ಯ ಪಾವಲಿ; ಚಕ್ರ.

चवाई, पु० ನಿಂದಕ; ಅಪಕೀರ್ತಿಯನ್ನು ಹರಡುವವನು.

चवाव, पु० ಗಾಳಿಸುದ್ದಿ; ಅಪಕೀರ್ತಿ; ಅಪವಾದ.

चशमा, स्त्री० दे० **चश्मा.**

चश्म, स्त्री० ಕಣ್ಣು; ನೇತ್ರ;—**दीद** ಪ್ರತ್ಯಕ್ಷವಾಗಿ ಕಂಡ;—**नुमाई** ಕಣ್ಣು ಬೆದರಿಕೆ;—**पाशी** ಕಣ್ಣಿಗೆ ಕಾಣಿಸದಂತೆ ತಪ್ಪಿಸಿ ಕೊಳ್ಳುವುದು.

चश्मक, स्त्री० ಮನಃಕಷಾಯ.

चश्मा, पु० ಕನ್ನಡಕ; ಸುಲೋಚನ; ನೀರಿನ ಬುಗ್ಗೆ; ಚಿಕ್ಕನದಿ.

चषक, पु० ಮದ್ಯಪಾನದ ಪಾತ್ರೆ; ಮಧು; ಜೇನುತುಪ್ಪ.

चसक, स्त्री० ಸಿಡಿನೋವು; ಚಳುಕು.

चसकना, अ० ನೋಯು.

चसका, पु० ರುಚಿ; ಚಟ.

चसमाँ, वि० ಅಂಟಿಸಿರುವ.

चस्पा, वि० ಅಂಟಿಸಿದ; ಹಚ್ಚಿದ.

चहू, पु० ನದಿಯುದಡದಲ್ಲಿ ನಾವೆಯನ್ನು ಹತ್ತಲು ಮಾಡಿರುವ ಕಟ್ಟೆ.

 „ ० ಪಕ್ಷಿಗಳು ಚಿಲಪಿಲಿಯೆಂದು ಮಾಡುವ ಶಬ್ದ.

चहूकना, अ० ಚಿಲಿಪಿಲಿಗುಟ್ಟು.

चहूका, पु० ಇಟ್ಟಿಗೆ ಅಥವಾ ಕಲ್ಲಿನ ಜಗಲಿ; ಉರಿಯುತ್ತಿರುವ ಕಟ್ಟಿಗೆ.

चहूचहा, पु० ಚಿಲಿಪಿಲಿಗುಟ್ಟುವಿಕೆ; ನಗೆಚಾಟ; ತಮಾಶೆ.

चहूबच्चा, पु० ಕೊಳೆನೀರಿನ ಗುಂಡಿ; ಚರಂಡಿ; ಮೋರಿ; ನೆಲಮಾಳಿಗೆ.

चहूल, स्त्री० ಕೆಸರು; ಆನಂದ; ವೈಭವ.

चहूलक़दमी, स्त्री० ಮೆಲ್ಲಮೆಲ್ಲನೆ ನಡೆಯುವಿಕೆ.

चहूलपहूल, „ ० ಕೋಲಾಹಲ; ಆನಂದೋತ್ಸವ.

चहूला, पु० ಕೆಸರು; ಕೊಚ್ಚೆ.

 „ ० ಬಾವಿಯಿಂದ ನೀರು ಸೇದುವ ರಾಟೆ; ಚರ್ಕಿ.

चहार, वि० ನಾಲ್ಕು.

चहार-दीवारी, स्त्री० ಪ್ರಾಕಾರ ಸುತ್ತುಗೋಡೆ.

चहारशंबा, ಪುಂ ನಾಲ್ಕನೆಯವಾರ; ಬುಧವಾರ.

चहारुम, ವಿಂ ನಾಲ್ಕನೆಯ.

चहुँओर, ಕ್ರಿಂ ನಾಲ್ಕೂಕಡೆ.

चहेता, ವಿಂ ಪ್ರಿಯ.

चाँई, ವಿಂ ಕಪಟಿ; ಮೋಸಗಾರ; ಬೋಳು ತಲೆಯವನು.

चाँक, ಪುಂ ದವಸ ಧಾನ್ಯದ ರಾಶಿಗಳಿಗೆ ಮುದ್ರೆಹಾಕುವ ಕೋಲು.

चाँकना, ಸಂ ಧಾನ್ಯದ ರಾಶಿಗೆ ಮುದ್ರೆ ಹಾಕು.

चाँगला, ವಿಂ ಚತುರ; ಆರೋಗ್ಯವಂತ.

चाँटा, ಪುಂ ದೊಡ್ಡ ಇರುವೆ; ಅಂಗೈಯ ಹೊಡೆತ.

चाँड़, ವಿಂ ಪ್ರಬಲವಾದ; ಸೊಕ್ಕಿದ. ಸ್ತ್ರೀಂ ಭಾರವನ್ನು ಹೊತ್ತುಕೊಂಡಿರುವ ಕಂಭ; ಆಧಾರ; ಒತ್ತಾಯ.

चांडाल, ಪುಂ ಅತ್ಯಂತ ನೀಚವಾದ ಜಾತಿ.

चांडाली, ಸ್ತ್ರೀಂ ಚಾಂಡಾಲ ಜಾತಿಯ ಹೆಂಗಸು.

चाँद, ಪುಂ ಚಂದ್ರ.

चाँदना, ಪುಂ } ಚಂದ್ರ ಪ್ರಕಾಶ;
चाँदनी, ಸ್ತ್ರೀಂ } ಬೆಳದಿಂಗಳು.

चाँदमारी, ಸ್ತ್ರೀಂ ಗೋಡೆಯ ಮೇಲೆ ಅಥವಾ ವಸ್ತ್ರದಮೇಲಿನ ಚುಕ್ಕೆಗಳನ್ನು ಗುರಿಯಿಟ್ಟು ಗುಂಡು ಹಾರಿಸುವ ವಿದ್ಯೆಯನ್ನು ಕಲಿಯುವಿಕೆ; ಸಿನಿಮಾ ಷೂಟಿಂಗ್.

चांदी, ಸ್ತ್ರೀಂ ಬೆಳ್ಳಿ; ರಜತ.

चाँप, ಸ್ತ್ರೀಂ ಬಿಲ್ಲು; ಬಗ್ಗುವಿಕೆ; ತುಪಾಕಿಯ ಚಾಪು.

चाँपना, ಸಂ ಒತ್ತು.

चांपी, ಸ್ತ್ರೀಂ ಎಣ್ಣೆ ತಿಕ್ಕಿಮೈ ಕೈ ಉಜ್ಜುವುದು; ಮಸಾಜು ಮಾಡುವುದು.

चायँचायँ } ಸ್ತ್ರೀಂ ವ್ಯರ್ಥಪ್ರಲಾಪ.
चावँचावँ }

चा, ಸ್ತ್ರೀಂ दे० चाय.

चाक, ಪುಂ ಗಾಡಿ ಅಥವಾ ರಥದ ಚಕ್ರ; ರಾಟೆ; ಬಿರುಕು; ಸೀಳು.

चाक़, ವಿಂ ಗಟ್ಟಿಮುಟ್ಟಾದ.

चाक़चौबंद, ವಿಂ ದೃಢವಾದ; ಗಟ್ಟಿಯಾದ.

चाकना, ಸಂ ಎಲ್ಲೆಯುಗೆರೆ ಎಳೆ; ಗೊತ್ತುಹಚ್ಚುವುದಕ್ಕಾಗಿ ಯಾವುದಾದರೂ ವಸ್ತುವಿನ ಮೇಲೆ ಗುರುತುಹಾಕು.

चाकर, ಪುಂ ಸೇವಕ; ಭೃತ್ಯ.

चाकरी, ಸ್ತ್ರೀಂ ಊಳಿಗ; ನೌಕರಿ; ಚಾಕರಿ.

चाकी, ಸ್ತ್ರೀಂ ಬೀಸುವಕಲ್ಲು; ಮಿಂಚು.

चाक़ू, ಪುಂ ಚಾಕು; ಚೂರಿ.

चाखना, ಸಂ दे० चखना.

चाचा, ಪುಂ ಚಿಕ್ಕಪ್ಪ ಅಥವಾ ದೊಡ್ಡಪ್ಪ; ಕಕ್ಕ.

चाची, ಸ್ತ್ರೀಂ ಚಿಕ್ಕಪ್ಪ ಅಥವಾ ದೊಡ್ಡಪ್ಪನ ಹೆಂಡತಿ; ಚಿಕ್ಕಮ್ಮ; ದೊಡ್ಡಮ್ಮ.

चाट, स्त्री० ಇಷ್ಟ; ಹಂಬಲ; ಗೀಳು; ಚಟ.

चाटना, स० ನೆಕ್ಕು; ಚಪ್ಪರಿಸು.

चाटु, पु० ಸವಿಮಾತು; ಮುಖಸ್ತುತಿ.

चाटुकार, पु० ಮುಖಸ್ತುತಿಮಾಡುವವನು.

चाटुकारी, स्त्री० ಮುಖಸ್ತುತಿ.

चातक, पु० ಚಾತಕಪಕ್ಷಿ.

चातुर्य, पु० ಚತುರತೆ; ದಕ್ಷತೆ.

चादर, स्त्री० ಹೊದಿಕೆ; ಹಚ್ಚಡ; ದುಪ್ಪಟಿ.

चादरा, पु० ದೊಡ್ಡದುಪ್ಪಟಿ.

चाप, पु० ಬಿಲ್ಲು; ಧನುಸ್ಸು; ಒತ್ತಡ; ದಬಾವು; ನಡಿಗೆ (ಹೆಜ್ಜೆ) ಯ ಸಪ್ಪಳ

चापट, स्त्री० ತೌಡು; ಹೊಟ್ಟು; ಭೂಸಿ.

चापड़, वि० ಕಾಲಿನ ಕೆಳಗೆ ಸಿಕ್ಕಿ ಬಜ್ಜಿಯಾಗಿಹೋದ; ನೆಲಸಮವಾಗಿ ಹೋದ; ಪದದಳಿತ.

चापना, स० ಅದುಮು; ಒತ್ತು; ಅಪ್ಪಿಕೊಳ್ಳು.

चापल, पु० ಚಾಂಚಲ್ಯ; ಚಪಲತೆ. वि० ಚಂಚಲವಾದ; ಅಸ್ಥಿರ.

चापलूस, वि० ಮುಖಸ್ತುತಿಮಾಡುವವ.

चापलूसी, स्त्री० ಮುಖಸ್ತುತಿ.

चाबना, स० ಅಗಿ; ಮೆಲ್ಲು; ತಿನ್ನು.

चाबी, स्त्री० ಬೀಗದ ಕೈ.

चाबुक, पु० ಕೊರಡು; ಬಾರುಕೋಲು; ಚಾವುಟಿ;—**दस्त** ಚತುರ.

चाबुक सवार, पु० ಕುದುರೆಯನ್ನು ಪಳಗಿಸುವ.

चाबुक सवारी, स्त्री० ಕುದುರೆಯನ್ನು ಪಳಗಿಸುವ ಕೆಲಸ.

चाभना, स० ತಿನ್ನು; ಭಕ್ಷಣಮಾಡು.

चाभी, स्त्री० दे० **चाबी.**

चाम, पु० ಚರ್ಮ; ತೊಗಲು;—**के दाम चलाना** ಅನ್ಯಾಯಮಾಡುವುದು.

चामर, पु० ಚಾಮರ.

चामरिक, पु० ಚಾಮರ ಬೀಸುವವನು.

चाय, स्त्री० ಚಹಾ ಅಥವಾ ಟೀ ಸೊಪ್ಪು ಮತ್ತು ಇದರ ಕಷಾಯ.

चारख़ाना, पु० ಬಣ್ಣಬಣ್ಣದ ಚೌಕಳಿ ವಸ್ತ್ರ.

चारजामा, पु० ಕುದುರೆಯ ಜೀನು.

चारण, पु० ವಂದಿಮಾಗಧಳು.

चारदीवारी, स्त्री० ಊರಸುತ್ತಿನ ಗೋಡೆ; ಪ್ರಾಕಾರ.

चारनाचार, क्रि० ಬಲವಂತವಾಗಿ.

चारपाई, स्त्री० ಮಂಚ.

चारबाज, पु० ಚದುರವಾದ ತೋಟ; ಚದುರಮೂಲೆ.

चारबालिश, पु० ದುಂಡಾದದಿಂಬು.

चार-मजबूरन, क्रि० ವಿವಶನಾಗಿ; ನಿರುಪಾಯನಾಗಿ.

चारा, पु० ಮೇವು ; ತಿನಸು ; ಉಪಾಯ ; ಯತ್ನ.

चाराजोई, स्त्री० ಫಿರ್ಯಾದಿ ; ದಾವೆ.

चारित्र, पु० ವಂಶಪಾರಂಪರ್ಯವಾಗಿ ಬಂದಿರುವ ಆಚಾರ ; ನಡೆನುಡಿ ; ಸ್ವಭಾವ.

चारी, वि० ನಡೆಯುವ ; ಸಂಚರಿಸುವ.

चारु, वि० ಸುಂದರವಾದ ; ಮನೋಹರವಾದ.

चाल, स्त्री० ನಡೆ ; ಗತಿ ; ಗಮನ ; ಆಚರಣೆ ; ಆಕಾರಪ್ರಕಾರ ; ಉಪಾಯ ; ಕಪಟ ; ಸಪ್ಪಳ.

चालक, पु० ನಡೆಯಿಸುವವ; ಸಂಚಾಲಕ ; ಧೂರ್ತ.

चालचलन, पु० ನಡೆನುಡಿ; ಆಚರಣೆ.

चालढाल, पु० ವೈಕಟ್ಟು; ಕಾರ್ಯದ ರೀತಿ ; ಉಪಾಯ.

चालना, स० ಸಂಚಾಲನಮಾಡು.

चालाक, वि० ವ್ಯವಹಾರ ಕುಶಲ ; ಚತುರ ; ಧೂರ್ತ.

चालाकी, स्त्री० ಚಾತುರ್ಯ; ಮೋಸ; ತಂತ್ರ ; ಯುಕ್ತಿ.

चालान, पु० ಕೊಂಡ ಸರಕುಗಳ ಪಟ್ಟಿ; ಥೇಟಪಟ್ಟಿ; ಅಪರಾಧಿಗಳನ್ನು ವಿಚಾರಣೆಗಾಗಿ ನ್ಯಾಯಸ್ಥಾನಕ್ಕೆ ಕಳುಹಿಸುವಿಕೆ.

चालिया, वि० दे० **चालबाज़.**

चाली, वि० ಧೂರ್ತ. स्त्री० ಹರುಕು ವಸ್ತು ; ಚಿಂದಿ.

चालीसा, पु० ನಲವತ್ತು ವರ್ಷಗಳ ಕಾಲ; ಸುಲೋಚನ; ಚಾಳೀಸ.

चाव, पु० ಪ್ರಬಲವಾದ ಇಚ್ಛೆ ; ಲಾಲಸೆ ; ಅನುರಾಗ ; ಪ್ರೇಮ ; ಅಭಿರುಚಿ ; ಉತ್ಸಾಹ.

चावर, चावल पु० ಅಕ್ಕಿ ; ಅನ್ನ.

चाशनी, स्त्री० ಜಿಲೇಬಿ ಮೊದಲಾದ ಮಿಠಾಯಿಯನ್ನು ಅದ್ದುವ ಸಕ್ಕರೆ ಅಥವಾ ಬೆಲ್ಲದ ಪಾಕ; ಕ್ಷೀರ. (**चासनी**)

चास, पु० ಉಳುವಿನ ಸಾಲು.

चासना, स० ಉಳು ; ನೇಗಿಲು ಹಿಡಿ.

चाह, स्त्री० ಇಚ್ಛೆ; ಅಪೇಕ್ಷೆ; ಪ್ರೇಮ; ಆವಶ್ಯಕತೆ ; ಭಾವೀ.

चाहक, पु० ಅಪೇಕ್ಷಿಸುವವನು.

चाहत, स्त्री० दे० **चाह.**

चाहना, स० ಅಪೇಕ್ಷಿಸು ; ಇಷ್ಟಪಡು ; ಪ್ರೀತಿಸು.

चाहिए, चाहिये अव्य० ಬೇಕು.

चाही, वि० ಅಪೇಕ್ಷಿಸಲ್ಪಟ್ಟ.

चाहे, अव्य० ಮನಬಂದಂತೆ; ಇಲ್ಲವೆ; ಬೇಕಾದರೆ.

चाहे-ग़बग़ब, पु० ಕಪಾಳದಮೇಲಿನ ಗೈ.

चाहे-ज़क़न, पु० ಕೆನ್ನೆ ಅಥವಾ ಗಡ್ಡದ ಮೇಲಿನ ಹಳ್ಳ.

चाहे-ज़नख़दा, पु० ಗಲ್ಲದಮೇಲಿನ

चितँटा, पु० ದೊಡ್ಡ ಇರುವೆ.

चितँटी, स्त्री० ಸಣ್ಣ ಇರುವೆ.

चिंगारी, स्त्री० दे० चिनगारी.

चिंगुराना, अ० ಜೋವು ಹಿಡಿಯು ವುದು.

चिंघाड़, स्त्री० ಚೀತ್ಕಾರ; ಘೀಂಕಾರ; ಆನೆಯಕೂಗು.

चिंतन, पु० ಧ್ಯಾನ; ಮನನ.

चिंतना, स० ಮನನಮಾಡು. स्त्री० ಧ್ಯಾನ; ಸ್ಮರಣೆ; ಯೋಚನೆ.

चिंता, स्त्री० ಯೋಚನೆ.

चिंतित, वि० ಚಿಂತೆಯಿಂದೊಡ ಗೂಡಿದ; ವ್ಯಥೆಯುಳ್ಳ.

चिंदी, स्त्री० ಚೂರು; ತುಂಡು.

चिउड़ा } पु० ಅವಲಕ್ಕಿ.
चिउरा }

चिक, स्त्री० ತಡಿಕೆ; ತಟ್ಟಿ; ಕಸಾಯಿ.

चिकट } वि० ಕೊಳೆಯಾದ; ಅಂ
चिकटा } ಟುಳ್ಳ. पु० ತಂಗಿಯ ಮ ಕ್ಕಳ ವಿವಾಹಕಾಲದಲ್ಲಿ ಅಣ್ಣನು ಓದಿಸುವ ಉಡುಗೊರೆ.

चिकटना, अ० ಜಿಗಟಾಗಿರು; ಅಂಟು ಅಂಟಾಗಿರು.

चिकन, पु० ಕಸೂತಿ ಕೆಲಸಮಾಡಿದ ವಸ್ತ್ರ.

चिकना, वि० ನುಣುಪಾದ; ಜಿಡ್ಡಾದ; ಮೂರ್ಖ. **चिकनी चुपड़ी बातें** ಮರುಳುಮಾಡುವ ಮಧುರ ವಚನಗಳು; ಕಪಟಸ್ನೇಹದ ಮಾತುಗಳು.

चिकनाई, स्त्री० ನುಣುಪು; ಜಿಡ್ಡು.

चिकनाना, स० ನಯಮಾಡು; ಮೆರಗು ಹಾಕು.

चिकनिया, वि० ಸುಂದರವಾದ ವೇಷ ವಿನ್ಯಾಸವುಳ್ಳ; ಶೃಂಗಾರಪ್ರಿಯ; ವಿಲಾಸಿ.

चिकरना, अ० ಚೀರು; ಚೀತ್ಕಾರ ಮಾಡು.

चिकवा, पु० ಕಸಾಯಿಯವನು; ಕಟುಕ.

चिकित्सा, स्त्री० ಚಿಕಿತ್ಸೆ; ಇಲಾಜು; ವಾಸಿಮಾಡುವುದು.

चिकुर, पु० ತಲೆಯ ಕೂದಲು; ಹಾವಿನ ಜಾತಿಯ ಪ್ರಾಣಿಗಳು.

चिकोटी, स्त्री० ಚಿಟಿಕೆ; ಚಿವುಟುವಿಕೆ.

चिक्कट, पु० ಗಸಿ; ಬಗ್ಗಡ; ಕೊಳಕು. वि० ಕೊಳಕಾದ

चिक्कन, वि० दे० चिकना.

चिक्करना, अ० दे० चिकरना.

चिखर, पु० ಕಡಲೆಯ ಹೊಟ್ಟು.

चिखुरना, स० ಕದತೆರೆಯು.

चिचड़ा, पु० ಉತ್ತರೇಣಿ.

चिचिंड़ा, पु० दे० चचींड़ा.

चिचियाना, अ० दे० चिल्लाना.

चिट, पु० ಕಾಗದದ ಚೂರು; ಚೀಟಿ.

चिटकना, अ० ಚೆನ್ನಾಗಿ ಒಣಗುವುದ ರಿಂದ ಅಲ್ಲಲ್ಲಿ ಬಿರಿಯು; ಸೀಳಿ ಹೋಗು; "ಚಟಚಟ" ಎಂದು ಉರಿ; ಸಿಡಿಮಿಡಿಗುಟ್ಟು.

चिटनवीस, पु० ಪತ್ರಲೇಖಕ; ಕೆಲಸ ಮಾಡುವವ; ಗುಮಾಸ್ತ.

चिट्ठा, पुं० ಜಮಾಖರ್ಚಿನ ಲೆಕ್ಕ; ಖಾತೆಕಿರ್ದಿ.

चिट्ठी, स्त्री० ಕಾಗದ; ಪತ್ರ; ಓಲೆ; ಚೀಟಿ.

चिट्ठी-पत्री, स्त्री० ಕಾಗದ ಪತ್ರಗಳು.

चिट्ठी-रसाँ, पुं० ಅಂಚೆ ಸಿಪಾಯಿ; ಅಂಚೆಯವ; ಕಾಗದಗಳನ್ನು ಬಟವಾಡೆಮಾಡುವವ.

चिड़चिड़ा, वि० ಸಿಡಿಮಿಡಿ ಸ್ವಭಾವದ; ಸಿಡುಕು ಮೋರೆಯ.

चिड़चिड़ाना, अ० 'ಚಿಟ್ ಚಿಟ್' ಎಂದು ಶಬ್ದವಾಗು; ಒಣಗಿ ಬಿರಿಯು.

चिड़वा, पुं० ಅವಲಕ್ಕಿ.

चिड़िया, स्त्री० ಪಕ್ಷಿ; ಹಕ್ಕಿ.

चिड़ियाख़ाना, पुं० ಪಶುಪಕ್ಷಿಗಳ ಸಂಗ್ರಹಾಲಯ.

चिड़िहार / **चिड़ीमार** पुं० ಪಕ್ಷಿಗಳ ಬೇಟೆಗಾರ; ವ್ಯಾಧ.

चिढ़, स्त्री० ಸಿಟ್ಟು; ತಿರಸ್ಕಾರ; ತಾತ್ಸಾರ.

चिढ़ना, अ० ಸಿಟ್ಟುಗೊಳ್ಳು; ರೇಗು; ಕೋಪಿಸು.

चिढ़वाना / **चिढ़ाना** स० ಸಿಟ್ಟಿಗೆಬ್ಬಿಸು; ರೇಗಿಸು.

चित, वि० ಅಂಗಾತಮಲಗಿದ. पुं० ಚಿತ್ತ; ಮನಸ್ಸು.

चितकबरा, वि० ಅನೇಕ ಬಣ್ಣದ; ಚೀಟಿ ಬಣ್ಣದ.

चितचोर, वि० ಮನೋಹರ; ಪ್ರಿಯ.

चितभंग, पुं० ವ್ಯಾಕುಲ; ದುಃಖ.

चितवन, स्त्री० ದೃಷ್ಟಿ.

चितला, वि० ನಾನಾ ಬಣ್ಣಗಳುಳ್ಳ; ಚೀಟಿಚೀಟಿಯಾದ.

चितवना, स० ನೋಡು.

चितवाना, स० ತೋರಿಸು.

चिता, स्त्री० ಹೆಣವನ್ನು ಸುಡುವುದಕ್ಕಾಗಿ ಏರ್ಪಡಿಸುವ ಕಟ್ಟಿಗೆಯ ರಾಶಿ; ಚಿತೆ.

चिताना, स० ಎಚ್ಚರಿಕೆ ಕೊಡು.

चितावनी, स्त्री० ಎಚ್ಚರಿಕೆ; ಸಾವಧಾನ.

चितेरा, पुं० ಚಿತ್ರಗಾರ.

चितेरिन / **चितेरी** स्त्री० ಚಿತ್ರಗಾರ್ತಿ; ಚಿತ್ರಗಾರನ ಸ್ತ್ರೀ.

चित्ती, स्त्री० ಕಲೆ; ಮಚ್ಚೆ; ಚುಕ್ಕಿ; ಚಿತ್ತು.

चित्रपट, पुं० ಚಲನಚಿತ್ರ.

चिथड़ा, पुं० ಹಳೆಯ ಹರಕು ವಸ್ತ್ರ; ಚಿಂದಿ.

चिथाड़ना, स० ಹರಿ; ಸಿಗಿ; ಅಪಮಾನಪಡಿಸು.

चिनक, स्त्री० ಉರಿಯುವಂಥನೋವು.

चिनगारी, स्त्री० ಕಿಡಿ; ಅಗ್ನಿಕಣ.

चिनगी, स्त्री० ಕಿಡಿ; ಚಟುವಟಿಕೆಯುಳ್ಳ ಮತ್ತು ಚತುರನಾದ ಹುಡುಗ.

चिनाना, स० ಆರಿಸು.

चिनिया, वि० ಬಿಳಿಯ; ಚೀನಾದೇಶದ.

चिनियाबदाम, पुं० ನೆಲಗಡಲೆ.
चिन्हार, वि० ಗುರುತುಳ್ಳ ; ಪರಿಚಿತ
चिन्हारी, स्त्री० ಗುರುತು; ಪರಿಚಯ
चिपकना, स० ಅಂಟಿಕೊಳ್ಳು ; ಹತ್ತಿಕೊಳ್ಳು.
चिपकाना, स० ಅಂಟಿಸು ; ಹಚ್ಚು ; ಜೋಡಿಸು.
चिपचिप, पुं० ಜಿಗಟು ; ಮುಟ್ಟಿದರೆ ಪಿಚಿಪಿಚಿ ಎಂದಿರುವಿಕೆ.
चिपचिपा, वि० ಅಂಟು ಅಂಟಾದ ; ಜಿಗಟಾದ.
चिपचिपाना, अ० ಅಂಟು ಅಂಟಾಗಿರು ; ಜಿಗಟಾಗಿರು.
चिपटना, अ० दे० **चिपकना**.
चिपटा, वि० ಚಪ್ಪಟೆಯಾದ.
चिपड़ी / **चिपरी** } स्त्री० ಬೆರಣಿ.
चिबिल्ला, वि० ಚಂಚಲನಾದ ; ತಂಟಲುಮಾರಿ.
चिबुक, पुं० ಗಡ್ಡ ; ಗಲ್ಲ.
चिमटना, अ० ಅಂಟಿಕೊಳ್ಳು ; ಅಪ್ಪಿಕೊಳ್ಳು ; ಹಿಂಬಾಲಿಸು ; ಬೆನ್ನು ಹತ್ತು.
चिमटा, पुं० ಇಕ್ಕಳ ; ಚಿಮುಟ.
चिमटी, स्त्री० ಸಣ್ಣ ಇಕ್ಕಳ.
चिमनी, स्त्री० ಹೊಗೆಯಗೂಡು ; ಚಿಮಣಿ.
चिरंतन, वि० ಬಹಳಕಾಲದ ; ಪುರಾತನ.
चिरकीन, वि० ಕೊಳೆ ; ಹೊಲಸು.
चिरकुट, पुं० ಚಿಂದಿಬಟ್ಟೆ.
चिरना, अ० ಹರಿದುಹೋಗುವುದು.
चिरबत्ती, वि० ಚಿಂದಿಚಿಂದಿಯಾದ ; ಚೂರುಚೂರಾದ.
चिरवाना, स० ಹರಿಯಿಸುವುದು ; ಸೀಳಿಸುವುದು.
चिराइन, स्त्री० ಕೂದಲು ಚರ್ಮ ಕೊಬ್ಬು ಇತ್ಯಾದಿಗಳ ಸುಡುವಿಕೆಯಿಂದ ಉಂಟಾಗುವ ದುರ್ಗಂಧ; ಕಮರು ವಾಸನೆ.
चिराई, स्त्री० ಸೀಳುವಿಕೆ ; ಸೀಳುವುದಕ್ಕೆ ಕೊಡುವ ಮಜೂರಿ.
चिराग़, पुं० ದೀಪ ; ಸೊಡರು.
चिराग़ी, स्त्री० ದೀವಟಿಗೆಯುವನಿಗೆ ಕೊಡುವ ಮಜೂರಿ.
चिरातन, वि० ಪುರಾತನ ; ಜೀರ್ಣ.
चिराना, अ० ಸೀಳಿಸು.
चिरायंध, स्त्री० दे० **चिराइन**.
चिरायता, पुं० ನೆಲಬೇವು.
चिरी, स्त्री० दे० **चिड़िया**.
चिरौंजी स्त्री० ಸಾರೆಪಪ್ಪು.
चिरौरी, स्त्री० ಬಹಳ ವಿನಯದಿಂದ ಪ್ರಾರ್ಥನೆ ಮಾಡುವಿಕೆ.
चिलक, स्त्री० ಹೊಳಪು ; ಕಾಂತಿ.
चिलकना, अ० ಮಿಂಚು.
चिलगोजा, पुं० ಝುಳಝುಳಿಸುವುದು ; ಒಂದು ಬಗೆಯ ಹಣ್ಣು.
चेलचिलाना, अ० ಸಹಿಸಲಾರದಂತಾಗು.

चिलबिला } **वि०** ಚಂಚಲ ಚುರು
चिलबिल्ला } ಕಾದ; ಚಪಲವುಳ್ಳ;
—करना ಒಂದುಕಡೆ ನಿಲ್ಲದೆ ಅತ್ತಿತ್ತ ಓಡಾಡು.

चिलम, स्त्री० ತಂಬಾಕು ಗಾಂಜಾ ಇತ್ಯಾದಿಗಳನ್ನು ಸೇದಲು ಉಪ ಯೋಗಿಸುವ ಕೊಳವಿ: ಚುಂ ಗಾಣಿ; ಚಿಲಮು.

चिलमची, स्त्री० ಕೈ ಬಾಯಿ ತೊಳೆ ಯುವ ತಟ್ಟೆ.

चिलमन, पु० ಬಿದುರಿನ ದೆಬ್ಬೆಗಳಿಂದ ಮಾಡಿದ ಪರದೆ.

चिलड़, पु० ಕೂರೆ ಹೇನು.

चिल्ल-पों, स्त्री० ಗುಲ್ಲು; ಗದ್ದಲ; ಬೊಬ್ಬೆ.

चिल्ला, पु० ನಲವತ್ತು ದಿನಗಳಕಾಲ; ಬಿಲ್ಲಿನದಾರ; ಹೆದೆ; **चिल्ले का जाड़ा** ತೀರ ಅಸಹನೀಯವಾದ ಛಳಿ.

चिल्लाना, अ० ಚೀರು; ಬೊಬ್ಬೆ ಹಾಕು; ಅರಚು; ಕಿರಚು.

चिल्लाहट, स्त्री० ಬೊಬ್ಬೆ; ಕೂಗು.

चिहुँकना, अ० दे० चौंकना.

चिहुँटी, स्त्री० ಚಿಟಿಕೆ.

चीं चपड़, स्त्री० ವಿರೋಧವಾಗಿ ಹೇಳು ವುದು; ಆಕ್ಷೇಪಣೆ.

चींटा, पु० ದೊಡ್ಡ ಇರುವೆ; ಗೊದ್ದ.

चींटी, स्त्री० ಇರುವೆ.

चीक, स्त्री० ನೋವು ಅಥವಾ ಕಷ್ಟ ವನ್ನು ಸೂಚಿಸುವ ಕೂಗು; ಚೀ ತ್ಕಾರ. **पु०** ಕಸಾಯಿ; ಕಟುಕ.

चीकट, स्त्री० ಕೊಳೆ; ಜಿಡ್ಡು; ಮೇಣ. **वि०** ಕೊಳೆಯಾದ.

चीख़, स्त्री० ಕೂಗಾಟ: ಬೊಬ್ಬೆ.

चीख़ना, अ० ಅರಚು; ಕಿರಚು; ಕೂಗಾಡು.

चीख़ुर, पु० ಅಳಿಲು.

चीज़, स्त्री० ಪದಾರ್ಥ; ವಸ್ತು.

चीठी, पु० ಪತ್ರ; ಕಾಗದ.

चीतकार, पु० ಚೀತ್ಕಾರ; ಚಿತ್ರಗಾರ.

चीतना, स० ಯೋಚಿಸು; ನೆನಸು; ಸ್ಮರಿಸು; ಚಿತ್ರಿಸು.

चीता, पु० ಚಿರತೆ. **वि०** ಯೋಚಿಸಿದ.

चीथड़ा, पु० दे० चिथड़ा.

चीथना, स० ಹರಿ; ಸೀಳು.

चीदा, वि० ಶ್ರೇಷ್ಠ; ಆರಿಸಿದ.

चीनना, स० ಗುರುತಿಸು.

चीनाबादाम, स्त्री० दे० चिनियाबदाम.

चीनी, स्त्री० ನಕ್ಕರೆ; ಚೀನಿಮಣ್ಣು.

चीनी-मिट्टी, स्त्री० ಪಿಂಗಾಣಿ ಸಾಮಾ ನುಮಾಡುವ ಮಣ್ಣು.

चीन्हना, स० ಗುರುತಿಸು.

चीपड़, पु० ಕಣ್ಣಿನ ಗೀಜು.

चीमड़, वि० ಜಗ್ಗಿ ಮುರಿದು ಬಗ್ಗಿಸಿ ದರೂ ಹರಿಯದ ಅಥವಾ ಮುರಿ ಯದ; ಮೆದುವಾದ; ಮೆತ್ತ ನೆಯ.

चीर, पु० ಬಟ್ಟೆ: ವಸ್ತ್ರ. **स्त्री०** ಸೀಳು ವಿಕೆ.

चीरघर, पु० ಮರದ ದಿಮ್ಮಿಗಳನ್ನು ಕೊಯ್ಯುವ ಸ್ಥಳ.

चीरना, स० ಕೊಯ್ಯು; ಸೀಳು; ಸಿಗಿ.

चीरफाड़, स्त्री० ಹರಿದು ಹಾಕುವ ಕೆಲಸ.

चीरा, पु० ತಲೆಗೆ ಸುತ್ತಿಕೊಳ್ಳುವ ವಸ್ತ್ರ.

चीरी, स्त्री० दे० **चिड़िया.**

चील, स्त्री० ಹದ್ದು; ಗರುಡ.

चीलड़ } **चीलर** } पु० दे० **चिल्लड़.**

चील्ह, स्त्री० दे० **चील.**

चीवर, पु० ಸನ್ಯಾಸಿ ಅಥವಾ ಭಿಕ್ಷುಕರ ಹರಕು ವಸ್ತ್ರ; ಬೌದ್ಧ ಭಿಕ್ಷುಗಳು ಧರಿಸುವ ವಸ್ತ್ರಗಳ ಸಮೂಹ.

चुंगल, पु० ಪಶುಪಕ್ಷಿಗಳ ಪಂಜ; ಹಿಡಿಕೆ; ಮುಷ್ಟಿ.

चुंगी, स्त्री० ಹಿಡಿ ಅಥವಾ ಚಿಟಿಕೆಯಲ್ಲಿ ತುಂಬುವಷ್ಟು ವಸ್ತು; ಸುಂಕ.

चुंघाना, स० ಗುಟುಕು ಗುಟುಕಾಗಿ ಕುಡಿಸು.

चुंदी, स्त्री० ಜುಟ್ಟು.

चुंधलाना } **चुंधियाना** } अ० ಕಣ್ಣು ಕುಕ್ಕು.

चुंबक, पु० ಸೂಜಿಗಲ್ಲು; ಲೋಹ ಚುಂಬಕ.

चुंबन, पु० ಮುತ್ತು; ಚುಂಬನ.

चुंबना, स० ಮುತ್ತಿಡು.

चुंबी, वि० ಮುತ್ತುಕೊಡುವವನು.

चुआना, स० ತೊಟ್ಟಿಕ್ಕಿಸು; ಹನಿಸು.

चुकंदर, पु० ಕೆಂಪುಮೂಲಂಗಿಯಂತಿರುವ ಒಂದು ತರಕಾರಿ.

चुकता } **चुकती** } वि० ನಿಶ್ಶೇಷ; ಬಗೆಹರಿಸಿದ; ಮುಗಿಸೋಣ.

चुकना, अ० ಮುಗಿ; ಸಮಾಪ್ತವಾಗು; ಬಾಕಿ ತೀರಿ ನಿರ್ಣಯವಾಗು; ದೋಷ ಅಥವಾ ತ್ರುಟಿಯುಂಟಾಗು; ವ್ಯರ್ಥವಾಗು.

चुकाना, स० ತೀರಿಸು; ಬೇಬಾಕಿಯಾಗಿಸು; ತೀರ್ಮಾನಮಾಡು; ಮುಗಿಸು.

ड़, पु० ನೀರು ಅಥವಾ ಸೇಂದಿ ಕುಡಿಯುವ ಮಣ್ಣಿನ ಕುಡಿಕೆ; ಮೊಗೆ.

चुक्की, स्त्री० ಮೋಸ.

चुखाना, स० ಹಾಲು ಕರೆಯುವ ಮೊದಲು ಕರುವಿಗೆ ಮೊಲೆಯುಣಿಸುವುದು.

चुग़द, पु० ಗೂಬೆ; ಗೂಗೆ; ಮೂರ್ಖ.

चुगना, स० ಕೊಕ್ಕಿನಿಂದ ಕಾಳುಕಡಿಯನ್ನು ಆರಿಸಿಕೊಂಡು ತಿನ್ನು; ಹೆಕ್ಕಿತಿನ್ನು.

चुग़ल पु० ಪರೋಕ್ಷದಲ್ಲಿ ದೂಷಿಸುವವ; ಚಾಡಿಖೋರ.

चुग़लखोर, पु० ಚಾಡಿ ಹೇಳುವವ.

चुगलखोरी, स्त्री० ಚಾಡಿಹೇಳುವಿಕೆ.

चुगली, स्त्री० ಚಾಡಿ.

चुगा, पु० ಪಕ್ಷಿಗಳ ಮೇವು; ಎರೆ.

चुगाई, स्त्री॰ ಪಕ್ಷಿಗಳು ಕೊಕ್ಕಿನಿಂದ ತಿನ್ನುವಿಕೆ.

चुगाना, स॰ ಪಕ್ಷಿಗಳಿಗೆ ಕಾಳು ತಿನ್ನಿಸು.

चुचकारना, स॰ ಮುದ್ದಾಡು; ಮುತ್ತಿಡುವ ಧ್ವನಿಯಿಂದ ಕರೆಯು.

चुचुक, पु॰ ಮೊಲೆಯ ತುದಿ; ಕುಚಾಗ್ರ.

चुटका, पु॰ ದೊಡ್ಡ ಚಿಟಿಕೆ; ಒಂದು ಚಿಟಿಕೆ ಹಿಟ್ಟು ಅಥವಾ ಧಾನ್ಯ.

चुटकी, स्त्री॰ ಚಿಟಿಕೆ;—**बजाते** ಕ್ಷಣಮಾತ್ರದಲ್ಲಿ;—**भरना** ಇರಿಯುವಂತೆ ಮಾತನಾಡು;—**लेना** ಹಾಸ್ಯಮಾಡು.

चुटकुला, पु॰ ವಿನೋದದ ಮಾತು; ಲಘುಹಾಸ್ಯ; ತುಣಕುಮಿಣಕು.

चुटिया, स्त्री॰ ಜುಟ್ಟು; ಶಿಖೆ; ಚಂಡಿಕೆ.

चुटियाना, स॰ ಗಾಯಪಡಿಸು.

चुटीला, वि॰ ಪೆಟ್ಟುತಿಂದ; ಗಾಯಗೊಂಡ; ಜುಟ್ಟುಳ್ಳ; ತುದಿಯ; पु॰ ಸಣ್ಣಜುಟ್ಟು.

चुटैला, वि॰ ಗಾಯಗೊಂಡ.

चुड़िहारा, पु॰ ಬಳೆಮಾರುವವ.

चुड़ैल, स्त्री॰ ಪಿಶಾಚಿನಿ; ಕೆಟ್ಟಹೆಂಗಸು; ಜಂಗಳಗಂಟಿ; ಕುರೂಪಿಣಿ.

चुत्थल, वि॰ ಹಾಸ್ಯಗಾರ; ವಿನೋದಪ್ರಿಯ; ವಿದೂಷಕ.

चुन, पु॰ ಹಿಟ್ಟು; ಪುಡಿ; ಚೂರ್ಣ.

चुनचुनाना, अ॰ ತಿಮಿರಾಗು; ಮೈಯಲ್ಲಿ ಚುಮು ಚುಮು ಅನ್ನು.

चुनट } **चुनन** } गे॰ ನೆರಿಗೆ; ಕುಚ್ಚು.

चुनन्दार, वि॰ ನೆರಿಗೆಯುಳ್ಳ; ಕುಚ್ಚು ಕುಚ್ಚಾದ.

चुनना, स॰ ಆರಿಸು; ಇಚ್ಛಾನುಸಾರ ಸಂಗ್ರಹಮಾಡು; ಚುನಾಯಿಸು; ಗೋಡೆಯೆಬ್ಬಿಸು.

चुनरी, स्त्री॰ ನಾನಾವರ್ಣಗಳುಳ್ಳ ಅಚ್ಚುಹೊಡೆದ ಸುಂದರವಾದ ಸೀರೆ.

चुनवाना } **चुनाना** } स॰ **चुनना** ಎಂಬುವರ ಪ್ರೇರಣಾರ್ಥಕ.

चुनाई, स्त्री॰ ಆರಿಸುವಿಕೆ; ಗೋಡೆ ಕಟ್ಟುವಿಕೆ; ಆರಿಸುವ ಅಥವಾ ಗೋಡೆಕಟ್ಟುವ ಮಜೂರಿ.

चुनांचे } **चुनानचे** } अव्य॰ ಅಂತೆ; ಉದಾಹರಣೆಗೆ; ಆದ್ದರಿಂದ.

चुनाव, पु॰ ಚುನಾವಣೆ.

चुनिंदा वि॰ ಆರಿಸಿದ; ಚುನಾಯಿಸಲ್ಪಟ್ಟ.

चुनी, स्त्री॰ ವಜ್ರ, ರತ್ನ ಇತ್ಯಾದಿಗಳ ಚೂರು; ರತ್ನಪುಡಿ; ಧಾನ್ಯ ಅಥವಾ ಬೇಳೆಯ ನುಚ್ಚು.

चुनौटी, स्त्री॰ ಸುಣ್ಣದ ಡಬ್ಬಿ.

चुनौती, स्त्री॰ ಉತ್ತೇಜನೆ; ಲಲಕಾರ; ಯಾವುದಾದರೊಂದು ವಿಷಯದ ಸತ್ಯಾಸತ್ಯತೆಯನ್ನು ಸಿದ್ಧಪಡಿಸಲು ಆಹ್ವಾನ.

चुन्नी, स्त्री० ಮಾಣಿಕ್ಯ ಅಥವಾ ರತ್ನದ ಚಿಕ್ಕಚೂರು; ಚಕ್ಕೆ ಪುಡಿ.

चुप, वि० ಸದ್ದಿಲ್ಲದ; ಮೌನ; ನಿಶ್ಶಬ್ದ;—**लगाना** ಮೌನವಾಗು.

चुपका, वि० ಮೌನವಾದ.

चुपकाना, स० ಮಾತಾಡ ಗೊಡಿಸದಿರು; ಬಾಯಿಮುಚ್ಚಿಸು.

चुपकी, स्त्री० ಮೌನ.

चुपचाप, क्रि० ನಿಶ್ಶಬ್ದವಾಗಿ; ಮೌನವಾಗಿ.

चुपड़ना, स० ಬಳಿ; ಲೇಪಿಸು; ಸವರು; ದೋಷವನ್ನು ಮರೆಮಾಚು.

चुप्पा, वि० ಬಹಳಕಡಿಮೆ ಮಾತನಾಡುವ; ಮಿತಭಾಷಿ.

चुप्पी, स्त्री० ಮೌನ;—**साधना** ಮೌನವನ್ನವಲಂಬಿಸು.

चुबलाना, स० ಚಪ್ಪರಿಸು; ಚೀಪು.

चुभकना, अ० ನೀರಿನಲ್ಲಿ ಬುಡಬುಡನೆ ಮುಳುಗು.

चुभकाना, स० ನೀರಿನಲ್ಲಿ ಮುಳುಗಿಸು.

चुभकी, स्त्री० ಮುಳುಗುವಿಕೆ.

चुभना, अ० ಚುಚ್ಚಿಕೊಳ್ಳು; ನಾಟು.

चुभाना
चुभोना } स० ಚುಚ್ಚು; ತಿವಿ.

चुमकार
चुमकारी } स्त्री० ಮುದ್ದಿಡುವುದು.

चुमकारना, स० दे० **चुचकारना.**

चुम्मक, पु० दे० **चुंबक.**

चुम्मा, पु० ಮುದ್ದಾಟ.

चुरकुट, क्रि० ಚೂರುಚೂರಾಗಿ.

चुरना, अ० ನೀರಿನಲ್ಲಿ (ಬೇಳೆ ಇತ್ಯಾದಿ) ಬೇಯುವುದು.

चुरमुरा, वि० ಸ್ವಲ್ಪ ಒತ್ತಿದರೆ ಪುಡಿಪುಡಿಯಾಗುವ (ಹಪ್ಪಳ ತರಗೆಲೆ ಇತ್ಯಾದಿ); ಗರಿಗರಿಯೆಂದಿರುವ.

चुराना, स० ಕದಿ; ಕಳವುಮಾಡು; ಅಪಹರಿಸು; ಬಚ್ಚಿಡು. **आंख चुराना** ದೃಷ್ಟಿಗೆ ಬೀಳದಿರು; ತಲೆ ತಪ್ಪಿಸಿಕೊಳ್ಳು.

चुरुट
चुरट } पु० ಹೊಗೆಬತ್ತಿ; ಚರುಟು.

चुरू, पु० दे० **चुल्लू.**

चुल, स्त्री० ನವೆ; ತೀಟೆ; ಕಾಮೋದ್ರೇಕ.

चुलचुलाना, अ० ನವೆಯಾಗು; ತೀಟೆ ಹತ್ತು.

चुलबुल, स्त्री० ಚಂಚಲತ್ವ; ಚಾಪಲ್ಯ.

चुलबुला, वि० ಚಂಚಲವಾದ; ಚಪಲ.

चुलबुलाना, अ० ಉದ್ವೇಗದಿಂದ ಮೈಕೈನಡುಗು; ಚಂಚಲನಾಗು.

चुल्लू, पु० ಬೊಗಸೆ;—**भर पानी में डूब मरो** ಅತ್ಯಂತ ನಿಕೃಷ್ಟವಾದ ಕೆಲಸ ಮಾಡಿದವನನ್ನು ಕುರಿತು ಹೇಳುವ ಧಿಕ್ಕಾರದ ಮಾತು.

चुवाना, स० ಸುರಿಸು; ಸ್ರವಿಸು; ಹನಿಹನಿಯಾಗಿ ಬೀಳಿಸು.

चुसकी, स्त्री० ಗುಟುಕು; ಚೀಪುವಿಕೆ.

चुसना, अ० ಸೀಪಿಕುಡಿ; ಹೀರು.

चुसनी, स्त्री० ಮಕ್ಕಳು ಹಾಲು ಕುಡಿಯುವ ಸೀಸೆ.

चुस्त, वि० ಬಿಗಿಯಾದ; ಜೋಲು ಬೀಳದ; ಚುರುಕಾದ; ಚಟುವಟಿಕೆಯುಳ್ಳ.

चुस्ती, स्त्री० ಸ್ಫೂರ್ತಿ; ಬಿಗುವು; ಬಲ; ದೃಢತೆ.

चुहचुहा, चुहचुहाता } वि० ಸ್ವಾರಸ್ಯವಾದ; ರಸಭರಿತವಾದ; ಮನೋರಂಜಕವಾದ.

चुहचुहाना, अ० ರಸಭರಿತವಾಗಿರು; ಕಲರವಮಾಡು.

चुहल, स्त्री० ಹಾಸ್ಯ; ವಿನೋದ; ಮನೋರಂಜನೆ.

चुहलबाज़, वि० ಹಾಸ್ಯಗಾರ; ವಿನೋದಿ.

चुहलबाज़ी, स्त्री० ಪರಿಹಾಸ್ಯ; ತಮಾಶೆ.

चुहिया, स्त्री० ಸಣ್ಣ ಇಲಿ.

चूँ, पु० ಸಣ್ಣಸಣ್ಣ ಪಕ್ಷಿಗಳ ಧ್ವನಿ.

चूँ, क्रि० ಆದುದರಿಂದ; ಆಕಾರಣ; —करना ಖಂಡಿಸುವುದು.

चूँकि, क्रि० ಏಕೆಂದರೆ; ಯಾತಕ್ಕೆಂದರೆ.

चूँचरा, पु० ಪ್ರತಿವಾದ; ಆಕ್ಷೇಪಣೆ; ನೆವ

चूँदरी, स्त्री० ನಡುನಡುವೆ ಚುಕ್ಕೆಗಳುಳ್ಳ ಬಣ್ಣದ ಬಟ್ಟೆ.

चूक, स्त्री० ತಪ್ಪು. वि० ಬಹಳ ಹುಳಿಯಾದ.

चूकना, अ० ತಪ್ಪು; ಕೈತಪ್ಪಿಹೋಗು.

चूची, स्त्री० ಮೊಲೆ; ಕುಚ; ಸ್ತನ.

चूज़ा, पु० ಕೋಳಿಯ ಮರಿ.

चूड़, चूड़क } पु० ಜುಟ್ಟು; ಶಿಖೆ; ಹುಂಜ ಅಥವಾ ನವಿಲಿನ ತಲೆಯ ಮೇಲಿರುವ ಕುಂಚ; ಕಂಕಣ.

चूड़ा, पु० ಜುಟ್ಟು; ಶಿಖೆ; ತೋಳುಬಳೆ.

चूडांत, वि० ಕೊನೆವರೆಗೆ.

चूड़ी, स्त्री० ಕೈಬಳೆ; ಕಂಕಣ; ವಲಯ.

चूड़ीदार, वि० ವಲಯುಗಳುಳ್ಳ.

चूत, पु० ಮಾವಿನಮರ. स्त्री० ಯೋನಿ.

चूतिया, वि० ತಿಳಿಗೇಡಿ; ಹೆಡ್ಡ; ಮೂರ್ಖ.

चून, पु० ಚೂರ್ಣ.

चूना, पु० ಸುಣ್ಣ. अ० ಸೋರು; ಬಸಿ.

चूनी, स्त्री० ನುಚ್ಚು; ರತ್ನದ ಕಣ.

चूमना, स० ಮುತ್ತಿಡು; ಚುಂಬನಮಾಡು.

चूमा, पु० ಮುತ್ತು; ಚುಂಬನ.

चूमाचाटी, स्त्री० ಮುದ್ದಾಟ.

चूर, पु० ಚೂರು; ಪುಡಿ; ಚೂರ್ಣ.

चूरण, चूरन } पु० ಚೂರ್ಣ.

झा, ಪುಂ ಗುಜರಾತಿ, ಮೈಥಿಲ ಬ್ರಾಹ್ಮಣರ ಒಂದು ಪದವಿ.

झाऊ, ಪುಂ ಸಣ್ಣಪೊದರು; ನವೇಗಿಡ.

झाग, ಪುಂ ನೊರೆ; ಬುರುಗು.

झाड़, ಪುಂ ಮೆಳೆ; ಪೊದೆ. **स्त्री०** ಗದರಿಕೆ; ಮಂತ್ರಹಾಕುವಿಕೆ;—**फानूस** ಪುಂ ತೂಗು ದೀಪಗಳಮಾಲೆ; —**फूँक**, ಪುಂ ಮಂತ್ರಿಸುವುದು.

झाड़खंड़, ಪುಂ ಕಾಡು; ಅಡವಿ.

झाड़-झंखाड़, ಪುಂ ಪೊದೆಗಳ ಕಾಡು; ಮುಳ್ಳುಗಂಟೆ; ಕೆಲಸಕ್ಕೆಬಾರದ ಪದಾರ್ಥಗಳ ಸಮೂಹ.

झाड़न, ಸ್ತ್ರೀಂ ಒರೆಸಿ ತೆಗೆದ ವಸ್ತು; ಧೂಳು ಒರೆಸುವ ಬಟ್ಟೆ.

झाड़ना, ಸಂ ಒರೆಸು; ಧೂಳು ಹೊಡೆಯು; ಜಾಡಿಸು.

झाड़-बुहार, ಸ್ತ್ರೀಂ ಕಸಬಳಿಯುವಿಕೆ; ಶುಭ್ರಮಾಡುವಿಕೆ.

झाड़ा, ಪುಂ ಮಲ; ಕೊಳಕು.

झाड़ी, ಸ್ತ್ರೀಂ ಸಣ್ಣಪೊದರು; ಪೊದೆ.

झाड़ू, ಪುಂ ಪೊರಕೆ; ಬರಲು;—**लगाना** ಗೂಡಿಸು; ಶುದ್ಧವಾಡು.

झापड़, ಪುಂ ಏಟು.

झाब / **झाबा** } पु० ಮಂಕರಿ; ಗೂಡೆ; ಬುಟ್ಟಿ.

झाबर, पु० ಕೆಸರಿನಿಂದ ಕೂಡಿದ ಭೂಮಿ; ಕೆಸರು.

झारना, स० ಬಾಚು; ಹಿಕ್ಕು; ಕೇರು.

झारी, स्त्री० ಮೂಗಿನಲೋಟ; ಗಿಂಡಿ; ಹೂಜೆ.

झाल, पु० ಕೈತಾಳ; ಝಲ್ಲರಿ.

झालना, स० ಬೆಸುಗೆ ಹಾಕು.

झालर, पु० ಒಂದು ಬಗೆಯ ತಿನಸು. स्त्री० ಅಂಚಿನಲ್ಲಿ ಅಲಂಕಾರಕ್ಕಾಗಿ ನೇತಾಡಿಸುವ ಕುಚ್ಚು; ಜಾಲರಿ.

झिझक, स्त्री० ಹಿಂಜರಿಯುವಿಕೆ; ಗಾಬರಿಯಾಗುವಿಕೆ.

झिझकना, अ० ಹಿಂಜರಿ; ಗಾಬರಿಯಾಗು.

झिड़कना, स० ಗದರಿಸು; ಕೋಪದಿಂದ ತಿರಸ್ಕಾರ ಪೂರ್ವಕವಾದ ಮಾತುಗಳನ್ನಾಡು.

स्त्री० ಗದರಿಸಿ ಆಡಿದ ಮಾತು; ಗದರಿಕೆ.

झिलमिल, स्त्री० ಚಂಚಲವಾದದೀಪ. वि० ಮಿನುಗುವ.

झिलमिला, वि० ಬಹಳ ತೆಳುವಾದ; ಮಿನುಗುವ.

झिलमिलाना, अ० ಮಿನುಗು. स० ಹೊಳೆಯಿಸು.

झिल्ली, पु० ಚಿಮ್ಮಂಡಿ; ಜೀರಿ. स्त्री० ಬಹಳ ತೆಳುವಾದ ಪದರ.

झींकना, अ० ಪಶ್ಚಾತ್ತಾಪಪಡು; ದುಃಖವನ್ನು ಪ್ರಕಟಿಸು.

झींखना, अ० ಹಲಬು; ವ್ಯಾಕುಲಪಡು; ಗೋಳಾಡು.

झींगुर, पु० ಜೀರುಂಡೆ; ಚಿಮ್ಮಂಡಿ; ಜೀರು.

झींसी, स्त्री० ಜಿನುಗುಮಳೆ; ತುಂತುರುಮಳೆ.

झीन / **झीना** } वि० ಬಹಳ ನಣ್ಣನೆಯ; ನಯವಾದ; ತೆಳುವಾದ.

झील, स्त्री० ಸರೋವರ; ಬಹಳ ದೊಡ್ಡಕೆರೆ.

झुंझलाना, अ० ಕೋಪ ಮತ್ತು ದುಃಖದಿಂದ ಚಿಟಿಚಿಟಿಯಾಗು.

झुंड, पु० ಹಿಂಡು; ಸಮೂಹ.

झुकना, अ० ಬಗ್ಗು; ಬಾಗು; ನಮ್ರ ಅಥವಾ ವಿನೀತನಾಗು.

झुकाना, स० ಬಗ್ಗಿಸು.

झुकाव, पु० ಬಾಗು; ಡೊಂಕು; ಪ್ರವೃತ್ತಿ.

झुटपुटा, पु० ನಸುಗತ್ತಲೆ; ನಸುಕು.

झुटलाना, स० ಸುಳ್ಳೆಂದು ಸಿದ್ಧಪಡಿಸು; ಸುಳ್ಳು ಹೇಳಿ ವಂಚಿಸು.

झुनझुनी, स्त्री० ಜೋಮು; ಮರಗಟ್ಟುವಿಕೆ; ಜೋಂಪು.

झुमका, पु० ಕಿವಿಯ ಒಂದು ಆಭರಣ; ಜಿಮುಕಿ; ಜಿಮುಕಿಯಂತೆ ಹೂಬಿಡುವ ಒಂದು ಗಿಡ.

झुरकुट, वि० ಬಾಡಿದ; ಸೊರಗಿದ; ಕೃಶವಾದ.

झुरना, अ० ಒಣಗು; ಶುಷ್ಕವಾಗು.

झुरमुट, पु० ಗುಬುರು; ಗುಂಪು; ಪೊದರು.

झुरसना, अ० दे० **झुलसना.**
झुराना, स० ಒಣಗಿಸು; ಸೊರಗಿಸು.
झुर्री, स्त्री० ಸುಕ್ಕು.
झुलनी, स्त्री० ಮುತ್ತಿನ ಮೂಗುತಿ.
झुलसना, अ० ಅರ್ಧಸುಟ್ಟು ಮೇಲಿನ ಸಿಪ್ಪೆಯು ಕಪ್ಪಾಗು; ಕಂದು; ಬಾಡು.
झुलाना, स० ಉಯ್ಯಾಲೆಯಲ್ಲಿ ಕೂಡಿಸಿ ಆಡಿಸು.
झूठ, पु० ಸುಳ್ಳು; ನಟಿ; ಅಸತ್ಯ.
झूठमूठ, क्रि० ಸುಳ್ಳುಪಳ್ಳು.
झूठा, वि० ದಿಟವಲ್ಲದ; ನಟಿಯಾದ; ಸುಳ್ಳುಹೇಳುವವ; ಸಟಿಗಾರ.
झूम, स्त्री० ಜೂಗಳಿಸುವಿಕೆ; ತೂಕಡಿಕೆ; ಅರೆನಿದ್ರೆ.
झूमक } **झूमका** } पु० ಲೋಲಾಕಿ; ಬುಗುಡಿ.
झूमना, अ० ಹಿಂದಕ್ಕೂ ಮುಂದಕ್ಕೂ ಮೇಲಕ್ಕೂ, ಕೆಳಕ್ಕೂ, ಮತ್ತೆ ಮತ್ತೆ ಅಲ್ಲಾಡು; ತೂಗಾಡು; ತಲೆದೂಗು.
झूमर, पु० ಜಡೆಬಿಲ್ಲೆ; ಜಡೆನಾಗರ; ರಾಕಡಿ; ಕಿವಿಗೆ ತೊಟ್ಟುಕೊಳ್ಳುವ ಜುಮುಕಿ; ಹೋಳಿ ಹಬ್ಬದಲ್ಲಾಗುವ ನರ್ತನ.
झूर, वि० ಒಣಗಿದ; ಉರಿ; ದುಃಖ; ನಿರರ್ಥಕ.
झूल, स्त्री० ಪಶುಗಳ ಮೈ ಮೇಲೆ ಅಲಂಕಾರಕ್ಕಾಗಿ ಹೊದಿಸುವ ವಸ್ತ್ರ.
झूलना, अ० ಜುವ್ವಾಲೆ ಜೋಕಾಲೆಯಾಡು; ಓಲಾಡು. पु० ಉಯ್ಯಾಲೆ; ಜೋಕಾಲೆ.
झूला, पु० ಉಯ್ಯಾಲೆ; ಜುವ್ವಾಲೆ; ತೂಗುಮಣೆ; ತೂಗುಮಂಚ; ಸ್ತ್ರೀಯರು ತೊಟ್ಟುಕೊಳ್ಳುವ ಸಡಿಲವಾದ ಮೇಲಂಗಿ.
झेंपना } **झेपना** } अ० ನಾಚಿಕೆಗೊಳ್ಳು; ಲಜ್ಜಿಸು.
झेलना, स० ಸೈರಿಸು; ನಿಭಾಯಿಸು; ತಾಳು; ಅರಗಿಸಿಕೊಳ್ಳು; ಜೀರ್ಣಸಿಕೊಳ್ಳು.
झोंक, स्त्री० ಬಾಗುವಿಕೆ; ಗಾಳಿಯ ಪ್ರವಾಹ; ತಕ್ಕಡಿಯ ತಟ್ಟೆಗಳು ಒಂದು ಕಡೆಗೆ ಹೆಚ್ಚಾಗಿ ವಾಲುವಿಕೆ; भाड़ **झोंकना** ನಿರರ್ಥಕವಾಗಿ ಕಾಲಕಳೆಯು.
झोंकना, स० ವೇಗದಿಂದ ದೂಡು; ಒಗೆ; ಮುಂದಕ್ಕೆ ಎಸೆ; ಬಿಸಾಡು.
झोंका, पु० ಹೊಡೆತ; ಆಘಾತ ವೇಗದಿಂದ ಬೀಸುವ ಗಾಳಿಯ ಹೊಡೆತ.
झोंटा, पु० ಕೆದರಿದ ಕೂದಲಿನ ಸಮೂಹ; ಜುಟ್ಟು.
झोंपड़ा, पु० ಗುಡಿಸಲು; ಕುಟೀರ; ಪರ್ಣಶಾಲೆ.
झोंपड़ी, स्त्री० ಸಣ್ಣಗುಡಿಸಲು; ಪರ್ಣಶಾಲೆ; ಕುಟೀರ.
झोंपा, पु० ಕುಚ್ಚು; ಗೊಂಚಲು.
झोपड़ा, पु० दे० **झोंपड़ा.**

झोपड़ी, स्त्री० दे० **झोंपड़ी.**

झोरना, स० ಉದರಿಸು ; ಝೂಡಿಸು.

झोरी, स्त्री० दे० **झोली.**

झोल, पु० ಸಾರು ; ಹುಳಿ ; ಅಂಬಲಿ.

झोलदार, वि० ಸಾರವುಳ್ಳ ; ರಸವತ್ತಾದ.

झोलना, स० ಉರಿಸು.

झोला, पु० ಸಿಡಿಯುವಿಕೆ ; ಧಿಕ್ಕಿ ; ದೊಡ್ಡ ಜೋಳಿಗೆ ; ಸನ್ಯಾಸಿಗಳ ಸಡಿಲವಾದ ಅಂಗಿ ; ನಿಲುವಂಗಿ.

झोली, स्त्री० ಜೋಳಿಗೆ ; ಚೀಲ.

झौंरना, अ० ಮಧುರಧ್ವನಿಯಾಗು ; ಝೇಂಕಾರವಾಗು.

झौंसना, अ० दे० **झुलसना.**

झौरी, स्त्री० ಕಳೆಹುಲ್ಲು.

ट

टंक, पु० ನಾಲ್ಕುಮಾಷದ ತೂಕ ; ಕಲ್ಲುಳಿ; ಟಂಕ; ದರ್ಪ; ನಾಣ್ಯ; ಬೊಕ್ಕಸ ; ಖಜಾನೆ ; ಒರೆ.

टंकना, अ० ಹೊಲೆಯಲ್ಪಡು ; ಜೋಡಿಸಲ್ಪಡು; ದಾಖಲುಮಾಡಲ್ಪಡು ; ಅರೆಯುವ ಅಥವಾ ಬೀಸುವ ಕಲ್ಲು ಕೆತ್ತಲ್ಪಡು.

टंकाई, स्त्री० ಬೆಸಿಗೆ ಹೊಲಿಗೆ ಇತ್ಯಾದಿ ಮತ್ತು ಇವುಗಳ ಮಜೂರಿ.

टंकार, स्त्री० ಟಂಕಾರ ; ಠಣತ್ಕಾರ.

टंकारना, स० ಟಂಕಾರಮಾಡು.

टंकी, स्त्री० ನೀರಿನ ತೊಟ್ಟಿ ; ನೀರು ತುಂಬುವ ದೊಡ್ಡಪಾತ್ರೆ; ಟಬ್ಬು.

टंकोर, स्त्री० दे० **टंकार.**

टँगड़ी स्त्री० ಕಾಲಿನಮೀನುಖಂಡ.

टंगना, अ० ತೂಗಾಡು; ನೇತಾಡು; ಗಲ್ಲಿಗೇರು.

टंगाना, स० ತೂಗು ಹಾಕು.

टंगारी, स्त्री० ಕೊಡಲಿ.

टंच, वि० ಜಿಪುಣ ; ಕೆಲ್ಲೆದೆಯವ.

टंटघंट, पु० ಪೂಜಾಕಾಲದಲ್ಲಿನ ಗಂಟೆ ಜಾಗಟೆ ಶಂಖ ಇತ್ಯಾದಿಗಳನ್ನು ಬಾರಿಸಿಮಾಡುವ ಆಡಂಬರ ; ಒಣಜಂಭ.

टंटा, पु० ಆಡಂಬರ ; ತೊಂದರೆ ; ತಂಟೆ ; ಹೆಣಗಾಟ.

टक, स्त्री० ನೆಟ್ಟಗಣ್ಣು ; ಸ್ಥಿರದೃಷ್ಟಿ.

टकटकाना, स० ಎವೆಯಿಕ್ಕದೆ ದುರದುರನೆ ನೋಡು.

टकटकी, स्त्री० ಮಿಟಿಮಿಟಿ ನೋಟ ; ನೆಟ್ಟದೃಷ್ಟಿ.

टकराना, अ० ಎಡವು ; ಢಿಕ್ಕಿಹೊಡೆ.

टकसाल, स्त्री० ಹಣಕಾಸು ತಯಾರಾಗುವ ಸ್ಥಳ ; ಟಂಕಸಾಲೆ.

टकसाली, वि० ಟಂಕಸಾಲೆಗೆ ಸಂಬಂಧಿಸಿದ ; ಚೊಕ್ಕವಾದ ; ಖರೆ.

टका, पु० ಹಿಂದಿನಕಾಲದ ಬೆಳ್ಳಿ ನಾಣ್ಯ ; ತಾಮ್ರದ ಅರ್ಧಾಣೆ ನಾಣ್ಯ ;—सा जवाब देना ಸ್ಪಷ್ಟ ಉತ್ತರ ಹೇಳು ;—सा मुँह लेकर जाना ನಾಚಿಕೆಪಡು.

टकासी, स्त्री० ರೂಪಾಯಿಗೆ ಅರ್ಧಾಣೆಯಂತೆ ಬಡ್ಡಿದರ.

टकुआ, पुं० ರಾಟಿಯು ಕದರು; ಸಣ್ಣ ತಕ್ಕಡಿಯು ತಟ್ಟೆಗಳಿಗೆ ಕಟ್ಟಿರುವ ದಾರ.

टकुली, स्त्री० ಕಲ್ಲುಳಿ.

टक्कर, स्त्री० ಎರಡು ವಸ್ತುಗಳು ಒಂದ ಕ್ಕೊಂದು ಜೋರಾಗಿ ಬಡಿಯುವ ಪೆಟ್ಟು; ಢಿಕ್ಕಿ; ಬಡಿದಾಟ;—**का** ಸಮನಿಲ್ಲಬಲ್ಲ;—**लेना** ಎದುರಿಸು; ಸರಿಸಮನಾಗಿ ನಿಲ್ಲು.

टखना, पुं० ಕಾಲಿನಹರಡು; ಹಿಮ್ಮಡಿಯ ಮೇಲಿನ ಎಲುಬಿನ ಗೆಣ್ಣು.

टघरना, अ० ಕರಗು.

टटका, वि० ಆಗಿಂದಾಗಿನ; ಹೊಸ; ನೂತನ.

टटोलना, स० ತಡವರಿಸು ತಡಕಾಡು; ಹುಡುಕು.

टट्टी, स्त्री० ತಡಿಕೆ; ತಟ್ಟಿ ಮಲ ವಿಸರ್ಜನೆಗಾಗಿ ಮೂಡಿರುವ ಮರೆಯಾದ ಜಾಗ.

टट्टू, पुं० ಮೋಟುಕುದರೆ; ತಟ್ಟು.

टन, स्त्री० ಗಂಟೆಯು ಟನಟನ ವೆಂಬ ಶಬ್ದ.

टनकना, अ० ಟಣ್‌ಟಣ್ ಎಂದು ಶಬ್ದವಾಗು; ತಲೆಸಿಡಿ.

टनटनाना, स० ಗಂಟೆಬಾರಿಸು.

टनमना, वि० ಚುರುಕಾದ; ಚಟುವಟಿಕೆಯುಳ್ಳ.

टपक, स्त्री० ತೊಟ್ಟುತ್ತುವಿಕೆ; ತೊಟ್ಟು ತೊಟ್ಟಾಗಿಬೀಳುವ ಶಬ್ದ.

टपकना, अ० ತೊಟ್ಟು ತೊಟ್ಟಾಗಿ ಬೀಳು; ಸೋರು.

टपका-टपकी, स्त्री० ತುಂತುರ ಮಳೆ; ಒಬ್ಬರ ಹಿಂದೊಬ್ಬರು ವರಸೆಯಾಗಿ ಸಾಯುವುದು.

टपकाना, स० ತೊಟ್ಟುತೊಟ್ಟಾಗಿ ಸೋರಿಸು; ಕಷಾಯವನ್ನಿಳಿಸು.

टपाना, स० ಅನ್ನನೀರಿಲ್ಲದೆ ಇಡುವಿಕೆ.

टमटम, स्त्री० ಕುದುರೆಗಾಡಿ; ಟಾಂಗ.

टमाटर, पुं० ತಕ್ಕಾಳಿ ಹಣ್ಣು; ಚಪ್ಪರ ಬದನೆ.

टर, स्त्री० ಕರ್ಕಶ ; ಅಪ್ರಿಯವಾದ ಶಬ್ದ; ದರ್ಪದಮಾತು; ಬಿರುನುಡಿ; ಕಪ್ಪೆಯು ಒಟಗುಟ್ಟುವಿಕೆ.

टरकना, अ० ಜಾರು; ಸರಿ.

टरकाना, स० ಸರಿಸು; ಒಂದು ಸ್ಥಾನದಲ್ಲಿ ಇದನ್ನು ಮತ್ತೊಂದು ಸ್ಥಾನಕ್ಕೆ ಜರುಗಿಸು.

टरटराना, स० ಬಡಬಡಿಸು; ಬಿರುನುಡಿಗಳನ್ನಾಡು.

टर्रा, वि० ಬಿರುನುಡಿಗಳನ್ನಾಡುವವ; ಒಕವಾದಿ.

टर्राना, अ० ಸೊಕ್ಕಿನಿಂದ ಬಿರುಸು ಮಾತುಗಳನ್ನಾಡು.

टलना, अ० ತನ್ನ ಸ್ಥಾನದಿಂದಸರಿ; ದೂರವಾಗು; ಮುಂದುವರಿಸಲ್ಪಡು; ಕಳೆ; ಉಲ್ಲಂಘಿಸು.

टलहा, वि० ನಲ್ಲದ; ಖೋಟಾ.

टस, स्त्री० ಯಾವುದಾದರೂ ಭಾರೀ ವಸ್ತುವು ತನ್ನ ಸ್ಥಾನದಿಂದ ಕದಲುವ ಶಬ್ದ ;—**से मस न होना** ಏನುಮಾಡಿದರೂ ಬದಲಾಯಿಸದಿರು.

टसक, स्त्री० ಕ್ಷಣಕ್ಕೊಮ್ಮೆ ಸಿಡಿಯುವ ನೋವು.

टसकना, अ० ತನ್ನ ಸ್ಥಾನದಿಂದ ಕದಲು; ಜಾರು; ಸರಿ; ಕ್ಷಣಕ್ಕೊಮ್ಮೆ ನೋವಾಗು; ಮಾಗಿ ಕೊಳೆಯುವುದಕ್ಕಾರಂಭಿಸು; ಕಣ್ಣೀರು ಸುರಿಸು.

टसर, पु० ಒಂದುಬಗೆಯ ರೇಶ್ಮೆ.

टहक, स्त्री० ಕೀಲುಗಳ ನೋವು; ಮೇಲಿಂದಮೇಲೆ ಬರುವನೋವು.

टहनी, स्त्री० ಕವಲು; ಕೊಂಬೆ.

टहल, स्त्री० ಸೇವೆ; ಶುಶ್ರೂಷೆ; ಉಪಚಾರ; ಊಳಿಗ; ಚಾಕರಿ; —**बजाना** ಸೇವೆಮಾಡು.

टहलना, अ० ಮೆಲ್ಲಮೆಲ್ಲನೆ ನಡೆ; ವಾಯುಸೇವನೆಗಾಗಿ ಅಡ್ಡಾಡು.

टहलनी, स्त्री० ದಾಸಿ; ಪರಿಚಾರಿಕೆ; ದೀಪದಬತ್ತಿಯನ್ನು ಮಿಾಟುವ ಕಡ್ಡಿ.

टहलाना, स० ಅಡ್ಡಾಡಿಸು; ವಾಯುಸೇವನೆ ಮಾಡಿಸು; ದೂರಕ್ಕೆ ಸರಿಯಿಸು.

टहलुआ, पु० ಸೇವಕ; ಪರಿಚಾರಕ.

टाँक, स्त्री० ನಾಲ್ಕು ಮಾಷಗಳ ತೂಕ; ಪರೀಕ್ಷೆ; ಅಂದಾಜು; ಪಾಲುಗಾರರಭಾಗ; ಬರವಣಿಗೆ; ದಾಖಲೆ.

टाँकना, स० ಎರಡು ವಸ್ತುಗಳನ್ನು ಮೊಳೆಯಿಂದ ಜೋಡಿಸು; (ಅರೆಯುವ ಅಥವಾ ಬೀಸುವ) ಕಲ್ಲು ಕೆತ್ತು; ದಾಖಲುಮಾಡಿಕೊಳ್ಳು.

टाँका, पु० ಹೊಲಿಗೆ; ಬೆಸಗೆ; ಕಲ್ಲುಳಿ; ದಳಿ.

टाँकी, स्त्री० ಕಲ್ಲುಳಿ; ಟಂಕ.

टाँग, स्त्री० ಕಾಲು; ಕುಸ್ತಿಯ ಒಂದು ಪಟ್ಟು;—**अड़ाना** ಅಡ್ಡಬರು.

टाँगन, पु० ಚಿಕ್ಕ ಕುದುರೆ.

टाँगना, स० ತೂಗಹಾಕು; ನೇತಹಾಕು; ಗಲ್ಲಿಗೇರಿಸು; ಫಾಶೀಕೊಡು.

टाँगा, पु० ಗಂಡುಕೊಡಲಿ; ಒಂದು ಬಗೆಯ ಕುದುರೆ ಗಾಡಿ.

टांगी, स्त्री० ಕೊಡಲಿ; ಪರಶು.

टांगन, पु० ಚಿಕ್ಕ ಕುದುರೆ.

टांच, स्त्री० ಹೊಲಿಗೆ; ತೇಪೆ; ಖಂಡನೆ.

टांचना, स० ತೇಪೆಹಾಕು; ಚಿಗಟಾಯಿಸು.

टाँचनी, स्त्री० ಗುಂಡುಸೂಜಿ; ಪಿನ್ನು.

टांट, पु० ತಲೆಬುರಡೆ.

टांयटांय, स्त्री० ಲೊಡಲೊಡ ಎಂದು ಮಾತನಾಡು;—**फिस** ವ್ಯರ್ಥವಾಗು.

टाट, स्त्री० ಸೆಣಬಿನರಟ್ಟು; ಗೋಣಿ ತಾಟು; ಗದ್ದುಗೆ;—**उलटना** ದಿವಾಳಿಯಾಗು.

टानना, स० दे० **तानना.**

टाप, स्त्री० ಕುದುರೆಯ ಗೊರಸು; ಕುದುರೆಯ ಗೊರಸಿನ ಸಪ್ಪಳ.

टापना, अ० ಒಂದು ವಸ್ತುವಿಗಾಗಿ ಬಹಳ ಕಾತುರದಿಂದ ಅತ್ತಿತ್ತ ಓಡಾಡು; ಹಾರಾಡು; ಒದ್ದಾಡು.

टापा, स्त्री० ಬಯಲು; ಮೈದಾನ; ಪುಟ; ಜಿಗತ.

टापू, पु० ನಡುಗಡ್ಡೆ; ದ್ವೀಪ.

टारना स० दे० **टालना.**

टाल, स्त्री० ತನ್ನ ಸ್ಥಾನದಿಂದ ಸರಿಯುವಿಕೆ; ಮುಂದಕ್ಕೆ ಹಾಕುವಿಕೆ.

टालटूल, स्त्री० दे० **टालमटूल.**

टालना, स० ಸರಿಯಿಸು; ದೂರ ಮಾಡು; ಕಾಲಕಳೆಯು; ಉಲ್ಲಂಘಿಸು; ಮುಂದುವರಿಸು.

टालमटाल, क्रि० ಅರ್ಧ ಅರ್ಧ; ಸಮ ಭಾಗವಾಗಿ.

टालमटूल, स्त्री० ನೆವ; ವ್ಯಾಜ.

टिकट, पु० ಅಂಚೆ ಚೀಟಿ; ಟಿಕೀಟು.

टिकटी, स्त्री० ಮುಕ್ಕಾಲು ಮಣೆ; ಚಟ್ಟ.

टिकना, अ० ತಂಗು; ಬಾಳಿಕೆಬರು; ಕದಲದೆ ನಿಲ್ಲು.

टिकली, स्त्री० ಹಣೆಯ ಮೇಲಿನ ಬೊಟ್ಟು; ತಿಲಕ; ನೂಲನ್ನು ಹುರಿಮಾಡುವ ಕದರು; ತಕಲಿ; ಸಣ್ಣಮಾತ್ರೆ ಅಥವಾ ಗುಳಿಗೆ.

टिकस, पु० ಸುಂಕ.

टिकाऊ, वि० ಒಂದೆಡೆ ನಿಲ್ಲುವ; ಬಾಳಿಕೆ ಬರುವ.

टिकान, स्त्री० ಬಿಡಾರ.

टिकाना, स० ವಾಸಮಾಡಲು ಜಾಗ ಕೊಡು; ನಿಲ್ಲಿಸು; ತಂಗಿಸು.

टिकाव, पु० ಸ್ಥಿತಿ; ನಿಲುಗಡೆ; ಬಾಳಿಕೆ; ಬಿಡಾರ; ಮೊಕ್ಕಾಂ.

टिकिया, स्त्री० ಬಿಲ್ಲೆ: ನೊಸಲು; ಹಣೆ; ಲಲಾಟ.

टिकुली, स्त्री० दे० **टिकली.**

टिकैत, पु० ಯುವರಾಜ.

टिकोला, टिकोरा पु० ವಾಟೆ ಬಲಿಯದ ಮಾವಿನಕಾಯಿ; ಮಾವಿನ ಕಸುಗಾಯಿ; ಹೀಚು; ಮಿಡಿ.

टिटिहरी, स्त्री० ಹುಳುಕ ಹಕ್ಕಿ; ಟಿಟ್ಟಿಭ.

टिड्डा, पु० **टिड्डी,** स्त्री० ಮಿಡಿತೆ;—**का दल** ಮಿಡತೆಯ ದಂಡು.

टिप्पन, पु० ಟೀಕೆ; ಟಿಪ್ಪಣಿ; ಕುಂಡಲಿ.

टिप्पनी, स्त्री० ಭಾಷ್ಯ; ಟಿಪ್ಪಣಿ.

टिमटिमाना, अ० ಮಿನುಗುಟ್ಟು.

टिहुकना, अ० ಆಶ್ಚರ್ಯಗೊಳ್ಳು.

टिहुनी, स्त्री० ಮೊಣಕಾಲು.

टीकना, स० ತಿಲಕ ಹಚ್ಚು; ಗುರುತು ಮಾಡು.

टीका, पु० ಗುರ್ತು; ಬೊಟ್ಟು; ತಿಲಕ; ಮದುವೆಯ ಒಂದು ಆಚಾರ; ಯುವರಾಜ ರಾಜ್ಯಾಭಿಷೇಕ; ಸಿಡುಬು ಇತ್ಯಾದಿ ಮೈಲೆ

ಗಳು ಬರದಂತೆ ಹಾಕುವ ದಾಕು.
ಸ್ತ್ರೀಂ ಟೀಕೆ; ಟಿಪ್ಪಣಿ; ಭಾಷ್ಯ;
—कार ಪುಂ ಗ್ರಂಥಗಳ ವ್ಯಾಖ್ಯಾನ ಬರೆಯುವವ.

टीप, ಸ್ತ್ರೀಂ ಕೈಯಿಂದ ಒತ್ತುವಿಕೆ; ಹಿಸಕುವಿಕೆ; ಕಟ್ಟುವಿಕೆ; ಗಾಯನದ ಉಚ್ಚಸ್ವರ; ಮುಚ್ಚಳಿಕೆ; ದಸ್ತಾವೇಜು; ಜನ್ಮಪತ್ರಿಕೆ.

टीपना, ಸಂ ಕೈಯಿಂದ ಒತ್ತು; ಹಿಸುಕು; ತಟ್ಟು; ದಾಖಲು ಮಾಡಿಕೊಳ್ಳು.

टीमटाम, ಸ್ತ್ರೀಂ ಆಡಂಬರ; ಅಲಂಕಾರ; ಬೆಡಗು.

टीला, ಪುಂ ದಿಣ್ಣೆ; ದಿಬ್ಬ; ಸಣ್ಣಗುಡ್ಡ.

टीस, ಸ್ತ್ರೀಂ ಚಳುಕು; ನೋವು; ಶೂಲೆ.

टीसना, ಅಂ ಕ್ಷಣಕ್ಷಣ ನೋಯು.

टुंटा, ವಿಂ ಕೈಯಿಲ್ಲದ; ಹೆಳವ.

टुंडा, ವಿಂ ಕೊಂಬೆಗಳು ಕತ್ತರಿಸಲ್ಪಟ್ಟ; ಕೈಯಿಲ್ಲದ; ಒಂದು ಕೋಡಿಲ್ಲದ.

टुइयाँ, ವಿಂ ಕುಳ್ಳ; ಗಿಡ್ಡ.

टुक, ವಿಂ ತುಸ; ಕೊಂಚ; ಸ್ವಲ್ಪ.

टुकड़ा, ಪುಂ ಚೂರು; ಹೋಳು.

टुकड़ी, ಸ್ತ್ರೀಂ ಸಣ್ಣಚೂರು ಅಥವಾ ಹೋಳು; ಸಮುದಾಯ; ತಂಡ; ದಳ; ಸೈನ್ಯದ ಒಂದು ಭಾಗ.

टुच्चा, ವಿಂ ತುಚ್ಛ; ನೀಚ.

टुटपुंजिया, ವಿಂ ಬಂಡವಾಳವಿಲ್ಲದ; ಸ್ವಲ್ಪವೇ ಬಂಡವಾಳವುಳ್ಳ.

टूंगना, ಸಂ ಕೊಂಚಕೊಂಚವಾಗಿ ತಿನ್ನು; ನಂಜಿತಿನ್ನು.

टूक, ಪುಂ ಚೂರು; ತುಂಡು.

टूका, ಪುಂ ಭಿಕ್ಷೆ; ರೊಟ್ಟೀ ಚೂರು.

टूट, ಸ್ತ್ರೀಂ ಒಡೆದುಹೋದ ಭಾಗ; ಒಡಕು; ಮುರುಕು.

टूटना, ಅಂ ಒಡೆದುಹೋಗು; ಮುರಿದುಹೋಗು; ಗುಂಪುಗುಂಪಾಗಿ ಬರು; ಒಮ್ಮೆಗೆ ಬಂದುಮೇಲೆ ಬೀಳು; ಆಕ್ರಮಣಮಾಡು; ಅಕಸ್ಮಾತ್ತಾಗಿ ಬಂದು ಮುಂದೆ ನಿಲ್ಲು.

टूटा, ವಿಂ ಮುರಿದುಹೋದ; ಒಡೆದ; ಭಗ್ನವಾದ; ಸಣಕಲು; ಕ್ಷೀಣ; ದರಿದ್ರ; ನಿರ್ಧನ.

टें, ಸ್ತ್ರೀಂ ಗಿಣಿಯುಮಾತು; ಬಕವಾದ;
—बोलना ಇದ್ದಂತೆ ಸಾಯುವುದು.

टेंटें, ಸ್ತ್ರೀಂ ಗಿಳಿಯು ಕೀಚು ಧ್ವನಿ.

टेंट, ಸ್ತ್ರೀಂ ಸೊಂಟದ ಸುತ್ತಲೂ ಬಂದಿರುವ ಧೋತ್ರದ ಸುತ್ತು (ಇದರಲ್ಲಿ ಹಣಕಾಸುಗಳನ್ನು ಸೆಕ್ಕಿಕೊಳ್ಳುತ್ತಾರೆ); ಹತ್ತಿಯಕಾಯಿ; ಕಣ್ಣುಪರೆ.

टेंटुवा, ಪುಂ ಗಂಟಲು; ಹೆಬ್ಬೆರಳು.

टेक, ಸ್ತ್ರೀಂ ಭಾರಿವಸ್ತುಗಳು ಕೆಳಬೀಳದಂತೆ ಅವುಗಳಿಗೆ ಕೊಡುವ ಆಧಾರ; ಆಡ್ಡವು; ಹಠ; ಊರುಗೋಲು; ಆಶ್ರಯ; ಊತ.

टेकना, स० ಊರು; ಒರಗಿಸು; ಆನಿಸು.

टेकनी, स्त्री० ಊರುಗಂಬ; ಊರು ಗೋಲು.

टेकी, पु० ಹಟಮಾರಿ.

टेकुआ, पु० ರಾಟೆಯ ಕದುರು.

टेकुरी, स्त्री० ತಕಲಿ; ಮೊಚ್ಚೆಗಾರನ ಸೂಜಿ.

टेढ़, स्त्री० ಡೊಂಕು.

टेढ़ा, वि० ನೇರವಾಗಿಲ್ಲದ; ಡೊಂಕಾದ; ವಕ್ರ; ನಮ್ರತೆಯಿಲ್ಲದ; ಕೋಪಿಷ್ಠ.

टेढ़े, क्रि० ನೇರವಾಗಿಲ್ಲದೆ; ಸೊಟ್ಟುಬಟ್ಟಾಗಿ.

टेना, स० ಹದನಾಗುವಂತೆ ಮಸೆ; ಮೊಸೆಯನ್ನು ಹುರಿಮಾಡು.

टेनी, स्त्री० ಕಿರುಬೆರಳು.

टेम, स्त्री० ದೀಪದಕುಡಿ.

टेर, स्त्री० ಹಾಡುಗಾರಿಕೆಯ ಉಚ್ಚ ಸ್ವರ; ಮೇಲ್ದನಿ; ಕೂಕು; ಕೂಗು.

टेरना, स० ಮೇಲ್ದನಿಯಲ್ಲಿ ಹಾಡು; ಕೂಗು.

टेव, स्त्री० ಚಾಳಿ; ಅಭ್ಯಾಸ; ಸ್ವಭಾವ.

टेवा, पु० ಜಾತಕ; ಜನ್ಮಪತ್ರಿಕೆ; ಲಗ್ನಪತ್ರಿಕೆ.

टेसू, पु० ಮುತ್ತುಗ; ಪಲಾಶ.

टोकना, स० ಚುಚ್ಚು; ವ್ಯಂಗ್ಯವಾಗಿ ನುಡಿ.

टोंचना, स० ಚುಚ್ಚು; ತಿವಿ.

टोंटा, पु० ಹಕ್ಕಿಯ ಕೊಕ್ಕಿನಂತೆ ಮುಂದಕ್ಕೆ ಚಾಚಿಕೊಂಡಿರುವ ವಸ್ತು.

टोंटी, स्त्री० ಗಿಂಡಿಯ ಮೂಗು.

टोकना, स० ತಡೆಮಾಡು; ಅಡ್ಡಿಪಡಿಸು.

टोकनी, स्त्री० ಮಂಕರಿ; ಹೆಡಿಗೆ; ನೀರನ್ನು ತುಂಬಿಟ್ಟುಕೊಳ್ಳುವ ಸಣ್ಣ ಹಂಡೆ; ಗಂಗಾಳ.

टोकरा, पु० ಬಿದುರಿನ ದೊಡ್ಡ ಮಂಕರಿ; ಹೆಡಿಗೆ.

टोकरी, स्त्री० ಸಣ್ಣ ಮಂಕರಿ; ಗೂಡೆ.

टोटका, पु० ಯಂತ್ರ ಮಂತ್ರ; ಮಾಟ.

टोटा, पु० ನಷ್ಟ; ಹಾನಿ; ಕೊರತೆ; ಅಭಾವ.

टोनहा, वि० ಮಾಟಗಾರ; ಗಾರಡಿಯವ.

टोना, पु० ಮಂತ್ರತಂತ್ರದ ಕೆಲಸ; ಮಾಟ.

टोप } **टोपा** } पु० ದೊಡ್ಡ ಟೋಪಿ; ಯುದ್ಧ ಕಾಲದಲ್ಲಿ ಉಪಯೋಗಿಸುವ ಶಿರಸ್ತ್ರಾಣ.

टोपी, स्त्री० ಟೊಪ್ಪಿಗೆ; ಕುಲಾವಿ; ರಾಜಕಿರೀಟ.

टोरी, पु० ತೊಗರಿಯ ಬೇಳೆಯಲ್ಲಿ ಒಡೆಯದೆ ನಿಂತುಹೋಗುವ ಕುರುಡು ಕಾಳು.

टोल, स्त्री० ಮಂಡಲಿ; ಸಮೂಹ; ಪಾಠಶಾಲೆ.

टोला, ಪುಂ ಜನವಸತಿಯ ಒಂದು ಭಾಗ; ಕೇರಿ; ಮೊಹಲ್ಲಾ.

टोली, ಸ್ತ್ರೀ ಸಣ್ಣ ಕೇರಿ ಅಥವಾ ಮೊಹಲ್ಲಾ; ತಂಡ; ಸಮೂಹ.

टोह, ಸ್ತ್ರೀ ಹುಡುಕಾಡುವಿಕೆ; ಕಂಡು ಹಿಡಿಯುವಿಕೆ; ಪತ್ತೆ.

टोहना, ಸಂ ಹುಡುಕು; ಕಂಡು ಹಿಡಿ; ಪತ್ತೆಮಾಡು.

टोहाटाई, ಸ್ತ್ರೀ ಪತ್ತೆ; ಹುಡುಕುವಿಕೆ.

टोहिया } ಪುಂ ಪತ್ತೆಮಾಡುವವ;
टोहा } ಹುಡುಕುವವ.

ठ, ವಿಂ ಬೋಳು ಅಥವಾ ಮೋಟು ಮರ.

ठंड, ಸ್ತ್ರೀ ಶೀತ; ಚಳಿ.

ठंडक, ಸ್ತ್ರೀ ಶೈತ್ಯ; ಚಳಿ; ತಂಪು.

ठंढा, ವಿಂ ತಣ್ಣಗಾದ; ಶೀತವಾದ; ತಣಿದ; ಶಾಂತವಾದ;—**होना** ಸತ್ತುಹೋಗು; **ठंढी साँस लेना** ದುಃಖದಲ್ಲಿ ನಿಟ್ಟುಸಿರುಬಿಡು.

ठंढाई, ಸ್ತ್ರೀ ಶರೀರಕ್ಕೆ ತಂಪನ್ನುಂಟು ಮಾಡುವ ಔಷಧ.

ठकठक, ಸ್ತ್ರೀ ಜಗಳ; ಕಲಹ.

ठकठकाना, ಸಂ ದೇಂ **खटखटाना**.

ठकुरसुहाती, ಸ್ತ್ರೀ ಮುಖಸ್ತುತಿ.

ठकुराइन, ಸ್ತ್ರೀ ಒಡತಿ; ಯಜಮಾನಿ; ರಾಣಿ.

ठकुराई, ಸ್ತ್ರೀ ಒಡೆತನ; ಆಧಿಪತ್ಯ; ರಾಜ್ಯ; ದೊಡ್ಡಸ್ತಿಕೆ.

ठकुरानी, ಸ್ತ್ರೀ ದೇಂ **ठकुराइन** ಕ್ಷತ್ರಿಯಸ್ತ್ರೀ; ಕ್ಷತ್ರಾಣಿ.

ठकुराय, ಪುಂ ಕ್ಷತ್ರಿಯರ ಒಂದು ಜಾತಿ.

ठकुरायत, ಸ್ತ್ರೀ ಪ್ರಭುತ್ವ; ಆಧಿಪತ್ಯ.

ठकोरी, ಸ್ತ್ರೀ ಸಾಧುಗಳ ಕವೆಗೋಲು; ಸನ್ಯಾಸಿನಿ.

ठग, ಪುಂ ವಂಚಕ.

ठगई, ಸ್ತ್ರೀ ವಂಚನೆ; ಮೋಸ.

ठगना, ಸಂ ಮೋಸಗೊಳಿಸು. ಅಂ ಮೋಸಹೋಗು.

ठगनी, ಸ್ತ್ರೀ ವಂಚಕಳು.

ठगपना, ಪುಂ ದೇಂ **ठगई**.

ठगाना, ಸಂ ದೇಂ **ठगना**.

ठगिन, ಸ್ತ್ರೀ ದೇಂ **ठगनी**.

ठगी, ಸ್ತ್ರೀ ವಂಚನೆ; ಮೋಸ.

ठगोरी, ಸ್ತ್ರೀ ಮಾಯಾಮಂತ್ರ; ಮಾಟ.

ठट, ಪುಂ ಅಲಂಕಾರ; ಗುಂಪು.

ठटना, ಸಂ ತೀರ್ಮಾನಿಸು; ನಿಶ್ಚಯಿಸು. ಅಂ ಸಜ್ಜಾಗು.

ठटनि, ಸ್ತ್ರೀ ಅಲಂಕಾರ; ತಯಾರಿಸುವಿಕೆ.

ठटरी, ಸ್ತ್ರೀ ಅಸ್ಥಿಪಂಜರ; ಚಟ್ಟ.

ठट्ठा, ಪುಂ ಪರಿಹಾಸ್ಯ; ಗೇಲಿ.

ठट्ठेबाज़, ವಿಂ ಹಾಸ್ಯಗಾರ.

ठट्ठेबाज़ी, ಸ್ತ್ರೀ ಪರಿಹಾಸ್ಯ; ಗೇಲಿ.

ठठ, ಪುಂ ಗುಂಪು; ಸಮೂಹ.

ठठरी, ಸ್ತ್ರೀ ದೇಂ **ठटरी**.

ठाना, स० ಹೊಡಿ; ಬಡಿ; ಕಿಲ ಕಿಲನೆ ನಗು.

ठेरा, पु० ಕಂಚುಗಾರ; ಚೆಂಬು ಕುಟಿಗ.

ठेरी, स्त्री० ಕಂಚುಗಾತಿ; ಕಂಚು ಗಾರನ ಕೆಲಸ.

ठोल, पु० ಹಾಸ್ಯಗಾರ; ಹಾಸ್ಯ.

ठोली, स्त्री० ಹಾಸ್ಯ; ಕುಚೋದ್ಯ.

ठड़ा, वि० ನೆಟ್ಟಗೆ ನಿಂತಿರುವ.

ठड्डा, पु० ಬೆನ್ನುಮೂಳೆ.

ठनकना, अ० ಟ೯ಟ೯ ಎಂದು ಸದ್ದಾಗು. माथा ठनकना ಭಾರೀ ಸಂದೇಹದಿಂದಾಗುವ ಭಯ.

ठनका, पु० ಹೊಡೆತ; ಅಕಸ್ಮಾತ್ತಾಂ ಟಾಗುವ ನೋವು.

ठनठन गोपाल, पु० ಬರಿಗೈ; ಸಾರ ವಿಲ್ಲದ್ದು.

ठनठनाना, स० ಬಾರಿಸುವುದು.

ठनना, अ० ಪ್ರಾರಂಭವಾಗು; ನಿಶ್ಚಯವಾಗು.

ठप्पा, पु० ಅಚ್ಚು; ಮುದ್ರೆ; ಠಸ್ಸೆ.

ठमक, स्त्री० ಒನಪು; ಒಯ್ಯಾರ.

ठमकना, अ० ಇದ್ದಕ್ಕಿದ್ದಹಾಗೆನಿಂತು ಹೋಗು.

ठर्रा, पु० ಅಗ್ಗವಾದ ಹೆಂಡ.

ठस, वि० ಗಟ್ಟಿ; ದೃಢವಾದ; ಸ್ಥಿರ.

ठसक, स्त्री० ಗರ್ವ; ಹೆಮ್ಮೆ.

ठसका, पु० ಒಣಕೆಮ್ಮು.

ठसाठस, क्रि० ಕಿಕ್ಕಿರಿದು.

ठहर, पु० ಸ್ಥಾನ; ಜಾಗ.

ठहरना, स० ನಿಲ್ಲು; ವಿಶ್ರಮಿಸು.

ठहराना, स० ತಡೆ; ತಂಗುವಂತೆ ಮಾಡು; ದೃಢಪಡಿಸು.

ठहराव, पु० ನಿಶ್ಚಯ; ನಿರ್ಣಯ; ಠರಾವು; ತೀರ್ಮಾನ.

ठहाका, पु० ಜೋರಾದ ನಗು.

ठाँठ, वि० ನೀರಸ; ಹಾಲು ಕೊಡದ; ಗೊಡ್ಡು ಆಕಳು.

ठाँय, ठाँव } पु० ಸ್ಥಾನ; ಸ್ಥಳ.

ठाँसना, स० ತುಂಬು; ತುರುಕು.

ठाकुर, पु० ದೇವರು; ಒಡೆಯ.

ठाकुरबाड़ी, स्त्री० ದೇವಾಲಯ; ಗುಡಿ.

ठाट, पु० ಆಡಂಬರ; ಬೆಡಗು ಬಿನ್ನಾಣ.

ठाटर, पु० ತಡಿಕೆ; ತಟ್ಟಿ.

ठाठ, पु० दे० ठाट.

ठाठर, पु० दे० ठाटर.

ठाढ़ा, वि० ನಿಂತಿರುವ.

ठानना, स० ನಿಶ್ಚಯಿಸು.

ठाम, स्त्री० ಸ್ಥಳ; ಜಾಗ.

ठाला, पु० ನಿರುದ್ಯೋಗ; ಹಣಕಾಸಿನ ಮುಗ್ಗಟ್ಟು;—बैठे ठाले ನಿರುದ್ಯೋಗಿ.

ठाली, वि० ಕೆಲಸವಿಲ್ಲದ; ನಿರು ದ್ಯೋಗಿ.

ठिगना, वि० ಗಿಡ್ಡ; ಕುಳ್ಳ.

ठिकान, ठिकाना } पु० ಸ್ಥಳ; ಆಶ್ರಯಸ್ಥಾನ; ಎಲ್ಲೆ;—लगाना ಭದ್ರಪಡಿಸುವುದು; ಸಾಯಿಸುವುದು.

ठिठक, स्त्री० ಬೆರಗಾಗುವಿಕೆ.
ठिठकना, अ० ಬೆಚ್ಚಿಬೀಳು.
ठिठरना / ठिठुरना अ० ಚಳಿಯಿಂದ ಮುದುರಿ ಹೋಗು.
ठिनकना, अ० ಬಿಕ್ಕಿಬಿಕ್ಕಿ ಅಳು.
ठिलिया, स्त्री० ಚಿಕ್ಕ ಬಿಂದಿಗೆ.
ठिलुआ, वि० ನಿರುದ್ಯೋಗಿ.
ठीक, वि० ನಿಜ; ಸರಿ; ಒಳ್ಳೆಯ; ಯೋಗ್ಯವಾದ.
ठीकठाक, पु० ಏರ್ಪಾಡು; ಬಂದೋಬಸ್ತು.
ठीकरा, पु० ಹೆಂಚಿನ ಜಲ್ಲಿ; ಬೋಕಿ ಚೂರುಗಳು.
ठीका, पु० ಗುತ್ತಿಗೆ; ಕಂಟ್ರಾಕ್ಟು.
ठीकेदार, पु० ಗುತ್ತಿಗೆದಾರ.
ठुंठ, पु० ಒಣಕಲುಮರ; ಬೋಳು ಮರ.
ठुकना, अ० ಹೊಡೆಯಲ್ಪಡು; ಏಟು ತಿನ್ನು.
ठुकराना, स० ಕಾಲಿನಿಂದ ಒದೆ; ತುಳಿ.
ठुड्डी, स्त्री० ಗಲ್ಲ; ಗಡ್ಡ.
ठुनकना, अ० ಬಿಕ್ಕಿಬಿಕ್ಕಿ ಅಳು.
ठुमकना, अ० ಹೆಜ್ಜೆಯಮೇಲೆ ಹೆಜ್ಜೆ ಹಾಕಿ ನಡೆ; ಕೊಂಕಿನಡೆ.
ठुमका, वि० ಗಿಡ್ಡ.
ठुमरी, स्त्री० ಹಿಂದೂಸ್ಥಾನಿ ಸಂಗೀತದ ಒಂದು ರಾಗ.
ठूंठ, पु० ಬೋಳು ಮರ.
ठूँसना, स० ತುಂಬಿ ತುರುಕು.
ठेंगना, वि० दे० ठिंगना.
ठेंगा, पु० ಹೆಬ್ಬೆಟ್ಟು; ಚಿಕ್ಕದೊಣ್ಣೆ.
ठेका, पु० दे० ठीका.
ठेकी, स्त्री० ಊರೆ; ಆಧಾರ.
ठेकेदार, पु० दे० ठीकेदार.
ठेठ, वि० ಶುದ್ಧ; ನಿರ್ಮಲ.
ठेलना, स० ದಬ್ಬು; ತಳ್ಳು.
ठेला, पु० ಗುಂಪುಗುಂಪಲು; ನೂಕು ನುಗ್ಗಲು.
ठेस, स्त्री० ಪೆಟ್ಟು.
ठोंक, स्त्री० ಪ್ರಕಾರ; ಹೊಡೆತ.
ठोंकना / ठोकना स० ಹೊಡೆ; ಬಡಿ.
ठोकर, स्त्री० ಪೆಟ್ಟು; ಏಟು.
ठोड़ी / ठोढ़ी स्त्री० ಗಡ್ಡ; ಗಲ್ಲ.
ठोस, वि० ಗಟ್ಟಿ; ದೃಢ; ಘನ.
ठोसा, पु० ಹೆಬ್ಬೆರಳು;—दिखाना ತಿರಸ್ಕರಿಸು; ಮೋಸಮಾಡು.
ठौर, पु० ಸ್ಥಳ; ಜಾಗ; ಆಸ್ಪದ; —ठिकाना ನೆಪ್ಪು ನೆಲೆ.

ड

डंक, पु० ಚೇಳು, ಜೇನು, ನೊಣ ಮೊದಲಾದವುಗಳ ಮುಳ್ಳುಕೊಂಡಿ; ಕುಟುಕುವಿಕೆ.
डंका, पु० ನಗಾರಿ; ಡಂಗುರ; डंके की चोट कहना ಪ್ರಸಿದ್ಧಪಡಿಸು.
डंगर, पु० ದನಕರು.
डंगरी, स्त्री० ಒಂದು ಬಗೆಯ ಸೌತೇಕಾಯಿ.

ठाना, ಸಂ ಹೊಡಿ; ಬಡಿ; ಕಿಲ ಕಿಲನೆ ನಗು.

ठेरा, ಪುಂ ಕಂಚುಗಾರ; ಚೆಂಬು ಕುಟಿಗ.

ठेरी, ಸ್ತ್ರೀಂ ಕಂಚುಗಾತಿ; ಕಂಚು ಗಾರನ ಕೆಲಸ.

ठठोल, ಪುಂ ಹಾಸ್ಯಗಾರ; ಹಾಸ್ಯ.

ठठोली, ಸ್ತ್ರೀಂ ಹಾಸ್ಯ; ಕುಚೋದ್ಯ.

ठड़ा, ವಿಂ ನೆಟ್ಟಗೆ ನಿಂತಿರುವ.

ठड्ढा, ಪುಂ ಬೆನ್ನುಮೂಳೆ.

ठनकना, ಅಂ ಟಣ ಟಣ ಎಂದು ಸದ್ದಾಗು. **माथा ठनकना** ಭಾರೀ ಸಂದೇಹದಿಂದಾಗುವ ಭಯ.

ठनका, ಪುಂ ಹೊಡೆತ; ಅಕಸ್ಮಾತ್ತಾಗಿ ಟಾಗುವ ನೋವು.

ठनठन गोपाल, ಪುಂ ಬಡಿಗ್ಗೆ; ಸಾರ ವಿಲ್ಲದ್ದು.

ठनठनाना, ಸಂ ಬಾರಿಸುವುದು.

ठनना, ಅಂ ಪ್ರಾರಂಭವಾಗು; ನಿಶ್ಚಯವಾಗು.

ठप्पा, ಪುಂ ಅಚ್ಚು; ಮುದ್ರೆ; ಠಸ್ಸೆ.

ठमक, ಸ್ತ್ರೀಂ ಒನಪು; ಒಯ್ಯಾರ.

ठमकना, ಅಂ ಇದ್ದಕ್ಕಿದ್ದಹಾಗೆನಿಂತು ಹೋಗು.

ठर्रा, ಪುಂ ಅಗ್ಗವಾದ ಹೆಂಡ.

ठस, ವಿಂ ಗಟ್ಟಿ; ದೃಢವಾದ; ಸ್ಥಿರ.

ठसक, ಸ್ತ್ರೀಂ ಗರ್ವ; ಹೆಮ್ಮೆ.

ठसका, ಪುಂ ಒಣಕೆಮ್ಮು.

ठसाठस, ಕ್ರಿಂ ಕಿಕ್ಕಿರಿದು.

ठहर, ಪುಂ ಸ್ಥಾನ; ಜಾಗ.

ठहरना, ಸಂ ನಿಲ್ಲು; ವಿಶ್ರಮಿಸು.

ठहराना, ಸಂ ತಡೆ; ತಂಗುವಂತೆ ಮಾಡು; ದೃಢಪಡಿಸು.

ठहराव, ಪುಂ ನಿಶ್ಚಯ; ನಿರ್ಣಯ; ಠರಾವು; ತೀರ್ಮಾನ.

ठहाका, ಪುಂ ಜೋರಾದ ನಗು.

ठाँठ, ವಿಂ ನೀರಸ; ಹಾಲು ಕೊಡದ; ಗೊಡ್ಡು ಆಕಳು.

ठाँय / **ठाँव**, ಪುಂ ಸ್ಥಾನ; ಸ್ಥಳ.

ठाँसना, ಸಂ ತುಂಬು; ತುರುಕು.

ठाकुर, ಪುಂ ದೇವರು; ಒಡೆಯ.

ठाकुरबाड़ी, ಸ್ತ್ರೀಂ ದೇವಾಲಯ; ಗುಡಿ.

ठाट, ಪುಂ ಆಡಂಬರ; ಬೆಡಗು ಬಿನ್ನಾಣ.

ठाटर, ಪುಂ ತಡಿಕೆ; ತಟ್ಟಿ.

ठाठ, ಪುಂ ದೇಂ ठाट.

ठाठर, ಪುಂ ದೇಂ ठाटर.

ठाढ़ा, ವಿಂ ನಿಂತಿರುವ.

ठानना, ಸಂ ನಿಶ್ಚಯಿಸು.

ठाम, ಸ್ತ್ರೀಂ ಸ್ಥಳ; ಜಾಗ.

ठाला, ಪುಂ ನಿರುದ್ಯೋಗ; ಹಣಕಾಸಿನ ಮುಗ್ಗಟ್ಟು; —**बैठे ठाले** ನಿರುದ್ಯೋಗಿ.

ठाली, ವಿಂ ಕೆಲಸವಿಲ್ಲದ; ನಿರುದ್ಯೋಗಿ.

ठिगना, ವಿಂ ಗಿಡ್ಡ; ಕುಳ್ಳ.

ठिकान / **ठिकाना**, ಪುಂ ಸ್ಥಳ; ಆಶ್ರಯಸ್ಥಾನ; ಎಲ್ಲೆ; —**लगाना** ಭದ್ರಪಡಿಸುವುದು; ಸಾಯಿಸುವುದು.

डलिया, स्त्री० ಬುಟ್ಟಿ.

डली, स्त्री० ಚೂರು ; ಹರಳು.

डसना, स० ಕುಟುಕು; ಕಚ್ಚು; ಕಡಿ.

डहकना, स० ಮೋಸಮಾಡು.

—ा, वि० ಹಸುರಾದ.

—न, पु० ರೆಕ್ಕೆ.

डहना, अ० ಸುಟ್ಟುಹೋಗು.

डाँक, स्त्री० ತಾಮ್ರ; ಬೆಳ್ಳಿಯ ರೇಕು.

डाँकना, स० ಕುಪ್ಪಳಿಸು ; ಹಾರು.

डाँगर, पु० ಕಾಲ್ನಡೆ ; ದನಕರು.

डांट, स्त्री० ಗದರಿಕೆ.

डांटना, स० ಗದರಿಸು; ಮೂದಲಿಸು.

डाँठ, पु० दे० **डंठल.**

डांड, पु० ದೊಣ್ಣೆ ; ಕೋಲು.

—ा, अ० ದಂಡ ವಿಧಿಸು; ಜುಲ್ಮಾನೆ ಹಾಕು.

—ा, पु० ದೊಣ್ಣೆ; ಕೋಲು; ಎಲ್ಲೆ;—मेड़ी ಹೋರಾಟ; ಪೈಪೋಟಿ.

डाँड़ी, स्त्री० ತಕ್ಕಡಿಯ ಕೋಲು; —मारना ಮೋಸಮಾಡು.

डाँवरा, पु० ಮಗ.

डाँवरू, पु० ಹುಲಿಮರಿ.

डाँवाँड़ोल, वि० ಅಸ್ಥಿರವಾದ: ಅಲುಗಾಡುವ.

डाँस, पु० ದೊಡ್ಡ ಸೊಳ್ಳೆ; ಗುಂಗಾಡು.

डाइन, स्त्री० ಪಿಶಾಚಿನಿ.

स्त्री० ಅಂಚೆ; ಟಪಾಲಿನ ಕಾಗದ ಪತ್ರಗಳು; ಹರಾಜು.

डाकख़ाना, पु० ಅಂಚೆಯ ಕಚೇರಿ.

डाकगाड़ी स्त्री० ಅಂಚೆಯನ್ನು ಒಯ್ಯುವಗಾಡಿ; ಮೆಯಿಲುಗಾಡಿ.

डाकघर, पु० दे० **डाकखाना.**

डाकबंगला, पु० ಮುಸಾಫಿರಿ ಬಂಗಲೆ.

डाकना, अ० ವಮನಮಾಡು. स० ಹಾರು.

डाका, पु० ಕೊಳ್ಳೆ ; ದರೋಡೆ.

डाकाज़न, पु० ದರೋಡೆಗಾರ.

डाकाज़नी, स्त्री० ದರೋಡೆ.

डाकिनी, स्त्री० ಪಿಶಾಚಿನಿ.

डाकिया, पु० ಅಂಚೆಯವನು; ಟಪಾಲು ಪೇದೆ.

डाकू, पु० ಕೊಳ್ಳೆಗಾರ; ದರೋಡೆ ಕಳ್ಳ.

डागा, पु० ನಗಾರಿ ಹೊಡೆಯುವ ಕೋಲು.

डाट, स्त्री० ಪೈಪೋಟಿ; ಬಿರಡೆ; ಬೆಸಿಗೆ.

डाटना, स० ಕೂರಿಕೂರಿ ತುಂಬು; ಸಹಾಯಮಾಡು.

डाढ़, स्त्री० ದವಡೆ ಹಲ್ಲು.

डाढ़ना, स० ಸುಡುವುದು.

डाढ़ा, स्त्री० ಕಾಡುಕಿಚ್ಚು.

डाढ़ी, स्त्री० ಗಡ್ಡ; ಗಡ್ಡದ ಕೂದಲು.

डाबर, स्त्री० ಹಳ್ಳ; ಕೊಳೆನೀರು.

डाभ, पु० ದರ್ಭೆ; ಎಳನೀರು; ಮಾವಿನಮಿಡಿ.

डामर, पुं० ಆಡಂಬರ.

डामल, स्त्री० ಆಜೀವನ ಶಿಕ್ಷೆ.

डायन, स्त्री० ದೇ० डाइन.

डार } **डाल** } स्त्री० ಕೊಂಬೆ; ರೆಂಬೆ.

डालना, स० ಹಾಕು; ಸುರಿ ಹೊಯ್ಯು; ಇರಿಸು.

डाली, स्त्री० ಕಾಣಿಕೆ; ಕೊಂಬೆ; ರೆಂಬೆ.

डासन, पुं० ಹಾಸಿಗೆ; ಹಾಸಿಗೆ ಬಟ್ಟೆ.

डासना, स० ಹಾಸು.

डासनी, स्त्री० ಮಂಚ.

डाह, स्त्री० ಹೊಟ್ಟೆಯುರಿ; ಅಸೂಯೆ.

डाहना, स० ಹೊಟ್ಟೆ ಉರಿಸು; ಪೀಡಿಸು.

डिंब, पुं० ಶ್ವಾಸಕೋಶ; ತೊಟ್ಟಿ.

डिंभ, पुं० ಮರಿ; ಮೂರ್ಖ.

डिंभक, पुं० ಚಿಕ್ಕಮಗು.

डिंभिया, वि० ಮೂರ್ಖ.

डिगना, अ० ಅಲ್ಲಾಡು; ಕದಲು.

डिगाना, स० ಕದಲಿಸು: ಅಲ್ಲಾಡಿಸು.

डिग्गी, स्त्री० ಕೊಳ; ಕೆರೆ.

पुं० ದೃಷ್ಟಿಬೊಟ್ಟು; ದೃಷ್ಟಿ ಪರಿಹಾರಕ್ಕಾಗಿ ಇಡುವ ಬೊಟ್ಟು.

डिबिया, स्त्री० ಸಣ್ಣ ಡಬ್ಬಿ.

डिब्बा, पुं० ಡಬ್ಬ; ರೈಲುಗಾಡಿಯ ಒಂದು ಬಂಡಿ.

डींग, स्त्री० ಜಂಬ; ಆತ್ಮಪ್ರಶಂಸೆ; ಬಡಾಯಿ;—**हाँकना** ಜಂಬ ಕೊಚ್ಚುವುದು.

डीठ, स्त्री० ದೃಷ್ಟಿ; ನೋಟ; ಜ್ಞಾನ.

डीठना, स० ಕಾಣಿಸು; ದೃಷ್ಟಿಗೋಚರವಾಗು.

डील, पुं० ಶರೀರದ ನಿಲುವು; ಮೈಕಟ್ಟು;—**डौल** ಮೈಕಟ್ಟು.

डीह, पुं० ಜನವಸತಿ; ಹಳ್ಳಿ; ಹಾಳೂರಿನ ದಿಬ್ಬ.

डुगडुगी } स्त्री० ಬುಡಬುಡಿಕೆ.

डुपट्टा, पुं० ದುಪ್ಪಟಿ.

डुबकी, स्त्री० ಮುಳುಕ; ಮುಳುಗು.

डुबाना, स० ಮುಳಗಿಸು.

डुबाव, पुं० ಮುಳುಗುವಷ್ಟು ಆಳ.

डुबोना, स० ಮುಳಗಿಸು; ನಾಶ ಮಾಡು.

डुलाना, स० ಅಲ್ಲಾಡಿಸು; ಬೀಸು.

डूंगर, पुं० ದಿಣ್ಣೆ; ದಿಬ್ಬ.

डूबना, अ० ಮುಳುಗು.

डेढ़, वि० ಒಂದೂವರೆ.

डेढ़ा, वि० ಒಂದುವರೆಯುಷ್ಟು.

डेरा, पुं० ಡೇರೆ; ಬಿಡಾರ.

डेला, पुं० ಮಣ್ಣುಹೆಂಟೆ.

डेवढ़ा, वि० ದೇ० डेढ़.

० ದೇ०

डेहरी, स्त्री० ಹೊಸಲು.

डेहरी, स्त्री० ಬಾಗಿಲು.

डैना, पुं० ರೆಕ್ಕೆ.

डोंगर, ಪು० ಗುಡ್ಡ; ದಿಣ್ಣೆ.
डोंगा, ಪು० ದೋಣಿ.
डोंगी, ಸ್ತ್ರೀ० ಚಿಕ್ಕದೋಣಿ; ಓಡೆ.
डोम, ಪು० ಒಂದು ಕೀಳುಜಾತಿ.
डोर, ಸ್ತ್ರೀ० ಹಗ್ಗ; ದಾರ.
डोरा, ಪು० ಹಗ್ಗ; ದಾರ; ಎಳೆ; ಗೆರೆ.
डोरी, ಸ್ತ್ರೀ० ಹಗ್ಗ.
डोल, ಪು० ಉಯ್ಯಾಲೆ; ಪಲ್ಲಕ್ಕಿ.
डोलक, ಪು० ಮೃದಂಗ.
डोलडाल, ಪು० ತಿರುಗಾಟ; ಬಹಿರ್ದೆಶೆಕ್ಕೆ ಹೋಗುವುದು.
डोलना, ಅ० ಅಲ್ಲಾಡು; ಅಲುಗಾಡು.
डोला, ಪು० ಪಲ್ಲಕ್ಕಿ.
डोली, ಸ್ತ್ರೀ० ಚಿಕ್ಕಪಲ್ಲಕ್ಕಿ.
डौंड़ी, ಸ್ತ್ರೀ० ದಂಡೋರೆ.
डौल, ಪು० ಅಚ್ಚು; ಮಾದರಿ; ನಮೂನೆ; ಉಪಾಯ.
ड्योढ़ा, ವಿ० ಒಂದೂವರೆಯಷ್ಟು.
ड्योढ़ी, ಸ್ತ್ರೀ० ಹೊಸ್ತಿಲು; ಹೆಬ್ಬಾಗಿಲು; ಅಗಸೆದ್ವಾರ.
ड्योढ़ीदार, ड्योढ़ीवान } ಪು० ದ್ವಾರಪಾಲಕ.

ढंग, ಪು० ರೀತಿ; ವಿಧಿ; ರಚನೆ; ಲಕ್ಷಣ; ಉಪಾಯ.
ढंगी, ವಿ० ಚತುರ; ಜಾಣ; ತಂತ್ರಗಾರ.
ढंढ़ोरना, ಸ० ಹುಡುಕು.
ढंढ़ोरा, ಪು० ಡಂಗುರ.
ढंढ़ोरिया, ಪು० ಡಂಗುರ ಸಾರುವವ.
ढंपना, ಅ० ಮುಚ್ಚಿಹೋಗು; ಮರೆಯಾಗು.
ढई, ಸ್ತ್ರೀ० ಸತ್ಯಾಗ್ರಹ ಮಾಡುವುದು.
ढकना, ಪು० ಮುಚ್ಚಳ. ಅ० ಮುಚ್ಚಿಹೋಗು; ಮುಚ್ಚಲ್ಪಡು. ಸ० ಮುಚ್ಚು.
ढकनी, ಸ್ತ್ರೀ० ಮುಚ್ಚಳ.
ढकेलना, ಸ० ನೂಕು; ದೂಡು; ತಳ್ಳು.
ढकोसना, ಸ० ಗಟಗಟನೆ ಕುಡಿ.
ढकोसला, ಪು० ಕಪಟ; ವಂಚನೆ; ಬೂಟಾಟಿಕೆ.
ढक्कन, ಪು० ಮುಚ್ಚಳ; ಆವರಣ.
ढक्का, ಪು० ದೊಡ್ಡ ಡೋಲು.
ढचर, ಪು० ಕಪಟ; ಆಡಂಬರ; ಠಕ್ಕು; ಬೂಟಾಟಿಕೆ.
ढनमनाना, ಅ० ಹೊರಳಾಡು.
ढपना, ಪು० ಮುಚ್ಚಳ. ಅ० ಮುಚ್ಚಿಹೋಗು.
ढब, ಪು० ರೀತಿ; ಪದ್ಧತಿ; ಸ್ವಭಾವ; ಉಪಾಯ; ಯುಕ್ತಿ.
ढयना, ಸ್ತ್ರೀ० ಕುಸಿದುಬೀಳು.
ढरकना, ಅ० ಜಾರು; ಸರಿ; ಕೊಚ್ಚಿಹೋಗು.
ढरकाना, ಸ० ಹೊಯ್ಯು; ಸುರಿ.
ढर्रा, ಪು० ರೀತಿ; ದಾರಿ; ಹಾದಿ.
ढलकना, ಅ० ಸುರಿದುಹೋಗು; ಚೆಲ್ಲಿಹೋಗು.
ढलकाना, ಸ० ಚೆಲ್ಲು.

ढलना, अं॰ ಚೆಲ್ಲಿಹೋಗು ; ಕಳೆದುಹೋಗು.

ढलवाँ, वि॰ ಎರಕ ಹೊಯ್ದ ; ಜಾರಾದ.

ढलवाना, स॰ ಎರಕ ಹೊಯಿಸು.

ढलाई, स्त्री॰ ಎರಕ ಹೊಯ್ಯುವ ಕೆಲಸ ಅಥವಾ ಅದರ ಮಜೂರಿ.

ढहना, अं॰ ಕುಸಿದುಬೀಳು; ನೆಲ ಸಮವಾಗು.

ढहवाना } स॰ ಬೀಳಿಸು ; ನೆಲಸಮ
ढहाना } ಮಾಡು.

ढाँचा, पु॰ ಆಕಾರ; ಆಕೃತಿ; ಅಚ್ಚು; ಚೌಕಟ್ಟು.

ढाँपना, स॰ ಹೊದಿಸು.

ढांस, स्त्री॰ ಕೆಮ್ಮುವಿಕೆ.

ढांसना, अं॰ ಕೆಮ್ಮು.

ढाई, वि॰ ಎರಡೂವರೆ.

ढाक, पु॰ ಪಲಾಶ; ಮುತ್ತುಗ;—के तीन पात ಯಾವಾಗಲೂ ಒಂದೇ ನಮುನಾಗಿರುವಿಕೆ.

ढाड़, स्त्री॰ ಕಿರಿಚಾಟ; ಅಬ್ಬರ

ढाढ़स, पु॰ ಸಮಾಧಾನ; ಧೈರ್ಯ

ढाना, स॰ ಬೀಳಿಸು; ನೆಲ ಸ ಮಾಡು.

ढाबर, वि॰ ಕೊಳಕಾದ; ಕೆಸ (ನೀರು).

ढारना, स॰ ಬೀಳಿಸು; ಹಾಕು.

ढारस, पु॰ दे॰ ढाढ़स.

ढाल, स्त्री॰ ಗುರಾಣಿ.

ढालना, स॰ ಸುರಿ; ಚೆಲ್ಲು; ಎರಕ ಹೊಯ್ಯು.

ढिंढ़ोरना, स॰ ತಮಟೆಬಾರಿಸು, ಸಾರು.

ढिंढ़ोरा, पु॰ ಡಂಗುರ; ಸಾರುವಿಕೆ.

ढिग, क्रि॰ ಸಮೀಪದಲ್ಲಿ; ಹತ್ತಿರ.
स्त्री॰ ದಂಡೆ; ಅಂಚು.

ढिठाई, स्त्री॰ ದಿಟ್ಟತನ; ಉದ್ಧಟತನ.

ढिबरी, स्त्री॰ ದೀಪದ ಬುಡ್ಡಿ; ಹಣತೆ.

ढिमका, वि॰ ಇಂಥವನು.

ढिमकी, स्त्री॰ ಮೋಸ.

ढिलाई, स्त्री॰ ಸಡಿಲ; ಆಲಸ್ಯ; ಶಿಥಿಲತೆ.

ढीठ, वि॰ ಅವಿಧೇಯ; ದಿಟ್ಟ; ದುಡುಕಿನವ.

ढील, स्त्री॰ ಸಡಿಲ; ಸಡಲಿಸುವಿಕೆ.

ढीलना, स॰ ಸಡಿಲಿಸು; ಸಡಿಲ ಬಿಡು; ಬಿಚ್ಚು.
वि॰ ಸಡಿಲವಾದ; ಬಿಗು ವಿಲ್ಲದ.

ढीलापन, पु॰ ಸಡಿಲತೆ; ಬಿಗಿಯಿಲ್ಲ ದಿರುವಿಕೆ.

[illegible], पु॰ दे॰ डीह.

ढुकना, अं॰ ಹೊಗು ಆಕ್ರಮಿ ಸುವು.

[illegible]ा, अं॰ दे॰ ढुलना.

ढु[illegible], स्त्री॰ ಕಾಲ್ದಾರಿ.

ढुलकना, अं॰ ಉರಳು; ಹೊರಳು; ಜಾರಿ ಬೀಳು.

ढुलना, अं॰ ಹೊರಳಿಹರಿಯುವುದು.

ढूंढ़ना, स० ಹುಡುಕು.
ढूह, पु० ದಿಣ್ಣೆ ; ರಾಶಿ.
ढेंकली, स्त्री० ಯಾತ; ಕೊಟ್ಟಣದ ಯಾತ; ಲಾಗ.
ढेंकी, स्त्री० ಕೊಟ್ಟಣ.
ढेंवर, पु० ಕಣ್ಣಿನಲ್ಲಿ ಬೆಳೆಯುವ ದುರ್ಮಾಂಸ; ಕಣ್ಣು ಪರೆ.
ढेबुआ, पु० ಕಾಲಾಣೆ; ದುಡ್ಡು.
ढेर, स्त्री० ರಾಶಿ; ಗುಡ್ಡೆ; ಮೆದೆ; **—करना** ಕೊಲ್ಲುವುದು.
ढेरी, स्त्री० ಸಮೂಹ.
ढेलवांस, स्त्री० ಕವಣೆ.
ढेला, पु० ಮಣ್ಣು ಹೆಂಟೆ; ಹೆಳ್ಳೆ; ಮುದ್ದೆ.
ढोंग, पु० ಠಕ್ಕು; ಸುಳ್ಳು.
ढोंगी, वि० ಕಪಟಿ; ಠಕ್ಕ.
ढोटा, पु० ಮಗ; ಹುಡುಗ.
ढोटी, स्त्री० ಮಗಳು; ಹುಡುಗಿ.
ढोंढ़ी, स्त्री० ಹೊಕ್ಕಳು.
ढोना, स० ಹೊರು; ವಹಿಸು.
ढोर, पु० ದನಕರು; ಕಾಲ್ನಡೆ.
ढोल, पु० ಡೋಲು; ಭೇರಿ.
ढोलक स्त्री० ಚಿಕ್ಕಡೋಲು.
ढोलकिया, पु० दे० ढोलिया.
ढोलनी, स्त्री० ಉಯ್ಯಾಲೆ.
ढोलिया, पु० ಡೋಲು ಬಾರಿಸುವವನು.
ढोली, स्त्री० ಇನ್ನೂರು ವಿಳೇದೆಲೆಗಳ ಕೌಳಿಗೆ. **स्त्री०** ಪರಿಹಾಸ್ಯ.
ढोव, पु० ಕಾಣಿಕೆ; ನಜರು.

तंग, वि० ಬಿಗುವಾದ; ಇಕ್ಕಟ್ಟಾದ; ಸಂಕೀರ್ಣ; **—आना** ಬೇಸರಗೊಳ್ಳು; **—करना** ತೊಂದರೆಕೊಡು; ಹಿಂಸಿಸು. **पु०** ಕುದುರೆ ಜೀನನ್ನು ಬಿಗಿದು ಕಟ್ಟುವ ಬಾರು.
तंग-दस्त, वि० ಬಡವ; ದರಿದ್ರ.
तंग-दिल, वि० ಸಂಕುಚಿತ ಮನೋಭಾವದ.
तंग-साल, पु० ಮಳೆಯಾಗದವರ್ಷ.
तंग-हाल, वि० ನಿರ್ಧನ; ರೋಗಪೀಡಿತ.
तंगी, स्त्री० ಕೊರತೆ; ಬಡತನ; ಇಕ್ಕಟ್ಟು; ಮುಗ್ಗಟ್ಟು.
तंज़, पु० ವ್ಯಂಗ್ಯ; ಪರಿಹಾಸ್ಯ.
तंजेब, स्त्री० ಒಂದುಬಗೆಯ ಮಲಮಲು ಬಟ್ಟೆ.
तंडुल, पु० ಅಕ್ಕಿ.
तंतमंत, पु० ಮಂತ್ರತಂತ್ರ.
तंतु, पु० ದಾರ.
तंत्री, स्त्री० ತಂತಿವಾದ್ಯಗಳು.
तंदुरुस्त, वि० ರೋಗವಿಲ್ಲದ; ಆರೋಗ್ಯವಂತ.
तंदुरुस्ती, स्त्री० ಆರೋಗ್ಯ.
तंदूर, पु० ಪಂಜಾಬು ಪ್ರಾಂತ್ಯದಲ್ಲಿನ ಒಂದು ಬಗೆಯ ರೊಟ್ಟಿ ಸುಡುವ ಒಲೆ.
तंदेही, स्त्री० ಎಚ್ಚರಿಕೆ; ಪ್ರೇರಣೆ; ಪ್ರಯತ್ನ.

तंद्रा, स्त्री० ತೂಗಡಿಕೆ.
तंबाकू, पु० ಹೊಗೆ ಸೊಪ್ಪು.
तंबीह, स्त्री० ಬುದ್ಧಿವಾದ; ಉಪದೇಶ.
तंबू, पु० ಗುಡಾರ; ಡೇರೆ.
तंबूरची, पु० ತಂಬೂರಿ ಬಾರಿಸುವವನು.
तंबूरा पु० ತಂಬೂರಿ.
तंबूल, पु० ವೀಳೇದೆಲೆ; ತಾಂಬೂಲ.
तंबोलिन, स्त्री० ವಿಳೇದೆಲೆ ಮಾರುವವಳು.
तंबोली, पु० ವೀಳೇದೆಲೆ ಮಾರುವವನು.
तअक़्कुब, पु० ಯಾರನ್ನಾದರೂ ಅಟ್ಟಿಸಿಕೊಂಡು ಓಡವುದು.
तअज्जुब, पु० ಆಶ್ಚರ್ಯ; ವಿಸ್ಮಯ.
तअम्मुल, पु० ಚಿಂತೆ; ಯೋಚನೆ.
तअल्लुक़, पु० ಸಂಬಂಧ.
तअल्लुक़दार, पु० ಇನಾಮುದಾರ; ತಾಲ್ಲೂಕಿನ ಅಧಿಕಾರಿ.
तअस्सुब, पु० ಧಾರ್ಮಿಕ ಪಕ್ಷಪಾತ; ಕೋಮುವಾರು ಪಕ್ಷಪಾತ.
तआरुफ़, पु० ಪರಿಚಯ.
तई, अव्य० ಒಸ್ಕರ.
तऊ, अव्य० ಆದರೂ ಕೂಡ.
तक, अव्य० ವರಗೆ; ತನಕ.
तकदमा, पु० दे० **तख़मीना**.
तक़दीर, स्त्री० ಅದೃಷ್ಟ; ಭಾಗ್ಯ; ಹಣೆಬರಹ.
तकना, स० ನೋಡು.
तकफ़ीर, स्त्री० ಪ್ರಾಯಶ್ಚಿತ್ತ; ಕಾಫಿರ.
तकबीर, स्त्री० ಪ್ರಶಂಸೆ; ಪ್ರಾರ್ಥನೆ.
तकब्बुर, पु० ಹೆಮ್ಮೆ; ಗರ್ವ.
तकमील, स्त्री० ಸಂಪೂರ್ಣತೆ.
तकरार, स्त्री० ವಿವಾದ; ತಂಟೆ; ಜಗಳ.
तकरीब, स्त्री० ಕೂಟ; ಉತ್ಸವ; ಸಾಮೀಪ್ಯ.
तकरीबन, क्रि० ಸುಮಾರು.
तकरीम, स्त्री० ಮರ್ಯಾದೆ ಮಾಡುವುದು.
तकरीर, स्त्री० ವ್ಯಾಖ್ಯಾನ; ಭಾಷಣ.
तकरीरी, वि० ವಾದಗ್ರಸ್ತ; ಬಾಯಿಮಾತಿನ.
तकला, पु० ರಾಟೆಯ ಕದರು.
तकली, स्त्री० ಚಿಕ್ಕಕದರು; ತಕಲಿ.
तक़लीद, स्त्री० ಅನುಕರಣ; ಕುರುಡು ನಡೆ.
तकलीफ़, स्त्री० ಕಷ್ಟ; ತೊಂದರೆ; ವಿಪತ್ತು.
तकल्लुफ़, पु० ಶಿಷ್ಟಾಚಾರ; ಮರ್ಯಾದೆ.
तक़सीम, स्त्री० ಬಟವಾಡೆ.
तक़सीर, स्त्री० ದೋಷ; ಅಪರಾಧ; ಮರೆವು.
तकाज़ा, पु० ತಗಾದೆ.
तक़ावी, स्त्री० ಬೇಸಾಯಗಾರನಿಗೆ ಸರಕಾರದವರು ಕೊಡುವಸಾಲ; ತಕಾವಿ; ಮುದಗಡ.
तकिया, पु० ದಿಂಬು.

तकिया-कलाम, पु० ಮಾತನಾಡು ವಾಗ ನಡುನಡುವೆ ಅಭ್ಯಾಸ ದೋಷದಿಂದ ಪದೇ ಪದೇ ಆಡುವ ಶಬ್ದ.

तकुआ, पु० दे० **तकला**.

तक्र, पु० ಮಜ್ಜಿಗೆ.

तख़फ़ीफ़, स्त्री० ನ್ಯೂನತೆ; ಕೊರತೆ.

तख़मीनन्, क्रि० ಊಹೆಯಿಂದ; ಬಹುಶಃ.

तख़मीना, पु० ಊಹೆ; ಅಂದಾಜು

तखरी, स्त्री० ತಕ್ಕಡಿ.

तख़लिया, पु० ನಿರ್ಜನ ಸ್ಥಲ.

तख़ल्लुस, पु० ಉಪನಾಮ; ಅಂಕಿತ.

तख़सीस, स्त्री० ವೈಶಿಷ್ಟ್ಯ; ಪ್ರತ್ಯೇಕ ವಾದ ಸಂಗತಿ.

तख़्त, पु० ಸಿಂಹಾಸನ; ಗದ್ದುಗೆ.

तख़्त ताऊस, पु० ಶಾಜಹಾನನ ಮಯೂರ ಸಿಂಹಾಸನ.

तख़्त-नशीन, वि० ಸಿಂಹಾಸನಾರೂಢ.

तख़्त-पोश, पु० ಆಸನದ ಮೇಲೆ ಹಾಸುವ ಬಟ್ಟೆ.

तख़्त-बंदी, स्त्री० ಮರದ ಹಲಿಗೆಗಳಿಂದ ತಯಾರಿಸಿದ ಗೋಡೆ.

तख़्त-रवाँ, पु० ಮೆರವಣಿಗೆಯ ಸಿಂಹಾಸನ; ವಿಮಾನ.

तख़्ता पु० ಹಲಿಗೆ; ಗದ್ದುಗೆ; ಮಣೆ; ಕಾಗದದ ಹಾಳೆ.

तख़्ती, स्त्री० ಚಿಕ್ಕಗದ್ದುಗೆ; ಮಣೆ; ಹಲಿಗೆ.

तगड़ा, वि० ಟೊಣಿಯ; ಬಲಶಾಲಿ.

तगना, अ० ಹೊಲಿಯಲ್ಪಡು.

तग़मा, पु० ಪದಕ.

तग़य्युर, पु० ದೊಡ್ಡ ಬದಲಾವಣೆ.

तगाई, स्त्री० ಹೊಲಿಯುವ ಕೆಲಸ ಅಥವಾ ಹೊಲಿಗೆಯ ಮಜೂರಿ.

तगादा, पु० ತಗಾದೆ; ಪೀಡಿಕೆ; ಪ್ರೇರಣೆ.

तगाना, स० ಹೊಲೆಯಿಸು; ಹೊಲಿಸು.

तग़ाफ़ुल, पु० ನಿರ್ಲಕ್ಷ್ಯ; ಉದಾಸೀನ.

तज़किरा, पु० ಉಲ್ಲೇಖ; ಚರ್ಚೆ.

तजना, स० ತ್ಯಜಿಸು; ಬಿಡು.

तजम्मुल, पु० ಸೌಂದರ್ಯ; ಸೊಬಗು; ಶೃಂಗಾರ.

तजरबा, पु० ಅನುಭವ; ಜ್ಞಾನ; ಪರೀಕ್ಷೆ.

तजरबा-कार, पु० ಅನುಭವಿ.

तजरुबा, पु० दे० **तजरबा**.

तजल्ली, स्त्री० ಪ್ರಕಾಶ; ಹೊಳಪು.

तजवीज़, स्त्री० ಅಭಿಪ್ರಾಯ; ಒಪ್ಪಿಗೆ; ತೀರ್ಪು; ನಿರ್ಣಯ; ಏರ್ಪಾಟು.

तजवीज़-सानी, स्त्री० ಪುನರ್ವಿಚಾರ.

तजाहुल, पु० ತಿಳಿದೂ ಅಜ್ಞಾನಿಯಾಗುವಿಕೆ; ಶತಮೂರ್ಖ.

तट, पु० ತೀರ; ದಂಡೆ.

तटस्थ, वि० ಗೋಜಿಗೆ ಹೋಗದವನು; ತಟಸ್ಥ.

तटिनी, स्त्री० ನದಿ.

तड़, पु० ಕೆನ್ನೆಯೇಟು ; ಪೆಟ್ಟು ; ಘುಷ್ಕೀ ಜವಿೂನು.

तड़कना, अ० ಬಿರಿ ; ಒಡೆಯು.

तड़का, पु० ಮುಂಜಾನೆ ; ಒಗ್ಗರಣೆ.

तड़कीला, वि० ಹೊಳೆಯುವ.

तड़प, स्त्री० ತಳಮಳ ; ಚಿಂತೆ.

तड़पना, अ० ತಲ್ಲಣಿಸು.

तड़पाना, स० ಪೀಡಿಸು ; ಗೋಳಾಡಿಸು.

तड़फड़ाना, अ० दे० **तड़पना.**

तड़ाग, पु० ಸರೋವರ ; ಕೊಳ.

तड़ातड़, क्रि० ಬೇಗಬೇಗನೆ.

तड़ावा, पु० ಥಳಕು ; ಆಡಂಬರ.

तड़ित, स्त्री० ವಿದ್ಯುತ್ ; ಮಿಂಚು.

तड़ी, स्त्री० ಅಂಗೈಯೇಟು; ಮೋಸ.

ततारना, स० ಬಿಸಿನೀರಿನ ಧಾರೆಯಿಂದತೊಳೆ.

ततैया, स्त्री० ಕಣಜದಹುಳು; ಕಡಜ.

तत्कालीन, वि० ಆಕಾಲದ ; ಆಗಿನ.

तत्ता, वि० ಬಿಸಿ.

तत्तो-थंबो, पु० ಸಮಾಧಾನಮಾಡುವುದು ; ಇಬ್ಬರ ಜಗಳವನ್ನು ಶಾಂತಪಡಿಸುವುದು.

तत्व, पु० ವಾಸ್ತವಿಕ ಸ್ಥಿತಿ : ನಿಜ ; ಜಗತ್ತಿನ ಮೂಲಕಾರಣ; ಪಂಚಭೂತಗಳು.

तत्वावधान, पु० ಹುಡುಕುವಿಕೆ ; ಮೇಲ್ವಿಚಾರಣೆ.

तत्ववेत्ता, स्त्री० ದರ್ಶನ ಶಾಸ್ತ್ರಜ್ಞ.

तत्पर, वि० ಸಿದ್ಧ ; ಸನ್ನದ್ಧ.

तत्परता, स्त्री० ಸಿದ್ಧತೆ; ನೈಪುಣ್ಯ ; ತತ್ಪರತೆ.

तत्र, वि० ಆಸ್ಥಳದಲ್ಲಿ ; ಅಲ್ಲಿ.

तत्रापि, अव्य० ಆದರೂ ಕೂಡ.

तथा, अव्य० ಮತ್ತು ; ಅದೇರೀತಿ ; ಹಾಗೂ.

तथापि अव्य० ಆದರೂ ; ಅದಾಗ್ಯೂ.

तथैव, अव्य० ಅದೇ ಪ್ರಕಾರ.

तथ्य, पु० ಸತ್ಯ ; ವಸ್ತುಸ್ಥಿತಿ ; ನಿಜಾಂಶ ; ಸಾರ.

तदनुसार, क्रि० ಅದಕ್ಕನುಸಾರವಾಗಿ; ಅದರಂತೆ.

तदपि, अव्य० ಆದರೂ ; ಆಮೇಲೂ.

तदबीर, स्त्री० ಉಪಾಯ ; ಯುಕ್ತಿ.

तदा, क्रि० ಆಗ ; ಆವೇಳೆಗೆ.

तदारुक, पु० ಓಡಿದವನನ್ನು ಹುಡುಕುವಿಕೆ ; ಕೆಡುಕನ್ನು ತಡೆಯುವ ವ್ಯವಸ್ಥೆ.

तदीय, सर्व० ಅದಕ್ಕೆ ಸಂಬಂಧಿಸಿದ ; ಅದರ.

तदुपरांत, क्रि० ಆಮೇಲೆ; ಅನಂತರ.

तद्रूप, वि० ಸಮಾನತೆಯುಳ್ಳ.

तन, क्रि० ಕಡೆಗೆ. (**तरफ़**) वि० ಸ್ವಲ್ಪ. पु० ಶರೀರ.

तनक, वि० दे० **तनिक.**

तनक़ीह, स्त्री० ಪರೀಕ್ಷೆ; ಶೋಧನೆ ; ತೀರ್ಪು.

तनख़ाह } स्त्री० ಸಂಬಳ ; ಪಗಾರ ;
तनख़्वाह } —**दार** पु० ಪಗಾರದ ಮೇಲೆ ಕೆಲಸಮಾಡುವವ.

तनज़, पु० ಪರಿಹಾಸ್ಯ ; ವ್ಯಂಗ್ಯ.

तनज़ीम, स्त्री० ಸಂಘಟನೆ.

तनज़ेव, स्त्री० दे० **तंजेब.**

तनज़्ज़ुल, पु० } ಪದಚ್ಯುತಿ; ತನ್ನ
तनज़्ज़ुली, स्त्री० } ಪದವಿಯಿಂದ ಕೆಳ
ಗೆಹೋಗುವುದು; ಅವನತಿ.

तन, तनहा, क्रि० ಒಬ್ಬಂಟಿಗನಾಗಿ.

तनतना, पु० ಗರ್ವ; ದರ್ಪ.

तनदेह, वि० ಚೆನ್ನಾಗಿ ಮನಸ್ಸು ಕೊಟ್ಟು ಕೆಲಸಮಾಡುವ.

तनदेही, स्त्री० ಪರಿಶ್ರಮ; ಪ್ರಯತ್ನ; ಎಚ್ಚರಿಕೆ.

तनना, अ० ಸೆಟೆ; ಹಿಗ್ಗು.

तनपरवर, वि० ತನ್ನ ಶರೀರದ ಪೋಷಣೆಗೆಮಾತ್ರ ಗಮನಕೊಡುವವ; ಸ್ವಾರ್ಥಿ.

तनसीख़, स्त्री० ರದ್ದುಮಾಡುವುದು.

तनसीफ़, स्त्री० ಎರಡಾಗಿ ವಿಭಾಗಿಸುವುದು.

तनहा, वि० ಒಂಟಿಗ; ಏಕಾಕಿ.

तनहाई, स्त्री० ಏಕಾಂತ; ಒಂಟಿಯಾಗಿರುವಿಕೆ.

तना, पु० ಮರದ ಬುಡ.

तनाज़ा, पु० ವೈರ; ಜಗಳ; ವೈಮನಸ್ಯ.

तनाना, स० ಸೆಳೆದು ಬಿಗಿ.

तनाव, स्त्री० ಡೇರೆಯ ಹಗ್ಗ.

तनावर, वि० ಶಕ್ತಿಯುಳ್ಳ; ಬಲಶಾಲಿ.

तनासुख़, पु० ಬದಲಾವಣೆ; ನಾಶವಾಗುವುದು.

तनाव, पु० ಬಿಗಿತ; ನಿಗರುವಿಕೆ; ಹಗ್ಗ.

तनिक, वि० ಸ್ವಲ್ಪ; ತುಸ. क्रि० ಕೊಂಚವಾಗಿ.

तनिया, स्त्री० ಲಂಗೋಟಿ.

तनी, स्त्री० ನವಾರ; ನಾಡ.

तनु, पु० ದೇಹ; ಶರೀರ.

तनुता, स्त्री० ತೆಳ್ಳಗಿರುವಿಕೆ; ಕೃಶವಾಗಿರುವುದು.

तनूमंद, वि० ಶಕ್ತಿಯುಳ್ಳ; ಬಲಶಾಲಿ.

तनेना, वि० ವಕ್ರವಾದ; ಬಿಗಿಯಾಗಿ ಎಳೆದ; ಕೋಪಗೊಂಡ.

तन्नाना, अ० ನಿಗರು; ಸೆಡೆ.

तन्मय, वि० ಮಗ್ನ.

तप, पु० ತಪಸ್ಸು; ತಾಪ; ಜ್ವರ.

तपना, अ० ಬಿಸಿಯಾಗು; ಉರಿ; ಸಂತಾಪಗೊಳ್ಳು.

तपश्चर्या, स्त्री० ತಪಸ್ಸು.

तपाक, पु० ಹುರುಪು; ಉತ್ಸಾಹ.

तपाना, स० ಬಿಸಿಮಾಡು; ಕಾಯಿಸು; ದುಃಖಗೊಳಿಸು.

तपिश, स्त्री० ಉಷ್ಣ; ಸೆಕೆ; ಕಾವು.

तपेदिक़, पु० ಕ್ಷಯರೋಗ.

तप्त, वि० ಬಿಸಿಯಾದ; ದುಃಖಿತ; ಪೀಡಿತ.

तफ़ज़ील, स्त्री० ಗೌರವ; ಗಣ್ಯತೆ; ಮಾನ್ಯತೆ.

तफ़तीश, स्त्री० ಶೋಧಿಸುವುದು.

तफ़रका, पु० ಭೇದಭಾವ; ವೈಮನಸ್ಯ; ವಿಯೋಗ.

तफ़रीक, स्त्री० ಭೇದ; ವ್ಯತ್ಯಾಸ.

तफ़रीह, स्त्री० ಪರಿಹಾಸ್ಯ; ವಿನೋದ; ಕುಚೋದ್ಯ; ಮನೋರಂಜನೆ.

तफ़सीर, तफ़सील, स्त्री० ವಿವರ; ತಪಸೀಲು.

तफ़सीलवार, वि० ವಿವರಗಳನ್ನೊಳಗೊಂಡ.

तफ़ावत, पु० ದೂರ; ವ್ಯತ್ಯಾಸ.

तब, अव्य० ಆಗ; ಆವಾಗ.

तबई, वि० ಸ್ವಾಭಾವಿಕ.

तबक़, पु० ತಗಡು; ರೇಕು.

तबक़गर, पु० ಚಿನ್ನ ಬೆಳ್ಳಿ ಇವುಗಳಿಂದ ತಗಡುಗಳನ್ನು ತಯಾರಿಸುವವ.

तबक़ा, पु० ಖಂಡ; ವಿಭಾಗ; ಜನಾಂಗ.

तबदील, वि० ಬದಲಾವಣೆ ಹೊಂದಿದ.

तबदीली, स्त्री० ಪರಿವರ್ತನೆ; ಬದಲಾವಣೆ.

तबद्दुल, पु० ಬದಲಾವಣೆಯಾಗುವುದು; ಪರಿವರ್ತನೆ.

तबर, पु० ಕೊಡಲಿ.

तबल, पु० ದೊಡ್ಡ ಡೋಲು; ನಗಾರಿ.

तबलची, पु० ತಬಲಾ ಬಾರಿಸುವವನು.

तबला, पु० ತಬಲಾ; ತಬಲೆ.

तबलिया, पु० दे० **तबलची.**

तबलीग़, पु० ಮತಪ್ರಚಾರ; ಇತರರನ್ನು ತನ್ನ ಮತಕ್ಕೆ ಸೇರಿಸಿಕೊಳ್ಳುವುದು.

तबस्सुम, पु० ಹುಸಿನಗು.

तबाक़, पु० ದೊಡ್ಡ ಹರಿವಾಣ.

तबादला, पु० ಬದಲಾವಣೆ; ಸ್ಥಾನಪರಿವರ್ತನೆ; ಸ್ಥಾನಪಲ್ಲಟ; ವರ್ಗ.

तबाबत, स्त्री० ಚಿಕಿತ್ಸೆ.

तबाह, वि० ಹಾಳಾದ; ನಾಶವಾದ.

तबाही, स्त्री० ನಾಶ; ಹಾಳು.

तबीअत, स्त्री० दे० **तबीयत.**

तबीब, पु० ವೈದ್ಯ; ಚಿಕಿತ್ಸಕ.

तबीयत, स्त्री० ದೇಹಸ್ಥಿತಿ; ಆರೋಗ್ಯ; ಪ್ರಕೃತಿ; ಚಿತ್ತ; ಸ್ವಭಾವ.

तबीयतदार, पु० ಭಾವಜ್ಞ; ರಸಜ್ಞ.

तबीयतदारी, वि० ರಸಜ್ಞತೆ.

तब्बाह, पु० ಅಡಿಗೆಯವನು.

तभी, क्रि० ಆಗಲೆ; ಆಗತಾನೆ.

तमंचा, पु० ಬಂದೂಕು; ಪಿಸ್ತೂಲು.

तम, पु० ಅಂಧಕಾರ.

तमअ, स्त्री० ಲೋಭ; ಆಸೆ.

तमक, पु० ಆವೇಶ; ಕ್ರೋಧ; ಉದ್ವೇಗ.

तमकनत, स्त्री० ವೈಭವ; ಗರ್ವ.

तमकना, अ० ರೇಗು; ಸಿಡುಗುಟ್ಟು; ಮಿಣುಕು.

तमग़ा, पु० ಬಿರುದಿನ ಬಿಲ್ಲೆ; ಮೆಡಲ್.

तमचर, पु० ರಾಕ್ಷಸ; ಗೂಬೆ.

तमचुर, पु० ಕೋಳಿ.

तमतमाना, वि० ಮಿಣಕು; ಮುಖ ಕೆಂಪಾಗು.

तमद्दुन, पु० ನಾಗರಿಕತೆ.

तमन्ना, स्त्री० ಬಯಕೆ; ಇಚ್ಛೆ.

तमर्रुद, पु० ಉದ್ದಂಡತನ.

तमस, पु० ಕತ್ತಲೆ; ತಮೋಗುಣ.

तमसील, पु० ಉದಾಹರಣೆ; ದೃಷ್ಟಾಂತ; ಉಪಮೆ.

तमस्सुक, पु० ಸಾಲದಕರಾರು ಪತ್ರ.

तमहीद, स्त्री० ಪೀಠಿಕೆ; ಮುನ್ನುಡಿ; ಪ್ರಸ್ತಾವನೆ.

तमाँचा, पु० दे० **तमाचा.**

तमा, स्त्री० ರಾತ್ರಿ; ಇಚ್ಛೆ; ಲೋಭ.

तमाई, स्त्री० ರಂಟೆಹೊಡೆಯುವುದು.

तमाकू / **तमाखू** } पु० ಹೊಗೇಸೊಪ್ಪು; ತಂಬಾಕು.

तमाचा, पु० ಕೆನ್ನೆ ಏಟು.

तमादी, स्त्री० ಮಾಯಿದೆ ಅಥವಾ ಅವಧಿ ಕಳೆದು ಹೋಗುವಿಕೆ; ಕಾಲಾವಧಿ.

तमाम, वि० ಸಮಸ್ತ; ಪೂರ್ಣ; ಎಲ್ಲ.

तमाल, पु० ತಮಾಲವೃಕ್ಷ; ಹೊಂಗೇಗಿಡ.

तमाशगीर / **तमाशबीन** } पु० ತಮಾಷೆನೋಡುವವನು; ಲಂಪಟ; ವಿಲಾಸಪ್ರಿಯ.

तमाशबीनी, स्त्री० ವಿಲಾಸಪ್ರಿಯತೆ.

तमाशा, पु० ತಮಾಷೆ; ವಿಚಿತ್ರ ಕಾರ್ಯ; ಮನೋರಂಜನೆಗಾಗಿ ನೋಡುವ ಆಟನೋಟ.

तमाशाई, पु० ತಮಾಷೆನೋಡುವವನು.

तमीज़, स्त्री० ನಡವಳಿಕೆ; ಸ್ವಭಾವ.

तमोल, पु० ವೀಳೇದೆಲೆಬೀಡ; ಪಾನ್ ಪಟ್ಟಿ.

तमोलिन, स्त्री० दे० **तंबोलिन.**

तमोली, पु० दे० **तंबोली.**

तम्बीह, स्त्री० ವಿದ್ಯೆ; ಉಪದೇಶ.

तय, वि० ಪೂರೈಸಿದ; ಠರಾಯಿಸಿದ; ನಿಶ್ಚಯಿಸಿದ.

तयार, वि० दे० **तैयार.**

तरंग, स्त्री० ತೆರೆ; ಅಲೆ.

तरंगिणी, स्त्री० ನದಿ.

तरंगित, पु० ಅಲೆಗಳು ಏಳುತ್ತಿರುವ.

तर, वि० ತೊಯಿದ; ಆರ್ದ್ರ.

तरकश / **तरकस** } पु० ಬತ್ತಳಿಕೆ.

तरका, पु० ಯಾವನಾದರೊಬ್ಬನ ವಾರಸುದಾರರಿಗೆ ಅವನ ಮರಣಾನಂತರ ದೊರೆಯುವ ಆಸ್ತಿ.

तरकारी, स्त्री० ಕಾಯಿಪಲ್ಯ; ವ್ಯಂಜನಗಳು; ತರಕಾರಿ.

तरकी, स्त्री० ಒಂದು ವಿಧವಾದ ಕರ್ಣಾಭರಣ.

तरकीब, स्त्री० ಉಪಾಯ; ಹಂಚಿಕೆ.

तरकुल, पु० ತಾಳೆಯಮರ.

तरक़्क़ी, स्त्री० ಉನ್ನತಿ.

तरखान, पुं० ಬಡಗಿ ಕೆಲಸದವ.
तरग़ीब, स्त्री० ಉದ್ರೇಕ.
तरजना, अ० ಗದ್ದರಿಸು; ಬೈಯು.
तरजनी, स्त्री० ತೋರುಬೆಟ್ಟು.
तरजीह, स्त्री० ಪ್ರಾಮುಖ್ಯತೆಯನ್ನು ಕೊಡುವುದು.
तरजुमा, पुं० ಭಾಷಾಂತರ.
तरतराना, अ० ಬಡಬಡಿಸು; ಜಂಭ ಕೊಚ್ಚು.
तरतीब, स्त्री० ಕ್ರಮ.
तरतीबवार, क्रि० ಕ್ರಮಶಃ.
तरदीद, स्त्री० ಖಂಡನೆ.
तरद्दुद, पुं० ಚಿಂತೆ; ಯೋಚನೆ.
तरना, अ० ದಾಟು; ಪಾರಾಗು.
तरफ़, स्त्री० ಪಾರ್ಶ್ವ; ಪಕ್ಕ; ಪಕ್ಷ; ಕಡೆ; ದಿಕ್ಕು.
तरफ़दार, वि० ಒಂದು ಪಕ್ಷಕ್ಕೆ ಸೇರಿದವ; ಸಹಾಯಕ; ಪಕ್ಷ ಪಾತ ಮಾಡುವವ.
तरफ़दारी, स्त्री० ಪಕ್ಷಪಾತ.
तरफ़ैन, पुं० ಉಭಯ ಪಕ್ಷಗಳು; ಎರಡೂ ಕಡೆಯವರು.
तरबतर, वि० ತೊಯ್ದುಹೋದ.
तरबियत, स्त्री० ಶಿಕ್ಷಣ; ತರಬೇತು.
तरबूज़, पुं० ಕಲ್ಲಂಗಡಿ ಹಣ್ಣು.
तरमीम, स्त्री० ಸುಧಾರಣೆ; ಸಂಶೋಧನೆ; ತಿದ್ದುಪಡಿ.
तरल, वि० ಚಂಚಲ; ತೆಳುವಾದ.
तरवन, पुं० ಕಿವಿಯ ಓಲೆ.
तलवार, स्त्री० ಖಡ್ಗ; ಕತ್ತಿ.
तरस, पुं० ದಯೆ; ಕನಿಕರ; ಕಾರುಣ್ಯ;—खाना ಕನಿಕರ ಪಡು.
तरसना, अ० ಹಂಬಲಿಸು; ಆಶಿಪಡು.
तरसाना, स० ಆಶೆತೋರಿಸು.
तरह, स्त्री० ರೀತಿ; ವಿಧ; ಯುಕ್ತಿ; —देना ಕ್ಷಮಿಸು, ಗಮನ ಕೊಡದಿರು.
तरहटी, स्त्री० ಪರ್ವತದ ಕೆಳಗಿನ ಭೂಮಿ; ತಪ್ಪಲು.
तरहदार, वि० ಸುಂದರವಾದ ರಚನೆಯುಳ್ಳ; ರೂಪವಂತ.
तरहर, क्रि० ಕೆಳಗೆ; ಕೆಳಗಡೆ.
तराई, स्त्री० ಪರ್ವತದ ಕೆಳಗಿನ ಭೂಮಿ; ತಪ್ಪಲು ಪ್ರದೇಶ.
तराज़ू, पुं० ತಕ್ಕಡಿ.
तराना, स० ಪಾರಾಗಿಸು; ಕಡೆ ಹಾಯಿಸು. पुं० ಸುಂದರವಾದ ಸಂಗೀತ.
तराबोर, वि० ಚೆನ್ನಾಗಿ ತೊಯ್ದ.
तरावट, स्त्री० ತಂಪು; ತೇವ; ಶೀತ; ಥಂಡಿ.
तराश, स्त्री० ಕೆತ್ತುವಿಕೆ; ಕತ್ತರಿಸುವಿಕೆ; ರಚನಾಕ್ರಮ; ನಿರ್ಮಾಣ.
तराशना, स० ಕತ್ತರಿಸು; ಕೆತ್ತು.
तरियाना, स० ಬಚ್ಚಿಡು. अ० ಅವಿತು ಕೊಂಡು ಕೂಡು.
तरी, स्त्री० ನಾವೆ; ದೋಣಿ; ಜವುಗು ನೆಲ; ತೇವ.

तरीक़त, स्त्री० ಹಾದಿ; ಮಾರ್ಗ; ದಾರಿ.

तरीक़ा, पुं० ರೀತಿ; ವಿಧ; ಉಪಾಯ.

तरुणापा, पुं० ಯೌವನ.

तरेंदा, पुं० ಮರದ ತುಂಡುಗಳಿಂದ ಮಾಡಿದ ದೋಣಿ.

तरेटी, स्त्री० दे० **तलहटी.**

तरेरना, स० ದುರದುರನೆ ನೋಡು; ಕಣ್ಣು ಕೆರಳಿಸಿ ನೋಡು.

तरौंदा, पुं० ಬೀಸುಕಲ್ಲಿನ ಕೆಳಗಲ್ಲು.

तरौंछी, स्त्री० ನೆಯ್ಗೆಯವನು ಮಗ್ಗದ ಬಳಿ ಕೈಯಿರಿಸಿಕೊಳ್ಳುವ ಹಲಗೆ.

तरौना, पुं० ಕರ್ಣಾಭರಣ; ಓಲೆ.

तर्क, पुं० ಪರಿತ್ಯಾಗ; ತ್ಯಜಿಸುವಿಕೆ.

तर्कश, पुं० ಬತ್ತಳಿಕೆ.

तर्कीब, स्त्री० दे० **तरकीब.**

तर्कुल, पुं० ತಾಳೆಯ ಮರ.

तर्ज़, पुं० ರೀತಿ; ವಿಧ; ಮಾದರಿ; ರೂಪ.

तर्जन, पुं० ಗದರಿಸುವಿಕೆ.

तर्जना, स० ಗದರಿಸು.

तर्जनी, स्त्री० दे० **तरजनी.**

तर्जुमा, पुं० ಭಾಷಾಂತರ; ಅನುವಾದ.

तर्रार, पुं० ಬಹಳ ಮಾತನಾಡುವವ; ಬುದ್ಧಿವಂತ.

तर्रारा, पुं० ಚುರುಕಾಗಿ ನಡೆಯುವವನು.

तर्सों, अव्य० ಆಚೆಮೊನ್ನೆ; ಆಚೆ ನಾಡಿದ್ದು. **(तरसों)**

तल, पुं० ಕೆಳಭಾಗ.

तलक, अव्य० ವರೆಗೆ; ತನಕ.

तलख़, वि० ಕಹಿ; ಅಪ್ರಿಯ.

तलछट, स्त्री० ಗಸಿ; ಚರಟ; ಮಡ್ಡಿ.

तलना, स० ಕರಿ; ಹುರಿ.

तलपट, वि० ಹಾಳಾದ; ನೆಲಸಮವಾದ.

तलफ़, वि० ನಾಶವಾದ; ನಷ್ಟವಾದ.

तलफ़ना, अ० दे० **तड़पना.**

तलफ़ी, स्त्री० ನಾಶ; ನಷ್ಟ.

तलफ़्फ़ुज़, पुं० ಉಚ್ಚಾರಣೆ.

तलब, स्त्री० ಅನ್ವೇಷಣ; ಹುಡುಕುವಿಕೆ; ಅಪೇಕ್ಷೆ; ಸಂಬಳ.

तलबगार, वि० ಬೇಡುವವ; ಅಪೇಕ್ಷಿಸುವವ.

तलबाना, पुं० ಸಾಕ್ಷಿಪಡಿ; ಭತ್ಯ; ಭತ್ತೆ.

तलबी, स्त्री० ಕರೆ.

तलबेली, स्त्री० ಕಳವಳ.

तलमलाना, अ० ತಳಮಳಿಸು; ತಲ್ಲಣಿಸು.

तलवा, पुं० ಅಂಗಾಲು; ಅಡಿ.

तलवार, स्त्री० ಕತ್ತಿ; ಕರವಾಲ.

तलहटी, स्त्री० ಪರ್ವತದ ಕೆಳಭಾಗದ ಪ್ರದೇಶ. **(तराई)**

तला, पुं० ಕೆಳಭಾಗ; ತಳ; ಎಕ್ಕಡದ ತಳಗಿನ ಅಟ್ಟೆ.

तलाक़, पुं० ವಿವಾಹವಿಚ್ಛೇದ; ಸೋಡು.

तलाब, ಪುಂ ಕೆರೆ; ಕೊಳ; ಸರೋವರ.

तलाश, ಸ್ತ್ರೀಂ ಹುಡುಕುವಿಕೆ; ತಲಾಷಿ.

तलाशी, ಸ್ತ್ರೀಂ ಪರಿಶೋಧನೆ; ಝಡ್ತಿ.

तली, ಸ್ತ್ರೀಂ ಕೆಳಭಾಗ; ತಳ; ಅಡಿ; ಗಸಿ; ಚರಟಿ.

तले, ಕ್ರಿಂ ಕೆಳಗೆ.

तलेटी, ಸ್ತ್ರೀಂ ದೇಂ **तलहटी.**

तलैया, ಸ್ತ್ರೀಂ ಚಿಕ್ಕಕೆರೆ.

तल्ख़, ವಿಂ ಕಹಿ; ಅಪ್ರಿಯ.

तल्ला, ಪುಂ ಕೆಳಗಿನ ಪದರ; ಅಂತಸ್ತು.

तवंगर, ವಿಂ ಸಿರಿವಂತ.

तवक्का, ಸ್ತ್ರೀಂ ನಂಬಿಕೆ.

तवक्कुफ़, ಪುಂ ವಿಳಂಬ; ತಡ.

तवक्कुल, ಪುಂ ಭಗವಂತನಲ್ಲಿ ಭರವಸೆಯಿಡುವುದು; ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿಯನ್ನು ಬಿಟ್ಟು ಭಗವಧ್ಯಾನದಲ್ಲಿ ತೊಡಗುವುದು.

तवज्जह, ಸ್ತ್ರೀಂ ಗಮನ; ಕೃಪಾದೃಷ್ಟಿ.

तवना, ಅಂ ಬಿಸಿಯಾಗು; ಕಾಯು.

तवा, ಪುಂ ಕಾವಲಿ; ಹೆಂಚು.

तवाज़ा, ಸ್ತ್ರೀಂ ಆತಿಥ್ಯ; ಸತ್ಕಾರ.

तवाना, ಸಂ ಬಿಸಿಮಾಡು.

तवायफ़, ಸ್ತ್ರೀಂ ಸೂಳೆ; ವೇಶ್ಯೆ.

तवारीख़, ಸ್ತ್ರೀಂ ಚರಿತ್ರೆ; ಇತಿಹಾಸ.

तवालत, ಸ್ತ್ರೀಂ ಉದ್ದ; ಬಾಹುಳ್ಯ; ತಂಟೆ; ತಕರಾರು.

तवील, ವಿಂ ಉದ್ದವಾದ; ನೀಳವಾದ.

तबेला, ಪುಂ ಕುದುರೆ ಲಾಯ.

तशख़ीस, ಸ್ತ್ರೀಂ ನಿರ್ಣಯ; ನಿಶ್ಚಯ; ಕಾಯಿಲೆಯ ಲಕ್ಷಣ.

तशदीद, ಸ್ತ್ರೀಂ ಕಠೋರವಾಗುವುದು; ಉರ್ದೂ ಫಾರಸಿ ಲಿಪಿಗಳಲ್ಲಿ ಅಕ್ಷರಕ್ಕೆ ಒತ್ತುಕೊಡಲು ಉಪಯೋಗಿಸುವ ಚಿಹ್ನೆ.

तशफ़्फ़ी, ಸ್ತ್ರೀಂ ತೃಪ್ತಿ; ಸಮಾಧಾನ.

तशबीह, ಸ್ತ್ರೀಂ ಉಪಮೆ; ಹೋಲಿಕೆ.

तशरीफ़, ಸ್ತ್ರೀಂ ಹಿರೇತನ; ದೊಡ್ಡಸ್ತಿಕೆ;—**रखना** ಕೂತುಕೊಳ್ಳು; ವಿರಾಜಿಸು;—**लाना** ದಯಮಾಡಿಸು; ಬಿಜಯಂಗೈಯು.

तशरीह, ಸ್ತ್ರೀಂ ಟೀಕೆ; ಶರೀರಶಾಸ್ತ್ರ.

तशवीश, ಸ್ತ್ರೀಂ ಚಿಂತೆ; ವ್ಯಾಕುಲತೆ.

तश्त, ಪುಂ ಒಂದುಬಗೆಯ ದೊಡ್ಡ ತಟ್ಟೆ.

तश्तरी, ಸ್ತ್ರೀಂ ಚಿಕ್ಕತಟ್ಟೆ.

तस, ಕ್ರಿಂ ಹಾಗೆ; ಆ ರೀತಿ.

तसकीन, ಸ್ತ್ರೀಂ ನೆಮ್ಮದಿ; ಸಮಾಧಾನ.

तसग़ीर, ಸ್ತ್ರೀಂ ಸಂಕ್ಷೇಪಗೊಳಿಸು.

तसदीक़, ಸ್ತ್ರೀಂ ಪ್ರತಿಪಾದನೆ; ಸಮರ್ಥನೆ.

तसदीह, ಸ್ತ್ರೀಂ ತಲೆನೋವು; ದುಃಖ; ತೊಂದರೆ.

तसद्दुक़, ಪುಂ ಬಲಿದಾನ; ನಿವಾಳಿಸುವಿಕೆ; ಸಮರ್ಪಣೆ.

तसनीफ़, ಸ್ತ್ರೀಂ ಗ್ರಂಥರಚನೆ.

तसफ़िया, **पु०** ನಿರ್ಣಯ; ರಚನೆ; ಫೈಸಲು.

तसबीर, **स्त्री०** **दे०** **तसवीर.**

तसबीह, **स्त्री०** ಜಪಮಾಲೆ.

तसर, **पु०** ಒಂದು ಬಗೆಯ ರೇಷ್ಮೆ.

तसर्रुफ़, **पु०** ಖರ್ಚು; ಮಹಾಮಹಿಮರಲ್ಲಿ ಕಾಣುವ ಅದ್ಭುತಶಕ್ತಿ.

तसमा, **पु०** ಚರ್ಮದ ಬೆಲ್ಟು.

तसला, **पु०** ಕೊಳದಪ್ಪಲೆ.

तसलीम, **स्त्री०** ನಮಸ್ಕಾರ; ಸಲಾಂ.

तसल्ली, **स्त्री०** ಸಮಾಧಾನ; ನೆಮ್ಮದಿ; ಶಾಂತಿ.

तसवीर, **स्त्री०** ಚಿತ್ರ; ಭಾವಚಿತ್ರ.

तसव्वर / **तसौवर** } **पु०** ಧ್ಯಾನ; ಕಲ್ಪನೆ; ವಿಚಾರ.

तसव्वुफ़ / **तसौवुफ़** } **पु०** ವೇದಾಂತ; ಎಲ್ಲಾ; ಸಮಸ್ತ.

तस्नीफ़, **स्त्री०** **दे०** **तसनीफ़.**

तस्फ़िया, **पु०** **दे०** **तसफ़िया.**

तस्लीम, **स्त्री०** **दे०** **तसलीम.**

तह, **स्त्री०** ತಳ; ಅಂತಸ್ತು; ಮಟ್ಟ; ಮಡಿಕೆ; ಪದರು.

तहक़ीक़, **स्त्री०** ಶೋಧನೆ; ತನಿಖೆ; ಅನುಸಂಧಾನ.

तहक़ीक़ात, **स्त्री०** ವಿಚಾರಣೆ.

तहक़ीर, **स्त्री०** ಅವಮಾನ; ಅಗೌರವ.

तहक्कुम, **पु०** ಏಕಾಧಿಕಾರ; ಪ್ರಭುತ್ವ.

तहख़ाना, **पु०** ನೆಲಮನೆ; ನೆಲಮಾಳಿಗೆ.

तहज़ीब, **स्त्री०** ನಾಗರೀಕತೆ;**—याफ़्ता** ನಾಗರಿಕ.

तहत्तुक, **पु०** ಅವಮಾನ; ಅಗೌರವ.

तहदरज़, **वि०** ಮಡಿಕೆ ಬಿಚ್ಚದಿರುವ; ಕೇವಲ ಹೊಸದು.

तहपोषी, **स्त्री०** ಲಂಗ; ಸೀರೆಯುಡುವಮುನ್ನ ಒಳಗಡೆ ಧರಿಸುವ ಪರಿಕಣೆ.

तहमद, **पु०** ಮುಂಡು.

तहम्मुल, **पु०** ಸಹಿಷ್ಣುತೆ; ಸಹನಶೀಲತೆ.

तहरीर, **स्त्री०** ಒಕ್ಕಣೆ; ಬರವಣಿಗೆ; ಲೇಖನ.

तहरीरी, **वि०** ಲಿಖಿತ.

तहलका, **पु०** ಮೃತ್ಯು; ನಾಶ; ಗೊಂದಲ.

तहवील, **स्त्री०** ವಶಕ್ಕೆ ಕೊಡುವುದು; ವಶ; ಅಡವು; ಖಜಾನೆ.

तहवीलदार, **पु०** ಕೋಶಾಧ್ಯಕ್ಷ; ಖಜಾಂಚಿ.

तहसनहस, **वि०** ಧ್ವಂಸವಾದ.

तहसील, **स्त्री०** ವಸೂಲಿ; ವಸೂಲಿಯ ಹಣ.

तहसीलना, **स०** ವಸೂಲುಮಾಡು.

तहाँ, **क्रि०** ಅಲ್ಲಿ; ಅತ್ತ.

तहाना / **तहियाना** } **स०** ಮಡಚು; ಸುತ್ತು.

तहीं, **क्रि०** ಅಲ್ಲಿಯೇ.

तही, **वि०** ಬರಿದು; ಖಾಲಿ.

तही-दस्त, **वि०** ಬರಿ ಕೈಯಿನವ; ನಿರ್ಧನ; ಬಡವ.

तही-मग़्ज़, **वि०** ಮೆದುಳಿಲ್ಲದವ; ಬುದ್ಧಿಹೀನ; ತಿಳಿಗೇಡಿ.

तहे-दिल, **स्त्री०** ಹೃದಯಾಂತರಾಳ; ಅಂತರಂಗ ಪೂರ್ವಕವಾಗಿ.

तहैयुर, **पु०** ಆಶ್ಚರ್ಯ.

तहो-बाला, **वि०** ಮೇಲೆ ಕೆಳಗಾದ; ಬುಡಮೇಲಾದ.

ता, **प्रत्य०** 'ತನ' ಎಂಬ ಅರ್ಥವನ್ನು ಕೊಡುವ ಭಾವವಾಚಕ ಪ್ರತ್ಯಯ. ಉದಾ: **मित्रता.**

तांगा, **पु०** ಟಾಂಗ; ಒಂದು ಬಗೆಯ ಜಟಕಾ ಗಾಡಿ.

तांडव, **पु०** ಪುರುಷರ ನೃತ್ಯ.

तांत } **तांतड़ी** } **स्त्री०** ಕರಳು; ನರದಿಂದ ಮಾಡಿದ ಹಗ್ಗ.

तांता, **पु०** ಶ್ರೇಣಿ; ಸಾಲು;—**बांधना** ಸಾಲಾಗಿ ನಿಲ್ಲು.

तांति, **पु०** ನೆಯ್ಗೆಯವ.

तांती, **स्त्री०** ಪಂಕ್ತಿ; ಸಾಲು; ಮಕ್ಕಳು ಮರಿ. **पु०** ನೇಯಿಗೆಯವ.

तांबा, **पु०** ತಾಮ್ರ.

तांबूल, **पु०** ವೀಳ್ಯ; ವೀಳೇದೆಲೆ.

तांवर, **स्त्री०** ಜ್ವರ; ಮೂರ್ಛಾ ರೋಗ.

ताअत, **स्त्री०** ಪೂಜೆ.

ताई, **स्त्री०** ಜ್ವರ; ದೊಡ್ಡಪ್ಪನ ಹೆಂಡತಿ.

ताईद, **स्त्री०** ಪಕ್ಷಪಾತ; ಅನುಮೋದನೆ.

ताऊ, **पु०** ತಂದೆಯ ಅಣ್ಣ. **बछिया का ताऊ** ಮುಠ್ಠಾಳ.

ताऊन, **पु०** ಪ್ಲೇಗು; ಅಂಟುರೋಗ

ताऊस, **पु०** ನವಿಲು; **तख़्त ताऊस** ಶಾಜಹಾನನು ಅನೇಕ ಕೋಟಿ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ಮಯೂರಾಕೃತಿಯ ರಾಜಸಿಂಹಾಸನ.

ताक, **स्त्री०** ನೋಟ; ಕಾಯುವಿಕೆ; ಹೊಂಚು; ಪ್ರತೀಕ್ಷೆ;—**में रहना** ಸಮಯ ಸಂದರ್ಭಗಳಿಗಾಗಿ ಕಾಯು; ಹೊಂಚು ಹಾಕು.

ताक़, **पु०** ಮಾಡ; ಗೋಡೆಯ ಮೇಲಿನ ಗೂಡು. **वि०** ವಿಷಮ ಸಂಖ್ಯೆ; ಅದ್ವಿತೀಯ.

ताक़त, **स्त्री०** ಶಕ್ತಿ; ಸಾಮರ್ಥ್ಯ; ಬಲ.

ताकना, **स०** ಅವಲೋಕಿಸು; ತಿಳಕೊಳ್ಳು; ದೃಷ್ಟಿಯಿಡು.

ताकि, **अव्य०** ಯಾತರಿಂದ; ಅದರಿಂದಾಗಿ.

ताकीद, **स्त्री०** ಖಂಡಿತವಾದ ಆಜ್ಞೆ.

ताख़ीर, **स्त्री०** ವಿಳಂಬ; ತಡ.

तागड़ी, **स्त्री०** ಉಡಿದಾರ; ಕಟಿಸೂತ್ರ.

तागना, **अ०** ದೂರದೂರ ಹೊಲಿಗೆ ಹಾಕು.

तागा, **पु०** ನೂಲು.

ताज, **पु०** ಕಿರೀಟ; ತುರಾಯಿ; ಜಡೆ.

ताज़गी, स्त्री० ನವೀನತೆ; ಉಲ್ಲಾಸ; ರಸವಂತವಾಗಿರುವಿಕೆ.

ताज़ा, वि० ಹೊಸ; ದಣಿವಾರಿದ; ಗೆಲುವಿನ; ತಾಜಾ; ಆಗತಾನೇ ತಯಾರಿಸಿದ (ಅಡಿಗೆ ಪದಾರ್ಥ); **मोटा ताज़ा** वि० ಹೃಷ್ಟಪುಷ್ಟ; ಗಟ್ಟಿಮುಟ್ಟಾದ.

ताज़ियत, स्त्री० ಸಂತಾಪವನ್ನು ಸೂಚಿಸುವಿಕೆ.

ताज़िया, पु० ಮೊಹರಂ ಹಬ್ಬದ ಕಾಲದಲ್ಲಿ ಮುಸಲ್ಮಾನರು ತಯಾರಿಸುವ ಕಾಗದದ ಮಂಟಪ.

ताजिर, पु० ವರ್ತಕ.

ताज़ी, वि० ಅರಬೀದೇಶದ. पु० ಅರಬೀದೇಶದ ಕುದುರೆ, ನಾಯಿ. स्त्री० ಅರಬೀ ಭಾಷೆ.

ताज़ीम, स्त्री० ಹಿರಿಯರ ಮುಂದೆ ಎದ್ದುನಿಂತು ಬಗ್ಗಿ ಸಲಾಂ ಮಾಡುವಿಕೆ.

ताज़ीर, स्त्री० ದಂಡನೆ.

ताज्जुब, पु० ಆಶ್ಚರ್ಯ; ವಿಸ್ಮಯ.

ताटंक, पु० ಕರ್ಣಾಭರಣ.

ताड़, पु० ತಾಳೆಮರ.

ताड़न, पु० ಬೆದರಿಕೆ; ಪ್ರಹಾರ; ದಂಡನೆ; ಏಟು.

ताड़ना, स० ದಂಡಿಸು; ಹೊಡಿ.

ताड़ी, स्त्री० ಹೆಂಡ; ಶೇಂದಿ.

तात, पु० ತಂದೆ; ಪೂಜ್ಯ ವ್ಯಕ್ತಿ; ಗುರು.

ताता / **तत्ता** } वि० ಬಿಸಿ; ಸುಟ್ಟ.

तातील, स्त्री० ರಜ; ಸೂಟಿ; ಬಿಡುವು.

तादाद, स्त्री० ಸಂಖ್ಯೆ.

तान, स्त्री० ಎಳೆಯುವಿಕೆ; ಸೆಳೆಯುವಿಕೆ; ರಾಗಾಲಾಪನೆ.

तानना, स० ನಿಗುರಿಸು; ಹಿಗ್ಗಿಸು; ವಿಸ್ತರಿಸು.

तानपूरा, पु० ತಂಬೂರಿ.

ताना, पु० ನೆಯ್ಗೆಯ ಹಾಸು; ಉಂಕಿ; ಎಗತಾಳಿ; ಗೇಲಿ. स० ಕಾಯಿಸು; ಕರಗಿಸು.

तानाबाना, पु० ಹಾಸುಹೊಕ್ಕು.

तानाशाह, पु० ಸರ್ವಾಧಿಕಾರಿ; ಡಿಕ್ಟೇಟರ.

तानी, स्त्री० ಹಾಸು; ಉಂಕಿ.

ताप, पु० ಸೆಕೆ; ಜ್ವರ; ಕಷ್ಟ.

तापतिल्ली, स्त्री० ಜ್ವರದ ಗಡ್ಡೆ.

तापना, अ० (ಬೆಂಕಿ) ಕಾಯಿಸು. स० ಕಾಯಿಸು.

तापमानयंत्र, पु० ಉಷ್ಣಮಾಪಕ ಯಂತ್ರ, ಬಾರಾಮೀಟರು.

तापा, पु० ಕೋಳಿಗಳನ್ನು ಮುಚ್ಚಿಡುವ ಗೂಡೆ.

ताफ़्ता, पु० ಒಂದು ಬಗೆಯ ಹೊಳೆಯುವ ರೇಶ್ಮೆ ವಸ್ತ್ರ.

ताफ़्तारंग, पु० ಒಂದೊಂದು ಕಡೆಯಿಂದ ಒಂದೊಂದು ಬಗೆಯಾಗಿ ಕಾಣುವ ಬಣ್ಣ.

ताब, स्त्री० *ಸಾಮರ್ಥ್ಯ; ಉಷ್ಣ; ಹೊಳಪು; ಕಾಂತಿ.

ताबखाना, पु० ರೊಟ್ಟಿ ಸುಡುವ ದೊಡ್ಡ ಒಲೆ; ರೊಟ್ಟಿ ಒಲೆ.

ताबड़तोड़, क्रि० ಎಡಬಿಡದೆ; ಒಂದೇ ಸಮನೆ

ताबा, वि० ಅಧೀನ; ವಶದಲ್ಲಿರುವ.

ताबीर, स्त्री० ಕನಸಿನ ಶುಭಾಶುಭ ಫಲಗಳು.

ताबूत, पु० ಹೆಣವನ್ನು ಇಟ್ಟು ಹೊಳಲು ತೆಗೆದುಕೊಂಡು ಹೋಗುವ ಪೆಟ್ಟಿಗೆ.

ताबे, वि० ವಶೀಭೂತ; ಅಧೀನ; ಕೈಕೆಳಗಿನ.

ताबेदार, वि० ಒಬ್ಬರ ಕೈಕೆಳಗೆ ಕೆಲಸಮಾಡುವವ; ಸೇವಕ.

ताबेदारी, स्त्री० ಚಾಕರಿ; ಅಧೀನತೆ.

तामचीनी, स्त्री० 'ಎನೇಮಲ್' ಹಾಕಿದ ತಾಮ್ರದ ಪಾತ್ರೆ.

तामना, स० ಹೊಲಹರಗುವುದು.

तामीर, स्त्री० ಮನೆಗಳನ್ನು ಕಟ್ಟುವ ಕೆಲಸ; ಕಟ್ಟಡದ ಕೆಲಸ.

तामील, स्त्री० ಆಜ್ಞೆಯನ್ನು ಪಾಲಿಸುವಿಕೆ.

ताम्मुल, पु० ಅಸಮಂಜಸ; ತಂಚಾವಂಚ.

ताम्रपत्र, पु० ತಾಮ್ರಶಾಸನ.

ताम्रचूड़, पु० ಕೋಳಿಹುಂಜ.

ताय, पु० ಉರಿ; ಬಿಸಿಲು.

तायदाद, स्त्री० दे० **तादाद**.

***तायफ़ा**, स्त्री० ವೇಶ್ಯೆ; ವೇಶ್ಯೆಯರ ಗುಂಪು.

तायर, पु० ಹಾರುವಂಥಾದ್ದು; ಪಕ್ಷಿ.

ताया, पु० ತಂದೆಯ ಅಣ್ಣ; ದೊಡ್ಡಪ್ಪ.

तार, पु० ತಂತಿ; ತಾರು; ನೂಲು; —**तार होना** ಹರಿದು ಚಿಂದಿಯಾಗುವುದು.

तारक, पु० ನಕ್ಷತ್ರ; ಕಣ್ಣು; ಉದ್ಧಾರಕ.

तारकश, पु० ಲೋಹದ ತಂತಿಯನ್ನು ತಯಾರಿಸುವವ.

तारकशी, स्त्री० ತಂತಿಯೆಳೆಯುವ ಕೆಲಸ

तारका, स्त्री० ತಾರಗೆ; ಕಣ್ಣುಗುಡ್ಡು.

तारघर, पु० ತಾರುಕೊಡುವ ಅಂಚೆ ಕಚೇರಿ; ತಂತಿ ಕಚೇರಿ.

तारबरक़ी, पु० ಟೆಲಿಗ್ರಾಂ ತಂತಿ; ಟೆಲಿಗ್ರಾಂ ಸಮಾಚಾರ.

तारना, स० ಉದ್ಧಾರಮಾಡು; ದಾಟಿಸು.

तारपीन, पु० ಕರ್ಪೂರದ ತೈಲ.

तारा, पु० ನಕ್ಷತ್ರ.

तारीक, वि० ತ್ಯಾಗಿ;—**उल दुनिया** ಸಂಸಾರದಿಂದ ಮುಕ್ತ; ಕತ್ತಲೆಯ; ಮಸುಕಾದ; ಮಬ್ಬಾದ.

तारीकी, स्त्री० ಕತ್ತಲೆ; ಅಂಧಕಾರ.

तारीख़, स्त्री० ತಾರೀಖು; ತೇದಿ.

तारीफ़, स्त्री० ಹೊಗಳಿಕೆ; ಶ್ಲಾಘನೆ; ಲಕ್ಷಣ; ಪರಿಚಯ.

तारीफ़ी, वि० ಶ್ಲಾಘ್ಯ; ಶ್ಲಾಘನೀಯ.

ताल, पु० ಅಂಗೈ; ಚಪ್ಪಾಳೆ; ತಾಳ.

ताला, पु० ಭಾಗ್ಯ; ಅದೃಷ್ಟ; ಬೀಗ; ಕೀಲಿ.

तालाब, पु० ಕೆರೆ; ಜಲಾಶಯ; ಸರೋವರ.

तालिका, स्त्री० ಬೀಗದ ಕೈ; ಸೂಚೀಪಟ್ಟಿ; ಅನುಕ್ರಮಣಿಕೆ.

तालिब, पु० ಅಭಿಲಾಷಿ; ಅನ್ವೇಷಕ.

तालिब-इल्म, पु० ವಿದ್ಯಾರ್ಥಿ.

ताली, स्त्री० ಬೀಗದ ಕೈ; ಚಪ್ಪಾಳೆ; ಚಿಕ್ಕಸರೋವರ.

तालीफ़, स्त्री० ಗ್ರಂಥರಚನೆ; ಸಂಗ್ರಹಿಸುವ ಕಾರ್ಯ; ಆಕರ್ಷಣೆ.

तालीम, स्त्री० ಶಿಕ್ಷಣ; ವಿದ್ಯಾಭ್ಯಾಸ.

तालुका, पु० ತಾಲೂಕು.

तालुक़, पु० दे० तअल्लुक़.

ताव, पु० ಸೆಕೆ; ಕಾವು; ದರ್ಪದ ಆವೇಶ; ಕಾಗದದ ಹಾಳೆ; मूछों-पर ताव देना ಹೆಮ್ಮೆಯಿಂದ ಮೀಸೆಯನ್ನು ಹುರಿಮಾಡು.

तावत्, क्रि० ಅಷ್ಟರವರೆಗೆ; ಆವರಿಯಂತ.

तावान, पु० ನಷ್ಟಕ್ಕೆ ಪರಿಹಾರ.

तावीज़, पु० ಯಂತ್ರದ ತಗಡು ತಾಯಿತಿ; ರಕ್ಷೆ; ರಕ್ಷಾಯಂತ್ರ

ताश, पु० ಇಸ್ಪೀಟಿನ ಎಲೆ.

ताशा, पु० ತಾಸೆ ಎಂಬ ತಮಟೆ.

तासीर, स्त्री० ಪ್ರಭಾವ; ಗುಣ.

तास्सुफ़, पु० ದುಃಖ.

तास्सुब, पु० ಅಸೂಯೆ.

ताहम, अ० ಆದರೂ ಕೂಡ; ಹಾಗಿದ್ದರೂ.

तिकोन / तिकोना } वि० ತ್ರಿಕೋಣಾಕಾರದ.

तिकोनिया, वि० ಮುಮ್ಮೂಲೆಯ.

तिक्का, पु० ಮಾಂಸದ ಖಂಡ.

तिक्की, स्त्री० ಇಸ್ಪೀಟಿನ ಮೂರನೆ ಬಂದು.

तिक्त, वि० ಕಹಿ.

तिखाई, स्त्री० ಖಾರ; ತೀಕ್ಷ್ಣತೆ.

तिगुना, वि० ಮೂರರಷ್ಟು; ಮುಮ್ಮಡಿ.

तिजारत, स्त्री० ವ್ಯಾಪಾರ.

तिजारी, स्त्री० ಮೂರು ದಿವಸಕ್ಕೊಮ್ಮೆ ಬರುವ ಜ್ವರ.

तिजोरी, स्त्री० ಕಬ್ಬಿಣದ ಪೆಟ್ಟಿಗೆ; ತಿಜೋರಿ.

तितना, क्रि० दे० उतना.

तितरबितर, वि० ದಿಕ್ಕಾಪಾಲಾದ; ಚಲ್ಲಾಪಿಲ್ಲಿಯಾದ.

तितली, स्त्री० ಪಾತರಗಿತ್ತಿ; ಚಿಟ್ಟೆಹುಳ.

तितिंबा, पु० ಆಡಂಬರ; ಮೋಸ; ಠಕ್ಕು.

तितिम्मा, पु० ಉಪಸಂಹಾರ; ಪರಿಶಿಷ್ಟ.

तिनकना, अ० ಕೋಪಿಸಿಕೊಳ್ಳು; ರೇಗು.

तिनका, पु० ಹುಲ್ಲುಕಡ್ಡಿ;—दांतों में लेना या दबाना ಹಲ್ಲು ಕಿರಿದು ಬೇಡುವುದು.

तिपाई, स्त्री० ಮುಕ್ಕಾಲುಮಣೆ; ಸ್ಟೂಲು.

तिफल } तिफ्ल } पु० ವಿದ್ಯಾರ್ಥಿ; ಹುಡುಗ.

तिफ़ली, स्त्री० ಚಿಕ್ಕಂದು; ಬಾಲ್ಯ.

तिबाबत, स्त्री० ಚಿಕಿತ್ಸೆ.

तिबारा, वि० ಮೂರನೆ ಸಲ.

तिब्ब, स्त्री० ಯೂನಾನಿ ವೈದ್ಯಶಾಸ್ತ್ರ.

तिमंज़िला, वि० ಮೂರು ಮಾಳಿಗೆ ಅಥವಾ ಭಾಗಗಳಿರುವ.

तिमिर, पु० ಕತ್ತಲೆ.

तिमुहानी, स्त्री० ಮೂರು ದಾರಿಗಳು ಸೇರುವ ಸ್ಥಳ.

तिय, स्त्री० ಪತ್ನಿ.

तिरछा, वि० ಡೊಂಕು; ಓರೆಕೋರೆಯಾದ.

तिरना, अ० ಈಜು; ಈಸು.

तिरपट, वि० ಡೊಂಕು; ಕಠಿಣ.

तिरपाई, स्त्री० ಮುಕ್ಕಾಲುಮಣೆ.

तिरपाल, पु० ಮನೆಗೆ ಹೊದಿಸುವ ಹುಲ್ಲು; ಹಡಗಿನತಾಟು.

तिरमिराना, अ० ಕಣ್ಣುಕತ್ತಲೆ ಕಟ್ಟುವುದು.

तिरिया, पु० ಸ್ತ್ರೀ; ಹೆಂಗಸು.

तिरियाक़, पु० ನಾಗರಹಾವಿನ ವಿಷಕ್ಕೆ ಔಷಧಕಲ್ಲು; ಎಲ್ಲಾ ರೋಗಗಳನ್ನೂ ವಾಸಿಮಾಡುವ ರಾಮಬಾಣ ಔಷಧ.

तिरोधान } तिरोभाव } पु० ಅಂತರ್ಧಾನ; ಮಾಯ.

तिरोभूत, वि० ಅದೃಶ್ಯವಾದ; ಮುಚ್ಚಿಹೋದ.

तिरोहित, वि० ಮುಚ್ಚಿರುವ.

तिल, पु० ಎಳ್ಳು; ಹುಟ್ಟುಮಚ್ಚೆ.

तिलक, पु० ಬೊಟ್ಟು; ತೈಲ.

तिलकुट, पु० ಎಳ್ಳುಂಡೆ.

तिलचट्टा, पु० ಜಿರಲೆ; ಕೊಂಡಂಗಿ.

तिलछना, अ० ತಳಮಳಿಸು.

तिलड़ी, स्त्री० ಮೂರು ಎಳೆಗಳುಳ್ಳ ಹಾರ.

तिलदानी, स्त्री० ದರ್ಜಿಯವರು ಸೂಜಿದಾರಗಳನ್ನು ಇರಿಸುವ ಚೀಲ.

तिलमिलाना, अ० ಕಣ್ಣು ಕುಕ್ಕುವುದು; ಕೋರಯಿಸು.

तिलवा, पु० ಎಳ್ಳುಂಡೆ.

तिलस्म, पु० ಇಂದ್ರಜಾಲ; ಮಂತ್ರವಿದ್ಯೆ; ಚಮತ್ಕಾರ.

तिलहन, पु० ಎಣ್ಣೆ ಬೀಜಗಳು.

तिलांजली, स्त्री० } तिलोदक, पु० } ತಿಲತರ್ಪಣ.

तिलाक़, पु० दे० तलाक़.

तिलस्मी, वि० ಮಂತ್ರಶಕ್ತಿಯ; ಚಮತ್ಕಾರವುಳ್ಳ.

तिली, स्त्री० ಎಳ್ಳು; ಪ್ಲೀಹ.

तिलोरी } तिलौरी } स्त्री० ಸಂಡಿಗೆ.

।, स० ಎಣ್ಣೆಸವರು; ಬಳಿ.
तिलौंछा, वि० ಎಣ್ಣೆಯಂತಹ.
तिल्ली, स्त्री० ಪ್ಲೀಹ; ಜ್ವರಗಡ್ಡೆ.
तिशाना, पु० ವ್ಯಂಗ್ಯ; ನೀರಡಿಕೆ.
तिसरैत, पु० ಮಧ್ಯಸ್ಥ; ಮೂರನೆಯ ಭಾಗದ ಮಾಲಿಕ.
तिसाना, अ० ಬಾಯಾರಿರುವುದು.
तिहाई, स्त्री० ಮೂರರಲ್ಲೊಂದು. ಪಾಲು.
ती, स्त्री० ಹೆಂಗಸು.
तीखा, वि० ತೀಕ್ಷ್ಣ; ಕಾರ; ಜೋರಾದ.
तीज, स्त्री० ತದಿಗೆ; ಭಾದ್ರಪದ ಶುಕ್ಲ ತೃತೀಯಾ; ಅಕ್ಷತದಿಗೆ.
तीजा, वि० ಮೂರನೆಯ.
तीत, वि० ತೀಕ್ಷ್ಣವಾದ ರುಚಿ; ಕರ; ಕಹಿ.
तीतर, पु० ಗೌಜಲ ಹಕ್ಕಿ.
तीता, वि० दे० **तीत.**
तीमारदारी, स्त्री० ಸೇವೆಮಾಡುವಿಕೆ.
तीय, स्त्री० ಹೆಂಡತಿ; ಹೆಂಗಸು.
तीरंदाज़, पु० ಬಿಲ್ಲುಗಾರ; ಬಿಲ್ಲಾಳು.
तीरंदाज़ी, स्त्री० ಬಿಲ್ಲುಗಾರಿಕೆ.
तीर, पु० ದಡ; ದಂಡೆ; ಬಾಣ.
तीर्थ, पु० ಯಾತ್ರಸ್ಥಳ.
तीर्थ-राज, पु० ಪ್ರಯಾಗ.
तीर्थाटन, पु० ತೀರ್ಥಯಾತ್ರೆ.
तीली, स्त्री० ಬಿದುರು ದಬ್ಬೆ; ಬಿಜಿಗೆ; ದೊಡ್ಡ ಹುಲ್ಲುಕಡ್ಡಿ.
तीव्र, वि० ತೀಕ್ಷ್ಣ; ಬಹಳ ಬಿಸಿ.
तीसर / तीसरा वि० ಮೂರನೆಯ.
तीसी, स्त्री० ಅಗಸೆಸೊಪ್ಪು.
तुंग, वि० ಎತ್ತರ; ಉನ್ನತ.
तुंड, पु० / **तुंडि,** स्त्री० ಮುಖ; ಮೂತಿ; ಕೊಕ್ಕು.
तुंद, पु० ಹೊಟ್ಟೆ; ಉದರ.
तुंदिल, वि० ಬೊಜ್ಜು ಬೆಳೆದ.
तुंदी, स्त्री० ಹೊಕ್ಕಳು.
तुंदैल / तुंदैला वि० ಬೊಜ್ಜು ಬೆಳದ; ಬೊಜ್ಜ.
तुंबा, पु० दे० **तूंबा.**
तुंबिका / तुंबी स्त्री० ಚಿಕ್ಕಸೋರೆಕಾಯಿ; ಸೋರೆ ಬುರುಡೆ.
तुअना, अ० ತೊಟ್ಟಿಕ್ಕು; ಬೀಳು.
तुअर, पु० ತೊಗರಿ.
तुक, स्त्री० ಪದ್ಯ; ಹಾಡಿನ ಒಂದು ಚರಣ; ಪ್ರಾಸ.
तुकबंदी, स्त्री० ಬೆಲೆಯಿಲ್ಲದ ಕವನ ಕಟ್ಟುವಿಕೆ; ಪ್ರಾಸಕ್ಕಾಗಿ ಕವಿತೆ.
तुकमा, पु० ಗುಂಡಿಹಾಕುವಕಾಜಾ.
तुकांत, पु० ಅಂತ್ಯಾನುಪ್ರಾಸ.
तुक्कड़, पु० ಬೆಲೆಯಿಲ್ಲದ ಕವನ ಕಟ್ಟುವವನು.
तुक, पु० ಹೊಟ್ಟು.
तुख़्म, पु० ಬೀಜ.
तुगलक, पु० ಮುಖಂಡ; ಮುಂದಾಳು; ನಾಯಕ.
तुच्छ, वि० ನಿಸ್ಸಾರ; ಅಲ್ಪ.
तुच्छता, स्त्री० ಕ್ಷುದ್ರತನ; ನೀಚತನ.

तुज़ुक, पुं० ವೈಭವ; ನಿಯಮ.

तुड़वाना, स० ಮುರಿಸು; ಚಿಲ್ಲರೆ ಮಾಡಿಸು.

तुड़ाई, स्त्री० ಬಿಡಿಸುವಿಕೆ; ಮುರಿಸುವಿಕೆ; ನಾಣ್ಯಗಳನ್ನು ಮುರಿಸುವುದಕ್ಕೆ ಕೊಡುವ ವಟ್ಟ.

तुड़ाना, स० दे० **तुड़वाना.**

तुतराना } **तुतलाना** } अ० ತೊದಲು ತೊದಲಾಗಿನುಡಿ; ತೊದಲು ಮಾತನಾಡು.

तुतली, वि० **तोतली.**

तुनक, वि० ಬಲಹೀನ; ಕೋಮಲ —**मिज़ाज** ಜಾಗ್ರತೆ ಸಿಟ್ಟಿಗೇಳುವ ಸ್ವಭಾವದ.

तुपक, स्त्री० ಬಂದೂಕು.

तुफ़ंग, स्त्री० ಫಿರಂಗಿ.

तुफ़ैल, पुं० ಸಾಧನೆ; ದಾರಿ.

तुभना, अ० ಚಕಿತನಾಗು.

तुमड़ी, स्त्री० ಸೋರೆ ಬುರುಡೆ.

तुमुल, पुं० ಸೈನ್ಯದ ಕೋಲಾಹಲ; ಸೈನ್ಯದ ಭಯಂಕರ ಯುದ್ಧ.

तुरंग, पुं० ಕುದುರೆ. वि० ವೇಗವಾಗಿ ಹೋಗುವ.

तुरंत, क्रि० ಬೇಗನೆ; ತತ್‌ಕ್ಷಣ.

तुरई, स्त्री० ಹೀರೆಕಾಯಿ.

तुरक, पुं० दे० **तुर्क.**

तुरकी, वि० ತುರ್ಕೀದೇಶಕ್ಕೆ ಸಂಬಂಧಪಟ್ಟ.

तुरग, पुं० ಕುದುರೆ.

तुरत, क्रि० दे० **तुरंत.**

तुरफ़ा, वि० ವಿಲಕ್ಷಣವಾದ.

तुरबत, स्त्री० ಸಮಾಧಿ.

तुरही, स्त्री० ತುತ್ತೂರಿ.

तुराई, स्त्री० ಗಷ್ಟಿಗೆ.

तुर्क, पुं० ತುರ್ಕೀದೇಶದ ನಿವಾಸಿ.

तुर्किन, स्त्री० ತುರ್ಕಿ ಹೆಂಗಸು.

तुर्की, वि० ತುರ್ಕೀಸ್ಥಾನದ. स्त्री० ತುರ್ಕೀಭಾಷೆ.

तुर्तफुर्त, क्रि० ಬೇಗನೆ; ಥಟ್ಟನೆ.

तुर्तुरा, वि० ಸೂಟಿಯಾದ; ಚುರುಕಾದ.

तुर्बत, स्त्री० दे० **तुरबत.**

तुर्रा, पुं० ಮುಂಗುರುಳು; ಗುಂಗುರು ಕೂದಲು; ತುರಾಯಿ;—**यह कि** ಆಮೇಲೆ ಏನೆಂದರೆ.

तुर्श, वि० ಹುಳಿಯಾದ.

तुर्शरू, वि० ತೀಕ್ಷ್ಣಸ್ವಭಾವದ.

तुर्शाना, अ० ಹುಳಿಯಾಗು.

तुर्शी, स्त्री० ಹುಳಿ.

तुलना, अ० ತೂಕಮಾಡಲ್ಪಡು. स्त्री० ಹೋಲಿಕೆ; ತಾರತಮ್ಯ.

तुलवाना, स० ತೂಕಮಾಡಿಸು.

तुला, स्त्री० ತಕ್ಕಡಿ; ತೂಕ; ಅಳತೆ; ಸಾಟಿ.

तुलाई, स्त्री० ತೂಕಮಾಡುವುದು ಅಥವಾ ತೂಕಮಾಡಿದುದರ ಮಜೂರಿ.

तुलाना, अ० ಸಮೀಪಿಸು; ಸರಿಹೋಗು.

तुलावा, ಪು० ಗಾಡಿಯ ಅಚ್ಚುಮರ; ಇರ್ಸುರ.

तुल्य, ವಿ० ಸಮಾನ.

तुवर, ವಿ० ಒಗರಾದ. ಪು० ಒಗರು ರುಚಿ; ತೊಗರಿ.

तुषार, ಪು० ಮಂಜುಗಡ್ಡೆ; ಮಂಜು; ಚೀನೀ ಕರ್ಪೂರ.

तुष्ट, ವಿ० ಪ್ರಸನ್ನ.

तुष्टता, ಸ್ತ್ರೀ० ಸಂತೋಷ.

तुष्टि, ಸ್ತ್ರೀ० ಪ್ರಸನ್ನತೆ.

तुसी, ಸ್ತ್ರೀ० ಹೊಟ್ಟು.

तुहफ़ा, ಪು० ದೇ० **तोहफ़ा.**

तुहमत, ಸ್ತ್ರೀ० ದೇ० **तोहमत.**

तुहिं, ಸರ್ವ० ನಿನಗೆ; ನಿನ್ನನ್ನು.

तुहिन, ಪು० ಮಂಜು; ಬೆಳದಿಂಗಳು.

तूंबा, ಪು० ಕಹಿಸೋರೆ.

तूंबी, ಸ್ತ್ರೀ० ಸೊರೆ ಬುರುಡೆ; ಸೊರೆ ಬುರುಡೆಯಿಂದ ಮಾಡಿದಪಾತ್ರ.

तूअर, ಪು० ತೊಗರಿ.

तूख, ಪು० ಕಡ್ಡಿ; ಹುಲ್ಲುಕಡ್ಡಿ.

तूणीर, ಪು० ಬತ್ತಳಿಕೆ; ನಿಷಂಗ.

तूत, ಪು० ಅರಗಿಣಿ; ಪೀಪಿ.

तूतिया, ಪು० ಮೈಲು ತುತ್ತ.

तूती, ಸ್ತ್ರೀ० ಒಂದುಜಾತಿಯ ಚಿಕ್ಕಗಿಳಿ; —**बोलना** ಪ್ರಬಲತೆ ಹೊಂದು.

तूदा, ಪು० ರಾಶಿ; ಎಲ್ಲೆಯುಗಡಿ; ಬಂದೂಕು ಬಾಣ ಮುಂತಾದ ಅಸ್ತ್ರಗಳ ಪ್ರಯೋಗವನ್ನು ಕಲಿಸಲು ಇರುವ ಮಣ್ಣುಗುಡ್ಡೆ.

तूना, ಅ० ಸೋರು; ಬಸಿ; ಜಿನುಗು; ಗರ್ಭಸ್ರಾವವಾಗು.

तूनीर, ಪು० ದೇ० **तूणीर.**

तूफ़ान, ಪು० ಬಿರುಗಾಳಿ; ಸುಳಿಗಾಳಿ; ಗದ್ದಲ; ಆಪತ್ತು; ಉಪದ್ರವ.

तूफ़ानी, ವಿ० ಬಿರುಗಾಳಿಯ; ಪ್ರಚಂಡವಾದ; ಉಪದ್ರವಕೊಡತಕ್ಕ.

तूमड़ी, ಸ್ತ್ರೀ० ಸೋರೆಬುರುಡೆ; ಪುಂಗೀವಾದ್ಯ.

तूमना, ಸ० ಎಳೆ ಎಳೆಯಾಗಿ ಬಿಡಿಸು; ಎಕ್ಕು; ನೀವು; ರಹಸ್ಯವನ್ನು ಬಹಿರಂಗಪಡಿಸು.

तूमार, ಪು० ಅಧಿಕಪ್ರಸಂಗ; ಕಗ್ಗ.

तूर, ಪು० ನಗಾರಿ. ಸ್ತ್ರೀ० ತೊಗರಿ.

तूल, ಪು० ಹತ್ತಿ; ಗಾಢವಾದ ಕೆಂಪು ಬಣ್ಣ. ವಿ० ತುಲ್ಯ; ಸಮಾನವಾದ.

तूलना, ಸ० ಗಾಡಿಯ ಚಕ್ರಕ್ಕೆ ಎರೆಯೆಣ್ಣೆ ಹಾಕು.

तूलिका, तूली ಸ್ತ್ರೀ० ತೂಕದ ಕೋಲು; ಬಣ್ಣಹಾಕುವ ಕುಂಚಿಗೆ; ತೂಲಿಕೆ.

तूस, तूसा ಪು० ಹೊಟ್ಟು; ಸಿಡಿಮದ್ದಿನ ಕೋಟಿ.

तूसदान, ಪು० ತುಪಾಕಿಯದಸ್ತು.

तूसना, ಸ० ತೃಪ್ತಿಪಡಿಸು. ಅ० ತೃಪ್ತಿಹೊಂದು; ಕಂದು; ಬಾಡು.

तृण, ಪು० ಹುಲ್ಲು.

तृतीय, ವಿ० ಮೂರನೆಯ.

तृप्त, ವಿ० ಪ್ರಸನ್ನ.

तृषा, ಸ್ತ್ರೀ० ಬಾಯಾರಿಕೆ; ಆಸೆ.

तृषित, वि० ಬಾಯಾರಿದ; ನೀರ ಡಿಕೆಯುಳ್ಳ.

तृष्णा, स्त्री० ಬಾಯಾರಿಕೆ; ಆಶೆ.

तें, प्रत्य० ಇಂದ; ಒಂದಿಗೆ.

तेंदुआ, पु० ಬೆಕ್ಕು ಚಿರತೆ ಇವುಗಳ ಜಾತಿಗೆ ಸೇರಿದ ಒಂದು ಮೃಗ.

ते, सर्व० ಅವರು; ಅವು.

तेग़, स्त्री० ಕತ್ತಿ; ಖಡ್ಗ.

तेग़ा, पु० ಖಡ್ಗ; ಒಂದು ಪ್ರಕಾರದ ಕುಸ್ತಿ ಹಿಡಿತ.

तेज, पु० ಕಾಂತಿ; ಪರಾಕ್ರಮ; ಪ್ರತಾಪ.

तेज़, वि० ಹರಿತವಾದ; ತೀಕ್ಷ್ಣವಾದ; ಚುರುಕಾದ.

तेजपात, पु० ಲವಂಗ ಪತ್ರೆ.

तेजसी, वि० ಪರಾಕ್ರಮಿ; ತೇಜಸ್ವಿ.

तेज़ाब, पु० ದ್ರಾವಕ; ಆಮ್ಲ.

तेज़ाबी, वि० ದ್ರಾವಕಕ್ಕೆ ಸಂಬಂಧಪಟ್ಟ.

तेज़ी, स्त्री० ತೀವ್ರತೆ; ಚಟುವಟಿಕೆ; ವೇಗ; ಪ್ರಚಂಡತನ; ಚುರುಕು.

तेरस, स्त्री० ತ್ರಯೋದಶಿ.

तेरहवीं, स्त्री० ಮೃತಹೊಂದಿದ ೧೩ನೇ ದಿನ ಮಾಡುವ ಗೃಹಶಾಂತಿ; ವೈಕುಂಠಸಂತರ್ಪಣೆ.

तेल, पु० ಎಣ್ಣೆ; ತೈಲ.

तेलहन, स्त्री० ಎಣ್ಣೆ ಬೀಜಗಳು; ಎಣ್ಣೆಯ ಕಾಳು.

तेलहा, वि० ಎಣ್ಣೆಯಿರುವ; ಎಣ್ಣೆಯಂತೆ ಹೊಳೆಯುವ; ಜಿಡ್ಡಾದ.

तेलिन, स्त्री० ಗಾಣಿಗಿತ್ತಿ; ಗಾಣಿಗರವಳು.

तेलिया, वि० ಎಣ್ಣೆಯ ಬಣ್ಣದ; ಎಣ್ಣೆಗೆಂಪು;—कुमैत,—सुरंग ಕೆಂಗಪ್ಪು ಬಣ್ಣ.

तेली, पु० ಗಾಣಿಗ; ತೇಲಿ.—का बैल ಯಾವಾಗಲೂ ಕೆಲಸದಲ್ಲಿ ಮುಳುಗಿರುವ ವ್ಯಕ್ತಿ.

तेवर, पु० ಕೋಪದದೃಷ್ಟಿ; ನೋಟ;—चढ़ना ಕೋಪದಿಂದ ಕಣ್ಣು ಕೆರಳು;—बदलना या बिगड़ना ಕೋಪಿಸಿಕೊಳ್ಳು.

तेवराना, अ० ತಲೆತಿರುಗು; ಕಣ್ಣುಕತ್ತಲಾಗು.

तेवरी, स्त्री० ಸಿಟ್ಟು; ಹುಬ್ಬುಗಂಟು.

तेवहार, पु० दे० त्योहार.

तेहरा, वि० ಮೂರು ಪದರಿನ; ಮೂರು ಮಡಿಕೆಯ.

तेहराना, स० ಮೂರು ಪದರಾಗಿ ಮಡಚು.

तेहवार, पु० दे० त्योहार.

तेहा, पु० ಅಹಂಕಾರ; ಕೋಪ.

तैं, अव्य० ಇಂದ; ಒಡನೆ. सर्व० ನೀನು.

तै, पु० ತೀರ್ಮಾನ; ಇತ್ಯರ್ಥ; ಪೂರ್ತಿ. क्रि० ಅಷ್ಟು.

तैनात, वि० ನೇಮಿಸಲ್ಪಟ್ಟ.

तैनाती, स्त्री० ನಿಯೋಗ; ನೇಮಕ; ನೇಮಣೂಕಿ.

तैयार, वि० ಸಿದ್ಧ; ತಯಾರಾದ; ಅಣಿಯಾದ; ಹಾಜರಿರುವ.

तैयारी, स्त्री० ಸಿದ್ಧತೆ; ತಯಾರಿ; ತತ್ಪರತೆ.

तैरना, अ० ಈಸು; ಈಜು.

तैराई, स्त्री० ಈಜುವಿಕೆ; ಈಜಾಡಿದ ಸಲುವಾಗಿ ಸಿಕ್ಕುವ ಹಣ.

तैराक, वि० ಈಜುಗಾರ; ಈಜುವುದನ್ನು ಬಲ್ಲವ.

तैराना, स० ಈಜಾಡಿಸು.

तैल, पु० ಎಣ್ಣೆ; (तेल).

तैश, पु० ಆವೇಶ; ರೋಷ; ಕೋಪ.

तैसा, वि० ಅಂಥ; ಆವಿಧವಾದ.

तैसे, क्रि० ಹಾಗೆ.

तोंद, स्त्री० ಬೊಜ್ಜು.

तोंदल, वि० ಬೊಜ್ಜಿನವ; ಬೊಜ್ಜ.

तो, अव्य० ಆಗ; ಆವಾಗ; ಆದರೆ; ಹಾಗಾದರೆ.

तोड़, पु० ಮುರಿಯುವಿಕೆ; ವರಸೆ; ಬಾರಿ ಸಲ.

तोड़ना, स० ಒಡೆ; ಮುರಿ; ಕೊಯ್ಯು; ತುಂಡರಿಸು.

तोड़-फोड़, पु० ಒಡೆಯುವಿಕೆ; ಮುರಿಯುವಿಕೆ

तोड़ा, पु० ತೋಡಾ ಎಂಬ ಆಭರಣ; ಹಣದ ಚೀಲ; ನದೀತೀರ; ಮೆಕ್ಕಲುಭೂಮಿ; ಹಾನಿ; ಸರಬತ್ತಿ.

तोड़ी, स्त्री० ಅಗಸೆ, ಸಾಸುವೆಜಾತಿಯ ಎಣ್ಣೇ ಬೀಜಗಳು; ನಾಗದಂತ; ಇರಿಸುವ ಗೂಡಿನಂತಹ ಸ್ಥಳ.

तोतराना, अ० दे० तुतलाना.

तोतला, वि० ತೊದಲಾಡುವ; ತೊದಲು ಮಾತಾಡುವ; ಅಸ್ಪಷ್ಟವಾಗಿ ಉಚ್ಚಾರಣೆ ಮಾಡುವ.

तोतलाना, अ० दे० तुतलाना.

तोता, पु० ಗಿಳಿ; ಗಿಣಿ.

तोताचश्म, पु० ಬೇಗನೆ ಬಣ್ಣ ಬದಲಾಯಿಸುವವ.

तोती, स्त्री० ಹೆಣ್ಣುಗಿಳಿ; ಉಪಪತ್ನಿ.

तोदन, पु० ಚಾವುಟಿ; ಕೊರಡ; ವ್ಯಥೆ; ಕಷ್ಟ.

तोप, स्त्री० ತುಪಾಕಿ; ತೋಪು; ಫಿರಂಗಿ; ಬಂದೂಕು.

तोपख़ाना, पु० ಫಿರಂಗಿಗಳ ಭಂಡಾರ; ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಇಟ್ಟಿರುವ ಸ್ಥಳ.

तोपची, पु० ತೋಪು ಹಾರಿಸುವವ.

तोपना, स० ಗುಂಡು ಹಾರಿಸು.

तोपा, पु० ದಾಟು ಹೊಲಿಗೆ; ಟಾಕ.

तोफ़ा, वि० ಉತ್ತಮವಾದ. पु० ಕಾಣಿಕೆ.

तोबड़ा, पु० ಕುದುರೆಯ ಮೂತಿಗೆ ಕಟ್ಟುವ ಹುರುಳಿ ಚೀಲ.

तोबा, स्त्री० ಮಾಡಿದ ಅಪರಾಧವನ್ನು ಮತ್ತೊಮ್ಮೆ ಮಾಡುವುದಿಲ್ಲವೆಂದು ಹೇಳುವುದು.

तोम, पु० ರಾಶಿ; ಗುಂಪು; ಸಮುದಾಯ.

तोमड़ी, स्त्री॰ ಸೋರೆಬುರುಡೆ.

तोमर, पु॰ ಭಲ್ಲೆ; ಈಟಿ.

तोय, पु॰ ನೀರು.

तोयद, पु॰ ಮೇಘ; ಮೋಡ; ತುಪ್ಪ.

तोरई, स्त्री॰ ಹೀರೇಕಾಯಿ.

तोल, पु॰ ತೂಕ.

तोलन, पु॰ ತೂಕಮಾಡುವಿಕೆ.

तोलना, स॰ ತೂಕಮಾಡು; ತೂಗು; ಹೋಲಿಸು.

तोला, पु॰ ಒಂದು ರೂಪಾಯಿಯ ತೂಕ; ತೊಲೆ.

तोश, पु॰ ಶಕ್ತಿ; ಎದೆಗಾರಿಕೆ.

तोशक, स्त्री॰ ಸುಪ್ಪತ್ತಿಗೆ; ಮೆತ್ತೆ.

तोशदान, पु॰ ಬುತ್ತಿ ಗಂಟು.

तोशा, पु॰ ಬುತ್ತಿ; ಪಾಥೇಯ.

तोशख़ाना, पु॰ ವಸ್ತ್ರಾಭರಣಗಳನ್ನು ಇಡುವ ಕೋಣೆ.

तोष, पु॰ ಆನಂದ. वि॰ ಸ್ವಲ್ಪ.

तोषक, वि॰ ಆನಂದದಾಯಕವಾದ.

तोषण, पु॰ ತೃಪ್ತಿ.

तोहफ़गी, स्त्री॰ ಒಳಿತು; ಒಳ್ಳೆಯತನ.

तोहफ़ा, पु॰ ಕಾಣಿಕೆ. वि॰ ಒಳ್ಳೆಯ; ಉತ್ತಮವಾದ.

तोहमत, स्त्री॰ ದೋಷಾರೋಪಣೆ; ಸುಳ್ಳುದೂರು.

तोहमती, स्त्री॰ ಇಲ್ಲದ ದೋಷವನ್ನಾರೋಪಿಸುವಂಥ.

तौंस, स्त्री॰ ಅತಿದಾಹ.

तौंसना, अ॰ ಬಿಸಿಲಿನಿಂದ ಕಂದು; ಬಳಲು.

तौंसा, पु॰ ಕಡುಬಿಸಿಲು; ಸೆಕೆ.

तौक़, पु॰ ಅಡ್ಡಿಕೆ; ಕುತ್ತಿಗೆಯಪಟ್ಟಿ.

तौक़ीर, पु॰ ಮರ್ಯಾದೆ; ಗೌರವ.

तौफ़ीक, स्त्री॰ ಭಕ್ತಿ; ಶ್ರದ್ಧೆ; ಶಕ್ತಿ; ದಯೆ.

तौफ़ीर, स्त्री॰ ವೃದ್ಧಿಲಾಭಗಳು.

तौबा, स्त्री॰ दे॰ **तोबा**.

तौर, पु॰ ರೀತಿ; ಪದ್ಧತಿ; ಕ್ರಮ; —**तरीका** ನಡುವಳಿ.

तौल, पु॰ ತಕ್ಕಡಿ; ತೂಕ.

तौलना, स॰ ತೂಕಮಾಡು.

तौला, पु॰ ಹಾಲು ಅಳೆಯುವ ಮಣ್ಣಿನಪಾತ್ರೆ; ಸೊಲಿಗೆ; ಧಾನ್ಯ ಅಳೆಯುವವನು.

तौलाई, स्त्री॰ ತೂಕಮಾಡುವಿಕೆ ಅಥವಾ ತೂಕಮಾಡಿದ ಮಜೂರಿ.

तौलाना, स॰ ತೂಕಮಾಡಿಸು.

तौलिया, स्त्री॰ ಅಂಗವಸ್ತ್ರ; ಸಣ್ಣ ಪಂಚೆ.

तौसना, अ॰ ತಪಿಸು; ಬೇಗೆಯಿಂದ ಬೇಸರಗೊಳ್ಳು.

तौसीफ़, स्त्री॰ ಗುಣಕಥನ; ಪ್ರಶಂಸೆ.

तौहीद, स्त्री॰ ಏಕೇಶ್ವರವಾದ.

तौहीन / **तौहीनी**, स्त्री॰ ಅಪಮಾನ; ಅವಮಾನ.

त्यक्त, वि॰ ತ್ಯಜಿಸಿದ.

त्यजनीय, स्त्री॰ ತ್ಯಜಿಸತಕ್ಕ.

त्यागना, स० ತ್ಯಜಿಸು.
त्याज्य, वि० ತ್ಯಜಿಸಲು ಯೋಗ್ಯ ವಾದ.
त्यों, क्रि० ಹಾಗೆ; ಆರೀತಿ.
त्योरी, स्त्री० ದೃಷ್ಟಿ; ನೋಟ; ಹುಬ್ಬು. —चढ़ना ಕೋಪದಿಂದ ಕಣ್ಣಿನ ನೋಟ ಬದಲಾಗು;—में बल पड़ना ಸಿಟ್ಟಿಗೇಳು.
त्योहार, पु० ಪರ್ವದಿನ; ಹಬ್ಬ.
त्योहारी, स्त्री० ಪರ್ವದಿನಗಳಲ್ಲಿ ಚಿಕ್ಕವರಿಗೆ, ಮಕ್ಕಳಿಗೆ ಅಥವಾ ಆಶ್ರಿತರಿಗೆ ಕೊಡತಕ್ಕ ಹಣ.
त्यौनार, पु० ರೀತಿ; ಕ್ರಮ.
त्यौहार, पु० दे० त्योहार.
त्राण, पु० ರಕ್ಷಣೆ; ಕವಚ.
त्राता, पु० ರಕ್ಷಕ.
त्रास, पु० ಹೆದರಿಕೆ; ತೊಂದರೆ.
त्रासित, वि० ಭಯಗೊಂಡ.
त्राहि, अव्य० ಕಾಪಾಡು; ರಕ್ಷಿಸು.
त्रिपाठी, पु० ಮೂರು ವೇದಗಳನ್ನರಿತವ; ಬ್ರಾಹ್ಮಣರ ಒಂದು ಬಿರುದು.
त्रिया, स्त्री० ಹೆಂಗಸು. (तिरिया)
त्रुटि, स्त्री० ಕುಂದುಕೊರತೆ; ಅಶುದ್ಧ.
त्वचा, स्त्री० ಚರ್ಮ; ತೊಗಲು.

थ

थंब, थंभ, पु० ಕಂಬ; ಊರೆ; ಆಧಾರ.
थंभन, पु० ನಿಲ್ಲುವಿಕೆ; ತಡೆ; ಸ್ತಂಭನ.
थंबना, अ० दे० थमना.
थई, स्त्री० ಕುಪ್ಪೆ; ರಾಶಿ.
थकना, अ० ಬಳಲು; ದಣಿ; ಆಯಾಸಗೊಳ್ಳು; ಬೇಸರಗೊಳ್ಳು.
थका, वि० ಬಳಲಿದ; ಆಯಾಸಗೊಂಡ.
थकान, स्त्री० ಬಳಲಿಕೆ; ಆಯಾಸ.
थकाना, स० ಬಳಲಿಸು.
थका-माँदा, वि० ದಣಿದ; ಆಯಾಸಪಟ್ಟ; ಬೇಸತ್ತ.
थकावट, स्त्री० ಬಳಲಿಕೆ; ದಣಿವು; ಆಯಾಸ.
थकित, वि० ದಣಿದ; ಬಳಲಿದ.
थकौंहा, वि० ಆಯಾಸಪಟ್ಟ.
थक्का, पु० ಮುದ್ದೆ; ಹೆಪ್ಪುಗಟ್ಟಿದ ವಸ್ತು; ಕರಣೆ.
थगित, वि० ಮಂದ; ಶಿಥಿಲವಾದ.
थन, पु० ಕೆಚ್ಚಲು; ಸ್ತನ.
थनेला, पु० ಮೊಲೆಬಾವು; ಸ್ತನದ ಊತ.
थनैत, पु० ಗ್ರಾಮದ ಮುಖ್ಯಸ್ಥ; ಪಟೇಲ.
थपकना, स० ಬೆನ್ನುತಟ್ಟು; ಮೈದಡವು; ಸೇವರಿಸು.
थपकी, स्त्री० ನೇವರಿಸುವಿಕೆ.
थपड़ी, स्त्री० ಚಪ್ಪಾಳೆ.
थपथपाना, अ० ಮೆಲ್ಲಗೆ ತಟ್ಟು; ಮೈತಡವರಿಸು.

थपना, ಸಂ ಸ್ಥಾಪಿಸು; ನೆಡು. ಅಂ ಬೇರೂರು; ನೆಲಸು.

थपेड़ा } **थप्पड़** } ಪುಂ ಅಂಗೈ ಏಟು; ಪೆಟ್ಟು; ಚಪಾಟಿ.

थमना, ಅಂ ನಿಂತುಹೋಗು; ತಡೆ.

थरथर, ಸ್ತ್ರೀಂ ಗಡಗಡ (ನಡುಕ).

थरथराना, ಅಂ ಗಡಗಡನೆ ನಡುಗು; ಕಂಪಿಸು.

थरथरी, ಸ್ತ್ರೀಂ ನಡುಕ; ಕಂಪನ.

थरिया, ಸ್ತ್ರೀಂ ಸಣ್ಣತಟ್ಟೆ.

थर्राना, ಅಂ ನಡುಗು; ತತ್ತರಿಸು.

थल, ಪುಂ ಸ್ಥಳ; ನೆಲ; ಭೂಮಿ.

थलकना, ಅಂ ರೆಕ್ಕೆವದರು; ಹೊಯ್ದಾಡು; ಜೋಲುಬೀಳು.

थली, ಸ್ತ್ರೀಂ ನೀರಿನತಳ; ವಾಸಸ್ಥಾನ.

थवई, ಪುಂ ಉಪ್ಪಾರ; ಕಾಮಾಟಿಗ.

थहराना, ಅಂ ನಡುಗು.

थहाना, ಸಂ ಆಳನೋಡು; ಮನಸ್ಸಿನ ನೆಲೆನೋಡು.

थांग, ಸ್ತ್ರೀಂ ಕಳ್ಳರ ವಾಸಸ್ಥಳ; ಜಾಡು; ಸುಳಿವು.

थांगी, ಪುಂ ಕಳವಿನೊಡವೆಗಳನ್ನು ಕೊಂಡುಕೊಳ್ಳುವವ; ಕಳ್ಳರಿಗೆ ಸುಳಿವು ಹೇಳುವವ.

थांवला, ಪುಂ ಗಿಡದಪಾತಿ.

थाक, ಪುಂ ಗ್ರಾಮದ ಎಲ್ಲೆ; ಊರಿನ ಗಡಿ; ರಾಶಿ.

थाती, ಸ್ತ್ರೀಂ ನಿಧಿ; ಬಂಡವಾಳ.

थान, ಪುಂ ಸ್ಥಾನ; ಜಾಗ; ದೊಡ್ಡಿ; ಬಟ್ಟೆಯಥಾನು.

थाना, ಪುಂ ನಿವಾಸ; ಠಾಣೆ; ಪೋಲಿಸ್ ಸ್ಟೇಷನ್.

थानेदार, ಪುಂ ಠಾಣೆಯವ; ಪೋಲೀಸು ಅಧಿಕಾರಿ.

थानैत, ಪುಂ ಗ್ರಾಮದೇವತೆ.

थाप, ಪುಂ ಹೊಡೆತ; ಪೆಟ್ಟು; ಮುದ್ರೆ ಆಣೆ; ಶಪಥ.

थापना, ಸಂ ಸ್ಥಾಪಿಸು.

थापर, ಪುಂ ದೇಂ थप्पड़.

थापिया } **थापी** } ಸ್ತ್ರೀಂ ಮಟ್ಟಸ ಮಾಡುವ ಕೊಡತಿ; ದಮ್ಮಸ್ಸು.

थाम, ಪುಂ ಕಂಬ; ಆಧಾರ. ಸ್ತ್ರೀಂ ಹಿಡಿದುಕೊಳ್ಳುವಿಕೆ.

थामना, ಸಂ ನಿಲ್ಲಿಸು; ತಡೆ; ನಿಭಾಯಿಸು; ನಿರ್ವಹಿಸು.

थाल, ಪುಂ ಹರಿವಾಣ; ದೊಡ್ಡತಟ್ಟೆ; ತಾಂಬಾಣ.

थाला, ಪುಂ ಗಿಡಗಳನ್ನು ನೆಡುವಪಾತಿ; ಆಲವಾಲ.

थाह, ಸ್ತ್ರೀಂ ಆಳ; ತಳ; ನೆಲೆ;—**लेना** ರಹಸ್ಯವನ್ನು ತಿಳಿದುಕೊಳ್ಳು.

थाहना, ಸಂ ಆಳನೋಡು; ಅಂದಾಜು ಕಟ್ಟು.

थिगली, ಸ್ತ್ರೀಂ ತೇಪೆ.

थिति, ಸ್ತ್ರೀಂ ಸ್ಥಿತಿ; ನೆಲೆ.

थिर, ವಿಂ ಅಲುಗಾಡದ; ಕದಲದ.

थिरकना, ಅಂ ನರ್ತನಮಾಡು; ಕುಣಿದಾಡು.

थिरता, ಸ್ತ್ರೀಂ ಸ್ಥಿರತೆ; ನಿಶ್ಚಲತೆ.

थिरना, ಅಂ ಸ್ಥಿಮಿತವಾಗು; ನೆಲೆಗೊಳ್ಳು; ತೇರಿಕ್ಕು.

थुक्का-फ़जीहत, स्त्री० ಧಿಕ್ಕಾರ; ಥೂಛೀ ಅನ್ನುವಿಕೆ; ತಿರಸ್ಕಾರ.

थुड़ी, स्त्री० ಥೂಥೂ ಅನ್ನುವುದು.

थुथनी, स्त्री० ಮುಸುಡಿ; ಮೂತಿ.

थूक, पु० ಉಗುಳು; ಎಂಜಲು; ಜೊಲ್ಲು.

थूकना, अ० ಉಗುಳು.

थूथन, पु०
थूथनी, स्त्री० } दे० थुथनी.

थून, पु० ಆಧಾರಕ್ಕಾಗಿ ಕೊಡುವ ಕಂಭ; ಆನಿಕೆ.

थूरना, स० ಕುಟ್ಟು; ಬಡಿ; ತುರುಕು.

थूला, वि० ಸ್ಥೂಲವಾದ.

थूहर, पु० ಕಳ್ಳೀಗಿಡ.

थेगली, स्त्री० ತೇಪೆ.

थैला, पु० ಚೀಲ.

थैली, स्त्री० ಸಣ್ಣಚೀಲ.

थोक, पु० ಗುಂಪು; ರಾಶಿ; ಸಮೂಹ. ಒಟ್ಟು; ತೋಕು.

थोड़ा, वि० ಕೊಂಚ; ತುಸ. क्रि० ಸ್ವಲ್ಪ;—बहुत ಅಲ್ಪಸ್ವಲ್ಪ; ಒಂದಿಷ್ಟು.

थोथरा, वि० ಟೊಳ್ಳು; ಪೊಳ್ಳು.

थोथा, वि० ತಿರುಳಿಲ್ಲದ; ಜಳ್ಳು.

थोपड़ी, स्त्री० ಕೆನ್ನೆ ಏಟು.

थोपना, स० ಮೆತ್ತು; ಸವರು; ಬಳಿ; ಸಾರಣೆಗೈಯು.

थोपियाना, अ० ಒಸರು; ಬಸಿ.

थोपी, स्त्री० ಏಟು; ಗುದ್ದು.

थोबड़ा, पु० ಪ್ರಾಣಿಗಳ ಮೂತಿ; ಮುಸುಡಿ.

दंग, वि० ಬೆರಗಾದ; ವಿಸ್ಮಿತ; ಚಕಿತ.

दंगई, वि० ದಂಗೆಖೋರ; ಜಗಳಗಂಟಿ.

दंगल, पु० ಕುಸ್ತಿ; ಮಲ್ಲಯುದ್ಧ; ಮಲ್ಲಭೂಮಿ; ಅಖಾಡ.

दंगा, पु० ಕಲಹ; ದಂಗೆ; ದೊಂಬಿ; ಬಂಡಾಯ;—फ़साद ಬಂಡಾಯ.

दंगैत, वि० ದೊಂಬಿಗಾರ; ಬಂಡಾಯಗಾರ.

दंडना, स० ದಂಡಿಸು; ಶಿಕ್ಷಿಸು.

दंडवत्, स्त्री० ದಂಡ ಪ್ರಣಾಮ; ಸಾಷ್ಟಾಂಗ ನಮಸ್ಕಾರ; ಅಡ್ಡಬೀಳುವಿಕೆ.

दंड्य, वि० ಶಿಕ್ಷೆಯನ್ನು ಪಡೆಯಲು ಯೋಗ್ಯನಾದ.

दंत, पु० ಹಲ್ಲು.

दंतकथा, स्त्री० ಕೇಳಿಕೆಯ ಮಾತು; ಕಟ್ಟುಕಥೆ; ಬಾಯಿಂದ ಬಾಯಿಗೆ ಬಂದ ಕಥೆಗಳು.

दंतच्छद, पु० ತುಟಿ.

दंतादंती, स्त्री० ಕಚ್ಚಾಟ.

दंतिया, पु० ಸಣ್ಣಹಲ್ಲು.

दंतुला, वि० ಮುಂದಕ್ಕೆ ಚಾಚಿದ ಹಲ್ಲುಗಳುಳ್ಳ; ಹಲ್ಲುಬ್ಬ; ಕೋರೆ ಹಲ್ಲಿನ.

दंद, स्त्री० ಉರಿ; ಸೆಕೆ; ಬೇಗೆ. पु० ಗಲಾಟೆ.

दंदाना, ಅಂ ಬಿಸಿ ತಾಕು. **पु०** ಬಾಚ ಣಿಗೆ ಗರಗಸ ಮುಂತಾದವುಗಳ ಹಲ್ಲು; ಹಲ್ಲಿನವರಿಸೆ.

दंदारू, ಪು० ಹೊಪ್ಪಳೆ.

दंदी, वि० ಜಗಳಗಂಟ; ಜಗಳಿಗ; ಉಪದ್ರವಕೊಡುವವ.

दंभ, ಪು० ಅಹಂಕಾರ; ಜಂಭ; ಡಾಂಭಿಕ.

दंभी, पु० ಜಂಭಗಾರ; ಡಂಬಾಚಾರಿ; ಬೂಟಾಟಿಕೆ ಮನುಷ್ಯ.

दंवरी, स्त्री० ಕಣದಲ್ಲಿ ಕಾಳು ಹುಲ್ಲು ಗಳನ್ನು ಬೇರ್ಪಡಿಸಲು ದನ ಗಳನ್ನು ಕಟ್ಟಿ ತುಳಿಸುವಿಕೆ.

दंश, पु० ಕಡಿತ; ಕೊಂಡಿ.

दंशक, पु० ಹಲ್ಲಿನಿಂದ ಕಚ್ಚುವವ.

दई, पु० ದೈವ; ವಿಧಿ.

दई-मारा, वि० ಅದೃಷ್ಟಹೀನ; ಭಾಗ್ಯ ಹೀನ.

दक़ियानूस, वि० ಪ್ರಾಚೀನ; ಹಳೆಯ; ಗೊಡ್ಡು.

दक़ियानूसी, वि० ಅತ್ಯಂತ ಪ್ರಾ ಚೀನ; ಬಹಳ ಹಳೆಯ.

दक़ीक़, वि० ಸೂಕ್ಷ್ಮ; ಕೋಮಲ; ಗೂಢ; ಕಠಿನ.

दक़ीक़ा, पु० ಸೂಕ್ಷ್ಮತೆ: ಕಾಠಿನ್ಯ; ಕಷ್ಟ; ವಿಪತ್ತು.

दक़ीक़ारस, वि० ಸೂಕ್ಷ್ಮದರ್ಶಿ.

दक्खिन, पु० ದಕ್ಷಿಣ ದಿಕ್ಕು.

दक्ष, वि० ಜಾಣ; ನಿಪುಣ; ಚತುರ. ಬಲಗಡೆಯ.

दक्षता, स्त्री० ನೈಪುಣ್ಯ.

दख़मा, पु० ಪಾರಸೀಕರು ಶವ ವನ್ನು ಹೂಳುವ ಸ್ಥಳ.

दख़ल, पु० ಅಧಿಕಾರ; ವಶ; ತಲೆ ಹಾಕುವಿಕೆ; ಕೈ ಹಾಕುವಿಕೆ: ಪ್ರವೇಶ.

दख़ल-दिहानी, स्त्री० ಅಧಿಕಾರ ಕೊಡಿ ಸುವುದು.

दख़ल-नामा, पु० ಸ್ವಾಧೀನಪತ್ರ.

दख़ल-याबी, स्त्री० ಸ್ವಾಧೀನಕ್ಕೆ ಪಡ ಕೊಳ್ಳುವುದು.

दख़ील, वि० ಅಧಿಕಾರಪಡೆದ; ಅನು ಭೋಗಸ್ಥ.

दख़ीलकार, पु० ಹನ್ನೆರಡು ವರ್ಷ ಗಳಕಾಲ ಜಮೀನನ್ನು ಸ್ವಾಧೀನ ದಲ್ಲಿಟ್ಟುಕೊಂಡಿರುವವ.

दगड़, पु० ರಣಭೇರಿ.

दग़दग़ा, पु० ಭಯ; ಸಂಶಯ; ಸಂದೇಹ.

दगदगाना, अ० ದಗದಗಿಸು; ಉರಿ. स० ಮಿರುಗಿಸು.

दगना, अ० ಮುದ್ರಿಸಿಡಿ; ಗುಂಡು ಹಾರು; ಪ್ರಸಿದ್ಧಿಪಡೆ.

दगर-दगरा, पु० ತಡ; ದಾರಿ.

दग़ल, पु० ಮೋಸ.

दग़लफ़सल, पु० ಮೋಸ; ಠಕ್ಕು.

दग़ला, पु० ದಪ್ಪಬಟ್ಟೆಯಿಂದ ಹೊ ಲೆದ ಅಂಗಿ.

दगवाना, स० ಗುಂಡಿನಿಂದ ಸುಡಿಸು.

दग़ा, स्त्री० ಮೋಸ; ಠಕ್ಕು.

दग़ादार, पुं० ಮೋಸಗಾರ.

दग़ाबाज़, वि० ಮೋಸಗಾರ; ದಗಾಖೋರ; ಮೋಸಗೊಳಿಸುವ.

दग़ाबाज़ी, स्त्री० ಮೋಸ; ಠಕ್ಕು; ದಗಲುಬಾಜಿ.

दग़ील, वि० ದೋಷವುಳ್ಳ; ಕಳಂಕವುಳ್ಳ. पुं० ಮೋಸಗಾರ.

दग्ध, वि० ಸುಟ್ಟುಹೋದ; ದುಃಖಿತ.

दचकना, अ० ಪೆಟ್ಟಾಗು; ಅದಿಮಿಹೋಗು. स० ಬಡಿ; ಕೊಡವು.

दचना, अ० ಬೀಳು.

दच्छिन, पुं० ದಕ್ಷಿಣ ದಿಕ್ಕು.

दड़ाकना, अ० ಗರ್ಜಿಸು; ಗುಟರು ಹಾಕು; ರೆಂಕೆಹಾಕು; ಗುರುಗುಟ್ಟು.

दढ़ियल, वि० ಗಡ್ಡವುಳ್ಳ.

दतवन, ೀ० ಹಲ್ಲುಉಜ್ಜುವಕಡ್ಡಿ.

दत्त, पुं० ದಾನ; ದತ್ತಪುತ್ರ. वि० ಕೊಡಲ್ಪಟ್ಟ.

दत्तक, पुं० ಸಾಕುಮಗ; ದತ್ತುಮಗ;

दत्तचित्त, वि० ಯಾವುದಾದರೊಂದು ವಿಷಯಕ್ಕೆ ಗಮನಕೊಟ್ಟ; ಕಾರ್ಯಮಗ್ನ.

ददियाल, पुं० ಪಿತೃವಂಶ.

ददोरा, पुं० ಸೊಳ್ಳೆ ಮುಂತಾದವುಗಳಿಂದಾದದ್ದು.

दद्रु, पुं० ಹುಳುಕಡ್ಡಿ; ಚರ್ಮದ ಒಂದು ರೋಗ.

दधि, पुं० ಮೊಸರು; ವಸ್ತ್ರ.

दधिकांदो, पुं० ಕೃಷ್ಣಾಷ್ಟಮಿಯಲ್ಲಿ ಅರಿಸಿಣ ಬೆರಸಿದ ಮೊಸರನ್ನಿಂ ದಾಡುವ ಓಕಳಿಯಾಟ.

दधिसुत, पुं० ಮುತ್ತು; ಚಂದ್ರ; ವಿಷ.

दनुज, पुं० ದನು ಎಂಬಾಕೆಯಲ್ಲಿ ಹುಟ್ಟಿದ ರಾಕ್ಷಸ.

दपटना, स० ಗದರಿಸು; ಅಟ್ಟು.

दपु, पुं० ಹೆಮ್ಮೆ: ಅಹಂಕಾರ.

दपेट, स्त्री० ಗದರಿಕೆ.

दपेटना, स० दे० दपटना.

दफ़, पुं० ವಿಷ; ಕೋಪ; ಆವೇಶ.

दफ़अतन्, क्रि० ಒಮ್ಮೆಲೆ; ಇದ್ದಕ್ಕಿದ್ದ ಹಾಗೆ.

दफ़तर, पुं० दे० दफ़्तर.

दफ़तरी, पुं० दे० दफ़्तरी.

दफ़ती, स्त्री० ರಟ್ಟಿನಕಾಗದ: ರಟ್ಟು.

दफ़न, पुं० ಹುಗಿತ; ಹೂಳುವಿಕೆ; ಹೆಣವನ್ನು ಸಮಾಧಿಮಾಡುವಿಕೆ; ಸಮಾಧಿ.

दफ़नाना, स० ಹುಗಿ; ಹೂಳು.

दफ़ा, स्त्री० ಸಾರಿ; ಸರ್ತಿ: ಸಲ; ಬಾರಿ; ಕಾನೂನಿನ ಒಂದು ಪ್ರಕರಣ. वि० ದೂರ ಸರಿಸಲ್ಪಟ್ಟ; ತೊಲಗಿಸಲ್ಪಟ್ಟ. रफ़ा दफ़ा करना ವ್ಯವಹಾರಮುಗಿಸು.

दफ़ादार, पुं० ಮೇಸ್ತ್ರೀ; ದಫೇದಾರ.

दफ़ान, पुं० ಬೇರೆಮಾಡುವುದು.

दफ़ीना, पुं० ಹುಗಿದಿಟ್ಟ ಧನ ಅಥವಾ ಖಜಾನೆ.

दफ़्तर, पु० ಕಾರ್ಯಾಲಯ; ಕಚೇರಿ; ವಿವರಗಳನ್ನೊಳಗೊಂಡ ಪತ್ರ.

दफ़्तरी, पु० ಗುಮಾಸ್ತೆ; ಪುಸ್ತಕಗಳನ್ನು ಹೊಲಿಯುವವ.

दफ़्ती, पु०, ರಟ್ಟು; ರಟ್ಟಿನ ಕಾಗದ.

दबंग, वि० ಪ್ರತಾಪಿ; ಬಲಾಢ್ಯ

दबक, स्त्री० ಬಾಗುವಿಕೆ; ಸುಕ್ಕು.

दबकगार, पु० ಸರಿಗೆ ಅಥವಾ ಜರಿ ತಯಾರಿಸುವವ.

दबकना, अ० ಅಡುಗು; ಅವಿತುಕೊಳ್ಳು.

दबका, पु० ಜರತಾರಿ; ಸರಿಗೆ; ಜರಿ.

दबकाना, स० ಅಡಗಿಸು; ಬಚ್ಚಿಡು.

दबकी, स्त्री० ನೀರಿಡುವಪಾತ್ರೆ.

दबदबा, पु० ಜುಲುಮೆ; ಪ್ರತಾಪ; ಪಟಾಟೋಪ.

दबना, अ० ಅದುಮಿ ಹೋಗು; ಹೂತುಹೋಗು: ಉಡುಗು; ಅಡಗು; ಒಳಪಡು.

दबाना, स० ಅದುಮು; ಒತ್ತು; ಹಿಸುಕು; ದಬಾಯಿಸು; ಕುಗ್ಗಿಸು.

दबाव, पु० ಒತ್ತಡ; ಒತ್ತಾಯ; ಬಲಾತ್ಕಾರ; ದಮನ.

दबिस्ताँ, पु० ಪಾಠಶಾಲೆ.

दबीज़, वि० ದಟ್ಟ; ಗಟ್ಟಿ; ಗಾಢ.

दबीर, पु० ಕರಣೀಕ; ಗುಮಾಸ್ತೆ; ಬರಹಗಾರ.

दबैल, वि० ಬಗ್ಗಿದ; ಒಳಪಟ್ಟ; ಅಂಜುಕುಳಿ.

दबोचना, स० ಹಿಡಿದು ಅಮುಕು; ಬಚ್ಚಿಡು.

दम, पु० ಉಸಿರು; ಶ್ವಾಸ; ಕ್ಷಣ; ಪ್ರಾಣ; ಜೀವ: ಜೀವಾಳ; ಮೋಸ;—**अटकना** ಉಸಿರು ಕಟ್ಟು;—**उखड़ना** ಉಸಿರುಕಟ್ಟುವುದು;—**घुटना** ಗಾಳಿಯಿಲ್ಲದೆ ಉಸಿರುಕಟ್ಟಿ ಹೋಗು;—**तोड़ना** ಕೊನೆಯ ಉಸಿರು ಎಳೆ;—**दिलासा** ಭರವಸೆ;—**पर दम** ಕ್ಷಣ ಕ್ಷಣದಲ್ಲಿ;—**कदम** ಪೌರುಷ; ಅಸ್ತಿತ್ವ;—**फूलना** ಜೋರಾಗಿ ಉಸಿರಾಡು;—**भरना** ಇತರರು ತನ್ನಮೇಲೆ ಇಟ್ಟಿರುವ ಪ್ರೇಮವನ್ನು ಹೆಮ್ಮೆಯಿಂದ ಹೇಳು;—**मारना** ಕ್ಷಣಕಾಲದಲ್ಲಿನ; ಅಫೀಮು, ಗುಡುಗುಡಿ ದಮ್ ಎಳೆಯುವುದು;—**लेना** ವಿಶ್ರಾಂತಿಪಡೆ;—**साधना** ಶ್ವಾಸಧಾರಣೆಮಾಡು;—**साज** ಪ್ರಾಣಸ್ನೇಹಿತ.

दमक, स्त्री० ಹೊಳಪು; ಕಾಂತಿ.

दमकना, अ० ಹೊಳೆ; ಪ್ರಕಾಶಿಸು; ತಳತಳಿಸು.

दमकल, स्त्री० ನೀರೆಳೆಯುವ ಯಂತ್ರ; ಪಂಪು.

दमकला, पु० ಕಾರಂಜ.

दम-ख़म, पु० ಶಕ್ತಿ; ಜೀವಾಳ.

दमदमा, पु० ಯುದ್ಧದಲ್ಲಿ ಕಟ್ಟುವ ಮರಳು ಕೋಟೆ.

दमन, ಪುಂ ಅಡಗಿಸುವಿಕೆ; ನಿಗ್ರಹ; —**नीति** ದಬ್ಬಾಳಿಕೆ.

दमदार, ವಿಂ ಶಕ್ತಿಶಾಲಿಯಾದ.

दमनशील, ವಿಂ ಅಡಗಿಸ ಬಲ್ಲ.

दमबाज़, ವಿಂ ಧೂರ್ತ.

दमा, ಪುಂ ಗೂರುಬ್ಬಸ; ಗೂರಲು.

दमाद, ಪುಂ ಅಳಿಯ.

दमामा, ಪುಂ ನಗಾರಿ; ಭೇರಿ.

दया, ಸ್ತ್ರೀಂ ಕನಿಕರ; ದಯೆ.

दयानत, ಸ್ತ್ರೀಂ ಪ್ರಾಮಾಣಿಕತೆ; ಸತ್ಯನಿಷ್ಠೆ.

दयानतदार, ವಿಂ ಪ್ರಾಮಾಣಿಕ.

दयार, ಪುಂ ಪ್ರಾಂತ; ಪ್ರದೇಶ.

दयार्द्र, ವಿಂ ಕನಿಕರವುಳ್ಳ; ದಯುವುಳ್ಳ.

दर, ಪುಂ ಬಿರುಕು; ಸೀಳುವಿಕೆ; ಬಾಗಿಲು;—**दर** ಮನೆಮನೆಗೂ. ಸ್ತ್ರೀಂ ಬೆಲೆ; ಧಾರಣೆ; ದರ; —**अंदाज़** ಜಗಳಮಾಡಿಸುವವ; —**आमद** ಪರದೇಶದಿಂದ ಬಂದ ಸಾಮಾನು.

दरक, ಸ್ತ್ರೀಂ ಬೇಟೆ; ಬಿರುಕು. ವಿಂ ಅಂಜುಬುರುಕ.

दरकच, ಸ್ತ್ರೀಂ ತರೆದ ಗಾಯ.

दरकना, ಅಂ ಹರಿದುಹೋಗು; ಬಿರುಕುಬಿಡು.

दरका, ಪುಂ ಹರಕು; ಒಡಕು.

दरकाना, ಸಂ ಹರಿ; ಸೀಳು.

दरकार, ವಿಂ ಬೇಕಾದ; ಅವಶ್ಯಕವಾದ.

दर-किनार, ಕ್ರಿಂ ದೂರ; ಒತ್ತಟ್ಟಿಗೆ.

दरकूच, ಕ್ರಿಂ ಸಂಚಾರಮಾಡುತ್ತ; ಸಂಚಾರದಲ್ಲಿ.

दरखशाँ ವಿಂ ಹೊಳೆಯುವ.

दरख़ास्त / **दरख़्वास्त** ಸ್ತ್ರೀಂ ಅರಿಕೆ; ಬಿನ್ನಹ; ಅರ್ಜಿ.

दरख़्त, ಪುಂ ಮರ; ಗಿಡ; ವೃಕ್ಷ.

दरगाह, ಸ್ತ್ರೀಂ ಮುಹಮ್ಮದೀಯ ಸಿದ್ಧಪುರುಷನ ಗೋರಿ.

दरगुज़र, ವಿಂ ಕ್ಷಮಿಸಲ್ಪಟ್ಟ; ಗಣನೆಗೆ ತಾರದ.

दरगोर, ವಿಂ ಗೋರಿಯಲ್ಲಿನ; ಗೋರಿಗೆ ಹೋಗುವ.

दरज़, ಸ್ತ್ರೀಂ ಸಂದು; ತೂತು; ಬಿರಕು.

दरज़बन्दी, ಸ್ತ್ರೀಂ ಗೋಡೆಯಲ್ಲಿನ ಬಿರಕುಗಳನ್ನು ಮುಚ್ಚುವಿಕೆ.

दरजन, ಪುಂ ದೇಂ **दर्जन**.

दरजा, ಪುಂ ದೇಂ **दर्जा**.

दरजी, ಪುಂ ದೇಂ **दर्जी**.

दरद, ಪುಂ ದೇಂ **दर्द**.

दरदरा, ವಿಂ ನುಚ್ಚಾದ.

दरदरी, ವಿಂ ದಪ್ಪ ನುಚ್ಚಿನ.

दर-दालान, ಪುಂ ಮೊಗಸಾಲೆ; ಜಗಲಿ.

दरना, ಸಂ ದೇಂ **दलना**.

दरपन, ಪುಂ ಕನ್ನಡಿ; ಕೈಪಿಡಿ.

दरपना, ಅಂ ರೇಗು; ಗರ್ವಿಸು.

दरपनी, ಸ್ತ್ರೀಂ ಸಣ್ಣ ಕನ್ನಡಿ.

दरपरदा, ಕ್ರಿಂ ಮುಚ್ಚುಮರೆಯಲ್ಲಿ; ಗುಟ್ಟಾಗಿ.

दरपेश, क्रिं ಮುಂದೆ; ಮುಂದು ಗಡೆ; ಸಮ್ಮುಖದಲ್ಲಿ.

दरब, पुं ಹಣ; ಸಿರಿ; ಐಶ್ವರ್ಯ.

दरबा, पुं ಪಾರಿವಾಳದ ಗೂಡು: ಅಂಕಣ; ಅರೆ; ಖಾನೆ.

दरबी, स्त्रीं ಹಾವಿನಹೆಡೆ; ಹೆಡೆಯ ಆಕಾರದಪಾತ್ರೆ.

दरबान, पुं ದ್ವಾರಪಾಲಕ.

दरबार, पुं ಆಸ್ಥಾನ: ರಾಜಸಭೆ; ಒಡ್ಡೋಲಗ; ದರ್ಬಾರು.

दरबारदारी, स्त्रीं ರಾಜ ಸಭೆಗೆ ಹೋಗುವಿಕೆ; ಮುಖಸ್ತುತಿ.

दरबारी, विं ರಾಜ ಸಭೆಯ; ರಾಜ ಸಭೆಗೆ ಸಂಬಂಧಿಸಿದ. पुं ಆಸ್ಥಾನಿಕ.

दरमान, पुं ಔಷಧ; ಮದ್ದು.

दरमाहा, पुं ತಿಂಗಳ ಸಂಬಳ; ಪಗಾರ.

दरमियान, पुं ಮಧ್ಯೆ. क्रिं ನಡುವೆ.

दरमियानी, विं ನಡುವಣ; ಮಧ್ಯದ पुं ಮಧ್ಯಸ್ಥ; ದಳ್ಳಾಳಿ.

दरवाज़ा, पुं ಬಾಗಿಲು; ಕದ.

दरवेश, पुं ಸಾಧು; ಫಕೀರ.

दरस, पुं ದರ್ಶನ; ಭೆಟ್ಟಿ; ರೂಪ; ತೋರಿಕೆ.

दरसना, अं ತೋರು: ಕಾಣಬರು. सं ನೋಡು.

दरसाना, सं ತೋರಿಸು; ನೋಡಿಸು; ತಿಳಿಸು.

दरहक़ीक़त, क्रिं ವಾಸ್ತವದಲ್ಲಿ: ನಿಜವಾಗಿ.

दरहम, विं ಅವ್ಯವಸ್ಥೆಯಾದ: ಚೆಲ್ಲಾಪಿಲ್ಲಿಯಾದ.

दराँती, स्त्रीं ಕುಡಗೋಲು.

दरा, पुं ಹೆದ್ದಾರಿ; ರಸ್ತೆ; ಕಣಿವೆ.

दराज़, विं ದೊಡ್ಡ; ಉದ್ದ; ನೀಳವಾದ.

दरार, स्त्रीं ಬಿರುಕು; ಸೀಳು; ಹರಕು; ಸಂದು.

दरारना, अं ಬಿರಿ; ಸೀಳಿಹೋಗು; ಹರಿದು ಹೋಗು.

दरारा, पुं ಢಿಕ್ಕಿ; ತಿಕ್ಕಾಟ; ಧಕ್ಕೆ.

दरिंदा, पुं ಮಾಂಸತಿನ್ನುವ ಹಿಂಸ್ರ ಮೃಗಗಳು.

दरिया, पुं ನದಿ: ಸಮುದ್ರ.

दरियाई, विं ನದಿ ಅಥವಾ ಸಮುದ್ರಕ್ಕೆ ಸಂಬಂಧಿಸಿದ.

दरिया-दिल, विं ಉದಾರ; ವಿಶಾಲ ಹೃದಯದ; ಧಾರಾಳಿ.

दरिया-दिली, स्त्रीं ಔದಾರ್ಯ.

दरियाफ़्त, विं ತಿಳಿದ: ಗೊತ್ತಾದ: **—करना** ವಿಚಾರಿಸು; ಪತ್ತೆ ಹಚ್ಚು.

दरियाव, पुं दे० **दरिया.**

दरी, स्त्रीं ಗುಹೆ; ಹಳ್ಳ; ಜಮಖಾನೆ.

दरी-ख़ाना, पुं ಅನೇಕ ಬಾಗಿಲುಗಳುಳ್ಳ ಮನೆ.

दरीचा, पुं ಕಿಟಿಕಿ; ಬಾಗಿಲು.

दरीची, स्त्री० ಚಿಕ್ಕ ಕಿಟಿಕಿ; ಬೆಳಕಿಂಡಿ.

दरीबा, पु० ಮೀಳೇದಲೆ ಅಂಗಡಿಗಳ ಸಾಲು.

दरेग़, पु० ದುಃಖ; ಕುಂದು; ಕೊರತೆ; ನ್ಯೂನತೆ.

दरेरना, स० ಬೀಸು; ತಿಕ್ಕು; ಅರೆ.

दरेरा, पु० ಅರೆಯುವಿಕೆ; ನೀರಿನ ಸೆಳೆತ.

दरोग़, पु० ಸುಳ್ಳು: ಹುಸಿ.

दरोग़-गो, वि० ಸುಳ್ಳಾಡುವವ.

दरोग़-हलफ़ी, स्त्री० ಸುಳ್ಳು ಹೇಳಿ ಆಣೆಯಿಡುವುದು.

दरोगा, पु० दे० दारोगा.

दर्कार, क्रि० दे० दरकार.

दर्ज, वि० ದಾಖಲುಮಾಡಲ್ಪಟ್ಟ; ಬರೆಯಲ್ಪಟ್ಟ: ಅಂಕಿತವಾದ.

दर्जन, पु० ಡಜನ್. (೧೨)

दर्जा, पु० ಶ್ರೇಣಿ: ಅಂತಸ್ತು; ತರಗತಿ; ವಿಭಾಗ.

दर्ज़ी, पु० ಚಿಪ್ಪಿಗ; ದರ್ಜಿ.

दर्द, पु० ನೋವು: ಪೀಡೆ: ದುಃಖ; ಕಷ್ಟ.

दर्दनाक, वि० ಕನಿಕರವನ್ನುಂಟು ಮಾಡುವ; ಕರುಣಾಜನಕ.

दर्दमंद; दर्दी, वि० ವ್ಯಥಿತ; ದುಃಖಿ ಕರುಣಾಳು.

दर्देज़ह, पु० ಪ್ರಸವಪೀಡೆ.

दर्देसरी, स्त्री० ಕಷ್ಟ; ಕಠೋರತೆ.

दर्पण, दर्पन, पु० ಕನ್ನಡಿ; ಕೈಪಿಡಿ.

दर्भ, पु० ದರ್ಭೆ ಹುಲ್ಲು; ಕುಶ.

दर्रा, पु० ಕಣಿವೆ; ಘಟ್ಟ.

दर्शक, पु० ನೋಡುವವ.

दर्शन, पु० ಭೆಟ್ಟಿ; ಭೇಟಿ; ದರ್ಶನ.

दर्शनीय, वि० ನೋಡತಕ್ಕ; ಮನೋಹರ.

दर्शाना, स० ತೋರಿಸು; ನೋಡಿಸು: ಕಾಣಿಸು.

दल, पु० ದಳ; ಎಸಳು; ಸಮೂಹ; ಮಂಡಲಿ; ಪಕ್ಷ; ಕಕ್ಷಿ; ಸೈನ್ಯ.

दलक, स्त्री० ದುಡಿತ; ಚಳುಕು ಅಳುಕುವಿಕೆ; ಶೂಲೆ; ಸಿಡಿವ ನೋವು.

दलक़, स्त्री० ಕಂಥೆ; ಬೊಂತೆ.

दलकन, स्त्री० ಅದುರುವಿಕೆ; ದುಡಿತ.

दलकना, अ० ಹುರಿದು ಹೋಗು; ಬಿರಿ; ನಡುಗು: ಬೆಚ್ಚಿಬೀಳು. स० ಹೆದರಿಸು.

दलगंजन, वि० ಅತಿಶೂರ; ಕ್ರೂರಿ.

दलदल, स्त्री० ಕೆಸರು; ಬದಿ.

दलदला, वि० ಕೆಸರಿನಿಂದ ತುಂಬಿದ; ಕೊಚ್ಚೆಯಾದ.

दलन, पु० ವಿನಾಶ; ಸಂಹಾರ.

दलना, स० ಪುಡಿಮಾಡು: ಒಡಿ; ಕಾಳನ್ನು ಒಡೆದು ಬೇಳೆಮಾಡು; ನುಚ್ಚು ಮಾಡು: ನಾಶಮಾಡು: ಧ್ವಂಸಮಾಡು.

दलबंदी, स्त्री० ಸಕ್ಷಿ. ಪ್ರತಿಕಕ್ಷಿ; ಪಾರ್ಟಿ.

दलबल्ल, पु० ಸೈನ್ಯ.
दलबादल, पु० ಮೇಘದ ಗುಂಪು; ದೊಡ್ಡ ಸೈನ್ಯ.
दलमलना, स० ಅರೆ; ಕಟ್ಟು; ಕಸರು.
दलहन, पु० ಬೇಳೆಯಾಗುವ ಕಾಳು.
दलान, पु० दे० **दालान.**
दलाल, पु० ದಳ್ಳಾಳಿ; ಮಧ್ಯಸ್ಥ.
दलाली, स्त्री० ದಳ್ಳಾಳಿ ಕೆಲಸ; ದಳ್ಳಾಳಿಗೆ ಸಿಗುವ ಹಣ.
दलित, वि० ತುಳಿಯಲ್ಪಟ್ಟ; ಪೀಡಿಸಲ್ಪಟ್ಟ.
दलिया, पु० ನುಚ್ಚು; ತರಿ.
दली, वि० ರೇಕುಗಳುಳ್ಳ: ದಳಗಳುಳ್ಳ.
दलील, स्त्री० ಯುಕ್ತಿ; ತರ್ಕ; ಚರ್ಚೆ; ವಾದವಿವಾದ.
दलेल. स्त्री० ತಪ್ಪುಮಾಡಿದಾಗ ಸಿಪಾಯಿಗಳಿಗೆ ಕೊಡುವ ಕವಾಯತು ಶಿಕ್ಷೆ.
दल्लाल, पु० दे० **दलाल.**
दल्लाला, स्त्री० ಕುಂಟಣಗಿತ್ತಿ.
दव. पु० ಕಾಡು; ಅಡವಿ; ಕಾಡ್ಕಿಚ್ಚು.
दवनी, स्त्री० ಹುಲ್ಲೊಕ್ಕಲು; ಹುಲ್ಲುತುಳಿಸಿ ಧಾನ್ಯವನ್ನು ಬೇರೆ ಮಾಡುವುದು.
दवा. **दवाई, स्त्री०** ಮದ್ದು; ಔಷಧ.
दवाखाना, पु० ಔಷಧಾಲಯ.
दवाग्नि, स्त्री० ಕಾಡ್ಗಿಚ್ಚು; ದಾವಾನಲ.
दवादारू, स्त्री० ಔಷಧೋಪಚಾರ.
दवात, स्त्री० ಮಸಿಕುಡಿಕೆ; ದೌತಿ.
दवामी, वि० ಶಾಶ್ವತವಾದ:—**बन्दोबस्त** ಸರಕಾರದಿಂದ ಮಾಡಲ್ಪಟ್ಟ ಜಮೀನು ಸಂಬಂಧವಾದ ಖಾಯಂ ಏರ್ಪಾಟು.
दवारी, स्त्री० ಕಾಡ್ಗಿಚ್ಚು.
दशन, पु० ಹಲ್ಲು.
दशहरा, पु० ನವರಾತ್ರಿ; ದಸರೆ.
दशा, स्त्री० ಸ್ಥಿತಿ; ಪರಿಸ್ಥಿತಿ; ದೆಸೆ.
दसख़त, पु० दे० **दस्तख़त.**
दसना, अ० ಹಾಸಲ್ಪಡು; ಹರಡಿಕೊಳ್ಳು. **स०** ಹಾಸು; ಹರಡು. **पु०** ಹಾಸಿಗೆ.
दसौंधी, पु० ಹೊಗಳು. ಭಟರು: ವಂದಿಮಾಗಧರು.
दस्तंदाज़ी, स्त्री० ಮತ್ತೊಬ್ಬರ ಕೆಲಸದಲ್ಲಿ ಕೈ ಹಾಕುವಿಕೆ; ಗೋಜಿಗೆ ಹೋಗುವಿಕೆ; ಹಸ್ತಕ್ಷೇಪ.
दस्त, पु० ಹಸ್ತ; ಕೈ; ಹೊಟ್ಟೆಯ ಕಳತ; ಭೇದಿ.
दस्तक, स्त्री० ಬಾಗಿಲು ತಟ್ಟುವಿಕೆ; ದಸ್ತಗಿರಿ ಅಥವಾ ಜಪ್ತುಮಾಡುವ ಆಜ್ಞೆ; ರಹದಾರಿ; ಸುಂಕ.
दस्तकार, पु० ಕೈ ಕೆಲಸಗಾರ; ಶಿಲ್ಪಿ; ಕಸುಬುದಾರ.
दस्तकारी, स्त्री० ಕೈವಾಡ; ಕೈಗೆಲಸ; ಕೈಗಾರಿಕೆ.
दस्तख़त, पु० ಸಹಿ; ರುಜು.
दस्त-गरदाँ, वि० ಕೈನಾಳದ (ಹಣ).

दस्त-गीर, **वि०** ಒತ್ತಾಸೆ ಕೊಡುವವ; ಸಹಾಯಕ.

दस्त-गीरी, **स्त्री०** ನೆರವು ; ಒತ್ತಾಸೆ.

दस्तन्दाज़ी, **स्त्री०** दे० **दस्तंदाज़ी.**

दस्त-पनाह, **पु०** ಇದ್ದಿಲು ಮತ್ತು ಕೆಂಡವನ್ನು ಎತ್ತುವ ಚಿಮುಟ.

दस्त-पाक, **पु०** ಕರವಸ್ತ್ರ ; ಕೈವಸ್ತ್ರ.

दस्त-ब-दस्त, **क्रि०** ಕೈಯಾನ ಕೈ.

दस्त-बरदारी, **स्त्री०** ಯಾವುದಾದರೂ ಕೆಲಸದಿಂದ ದೂರವಾಗು.

दस्त-बस्ता, **क्रि०** . ಕೈಕಟ್ಟಿ ; ಕೈ ಮುಗಿದು.

दस्तयाब, **वि०** ಕೈ ಸೇರಿದ; ಪ್ರಾಪ್ತ.

दस्तरख़ान, **पु०** ಊಟಮಾಡುವ ಸ್ಥಳದಲ್ಲಿ ಅಥವಾ ಊಟದ ಮೇಜಿನಮೇಲೆ ಹಾಸುವ ಬಟ್ಟೆ.

दस्ता, **पु०** ಹಿಡಿ; ಹಿಡಿಕೆ; ಹೂಗೊಂಚಲು ; ಸಿಪಾಯಿಗಳ ಸಣ್ಣ ದಳ; ೨೪ ಹಾಳೆಗಳ ಕಾಗದದ ಕಟ್ಟು ; ದಸ್ತು.

दस्तार, **पु०** ರುಮಾಲೆ.

दस्ताना, **पु०** ಕೈಚೀಲ.

दस्तावर, **वि०** ಭೇದಿಯನ್ನುಂಟು ಮಾಡುವ; ವಿರೇಚಕ.

दस्तावेज़, **स्त्री०** ದಸ್ತಾವೇಜು ; ಕಟ್ಟಪಕ; ಹಣ ಜಮೀನು ಇವುಗಳಿಗೆ ಸಂಬಂಧಿಸಿದ ಕಾಗದಪತ್ರ.

दस्तावेज़ी, **वि०** ದಸ್ತಾವೇಜಿಗೆ ಸಂಬಂಧಪಟ್ಟ.

दस्ती, **वि०** ಕೈಯ. **स्त्री०** ಕೈದೀವಿಗೆ; ಕೈದೀವಟಿಕೆ; ಲೇಖಣಿಕೆ; ಕುಸ್ತಿಯಲ್ಲಿಯ ಒಂದು ಪಟ್ಟು.

दस्तूर, **पु०** ವಾಡಿಕೆ; ಸಂಪ್ರದಾಯ; ನಿಯಮ; ಪಾರಸೀಜನರ ಪುರೋಹಿತ.

दस्यु, **पु०** ಕಳ್ಳ ; ದರೋಡೆಗಾರ.

दस्तूरी, **स्त्री०** ಮಾಮೂಲು ಹಣ.

दह, **पु०** ಮಡುವು; ಕೊಳ. **स्त्री०** ಜ್ವಾಲೆ. **वि०** ಬೆಂಕಿಹತ್ತು.

दहक, **स्त्री०** ಜ್ವಾಲೆ; ಉರಿ.

दहकना, **अ०** ಉರಿ ; ಸುಡು.

दहकान, **पु०** ಹಳ್ಳಿಯವ; ಗಮಾರ.

दहन, **पु०** ಸುಡುವಿಕೆ.

दहना, **अ०** ಉರಿ; ಸುಡು. **स०** ಸುಡು ; ಉರಿಸು.

दहपट, **वि०** ನಾಶಮಾಡಲ್ಪಟ್ಟ.

दहपटना, **स०** ನೆಲಸಮಮಾಡು ; ಹಾಳುಮಾಡು.

दहर, **पु०** ನೀರು ಸಂಗ್ರಹಿಸಿಡುವ ಕೆರೆ ಅಥವಾ ಕೊಳ.

दहल, **स्त्री०** ನಡುಕ ; ಕಂಪನ.

दहलना, **अ०** ನಡುಗು ; ಅದರು.

दहला, **पु०** ಇಸ್ಪೀಟು ಎಲೆಯ ಹತ್ತನೇ ಬಂದು.

दहलाना, **स०** ನಡುಗಿಸು.

दहलीज़, **स्त्री०** ಹೊಸ್ತಿಲು; ಹೊಸಲು.

दहशत, **स्त्री०** ಹೆದರಿಕೆ ; ಭಯ.

दहा, **पु०** ಮೊಹರಂ ಹಬ್ಬದಲ್ಲಿ ಮುಸಲ್ಮಾನರು ಕಟ್ಟುವ ಕಾಗದದ

ಮುಂಟಪ; ಮೊಹರಂ ಹಬ್ಬದ ಹತ್ತು ದಿನಗಳು.

दहाई, स्त्री० ದಶಕ; ದಶಕಸ್ಥಾನ.

दहाड़, स्त्री० ಗರ್ಜನೆ; ಬೊಬ್ಬೆ.

दहाड़ना, अ० ಆರ್ಭಟಿಸು; ಬೊಬ್ಬಿರಿಸು.

दहान, पु० ಬಾಯಿ; ಛೇದ; ಗಾಯ; ಛಿದ್ರ.

दहाना, स० ಉರಿಸು; ಸುಡು. पु० ಅಗಲವಾದ ಬಾಯಿ; ನದಿಯ ಸಂಗಮ; ಕಾಲುವೆ; ಮೋರಿ.

दहिना, वि० ಬಲಗಡೆಯ.

दहिने, क्रि० ಬಲಗಡೆಗೆ.

दही, पु० ಮೊಸರು.

दहेंड़ी, स्त्री० ಮೊಸರಿನ ಗಡಿಗೆ.

दहेज, पु० ವರದಕ್ಷಿಣೆ.

दहेला, वि० ಸುಟ್ಟ; ದಗ್ಧ ದ; ತೊಯ್ದ.

दाँ, पु० ಸಲ; ಸರ್ತಿ; ಸಾರಿ; ಬಾರಿ; ಆವರ್ತಿ.

दाँ, वि० ಅರಿತವ; ತಿಳಿದವ; ಬಲ್ಲವ. ಉದಾ: **फ़रसीदाँ, उर्दूदाँ.**

दांकना, अ० दे० **दहाड़ना.**

दांज, स्त्री० ಸಮಾನವಾದ.

दांड़ना, स० ದಂಡಿಸು; ಶಿಕ್ಷಿಸು.

दांडी, पु० ದೋಣಿಗಾರ; ನಾವಿಕ.

दांत, पु० ಹಲ್ಲು;—**खट्टे करना** ಬಹಳ ತೊಂದರೆ ಕೊಡುವುದು; —**काटी रोटी** ಬಹಳ ಸ್ನೇಹ: **दांतों तले उँगली दबाना या काटना** ಆಶ್ಚರ್ಯ ಚಕಿತನಾಗು: —**पीसना** ಸಿಟ್ಟನ್ನು ತೋರಿಸುವುದು;—**तोड़ना** ಸೋಲಿಸುವುದು; **दांतों में तिनका दबाना** ಕ್ಷಮೆಬೇಡುವುದು.

दांतना, अ० ಹಲ್ಲು ಹಾಕು.

दांता, पु० ಗರಗಸದ ಹಲ್ಲು.

दांताकिटकिट, स्त्री० ಜಗಳ; ರಗಳೆ.

दाँती, स्त्री० ಕಡಿಗೋಲು.

दांना, स० ಒಕ್ಕು; ಹುಲ್ಲು ತುಳಿಸು.

दांभिक, वि० ಬೂಟಾಟಿಕೆಯ.

दाँव, पु० ಸಮಯ; ಕೆಲಸಸಾಧಿಸಿಕೊಳ್ಳಲು ಅನುಕೂಲವಾದ ಸಂಧಿ;—**चलना** ಯುಕ್ತಿಯಿಂದ ವಿಜಯವನ್ನು ಹೊಂದುವುದು: —**चलाना** ಹೊಂಚುಹಾಕು ಮೋಸಮಾಡುವುದು;—**पकड़ना** ಕುಸ್ತೀವರಸೆ ತೋರುವುದು; —**बैठना** ಸಮಯಮೀರುವುದು: —**पेंच** ರಾಜನೀತಿಯ ಚಾಕಚಕ್ಯತೆ.

दाँवरी, स्त्री० ಹಗ್ಗ.

दाई, वि० दे० **दाहिना.**

दाई, स्त्री० ದಾದಿ; ಸೂಲಗಿತ್ತಿ.

दाऊ, पु० ಅಣ್ಣ.

दाऊदी, पु० ಒಂದು ಬಗೆಯ ಗೋಧುವೆ.

दाख, स्त्री० ದ್ರಾಕ್ಷೆಹಣ್ಣು; ದ್ವೀಪದ್ರಾಕ್ಷಿ.

दाख़िल, वि० ಒಳಹೊಕ್ಕ; ಸೇರಿದ; ತಲುಪಿದ.

दाख़िल-ख़ारिज, पु० ಹೆಸರುಗಳನ್ನು ಬರಿದು ಹೊಡೆದು ಮತ್ತೆ ಬರಿಯುವ ಚಿತ್ತುಪುಸ್ತಕ.

दाख़िला, पु० ಸೇರಿಸುವಿಕೆ; ಪ್ರವೇಶ; ದಾಖಲೆ.

दाग, पु० ಉರಿ; ದಹನ; ಅಸೂಯೆ; ಹೊಟ್ಟೆ ಕಿಚ್ಚು.

दाग़, पु० ಮಚ್ಚೆ; ಚಿಹ್ನೆ; ಕಳೆ; ಬರೆ; ದೋಷ.

दाग़दार, वि० ಚುಕ್ಕೆಚುಕ್ಕೆಯಾದ.

दाग़ना, स० ಸುಡು; ಬರೆಹಾಕು.

दागबेल, स्त्री० ನೆಲ ಅಥವಾ ರಸ್ತೆಯ ಮೇಲೆ ಪಿಕಾಸಿಯಿಂದ ಮಾಡಿದ ಗುರುತು.

दाग़ी, वि० ಕಲೆಯುಳ್ಳ; ಕಳಂಕವುಳ್ಳ.

दाब, पु० ಸೆಕೆ; ದಗೆ; ಉಮ್ಮಳ; ತಾಪ.

दाज, पु० ಕತ್ತಲೆ; ಕತ್ತಲೆಯ ರಾತ್ರಿ.

दाजना, अ० ಉರಿಯುವುದು; ಅಸೂಯೆ ಪಡುವುದು.

दाड़िम, पु० ದಾಳಿಂಬೆ ಗಿಡ ಅಥವಾ ಅದರ ಹಣ್ಣು.

दाढ़, स्त्री० ದವಡೆ ಹಲ್ಲು. स्त्री० ಅರ್ಭಟ; ಗರ್ಜನೆ; ಬೊಬ್ಬೆ; **—मारकर रोना** ಗಟ್ಟಿಯಾಗಿ ಅರಚಿಕೊಂಡು ಅಳುವುದು.

दाढ़ना, स० ಸುಡುವುದು; ದುಃಖವನ್ನುಂಟು ಮಾಡುವುದು.

दाढ़ी, स्त्री० ಗಡ್ಡ; ಚಿಬುಕ.

दाता, पु० ಕೊಡುವಾತ; ದಾನಮಾಡುವವ.

दातून, स्त्री० ಹಲ್ಲು ಉಜ್ಜುವ ಕಡ್ಡಿ.

दाद, स्त्री० ಹುಳುಕಡ್ಡಿ; ಗಜಕರ್ಣ; ನ್ಯಾಯ; **—देना** ನ್ಯಾಯಮಾಡುವುದು; **—ख़्वाहिश** ಅನ್ಯಾಯವನ್ನು ಎದುರಿಸುವ; **—व सितद** ಲೇಣೇದೇಣೆ; ಜಮಾಖರ್ಚು.

दादनी, स्त्री० ತಕಾವಿ ಸಾಲ; ಮುಂಗಡದ ಸಾಲ.

दादरा, पु० ಒಂದು ರಾಗ.

दादा, पु० ತಂದೆಯ ತಂದೆ; ಅಜ್ಜ.

दादि, स्त्री० ಫಿರ್ಯಾದಿ; ನ್ಯಾಯ.

दादी, स्त्री० ತಂದೆಯ ತಾಯಿ; ಅಜ್ಜಿ. पु० ಫಿರ್ಯಾದಿ; ವಾದಿ.

दादुर, पु० ಕಪ್ಪೆ.

दाधना, स० ಸುಡು; ದಹಿಸು.

दान, पु० ಕೊಡುವಿಕೆ; ದಾನ.

दानव, पु० ರಾಕ್ಷಸ.

दाना, पु० ಧಾನ್ಯ; ಕಾಳು; ಬೀಜ; ಮರಿಗಾಳು; ಮಣಿ; ಹರಳು; **—दुनका** ಕಾಳುಕಡ್ಡಿ. **दाने दाने को मुँहताज़** ಕಡುದರಿದ್ರತೆ. वि० ಬುದ್ಧಿವಂತ; ಜಾಣ.

दानाई, स्त्री० ತಿಳುವಳಿಕೆ.

दानाचारा }
दानापानी } पु० ಅನ್ನಾಹಾರ; ತಿಂಡಿ ತೀರ್ಥ; ಜೀವನೋಪಾಯ.

दानिश, स्त्री० ತಿಳಿವಳಿಕೆ; ಬುದ್ಧಿ; ಸನ್ಮತಿ.
दानिशमंद, वि० ಬುದ್ಧಿವಂತ; ತಿಳಿವಳಿಕಸ್ಥ.
दानिस्त, स्त्री० ಬುದ್ಧಿ; ಅಭಿಪ್ರಾಯ.
दानिस्ता, वि० ತಿಳಿದ; ಅರಿತ.
दानी, वि० ದಾನಮಾಡುವಂಥ; ಉದಾರ. पु० ದಾನಕೊಡುವವ.
दानेदार, वि० ಹರಳು ಹರಳಾಗಿರುವ; ಮಳಲು ಮಳಲಾಗಿರುವ.
दाप, पु० ಅಹಂಕಾರ; ಜೋರು; ದರ್ಪ.
दाफा, वि० ನಾಶಮಾಡುವ.
दाब, स्त्री० ಒತ್ತುವಿಕೆ; ಒತ್ತಡ; ಭಾರ; ಅಂಕೆ; ಅಧಿಕಾರ; —रखना ಬಚ್ಚಿಡುವುದು.
दाबदार, वि० ಪ್ರತಾಪವುಳ್ಳ; ಜಬರ್ದಸ.
दाबना, स० दे० दबाना.
दाभ, पु० ದರ್ಭೆ.
दाम, पु० ಬೆಲೆ; ಕ್ರಯ; ಹಣ; ಧನ; ದಾರ; ಸರ; ಉರುಲು. चाम के दाम चलाना ಸಮಯ ನೋಡಿ ಮನ ಬಂದಂತೆ ಮಾಡು.
दामन, पु० ಸೆರಗು; ಅಂಚು.
दामनगीर, वि० ಬೆನ್ನು ಹತ್ತಿದವ; ದೂರು ತರುವವ.
दामनी, स्त्री० ಕುದುರೆಯ ಬೆನ್ನ ಮೇಲೆ ಹಾಸುವ ವಸ್ತ್ರ.
दामार, स्त्री० ಹಗ್ಗ.
दामाँचन, पु० ಕುದುರೆಯ ಹಿಂಗಾಲುಗಳಿಗೆ ಕಟ್ಟುವ ಹಗ್ಗ.
दामाद, पु० ಅಳಿಯ.
दामासाह, पु० ದಿವಾಳಿಯಾದವ.
दामिनी, स्त्री० ಮಿಂಚು; ಒಂದು ಆಭೂಷಣ; ಹಣೆ ಬೊಟ್ಟು.
दामी, स्त्री० ತೆರಿಗೆ. वि० ಬೆಲೆಯುಳ್ಳ.
दाय, पु० ದಾನ; ದಾಯಭಾಗ.
दायज, दयजा, पु० ವರದಕ್ಷಿಣೆ.
दायम, वि० ಶಾಶ್ವತವಾದ.
दायमुलहब्स, पु० ಜೀವಾವಧಿ ಶಿಕ್ಷೆ.
दायर, वि० ನಡೆಯುವ; ಜರುಗುವ.
दायरा, पु० ವೃತ್ತ; ಮಂಡಲ.
दायां, वि० ಬಲಗಡೆಯ.
दाया, स्त्री० ದಾದಿ.
दायाद, पु० ಭಾಗಸ್ಥ; ದಾಯಾದಿ.
दायित्व, पु० ಹೊಣೆಗಾರಿಕೆ; ಜವಾಬ್ದಾರಿ.
दायें, क्रि० ಬಲಗಡೆಗೆ.
दार, स्त्री० ಹೆಂಡತಿ. वि० ಉಳ್ಳವನು; ಉದಾ:—ईमानदार.
दारक, पु० ಹುಡುಗ; ಮಗ.
दारचीनी, स्त्री० ಲವಂಗ ಚಕ್ಕೆ; ದಾಲ್ಚೀನೀ.
दारद, पु० ವಿಷ.
दारण, पु० ಹರಿಯುವಿಕೆ; ಸೀಳುವಿಕೆ.
दार-मदार, पु० ಆಶ್ರಯ; ಕಾರ್ಯಭಾರ.
दारु, पु० ಕಟ್ಟಿಗೆ; ದೇವದಾರು.

दारुक, पुं० ದೇವದಾರು ; ಸಾರಥಿ.

दारुण, वि० ಭಯಂಕರ.

दारु, स्त्री० ಸಾರಾಯಿ ; ಮದ್ಯ ; ಔಷಧ ; ಮದ್ದು ; ಸಿಡಿಮದ್ದು.

दारुल-अमरात, पुं० ರಾಜಧಾನಿ

दारुल-ज़र्ब, पुं० ಟಂಕಸಾಲೆ.

दारुल-शफ़ा, पुं० ಆಸ್ಪತ್ರೆ.

दारोग़ा, पुं० ಮೇಲ್ವಿಚಾರಕ ; ಇನ್ಸ್ಪೆಕ್ಟರ್.

दार्शनिक, वि० ದರ್ಶನ ಶಾಸ್ತ್ರಕ್ಕೆ ಸಂಬಂಧಿಸಿದ.

दार्शनिक, पुं० ದರ್ಶನ ಶಾಸ್ತ್ರಜ್ಞ.

दाल, स्त्री० ಬೇಳೆ ; ಬೇಯಿಸಿದ ಬೇಳೆ ; ತೊಗೆ ; ಮೈಲಿ ಸಿಡುಬು ಮೊದಲಾದವುಗಳ ಹಕ್ಕಳೆ ;—**न गलना** ಬೇಳೆ ಬೇಯದಿರು ; ಅಧಿಕಾರ ನಡೆಯದಿರುವಿಕೆ ;—**में काला होना** ಕಳಂಕ ತೋರುವ ಲಕ್ಷಣ ವಿರುವಿಕೆ.

दालचीनी, स्त्री० ಲವಂಗಚಕ್ಕೆ.

दालमोठ, स्त्री० ಎಣ್ಣೆಯಲ್ಲಿ ಕರಿದ ಬೇಳೆಕಾಳು ; ಹುರಿದ ಅವಲಕ್ಕಿ.

दालान, पुं० ಮೊಗಸಾಲೆ ; ಕೈಸಾಲೆ ; ಪಡಸಾಲೆ.

दाँव, पुं० ಆವರ್ತ ; ಸಲ ; ಸರದಿ ; ಒಂತು ; ವೇಳೆ ; ಅನುವು ; ಹಂಚಿಕೆ ; ಉಪಾಯ ; ತಂತ್ರ ; ಪರಸೆ ;—**लेना** ಸೇಡುತೀರಿಸಿ ಕೊಳ್ಳುವುದು ;—**लगाना** ಪಂದ್ಯಕಟ್ಟುವುದು ;—**आना** ಗೆಲುವು ಆಗು ;—**देना** ಸೋತದ್ದಕ್ಕೆ ಶಿಕ್ಷೆ ಅನುಭವಿಸು.

दावँना, स० ಒಕ್ಕು ; ಹುಲ್ಲುತುಳಿಸು.

दावँरी, स्त्री० ಹಗ್ಗ

दाव, पुं० ಉರಿ ; ತಾಪ.

दावत, स्त्री० ಔತಣ.

दावन, पुं० ದಮನ ; ನಾಶ ; ಕುಡುಗೋಲು.

दावना, स० ಒಕ್ಕು ; ಹುಲ್ಲು ತುಳಿಸು. (**दावँना**)

दावा, स्त्री० ಕಾಡ್ಗಿಚ್ಚು ; ದಾವಾನಲ. **पुं०** ಹಕ್ಕು ; ಅಧಿಕಾರ ; ದಾವೆ ; ವ್ಯಾಜ್ಯ ; ಮೊಕದ್ದಮೆ ; ದೃಢವಾದ ಹೇಳಿಕೆ.

दावात, स्त्री० ಮಸಿಕುಡಿಕೆ ; ದೌತಿ.

दावादार, पुं० ಬಾಧ್ಯಸ್ಥ ; ದಾವೆ ಮಾಡಿರುವವ.

दास, पुं० ಆಳು ; ಅಡಿಯಾಳು ; ಊಳಿಗದವ ; ಸೇವಕ.

दासता, स्त्री० ಊಳಿಗ ; ಸೇವೆ ; ದಾಸ್ಯ

दासी, स्त्री० ಊಳಿಗದವಳು ; ದಾಸಿ

दास्तान, स्त्री० ಸುದ್ದಿ ; ವೃತ್ತಾಂತ ; ಕತೆ ; ವರ್ಣನೆ.

दाह, पुं० ದಹನ ; ದಹನಕ್ರಿಯೆ ; ತಾಪ.

दाहकर्म, पुं० ದಹನ ಸಂಸ್ಕಾರ.

दाहन, पुं० ಉರಿಸುವಿಕೆ ; ದಹಿಸುವಿಕೆ.

दाहना, स० ಉರಿಸು ; ಸುಡು.

दाहिना, वि० ಬಲಗಡೆಯ ಕೂಲವಾದ.

दाहिने, क्रि० ಬಲಗಡೆ.

दिअली, स्त्री० ಹಣತೆ.

दिआ, पु० ದೀಪ.

दिआसलाई, स्त्री० ಬೆಂಕಿ ಕಡ್ಡಿ ದೀಪದ ಕಡ್ಡಿ.

दिक़, वि० ಬಹಳ ಕಷ್ಟಪಟ್ಟವ ಬೇಸತ್ತವ पु० ಕ್ಷಯರೋಗ.

दिक़्क़त, स्त्री० ತೊಂದರೆ; ಕಷ್ಟ; ತೊಡಕು.

दिखना, अ० ಕಾಣು; ಕಂಡುಬರು; ತೋರು.

दिखलाना, स० ನೋಡಿಸು; ತೋರಿಸು; ಪ್ರದರ್ಶಿಸು.

दिखवैया, पु० ತೋರಿಸುವವ; ನೋಡುವವ.

दिखाऊ, वि० ನೋಡತಕ್ಕ; ತೋರಿಕೆಯ; ಬಾಹ್ಯಾಡಂಬರದ.

दिखाना, स० ನೋಡಿಸು; ತೋರಿಸು; ತೋರಿಸಿಕೊಡು.

दिखाव, पु० ನೋಟ; ದೃಶ್ಯ.

दिखावट, स्त्री० ತೋರಿಕೆ; ಸೋಗು; ಥಳಕು.

दिखावटी, वि० ತೋರಿಕೆಯ; ನಟನೆಯ.

दिखावा, पु० ನಟನೆ; ತೋರಿಕೆ; ಸೋಗು; ಬಾಹ್ಯಾಡಂಬರ.

दिखौवा, वि० दे० दिखावटी.

दिगंत, पु० ಕ್ಷಿತಿಜ; ದಿಗಂತ.

दिगंबर, पु० ಬೆತ್ತಲೆಯಾಗಿರುವ ಜೈನ ಸನ್ಯಾಸಿ; ಜೈನರಲ್ಲಿಯ ಒಂದು ಪಂಗಡ. वि० ಬೆತ್ತಲೆಯಾದ.

दिग्दर्शन, पु० ಇಂಗಿತಮಾಡುವಿಕೆ; ದಾರಿತೋರುವಿಕೆ.

दिगर, वि० ಅನ್ಯ; ಇತರ; ಎರಡನೆಯ.

दिठाना, अ० ದೃಷ್ಟಿ ಪರಿಹಾರ ಮಾಡುವುದು.

दिठी, स्त्री० ದೃಷ್ಟಿ.

दिठौना, पु० ದೃಷ್ಟಿ ಬೊಟ್ಟು; ಹಣೆ ಬೊಟ್ಟು.

दिढ़ाना, स० ಬಲಪಡಿಸು.

दिन, पु० ದಿನ; ದಿವಸ; ಹಗಲು; ಕಾಲ; ಸಮಯ; ಅವಧಿ;—दहाड़े ನಟ್ಟ ಹಗಲಿನಲ್ಲಿ;—रात ಹಗಲಿರುಳು;—चढ़ना ಹೊತ್ತೇರುವುದು;—भरना ದಿನಕಳೆಯುವುದು.

दिनी, वि० ಬಹಳ ದಿವಸದ; ಹಳೆಯ.

दिनौंधी, स्त्री० ಹಗಲು ಕುರುಡು.

दिमाग़, पु० ಮೆದಳು; ಬುದ್ಧಿ; ಸೊಕ್ಕು; ಗರ್ವ;—खाना या चाटना ಕಾಡು ಹರಟೆ ಹೊಡೆದು ತಲೆ ಚಿಟ್ಟು ಹಿಡಿಸು;—चढ़ना ಬಹಳ ಗರ್ವಪಡುವುದು;—लड़ाना ಬಹಳ ಗಂಭೀರವಾಗಿ ಯೋಚಿಸು.

दिमाग़दार, वि० ಮೇಧಾವಿ; ಬುದ್ಧಿವಂತ; ಗರ್ವಿಷ್ಠ.

दि़माग़ी, **वि०** ಮೆದುಳಿಗೆ ಸಂಬಂಧಿಸಿದ.

दिया, **पु०** ದೀಪ; ದೀವಿಗೆ.

दियानत, **स्त्री०** ಪ್ರಾಮಾಣಿಕತೆ.

दियानतदार, **पु०** ಪ್ರಾಮಾಣಿಕ.

दियारा, **पु०** ಪುಲಿನ; ನದಿದಂಡೆಯ ಪ್ರದೇಶ.

दियासलाई, **स्त्री०** ಬೆಂಕಿ ಕಡ್ಡಿ; ದೀಪದ ಕಡ್ಡಿ.

दिरम, **पु०** ಈಜಿಪ್ತುದೇಶದ ಒಂದು ಬೆಳ್ಳಿ ನಾಣ್ಯ.

दिरमान, **पु०** ಉಪಚಾರ; ಚಿಕಿತ್ಸೆ.

दिरहम, **पु०** दे० **दिरम**.

दि़ल, **पु०** ಹೃದಯ; ಮನಸ್ಸು; ಚಿತ್ತ; ಸಾಹಸ; ಎದೆ;—**के फफोले फोड़ना** ಮನಸ್ಸಿನ ಕೋಪವನ್ನು ಹೊರಗೆಹಾಕುವುದು.

दि़ल-आज़ार, **वि०** ಮನನೋಯಿಸುವ; ಅತ್ಯಾಚಾರಿ; ನಿರ್ದಯಿ.

दि़ल-कश, **वि०** ಚಿತ್ತಾಕರ್ಷಕ.

दि़ल-कुशा, **वि०** ಸುಂದರ; ಮನೋಹರ.

दि़ल-ख़्वाह, **वि०** ಮನ ಬಯಸಿದ; ಇಚ್ಛಾನುಕೂಲ.

दि़ल-गीर, **वि०** ಮನಗುಂದಿರುವ; ದುಃಖಿತ.

दि़ल-गीरी, **स्त्री०** ವ್ಯಥೆ; ದುಃಖ; ದುಗುಡ.

दि़ल-चला, **वि०** ಧೈರ್ಯವಂತ; ವೀರ.

दि़ल-चस्प, **वि०** ಮನಸ್ಸಿಗೆ ಹಿತವೆನಿಸುವ; ರಮ್ಯ; ಚಿತ್ತಾಕರ್ಷಕ.

दि़ल-चस्पी, **स्त्री०** ಮನಸ್ಸಿನ ಅಭಿರುಚಿ; ಆಸ್ಥೆ; ಅಭಿರುಚಿ; ಅಕ್ಕರೆ.

दि़ल-ज़दा, **वि०** ವ್ಯಥೆಯುಳ್ಳ; ದುಃಖಿತ.

दि़ल-जमई, **स्त्री०** ಸಮಾಧಾನ; ಶಾಂತಿ.

दि़ल-जला, **वि०** ಮನನೊಂದ.

दि़लजोई, **स्त्री०** ಸಂತೋಷಪಡುವುದು.

दि़ल-दार, **वि०** ಉದಾರ; ರಸಿಕ.

दि़लनशीन, **वि०** ಮನವೊಪ್ಪುವ.

दि़ल-पज़ीर, **वि०** ಮನವೋಹಕ; ಸುಂದರ.

दि़ल-फ़रेब, **वि०** ಮನೋಹರ; ಮೋಹಕ; ಆಕರ್ಷಕ.

दि़ल-बर, **वि०** ಪ್ರಿಯ; ಪ್ರೀತಿಯ.

दि़ल-बस्ता, **वि०** ಮನಸ್ಸು ಮತ್ತೊಬ್ಬರಲ್ಲಿಯಾದರೂ ನೆಟ್ಟು ಹೋಗಿರುವ; ಪ್ರೇಮಿ; ಅನುರಕ್ತ.

दि़ल-बहलाव, **पु०** ಮನೋರಂಜನೆ.

दि़लबाज़, **वि०** ಎದೆಗಾರ; ಚತುರ.

दि़ल-रुबा, **स्त्री०** ಪ್ರಿಯ; ಪ್ರೀತಿಪಾತ್ರನಾದವ.

दि़लवाना, स० दे० **दि़लाना**.

दि़ल-शाद, **वि०** ಸಂತೋಷವಾಗಿರುವ; ಆನಂದಿತ.

दि़ल-शिकनी, **स्त्री०** ಮತ್ತೊಬ್ಬರನ್ನು ದುಃಖಕ್ಕೆ ಈಡುಮಾಡುವುದು.

दिल-शिकस्ता, वि० ಎದೆಯೊಡೆದು ಹೋದ; ದುಃಖಿತ: ಖಿನ್ನ.

दिल-सोज़, वि० ಸಹಾನುಭೂತಿಯುಳ್ಳ; ಕರುಣಾಳು.

दिला, अव्य० ಹೇ ಮನವೆ!

दिलाना, स० ಕೊಡಿಸು.

दिलावर, वि० ಕಡುಗಲಿ; ಶೂರ.

दिलावरी, स्त्री० ಕಡುಗಲಿತನ; ಶೌರ್ಯ; ಸಾಹಸ.

दिलासा, पु० ಸಮಾಧಾನ; ಸಂತವಣೆ; ಸಂತಸ.

दिली, वि० ಹಾರ್ದಿಕ; ಹೃದಯಾಂತರಾಳದ.

दिलेर, वि० ಶೂರ; ಸಾಹಸಿ; ಎದೆಗಾರ.

दिलेराना, वि० ಧೀರತನದ; ಹೆಸರಿಗೆ ತಕ್ಕ; ವೀರಸಂಥ.

दिलेरी, स्त्री० ಶೌರ್ಯ; ಸಾಹಸ; ಧೈರ್ಯ.

दिल्लगी, स्त्री० ಹಾಸ್ಯ;—**उड़ाना** ಪರಿಹಾಸಮಾಡು.

दिवाना, वि० ಹುಚ್ಚು. स० ಕೊಡಿಸು.

दिवाला, पु० ದಿವಾಳಿ;—**निकलना** ದಿವಾಳಿಯಾಗಿ ಹೋಗುವುದು.

दिवाली, स्त्री० ದೀಪಾವಳಿಹಬ್ಬ.

दिसना, अ० ಕಂಡುಬರುವುದು.

दिसा, स्त्री० ದಿಕ್ಕು; ದೆಸೆ.

दिसावर, पु० ಹೊರಗಿನನಾಡು; ಪರದೇಶ; ದೇಶಾವರ.

दिसावरी, वि० ಹೊರಗಿನಿಂದ ಬಂದ; ದೇಶಾವರದ.

दिहंदा, वि० ಕೊಡುವವ: ದಾತ.

दिहाड़ा, पु० ದುರ್ದೆಸೆ; ಹಗಲು.

दिहात, स्त्री० दे० **देहात.**

दिहाती, वि० दे० **देहाती.**

दीआ, पु० ದೀಪ.

दीखना, अ० ಕಾಣಿಸು; ಕಂಡುಬರು.

दीगर, वि० ಅನ್ಯ; ಇತರ; ಎರಡನೆಯ.

दीघी, स्त्री० ಕೆರೆ; ಕೊಳ.

दीठ, स्त्री० ನೋಡುವಿಕೆ; ದೃಷ್ಟಿ; ನೋಟ; ದಿಟ್ಟಿ;—**भरे देखना** ಕಣ್ಣು ತುಂಬ ನೋಡು.

दीठबंदी, स्त्री० ಕಣ್ಣುಕಟ್ಟುವಿದ್ಯೆ; ಗಾರುಡಿ ವಿದ್ಯೆ.

दीद, स्त्री० ದರ್ಶನ; ನೋಟ.

दीदा, पु० ದಿಟ್ಟಿ; ನೋಟ; ಕಣ್ಣು; ದಿಟ್ಟತನ;—**दानिस्ता** ತಿಳಿದು

दीदार, पु० ಕಾಣುವಿಕೆ; ಭೆಟ್ಟಿ; ಸಂದರ್ಶನ.

दीदारू, वि० ನೋಡತಕ್ಕ; ದರ್ಶನೀಯ.

दीदी, स्त्री० ಅಕ್ಕ.

दीन, वि० ಬಡ; ಗತಿಕೆಟ್ಟ; ದುಃಖಿತ; ವಿನಯವುಳ್ಳ; पु० ಮತ; ಧರ್ಮ; ಧರ್ಮವಿಶ್ವಾಸ.

दीनता, स्त्री० ಬಡತನ; ದಾರಿದ್ರ್ಯ.

दीनदार, ವಿ० ತನ್ನ ಮತದಲ್ಲಿ ನಂಬಿಕೆಯುಳ್ಳವ.

दीनदारी, ಸ್ತ್ರೀ० ಧರ್ಮಾಚರಣೆ.

दीन दुनिया, दीन दुनी ಸ್ತ್ರೀ० ಇಹಪರ.

दीनार, ಪು० ಚಿನ್ನದ ಒಡವೆ; ಬಂಗಾರದ ನಗ; ಚಿನ್ನದ ನಾಣ್ಯ; ಮೊಹರು.

दीनी, ವಿ० ಮತ ಸಂಬಂಧವಾದ.

दीप, दीपक, ಪು० ಸೊಡರು; ದೀವಿಗೆ; ದೀಪ.

दीपकिट्ट, ಪು० ಕಾಡಿಗೆ; ಕಪ್ಪು.

दीपदानी, ಸ್ತ್ರೀ० ತುಪ್ಪ ಬತ್ತಿ ಮುಂತಾದ ದೀಪದ ಸಾಮಾನುಗಳನ್ನು ಇಡುವ ಭರಣಿ; ದೀಪದ ಗೂಡು.

दीपन, ಪು० ಹೊತ್ತಿಸುವಿಕೆ; ಕೆರಳಿಸುವಿಕೆ; ಉದ್ದೀಪನ.

दीपिका, ಸ್ತ್ರೀ० ಸೊಡರು; ಚಿಕ್ಕ ದೀಪ.

दीप्ति, ಸ್ತ್ರೀ० ಬೆಳಕು; ಪ್ರಕಾಶ.

दीबाचा, ಪು० ಮುನ್ನುಡಿ; ಪೀಠಿಕೆ; ಪ್ರಸ್ತಾವನೆ; ಭೂಮಿಕೆ.

दीमक, ಸ್ತ್ರೀ० ಗೆದ್ದಲು; ಗೊರಲೆ.

दीया, ಪು० ದೀಪ;—**ठंडा होना** ವಂಶನಷ್ಟವಾಗು;—**बढ़ाना** ದೀಪ ಆರಿಸು;—**बत्ती करना** ಬೆಳಕು ಮಾಡುವುದು.

दीर्घकेश, ಪು० ಕರಡಿ.

दीर्घसूत्री, ವಿ० ಸೋಮಾರಿ.

दीर्ण, ವಿ० ಹರಿದು ಹೋದ.

दीवट, ಸ್ತ್ರೀ० ದೀಪದ ಕಂಬ; ಸಮೆ.

दीवान, ಪು० ರಾಜ ಸಭೆ; ದರ್ಬಾರು; ಮಂತ್ರಿ; ದಿವಾನ.

दीवान-ए-आम, ಪು० ಸಾರ್ವಜನಿಕ ದರಬಾರು ನಡೆಯುವ ಸ್ಥಳ.

दीवान-ख़ाना, ಪು० ಮನೆಯ ಮುಂಭಾಗದ ಕೋಣೆ; ಹಜಾರ.

दीवान-ख़ास, ಪು० ಮಂತ್ರಾಲೋಚನೆಯ ಸಭೆ; ರಾಜನು ತನ್ನ ಮಂತ್ರಿಗಳೊಡನೆ ನಡೆಸುವ ದರ್ಬಾರು.

दिवाना, ವಿ० ಹುಚ್ಚ; ಮರುಳ; ಉನ್ಮತ್ತ.

दीवानी, ಸ್ತ್ರೀ० ಮಂತ್ರಿಯ ಪದವಿ; ದಿವಾನಗಿರಿ; 'ಸಿವಿಲ್' ನ್ಯಾಯಸ್ಥಾನ. ವಿ० ಹುಚ್ಚಿ.

दीवार, ಸ್ತ್ರೀ० ಗೋಡೆ.

दीवारगीर, ಪು० ದೀಪದಾನಿ; ಗೋಡೆಗೆ ನೇತುಹಾಕಿರುವ ದೀಪದ ದಿಂಬು.

दीवाल, ಸ್ತ್ರೀ० ದೇ० **दीवार.**

दीवाली, ಸ್ತ್ರೀ० ದೀಪಾವಳಿ; ದೀವಳಿಗೆ.

दीसना, ಅ० ಕಂಡು ಬರು; ಕಾಣಿಸು.

दीह, ವಿ० ಉದ್ದವಾದ.

दुंद, ಪು० ದ್ವಂದ್ವಯುದ್ಧ; ದಾಂಧಲೆ ಜೋಡಿ; ನಗಾರಿ.

दुंबा, ಪು० ಹಿಂಭಾರಬಾಲದಮೇಕೆ.

दुआ, स्त्री० ಪ್ರಾರ್ಥನೆ; ಅರಿಕೆ; ಹರಕೆ; ಆಶೀರ್ವಾದ;—**मांगना** ಪ್ರಾರ್ಥಿಸು.

दुआब | दुआबा } पु० ಎರಡು ನದಿಗಳ ನಡುವಣ ಪ್ರದೇಶ.

दुआर, पु० ದ್ವಾರ; ಬಾಗಿಲು.

दुआरी, स्त्री० ಚಿಕ್ಕಬಾಗಿಲು; ದಿಡ್ಡಿ ಬಾಗಿಲು.

दुआल, स्त्री० ಚರ್ಮ; ತೊಗಲು ಪಟ್ಟಿ.

दुआली, स्त्री० ಯಂತ್ರಗಳನ್ನು ತಿರುಗಿಸಲು ಉಪಯೋಗಿಸುವ ಚರ್ಮದ ಪಟ್ಟಿ.

दुई, वि० ಎರಡು.

दुकड़ा, पु० ಎರಡೆರಡು; ಜತೆ.

दुकना, अ० ಮರೆಯಾಗು.

दुकान, स्त्री० ಅಂಗಡಿ.

दुकानदार, पु० ಅಂಗಡಿಯವನು.

दुकानदारी, स्त्री० ವ್ಯಾಪಾರ; ವರ್ತಕತನ.

दुकाल, पु० ಬರಗಾಲ; ಕ್ಷಾಮ.

दुकूल, पु० ನಾರುಮಡಿ; ಬಟ್ಟೆ.

दुकेला, वि० ಇಬ್ಬರು; ಜತೆ.

दुकेले, क्रि० ಇಬ್ಬರಾಗಿ.

दुक्का, वि० ಜೋಡಿಯಾಗಿರುವ; **इक्का**—ಒಂದೆರಡು.

दुक्की, स्त्री० ಎರಡನೇಬಂದು; ದುಗ.

दुखंडा, वि० ಎರಡಂತಸ್ತಿನ; ಎರಡು ಭಾಗದ.

दुखड़ा, पु० ಶೋಕ ವೃತ್ತಾಂತ; ವಿಪತ್ತು;—**रोना** ತನ್ನಗೋಳನ್ನು ತೋಡಿಕೊಂಡು ಅಳುವುದು ಅಥವಾ ಹೇಳಿಕೊಳ್ಳುವುದು.

दुखत | दुखतर } स्त्री० ಮಗಳು.

दुखद, वि० ದುಃಖದಾಯಕವಾದ.

दुखदाई, वि० ಸಂಕಟಕೊಡುವ.

दुखना, अ० ನೋಯು; ದುಃಖಪಡು.

दुखाना, स० ನೋಯಿಸು; ದುಃಖಪಡಿಸು.

दुखारा | दुखारी } वि० ಪೀಡಿತರಾದ.

दुखिया, वि० ದುಃಖಿತ; ಪೀಡಿಸಲ್ಪಟ್ಟ.

दुखियारा, वि० दे० **दुखारा.**

दुखीला, वि० ನೊಂದ.

दुखौहाँ, वि० ನೋವುಕೊಡುವ; ಮನನೊಂದ.

दुगई, स्त्री० ಕೈಸಾಲೆ; ವರಾಂಡ.

दुगदुगी, स्त्री० ಎದೆನಡುವಣಕಾಲುವೆ.

दुगड़ा, पु० ಎರಡು ಕೊಳವಿಯ ಬಂದೂಕು.

दुगुन | दुगुना } वि० ಇಮ್ಮಡಿ; ಎರಡರಷ್ಟು

दुगुनाना, स० ಇಮ್ಮಡಿಸು.

दुगाड़ा, पु० दे० **दुगड़ा.**

दुघरी, स्त्री० ಎರಡುಘಳಿಗೆ.

दुचिताई, स्त्री० ಶಂಕೆ; ಸಂದೇಹ; ಇಮ್ಮನದ; ಚಿಂತೆ.

दुजानू, **क्रि०** ಮೊಣಕಾಲೂರಿ.

दुजीह, **पु०** ಎರಡುನಾಲಿಗೆಗಳುಳ್ಳ; ಹಾವು.

दुज़्द, **पु०** ಕಳ್ಳ.

दुज़्दी, **स्त्री०** ಕಳ್ಳತನ.

दुज़्दीदा, **वि०** ಕಳ್ಳತನದ; **निगाहे—** ಕಳ್ಳನೋಟ.

दुट्टक, **वि०** ಎರಡುಹೋಳಾದ.

दुत, **अव्य०** ಛೀ; ಥೇ; ಧಿಕ್.

दुतकार, **स्त्री०** ತಿರಸ್ಕಾರ; ಧಿಕ್ಕಾರ.

दुतकारना, **स०** ತಿರಸ್ಕರಿಸು; ಜರೆ; ಧಿಕ್ಕರಿಸು.

दुतर्फ़ा, **वि०** ಎರಡೂಕಡೆಯ; ಉಭಯಾರ್ಥದ.

दुतारा, **पु०** ಎರಡುತಂತಿಗಳ ವಾದ್ಯ.

दुति, **स्त्री०** ಕಾಂತಿ.

दुदल, **वि०** ದ್ವಿದಳ; ಒಡೆದರೆ ಎರಡು ಭಾಗವಾಗುವ ಧಾನ್ಯ (ಬೇಳೆ).

दुदलाना, **स०** ಧಿಕ್ಕರಿಸು; ತಿರಸ್ಕರಿಸು.

दुदिला, **वि०** ಇಮ್ಮನದ.

दुधमुँहाँ, **वि०** ಹಾಲುಣ್ಣುವ; ಹಾಲುಹಲ್ಲಿನಮಗು; ಮೊಲೆಕೂಸು.

दुधहाँड़ी, **स्त्री०** ಹಾಲಿನಮಡಿಕೆ.

दुधार, **वि०** ಹಾಲುಕೊಡುವ.

दुधारा, **वि०** ಎರಡು ಅಲಗಿನ; ಇಬ್ಬಾಯಿಕತ್ತಿ.

दुधारी, **वि०** ಹಾಲು ಕೊಡುವಂತಹ; ಈರಲಗಿನ.

दुधारू, **वि०** ಬಹಳ ಹಾಲುಕೊಡುವ ಹಸು.

दुधैल, **वि०** **दे०** **दुधारू**.

दुनया, **पु०** ಎರಡುನದಿಗಳ ಸಂಗಮ.

दुनाली, **वि०** ಎರಡು ಕೊಳವಿಯ.

दुनियाँ, **दुनिया** } **स्त्री०** ಜಗತ್ತು; ಪ್ರಪಂಚ; ಜನತೆ.

दुनियाई, **वि०** ಸಾಂಸಾರಿಕ; ಪ್ರಾಪಂಚಿಕ.

दुनियादार, **पु०** ಗೃಹಸ್ಥ; ವ್ಯವಹಾರ ಚತುರ.

दुनियादारी, **स्त्री०** ಲೌಕಿಕವ್ಯವಹಾರ; ಚತುರತೆ; ಮೋಸ.

दुनियावी, **वि०** ಪ್ರಾಪಂಚಿಕ. **स्त्री०** ಜಗತ್ತು.

दुनियासाज़, **वि०** ಮುಖಸ್ತುತಿ ಮಾಡುವವ; ಸ್ವಾರ್ಥಸಾಧಕ; ವ್ಯವಹಾರ ಚತುರ.

दुनियासाज़ी, **स्त्री०** ಚಾಕಚಕ್ಯ; ನಿಪುಣತೆ.

दुपट्टा, **पु०** ದುಪ್ಪಟಿ; ಅಂಗವಸ್ತ್ರ.

दुपट्टी, **स्त्री०** **दे०** **दुपट्टा**.

दुपहर, **स्त्री०** **दे०** **दोपहर**.

दुपहरिया, **दुपहरी** } **स्त्री०** ಮಧ್ಯಾಹ್ನ; ಮಧ್ಯಾಹ್ನದಲ್ಲಿ ಅರಳುವ ಮಲ್ಲಿಗೆ.

दुफ़सली, **वि०** ಎರಡುಬೆಳೆಯ.

दुबकना, **अ०** ಬಚ್ಚಿಟ್ಟುಕೊಳ್ಳು; ಕಣ್ಮರೆಯಾಗು.

दुबरा, **वि०** **दे०** **दुबला**.

दुबराना, अ० ಬಡವಾಗು.

दुबला, वि० ಅಶಕ್ತ; ಬಡಕಲ.

दुबारा, क्रि० ಮತ್ತೊಮ್ಮೆ; ಎರಡನೆಯಸಾರಿ.

दुबिधा, वि० ಅನುಮಾನ; ಇಬ್ಬಂದಿ; ಎಡವಟ್ಟು.

दुभाषिया } पु० ಎರಡುಭಾಷೆಗಳನ್ನು
दुभाषी } ಬಲ್ಲವ.

दुमंज़िला, वि० ಎರಡಂತಸ್ತಿನ.

दुम, स्त्री० ಬಾಲ;—दबाकर भागना ಹೆದರಿ ಓಡುವುದು;—हिलाना ಸಂತೋಷವನ್ನು ಹೊರಪಡಿಸುವುದು.

दुमची, स्त्री० ಬಾಲದ ಕೆಳಗೆಬರುವ ಕುದುರೆ ಜೀನಿನಪಟ್ಟಿ.

दुमदार, वि० ಬಾಲವಿರುವ; ಬಿರುದು ಪಡೆದ.

दुमुहाँ, वि० ಮೋಸಗಾರ.

दुरंगा, वि० ವಂಚಕ; ಕಪಟಿ.

दुरंगी, स्त्री० ಮೋಸ; ಕಪಟ.

दुरंत, वि० ಕೆಟ್ಟದ್ದಾಗಿ ಪರಿಣಮಿಸುವ.

दुर, अव्य० ನಿಷೇಧಾರ್ಥವನ್ನು ಸೂಚಿಸುವ ಅವ್ಯಯ. पु० ಮುತ್ತು; ಬುಲಾಕು; ನತ್ತು.

दुरदुराना, स० ಅವಮಾನಪಡಿಸಿ ಓಡಿಸುವುದು.

दुरना, अ० ಮರೆಯಾಗು.

दुरभिसंधि, स्त्री० ಕೆಟ್ಟ ಅಭಿಪ್ರಾಯದಿಂದ ಒಂದುಗೂಡಿಸುವ ಯೋಚನೆ.

दुरबीन, स्त्री० दे० दूरबीन.

दुरवेश, पु० ಫಕೀರ; ಸಾಧು. (दरवेश)

दुराग्रह, पु० ಮುಷ್ಕರ; ಹಠ.

दुरादुरी, स्त्री० ಮುಚ್ಚುಮರೆ.

दुराधर्ष, वि० ಪ್ರಚಂಡ.

दुराना, स० ಮರೆಮಾಡು; ದೂರಮಾಡು; ಮಾಯವಾಗು; ಬಚ್ಚಿಡು.

दुराप, वि० ದುರ್ಲಭ.

दुराव, पु० ಮುಚ್ಚುಮರೆ; ವಂಚನೆ.

दुराशय, पु० ದುರುದ್ದೇಶ್ಯ; ಕೆಟ್ಟಭಾವನೆ.

दुराहा, पु० ಎರಡು ರಸ್ತೆಗಳು ಕೂಡುವ ಸ್ಥಳ.

दुरित, पु० ಪಾಪ; ದೋಷ.

दुरियाना, स० ದೂರಮಾಡು.

दुरुखा, वि० ಎರಡುಮುಖದ.

दुरुस्त, वि० ಸರಿಯಾಗಿರುವ; ಶುದ್ಧ.

दुरुस्ती, स्त्री० ತಿದ್ದುಪಾಟು; ಸುಧಾ

दुरूह, वि० ಗೂಢ; ಕಠಿಣ; ಊಹಿಸಲಾಗದ.

दुरेफ़, पु० ಭ್ರಮರ; ದುಂಬಿ.

दुर्घट, वि० ಕಷ್ಟಸಾಧ್ಯ.

दुर्घटना, स्त्री० ವಿಪತ್ತು.

दुर्ज्ञेय, वि० ತಿಳಿಯಲಾಗದ.

दुर्दम्य, वि० ಪ್ರಬಲ.

दुर्दांत, वि० ಅಶಾಂತ; ಪ್ರಬಲ; ಭಯಂಕರ.

दुर्दिन, पु० ಮೋಡ ಕವಿದದಿನ; ದುಃಖದದಿನ.

दुर्द्धर, वि० ಪ್ರಚಂಡ.

दुर्द्धर्ष, वि० दे० दुर्द्धर.

दुर्बोध, वि० ಬೇಗನೆ ಮನವರಿಕೆಯಾಗದ.

दुर्मिल, वि० ದೊರೆಯದ.

दुर्रा, पु० ಬಾವುಟ; ಬಾರುಗೋಲು.

दुर्वार, वि० ಅಗತ್ಯವಾಗಿ ಸಂಭವಿಸುವ.

दुर्विनीत, वि० ಅಸಭ್ಯನಾದ; ಉದ್ದಂಡತನದ.

दुर्विपाक, पु० ದುರದೃಷ್ಟ; ಕೆಟ್ಟ ಪರಿಣಾಮ.

दुलकी, स्त्री० ಕುಲುಕೋಟ; ಕುದುರೆಯ ಒಂದು ಬಗೆಯ ನಡೆ.

दुलखना, स० ಪದೇಪದೇ ಹೇಳು.

दुलड़ी, स्त्री० ಎರಡೆಳೆಯಹಾರ.

दुलत्ती, स्त्री० ಹಿಂಗಾಲೇಟು; ಒದೆ.

दुलना, अ० ಅಲುಗಾಡು.

दुलराना, स० ಮುದ್ದಾಡು.

दुलहन / दुलहिन, स्त्री० ಮದುಮಗಳು; ಮದುವೆಹೆಣ್ಣು.

दुलहा, पु० ಮದುವಣಿಗ.

दुलाई, स्त्री० ಕವುದಿ; ರಜಾಯಿ.

दुलाना, स० ಅಲುಗಾಡಿಸು.

दुलार, पु० ಮುದ್ದು; ಮುದ್ದಾಟ.

दुलारना, स० ಮುದ್ದಾಡು.

दुलारा, वि० ಪ್ರೀತಿಪಾತ್ರ.

दुलीचा, पु० ಜಮಖಾನೆ.

दुवन्नी, स्त्री० ಎರಡಾಣೆಯ ನಾಣ್ಯ.

दुवार, पु० ಬಾಗಿಲು.

दुवाल, स्त्री० ತೊಗಲಿನ ಪಟ್ಟಿ.

दुवाली, स्त्री० ಡವಾಲಿ; ಹೆಗಲಿನ ಮೇಲೆಧರಿಸುವ ಚಕ್ಕಳದ ಪಟ್ಟಿ.

दुविधा, स्त्री० ಅನಿಶ್ಚಯ; ಸಂದೇಹ; ಇಬ್ಭಾಗವಾದ ಮನೋಭಾವ.

दुशाला, पु० ಶಾಲುಜೋಡಿ.

दुश्मन, पु० ಹಗೆ, (दुशमन) ವಿರೋಧಿ.

दुश्मनी, स्त्री० ಹಗೆತನ; ದ್ವೇಷ.

दुश्वार, वि० ಕಠಿಣ; ಕಷ್ಟವಾದ.

दुश्वारी, स्त्री० ಕಷ್ಟ; ತೊಡಕು.

दुसरिहा, वि० ಎದುರಾಳು; ಬೇರೆಯವ.

दुसह, वि० ಸಹಿಸಲಾಗದ; ತಾಳಲಾರದ.

दुसाध, पु० ಒಂದು ಕೀಳುಜಾತಿ. वि० ನೀಚ; ದುಷ್ಟ.

दुसाल, पु० दे० दुशाला.

दुसूति, स्त्री० ಈರೆಳೆಯ ದುಪ್ಪಟಿ.

दुसेजा, पु० ದೊಡ್ಡಮಂಚ.

दुस्तर, वि० ಅಸಾಧ್ಯವಾದ; ವಿಕಟ.

दुस्सह, वि० ಸಹಿಸಲಾಗದ.

दुहता, पु० ಮಗಳಮಗ; ದೌಹಿತ್ರ.

दुहती, स्त्री० ಮಗಳಮಗಳು.

दुहत्था, वि० ಎರಡು ಕೈಗಳಿಂದಲೂ ಮಾಡಿದ.

दुहन, पु० ಹಾಲು ಕರೆಯುವಿಕೆ.

दुहना, स० ಹಾಲು ಹಿಂಡು.

दुहनी, स्त्री० ಹಾಲು ಕರೆಯುವ ಪಾತ್ರೆ.

दुहर, वि० ಇಮ್ಮಡಿಯ.

दुहराना, स० ಮತ್ತೊಮ್ಮೆ ಹೇಳು; ಮಾಡಿದ್ದನ್ನೇಮಾಡು.

दुहाई, स्त्री० ಆಣೆ; ಶಪಥ.

दुहाग, पु० ದೌರ್ಭಾಗ್ಯ; ವೈಧವ್ಯ.

दुहागिन, स्त्री० ವಿಧವೆ; ವಿತಂತು.

दुहाजू, वि० ಪುನರ್ವಿವಾಹಿತ.

दुहाना स० ಹಾಲು ಕರೆಯಿಸು.

दुहिता, स्त्री० ಮಗಳು.

दुहेला, वि० ದುಃಖಗೊಂಡವ.

दूआ, पु० ಎರಡನೆಯ ಬಂದು.

दूकान, स्त्री० ಅಂಗಡಿ; ಮಂಡಿ.

दूज, स्त्री० ಬಿದಿಗೆ; ದ್ವಿತೀಯಾ.

दूत, पु० ರಾಯಭಾರಿ, ರಾಜದೂತ.

दूध, पु० ಹಾಲು; ಸೊನೆ.

दूध-पिलाई, स्त्री० ಹಾಲು ಕುಡಿಸುವ ದಾದಿ; ಸಾಕುತಾಯಿ; ವಿವಾಹದಲ್ಲಿ ಹಾಲು ಕುಡಿಸುವ ಒಂದು ಆಚಾರ.

दूध-पूत, पु० ಸಿರಿ ಮತ್ತು ಸಂತಾನ.

दूध-भाई, पु० ಒಂದೇ ತಾಯಿಯ ಹಾಲುಂಡ ಮಕ್ಕಳು.

दूध-मुँहा / **दूध-मुख** } वि० ಹಾಲುಣ್ಣುವಮಗು; ಮೊಲೆಕೂಸು.

दूधिया, वि० ಹಾಲಿನಿಂದಾದ; ಬಿಳಿಯ. पु० ಬಳಪದಕಲ್ಲು.

दून, स्त्री० ಇಮ್ಮಡಿ; ದ್ರುತಗತಿ. पु० ಕಣಿವೆ; ತಪ್ಪಲು.

दूना, वि० ಎರಡರಷ್ಟು; ಇಮ್ಮಡಿ.

दूब, स्त्री० ಗರಿಕೆಹುಲ್ಲು.

दू-ब-दू, क्रि० ಇದಿರುಬದಿರು.

दूबर / **दूबला** } वि० ದುರ್ಬಲ; ನಿಶ್ಶಕ್ತ.

दूभर, वि० ಕಷ್ಟವಾದ; ಕಠಿಣ.

दूमना, अ० ಅಲ್ಲಾಡು.

दूरंदेश, वि० ದೂರದರ್ಶಿ; ದೂರಾಲೋಚನೆಮಾಡುವ.

दूरंदेशी, स्त्री० ದೀರ್ಘಾಲೋಚನೆ.

दूर, स्त्री० ದೂರ; ಅಂತರ. वि० ದೂರವಾದ. क्रि० ದೂರದಲ್ಲಿ; **—दराज़** ಬಹಳ ದೂರ; **—दस्त** ದುರ್ಗಮವಾದ.

दूरबीन, स्त्री० ದೂರದರ್ಶಕಯಂತ್ರ; ದುರ್ಬೀನು.

दूरी, स्त्री० ದೂರ; ಫಾಸಲೆ.

दूलह / **दूल्हा** } पु० ಮದುಮಗ; ಮದುವೆಗಂಡು.

दूसरा, वि० ಎರಡನೆಯ; ಬೇರೆ.

दूहना, स० दे० **दुहना**.

दृगंचल, पु० ಕಣ್ಣುರೆಪ್ಪೆ.

दृग, पु० ಕಣ್ಣು; ದೃಷ್ಟಿ.

दृष्टिबंध, पु० ಕಣ್ಣುಕಟ್ಟು ವಿದ್ಯೆ.

देई, स्त्री० ದೇವಿ; ಅಮ್ಮ.

देख, स्त्री० ನೋಡುವಿಕೆ.

देखना, स० ನೋಡು; ದೃಷ್ಟಿಸು; ಪರೀಕ್ಷಿಸು; ಯೋಚಿಸು; ವಿಚಾರಿಸು.

देखभाल / **देखरेख** } स्त्री० ಮೇಲ್ವಿಚಾರಣೆ; ಸಂರಕ್ಷಣೆ.

देखाऊ, वि० ತೋರಿಕೆಯ; ಕೃತಕ.

देखादेखी, स्त्री० ದರ್ಶನ; ಭೆಟ್ಟಿ. क्रि० ನೋಡಿದಂತೆ ಮಾಡು.

देखाना, स० दे० दिखाना.

देखाव, पु० ನೋಟ; ದೃಷ್ಟಿಪಥ.

देखावट, स्त्री० दे० दिखावट.

देग, पु० ಕೊಪ್ಪರಿಗೆ; ತಪ್ಪಲೆ.

देगची, स्त्री० ಕೊಳದಪ್ಪಲೆ.

देन, स्त्री० ಕೊಡುವಿಕೆ; ದಾನ.

देनदार, पु० ಸಾಲಗಾರ; ಕಡಗಾರ.

देना, स० ಕೊಡು; ನೀಡು.

देर / **देरी** स्त्री० ತಡ; ವಿಳಂಬ; ತಾಮಸ; ಹೊತ್ತು; ಕಾಲ.

देवर, पु० ಮೈದುನ; ಗಂಡನ ತಮ್ಮ.

देवरानी, स्त्री० ಓರಗಿತ್ತಿ; ಗಂಡನ ತಮ್ಮನ ಹೆಂಡತಿ.

देवल, पु० ಗುಡಿ; ದೇವಾಲಯ.

देवा, वि० ಕೊಡುವಾತ.

देशज, वि० ದೇಶದಲ್ಲಿ ಹುಟ್ಟಿದ; ಒಳನಾಡಿನ.

देशी, वि० ಒಳನಾಡಿನ; ನಾಟಿ.

देसावर, पु० ಹೊರನಾಡು.

देसावरी, स्त्री० ಹೊರನಾಡಿನಿಂದ ಬಂದ.

देह, स्त्री० ಶರೀರ. पु० ಹಳ್ಳಿ.

देहक़ान, पु० ಹಳ್ಳಿಗಾಡಿನವರು.

देहक़ानी, वि० ಹಳ್ಳಿಗಾಡಿನ.

देहला / **देहली** ।० ಹೊಸ್ತಿಲು; ಹೊಸಲು.

देहलीज, स्त्री० दे० दहलीज.

देहात, पु० ಹಳ್ಳಿಗಾಡು; ಗ್ರಾಮಾಂತರ.

देहाती, वि० ಹಳ್ಳಿಗಾಡಿನ; ಗ್ರಾಮ್ಯ. पु० ಹಳ್ಳಿಗ.

देहान्त, पु० ಸಾವು; ಮರಣ.

दैनिक, वि० ನಿತ್ಯದ; ದೈನಂದಿನ.

दैर, पु० ಗುಡಿ; ದೇವಾಲಯ.

दैहिक, वि० ಶರೀರಕ್ಕೆ ಸಂಬಂಧಿಸಿದ.

दो-आब / **दो-आबा** पु० ಎರಡು ನದಿಗಳ ಮಧ್ಯಪ್ರದೇಶ.

दोगला, पु० ಜಾರಪುತ್ರ.

दोगुना / **दोचंद** वि० ಇಮ್ಮಡಿ; ಎರಡರಷ್ಟು.

दोच / **दोचन** स्त्री० ಸಂದೇಹ; ಇಕ್ಕಟ್ಟು; ಅಸಮಂಜಸ.

दोचना, स० ಒತ್ತಾಯಪಡಿಸು.

दोज़ख़, पु० ನರಕ.

दोज़ख़ी, वि० ಪಾಪಿ; ನರಕದ.

दोजा, पु० ಎರಡನೆಯಸಲ ಮದುವೆಯಾದವನು.

दोजानू, क्रि० ಮಂಡಿಗಳನ್ನು ಊರುತ್ತ.

दोतरफ़ी, वि० ಎರಡೂ ಕಡೆಯ. क्रि० ಉಭಯತ್ರ.

दोतला / **दोतल्ला** वि० ಎರಡಂತಸ್ತಿನ; ಎರಡು ಮಹಡಿಯ.

दो-दिल, वि० ಎರಡು ಮನಸ್ಸಿನ; ಚಂಚಲ.

दोधार, पु० ಭಲ್ಲೆ; ಭರ್ಜಿ.

दोधारा, वि० ಎರಡು ಅಲಗುಗಳುಳ್ಳ.

दोन, पु० ಎರಡು ಬೆಟ್ಟಗಳ ನಡುವಣಭೂಮಿ.

दोना, पु० ದೊನ್ನೆ.

दोनी, स्त्री० ಚಿಕ್ಕದೊನ್ನೆ.

दोपलिया } वि० ಎರಡು ಪದರಗ
दोपल्ली } ಳುಳ್ಳ.
दोपहर, स्त्री० ಮಧ್ಯಾಹ್ನ.
दोपहरिया, स्त्री० ಮಧ್ಯಾಹ್ನದಊಟ; ಮಧ್ಯಾಹ್ನಮಲ್ಲಿಗೆ.
दोपीठा, वि० ಎರಡು ಪಾರ್ಶ್ವಗಳುಳ್ಳ.
दोफ़सली, वि० ಎರಡು ಬೆಳೆಯ; ಎರಡುವಿಧ ಕಾರ್ಯಸಾಧನೆಯ.
दोबारा, क्रि० ಎರಡನೆಯಸಲ.
दोभाषिया, पु० दे० दुभाषिया.
दोमंजिला } वि० ಎರಡು ಅಂತಸ್ತಿನ.
दोमहला }
दोमुहा, वि० ಮೋಸಗಾರ.
दोयम, वि० ಎರಡನೆಯ.
दोरंगा, वि० ಎರಡುಬಣ್ಣದ.
दोरंगी, स्त्री० ಛಲ; ಕಪಟ.
दोल, पु० ಡೋಲಿ.
दोला, स्त्री० ಉಯ್ಯಾಲೆ.
दोशम्बा, पु० ಸೋಮವಾರ.
दोशीजा, स्त्री० ಕನ್ಯೆ.
दोष, पु० ಕಳಂಕ; ತಪ್ಪು.
दोषी, वि० ತಪ್ಪುಮಾಡಿದವ. पु० ಅಪರಾಧಿ.
दोसाला, वि० ಎರಡುವರ್ಷದ.
दोसूती, वि० ಎರಡೆಳೆಯ.
दोस्त, पु० ಗೆಳೆಯ; ಮಿತ್ರ.
दोस्ताना, पु० ಗೆಳೆತನ. वि० ಗೆಳೆತನದ.
दोस्ती, स्त्री० ಸ್ನೇಹ.
दोहता, पु० ಮಗಳಮಗ.
दोहती, स्त्री० ಮೊಮ್ಮಗಳು.
दोहद, स्त्री० ಬಯಕೆ; ಗರ್ಭ.
दोहन, पु० ಹಾಲು ಕರೆಯುವಿಕೆ.
दोहनी, स्त्री० दे० दुहनी.
दोहर, स्त्री० ಎರಡುಪದರಿನಬಟ್ಟೆ.
दोहरा, वि० ಎರಡುಪದರಿನ.
दोहराना, स० दे० दुहराना.
दोहा, पु० ದ್ವಿಪದಿ.
दोहित, पु० ಮಗಳಮಗ.
दौरी, स्त्री० ದಪ್ಪನಾದ ಹಗ್ಗ; ಕಣದಲ್ಲಿ ಹುಲ್ಲುಕಾಳನ್ನು ಬೇರೆಮಾಡಲು ಕಟ್ಟುವ ದನದ ಸಾಲು.
दौड़, स्त्री० ಓಟ; ಓಡುವಿಕೆ.
दौड़धूप, स्त्री० ಓಡಾಟ; ಬಹಳ ಪ್ರಯತ್ನ.
दौड़ना, अ० ಓಡು; ಧಾವಿಸು.
दौड़ा-दौड़ी, स्त्री० ಓಡುವ ಸಡಗರ.
दौड़ान, स्त्री० ಓಟ; ವೇಗ.
दौड़ाना, स० ಓಡಿಸು.
दौर, पु० ತಿರುಗಾಟ; ಸಂಚಾರ; ಒಳ್ಳೆಯದೆಶೆ; ಪ್ರಭಾವ.
दौर-दौरा, पु० ಪ್ರಾಬಲ್ಯ; ಪ್ರಧಾನ್ಯ.
दौरा, पु० ಸಂಚಾರ; ತಿರುಗಾಟ.
दौरान, पु० दे० दौरा.
दौरी, स्त्री० ಮಂಕರಿ; ಬುಟ್ಟಿ.
दौलत, स्त्री० ಸಂಪತ್ತು; ಐಶ್ವರ್ಯ
दौलत-खाना, पु० ಮನೆ; ಮಹಲು.
दौलतमंद, वि० ಧನವಂತ.
दौवारिक, पु० ಬಾಗಿಲು ಕಾಯುವವ
द्रवना, अ० ಕರಗು.

द्वारा, पु० ಬಾಗಿಲು; ಮಾರ್ಗ; ಮುಖಾಂತರ.

ध

धंधक, पु० ಕೆಲಸ ಕಾರ್ಯದ ರಗಳೆ, ತೊಡಕು.

धंधकधोरी, पु० ಸದಾ ಕೆಲಸಕಾರ್ಯ ಗಳಲ್ಲಿ ತೊಡಗಿರುವ.

धंधला, पु० ಮೋಸ; ಪಿತೂರಿ; ನೆವ.

धंधलाना, अ० ಪಿತೂರಿ ನಡೆಸು.

धंधा, पु० ಉದ್ಯೋಗ.

धंधार, स्त्री० ಜ್ವಾಲೆ.

धंधोर, पु० ಉರಿ; ಕಾಮನ ಹಬ್ಬ.

धंसना, अ० ಅದುಮು; ಕುಸಿ.

धंसान, पु० ಹೊಗುವಿಕೆ; ಕುಸಿಯು ವಿಕೆ; ಕೆಸರುನೆಲ.

धंसाना, स० ಹೊಗಿಸು; ಹೂಳು; ತುರುಕು.

धंसाव, पु० दे० **धसान.**

धक, स्त्री० ಎದೆಬಡಿದುಕೊಳ್ಳುವಿಕೆ; ಹೊಡೆತ. क्रि० ಏಕಾಏಕಿ.

धकधकाना, अ० ಹೆದರು; ಧಗಧಗಿಸು.

धकधकी, स्त्री० ಗುಂಡಿಗೆ ಹೊಡೆದು ಕೊಳ್ಳುವಿಕೆ.

धकपक, स्त्री० ಎದೆ ಹೊಡೆಯುವಿಕೆ. क्रि० ಹೆದರುತ್ತ; ನಡುಗುತ್ತ.

धकपकाना, अ० ಹೆದರು.

धकापेल, स्त्री० ನೂಕುನುಗ್ಗಲು.

धकारा, पु० दे० **धकधकी.**

धकियाना / **धकेलना** } स० ತಳ್ಳು; ನೂಕು.

धकैत, वि० ತಳ್ಳುವವನು.

धक्कम-धक्का, पु० ತಳ್ಳಾಟ; ಧಕ್ಕಾ ಮುಕ್ಕಿ.

धक्का, पु० ದೂಡುವಿಕೆ; ದೂಡಾಟ; **—देना** ತಳ್ಳು; **—मुक्की** ನೂಕು ನುಗ್ಗಲು.

धचकना, अ० ಮುರಿ; ಕುಸಿ.

धचका, पु० ಧಕ್ಕೆ; ಪೆಟ್ಟು; ಏಟು.

धज, स्त्री० ಶೃಂಗಾರ; ಠೀವಿ.

धजा, स्त्री० ಬಾವುಟ.

धजीला, वि० ಅಂದವಾದ; ಸೊಬ ಗಿನ.

धज्जी, स्त्री० ಹರಕುಬಟ್ಟೆ; ಚಿಂದಿ.

धड़ंग, वि० ಬೆತ್ತಲೆಯಾದ; ನಗ್ನ.

धड़, पु० ಮುಂಡ; ಕಬಂಧ.

धड़क / **धड़कन** } स्त्री० ಹೃದಯಸ್ಪಂದನ; ಗುಂಡಿಗೆ ಹಾರುವುದು.

धड़कना, अ० ಎದೆಹಾರು; ಗುಂಡಿಗೆ ಡಿ; ಅದುರು.

धड़का, पु० ಎದೆ ಹಾರುವಿಕೆ; ಭಯ; ಪಕ್ಷಿಗಳನ್ನು ಹೆದರಿಸಲು ಹೊಲ ದಲ್ಲಿಟ್ಟಿರುವ ಬೊಂಬೆ.

धड़काना, स० ಹೆದರಿಸು.

धड़क्का, पु० ಹೆದರಿಕೆ; ಗಾಬರಿ.

धड़ा, पु० ಒಂದು ತೂಕದ ಪಡಿ; ದಡೆ; **—करना** ದಡೆಕಟ್ಟು; ಪೇರು ಕಟ್ಟು.

धड़ी, स्त्री० ವೀಸೆ; ಪಂಚಸೇರು.

धतकारना, स० ಧಿಕ್ಕರಿಸು; ತಿರಸ್ಕ ರಿಸು; ತೊಲಗಿಸು.

धता, वि० ಧಿಕ್ಕರಿಸಲ್ಪಟ್ಟ ;—**बताना** ಧಿಕ್ಕರಿಸಿ ತೊಲಗಿಸುವುದು.

धतिया, वि० ದುರಭ್ಯಾಸವುಳ್ಳ.

धतूरा, पु० ದತ್ತೂರ; ಉನ್ಮತ್ತ.

धधक, स्त्री० ಬೆಂಕಿಯ ಜ್ವಾಲೆ.

धधकना, ಧಗಧಗನೆ ಉರಿ.

धन, पु० ಹಣಕಾಸು ; ಆಸ್ತಿಪಾಸ್ತಿ.

धनकटी, स्त्री० ಕೊಯ್ಲು ; ಕಟಾವು.

धनतेरस, स्त्री० ಕಾರ್ತೀಕ ಬಹುಳ ತ್ರಯೋದಶಿ.

धनदौलत, स्त्री० ಸಿರಿಸಂಪತ್ತು.

धनाढ्य, वि० ಐಶ್ವರ್ಯವಂತ.

धनिया, पु० ಕೊತ್ತುಂಬರಿ.

धनी, पु० ಧನಿಕ; ಶ್ರೀಮಂತ; **बात का धनी** ಆಡಿದಂತೆ ಮಾಡುವವ.

धनु, पु० ಬಿಲ್ಲು.

धनुई, स्त्री० ಚಿಕ್ಕ ಬಿಲ್ಲು.

धनुसार, पु० ಧನಧಾನ್ಯಗಳನ್ನಿಡುವ ಉಗ್ರಾಣ ; ಭಂಡಾರ.

धनुही, स्त्री० ಆಟದಬಿಲ್ಲು.

धन्ना, पु० दे० **धरना**.

धन्नासेठ, पु० ಭಾರೀ ಶ್ರೀಮಂತ.

धन्य, वि० ಕೃತಾರ್ಥ.

धन्यवाद, पु० ಕೃತಜ್ಞತೆಯನ್ನು ತೋರಿಸುವುದು ; ಮನ್ನಣೆ.

धन्वा, पु० दे० **धनु**.

धन्वी, वि० ಬಿಲ್ಲಾಳು.

धप्पा, पु० ಅಂಗೈ ಏಟು ; ಗುದ್ದು.

धबला, पु० ಸಡಿಲವಾದ ಷರಾಯಿ ; ಲಂಗ.

धब्बा, पु० ಕಳಂಕ.

धमकी, स्त्री० ಗದರಿಕೆ ; ಬೆದರಿಕೆ.

धमगजर, पु० ಉಪದ್ರವ; ಉತ್ಪಾತ.

धमधूसर, वि० ದಪ್ಪ ; ಗಡುತರ.

धमनी, स्त्री० ರಕ್ತವಾಹಿನಿ.

धमाका, पु० ಮೇಲಿಂದ ಬಿದ್ದವಸ್ತುವಿನ ಧ್ವನಿ.

धमाचौकड़ी, स्त्री० ಕುಣಿದಾಟ.

धमार, स्त्री० ಗದ್ದಲ; ಗಲಾಟೆ. पु० ಹೋಳೀ ಹಬ್ಬದಲ್ಲಿ ಹಾಡುವ ಗೀತ.

धमूका, पु० ಮುಷ್ಟಿಯ ಹೊಡೆತ.

धर, वि० ಧರಿಸತಕ್ಕ. पु० ಪರ್ವತ. स्त्री० ತಾಳುವಿಕೆ ; ಹಿಡಿಯುವಿಕೆ.

धरती, स्त्री० ಭೂಮಿ.

धरता, पु० ಸಾಲಗಾರ; ನಿರ್ವಾಹಕ.

धरती, स्त्री० ಭೂಮಿ ; ಪ್ರಪಂಚ.

धरन, स्त्री० ಹೊರುವಿಕೆ ; ನಿರ್ವಹಣ ; ದೂಲ.

धरना, स० ಹಿಡಿದುಕೊಳ್ಳು. पु० ಮುಷ್ಕರ.

धरनेत, पु० ಮುಷ್ಕರ ಹಿಡಿಯುವವ.

धरम, पु० ಧರ್ಮ ; ಮತ.

धरसना, अ० ಬಗ್ಗು ; ಹೆದರು. स० ದಬಾಯಿಸು; ಅವಮಾನಪಡಿಸು.

धरहर, स्त्री० ಹಿಡಿಯುವಿಕೆ ; ಕೈಸೆರೆ ; ಅಡ್ಡ ಬಂದು ಜಗಳನಿಲ್ಲಿಸುವಿಕೆ ; ರಕ್ಷಣೆ ; ಧೈರ್ಯ.

धरहरा, पु० ಗೋಪುರ; ಬುರುಜು.
धरहरिया, पु० ಜಾಮೀನು ನಿಂತು ಬಿಡಿಸುವವ; ರಕ್ಷಕ.
धरा, स्त्री० ಭೂಮಿ.
धराऊ, वि० ಅಮೂಲ್ಯವಾದ; ಭದ್ರಪಡಿಸಿದ.
धराना, स० ಹಿಡಿಸು; ಸ್ಥಿರಪಡಿಸು; ಇಡಿಸು.
धरी, स्त्री० ನಾಲ್ಕುಸೇರಿನ ತೂಕ; ಉಪಪತ್ನಿ.
धरीचा, पु० ಕೂಡಿಕೆಗಂಡ.
धरैया, पु० ಧರಿಸುವವನು.
धरोहर, स्त्री० ಅಮಾನತ್ತು; ಒತ್ತೆ.
धर्त्ता, पु० ಧರಿಸುವವನು.
धर्म, पु० ಗುಣ; ಸ್ವಭಾವ; ರೀತಿ; ಮತ; ಕರ್ತವ್ಯ.
धर्मी, वि० ಧರ್ಮಪರ.
धर्ष, पु० ಅವಿಧೇಯತೆ; ಉದ್ದಂಡತನ; ಅಗೌರವ.
धव, पु० ಪುರುಷ; ಪತಿ.
धवनी, स्त्री० ತಿದಿ.
धवली, वि० ಬಿಳಿಯ; ನಿರ್ಮಲ.
धस, पु० ಮುಳುಗುವಿಕೆ; ಮುಳುಕ.
धसक, स्त्री० ಮತ್ಸರ; ಹೊಟ್ಟೆಕಿಚ್ಚು; ಒಣಕೆಮ್ಮು.
धसकना, अ० ಇಳಿ; ಕುಸಿ; ಅಸೂಯೆಪಡು.
धसना, अ० ನಾಶವಾಗು; ನಷ್ಟಪಡು.
धसाना, स० दे० धंसाना.
धांधना, स० ಮುಚ್ಚು; ಮಿತಿಮೀರಿ ಊಟಮಾಡು.
धांधल } स्त्री० ಉಪದ್ರವ; ಮೋಸ;
धांधली } ವಂಚನೆ; ನೀಚತನ.
धांसना, अ० ಕೆನೆಯು.
धाई, स्त्री० दे० धाय.
धाऊ, पु० ಹರಿಕಾರ; ದೂತ.
धाक, स्त्री० ಪ್ರತಾಪ; ಆತಂಕ.
धागा, पु० ದಾರ; ನೂಲು.
धाड़, स्त्री० ಹಲ್ಲು; ಗರ್ಜನೆ; ಆರ್ತನಾದ; ಕಳ್ಳರಮುತ್ತಿಗೆ.
धाड़ा, पु० ದರೋಡೆ; ಸುಲಿಗೆ; ಡಕಾಯಿತಿ.
धाता, वि० ಪಾಲಕ; ಧರಿಸುವವನು.
धातु, स्त्री० ಖನಿಜ. पु० ವೀರ್ಯ.
धात्री, स्त्री० ತಾಯಿ; ದಾದಿ; ನೆಲ್ಲಿಕಾಯಿ.
धान, पु० ಭತ್ತ; ಧಾನ್ಯ; ನೆಲ್ಲು.
धाप, पु० ಹರಿದಾರಿ; ಬಯಲು. स्त्री० ತೃಪ್ತಿ; ಸಂತೋಷ.
धापना, अ० ತೃಪ್ತಿಹೊಂದು; ಓಡು. स० ತೃಪ್ತಿಪಡಿಸು.
धाम, पु० ಮನೆ; ನಿವಾಸ; ದೇಹ.
धाय, स्त्री० ದಾದಿ.
धार, स्त्री० ಧಾರೆ; ಬುಗ್ಗೆ; ಅಲಗು; ಪ್ರವಾಹ; ದಂಡೆ. पु० ಮಳೆ; ಸಾಲ.
धारक, वि० ಧರಿಸುವವನು; ಸಾಲಗಾರ. पु० ಗಡಿಗೆ; ಕಲಶ.

धारणा, स्त्री० ನಿರ್ಧಾರ; ದೃಢ; ನಿಶ್ಚಯ; ಬುದ್ಧಿ; ನೆನಪು.

धारना स० ತಾಳು; ಹೊರು; ಧರಿಸು. ಸಾಲಮಾಡು.

धारा, स्त्री० ನೀರಿನಸೆಳತ; ಪ್ರವಾಹ; ಹರಿತ; ಕಾರಂಜಿ; ಸಮೂಹ; ರೇಖೆ; ಕಾನೂನಿನ ವಿಧಿ.

धारासभा, स्त्री० ಶಾಸನಸಭೆ.

धारावाही, वि० ಪ್ರವಾಹರೂಪವಾಗಿ.

धारी, वि० ಧರಿಸುವವನು. स्त्री० ಸೈನ್ಯ; ಸಮೂಹ; ಗೆರೆ.

धारीदार, वि० ಗೆರೆಗಳುಳ್ಳ.

धारोष्ण, पु० ನೊರೆ ಹಾಲು.

धार्मिकता, स्त्री० ಧರ್ಮಶೀಲತೆ; ಧರ್ಮಬುದ್ಧಿ.

धावक, पु० ಓಡುವವ; ದೂತ.

धावन, पु० ಓಡುವಿಕೆ; ಹರಿಕಾರ; ಓಲೆಕಾರ; ತೊಳೆದು ಸ್ವಚ್ಛಮಾಡತಕ್ಕ ವಸ್ತು.

धावना अ० ಓಡು; ಧಾವಿಸು.

धावनी, स्त्री० ಓಟ; ಮುತ್ತಿಗೆ.

धावा, पु० ದಂಡೆತ್ತಿ ಬರುವಿಕೆ; ಮುತ್ತಿಗೆ; ಆಕ್ರಮಣ.

धिंग, स्त्री० ಉಪದ್ರವ; ತುಂಟತನ.

धिंगा, पु० ಪೋಕರಿ; ನಾಚಿಗೆಗೇಡಿ

धिंगाई, स्त्री० ಪೋಕರಿತನ; ತುಂಟಿ.

धिंगाना, स० ಉಪದ್ರವಮಾಡು.

धिआ, स्त्री० ಮಗಳು; ಚಿಕ್ಕಹುಡುಗಿ.

धिक, अव्य० ತಿರಸ್ಕಾರಸೂಚಕ ಶಬ್ದ.

धिकना, अ० ಬಿಸಿಯಾಗು.

धिकाना, स० ಚೆನ್ನಾಗಿ ಬಿಸಿಮಾಡು.

धिक्कार, स्त्री० दे० धिक.

धिय, स्त्री० ಬುದ್ಧಿ; ಮಗಳು.

धिराना, स० ಹೆದರಿಸು.

धींग, धींगरा, पु० ಗಟ್ಟಿಮುಟ್ಟಾದ; ದಾಂಡಿಗ; ಟೊಣೆಯ.

धींगा, पु० ಶರೀರ; ದುಷ್ಟ; ಉಪದ್ರವಿ.

धींगाधींगी, धींगामुश्ती स्त्री० ತುಂಟತನ; ಬಂಡಾಟ; ಬಲಾತ್ಕಾರ.

धींगड़, धींगड़ा वि० ದುಷ್ಟ; ಪೋಕರಿ.

धींवर, पु० ಅಂಬಿಗ; ಮೀನು ಹಿಡಿಯುವವ.

धी, स्त्री० ಬುದ್ಧಿ; ಮಗಳು; ಮನಸ್ಸು.

धीजना, स० ಸ್ವೀಕರಿಸು; ಪರಿಗ್ರಹಿಸು.

धीमान्, पु० ಬುದ್ಧಿವಂತ; ಬೃಹಸ್ಪತಿ.

धीमा, वि० ನಿಧಾನವಾದ.

धीर, वि० ಬಲಿಷ್ಠ; ಗಂಭೀರ. पु० ಧೈರ್ಯ.

धीरज, पु० ಧೈರ್ಯ;—**बँधाना** ಧೈರ್ಯಹೇಳು.

धीरता, स्त्री० ಧೈರ್ಯ; ಸ್ಥೈರ್ಯ.

धीरे, क्रि० ನಿಧಾನವಾಗಿ; ಮೆಲ್ಲಗೆ; —**धीरे** ಮೆಲ್ಲಮೆಲ್ಲಗೆ; ಕ್ರಮೇಣ.

धीवर, पु० ಅಂಬಿಗ; ಬೆಸ್ತ.

धीवरी, स्त्री० ಬೆಸ್ತರವಳು.

धुंई, स्त्री० ಸಾಂಬ್ರಾಣಿ; ಧೂಪ.
धुँगार, स्त्री० ಒಗ್ಗರಣೆ.
धुँगारना, स० ಒಗ್ಗರಣೆಹಾಕು.
धुँज, धुंज, स्त्री० ಮಸುಕು; ಮಬ್ಬು; ಧೂಳು; ಮಬ್ಬುಗಣ್ಣು.
धुंधकार, पु० ಗರ್ಜನೆ; ನಸುಗತ್ತಲೆ.
धुंधर, स्त्री० ಧೂಳು; ಮಸುಕು.
धुंधारना, अ० दे० **धुंधलाना.**
धुंधला, वि० ಮಸುಕಾದ; ಮಬ್ಬಾದ.
धुंधलाई, स्त्री० ಮಬ್ಬು; ಕಿರುಗತ್ತಲೆ; ಮಂಜುಗಣ್ಣು.
धुंधलायन, पु० ಮಂಜುಗಣ್ಣು; ಮಬ್ಬು; ಕಿರುಗತ್ತಲೆ.
धुंधलाना, अ० ಮಬ್ಬಾಗು; ದೃಷ್ಟಿ ಮಂದವಾಗು.
धुंधवाना, अ० ಹೊಗೆಯಾಡು.
धुंआँ, पु० ಹೊಗೆ; ಧೂಮ; ಆವಿ.
धुआँकश, पु० ಹೊಗೆಹಡಗು; ಜಹಜು.
धुआँदान, पु० ಚಿಮನಿ; ಹೊಗೆಕಿಂಡಿ; ಬೆಕ್ಕಮಾಳಿಗೆ.
धुआँदार, वि० ಹೊಗೆಯಂತಿರುವ; ಹೊಗೆತುಂಬಿದ. क्रि० ಅಧಿಕವಾಗಿ.
धुआंना, अ० ಹೊಗೆಯ ವಾಸನೆಯಾಗು; ನಾತಹೊಡೆ.
धुआँयँध वि० ಹೊಗೆಯವಾಸನೆಯ.
धुआंस, स्त्री० ಉದ್ದಿನಹಿಟ್ಟು.
धुकधुकी, स्त्री० ಹೃದಯ; ಎದೆ; ಹೆದರಿಕೆ; ಮಿಂಚುಹುಳ.
धुकना, अ० ಬಗ್ಗು; ಬಾಗು; ಬೀಳು.
धुकाना, स० ಬಗ್ಗಿಸು; ಬೀಳಿಸು.
धुकार, स्त्री० ನಗಾರಿಯ ಶಬ್ದ.
धुतकार, स्त्री० दे० **दुतकार.**
धुन, स्त्री० ಆಸಕ್ತಿ; ಗೀಳು; ಚಟ; ರಾಗ; ಹಾಡಿನಚರಣ; ಚಿಂತೆ; **—का पक्का** ಹಿಡಿದ ಕೆಲಸವನ್ನು ಪೂರೈಸಿಯೇ ಬಿಡುವವನು.
धुनकना, स० दे० **धुनना.**
धुनकी, स्त्री० ಅರಳೆ ಹಿಂಜುವ ಬಿಲ್ಲು.
धुनना, स० ಅರಳೆಹಿಂಜು; ಹಿಕ್ಕು; ಏಕು.
धुनि, स्त्री० ಧ್ವನಿ; ನದಿ.
धुनियाँ, पु० ಅರಳೆ ಹಿಂಜುವವನು; ಪಿಂಜಾರ.
धुपेली, स्त्री० ಬಿಸಿಲು ಗುಳ್ಳೆಗಳು. (घमौरी)
धुरंधर, वि० ಅಗ್ರಗಣ್ಯನಾದ; ಶ್ರೇಷ್ಠ.
धुरा, पु० ಬಂಡಿಯ ಅಚ್ಚು; ಅಕ್ಷ.
धुरयाना, स० ದೋಷವನ್ನು ಮರೆಮಾಚು; ಧೂಳೆರಚು.
धुरी, स्त्री० ಅಚ್ಚುಮರ; ಇರಸು.
धुर्रा, पु० ಕಣ; ಚೂರು.
धुलना, अ० ತೊಳೆಯಲ್ಪಡು.
धुलवाना, स० ತೊಳೆಯಿಸು; ಒಗೆಸು.
धुलाई, स्त्री० ತೊಳೆಯುವಿಕೆ; ತೊಳೆದುದರ ಮಜೂರಿ.
धुवाँ, पु० दे० **धुआँ.**
धुवाँस, स्त्री० ಉದ್ದಿನಹಿಟ್ಟು.

धुस्सा, पुं० ದಪ್ಪವಾದ ಉಣ್ಣೆಯ ಶಾಲು.

धूत, वि० ಧೂರ್ತ; ಮೋಸಮಾಡ ತಕ್ಕ.

धूतना, स० ವಂಚನೆಮಾಡು.

धूनी, स्त्री० ಧೂಪ; ಅಗ್ನಿಕುಂಡ; **—रमाना** ಸನ್ಯಾಸಿಗಳು ಮಾಡಿಕೊಂಡಿರುವ ಅಗ್ನಿಕುಂಡ.

धूप, स्त्री० ಧೂಪ; ಬಿಸಿಲು; ಸಾಂಬ್ರಾಣಿಯ ಹೊಗೆ.

धूपघड़ी, स्त्री० ಹೊತ್ತುನೋಡುವ ಛಾಯಾ ಯಂತ್ರ.

धूपछाँह, स्त्री० ನವಿಲುಗರಿ ಬಣ್ಣದ ಬಟ್ಟೆ; ಬಿಸಿಲುನೆಳಲು ಬಣ್ಣ.

धूपदान, पुं० ಧೂಪದ ಕರಡಿಗೆ; ಧೂಪಾರತಿ.

धूपना, अ० ಹೊಗೆಕೊಡು; ಹೊಗೆಯಾಡು.

धूपबत्ती, स्त्री० ಸಾಂಬ್ರಾಣಿಕಡ್ಡಿ; ಅಗರಬತ್ತಿ.

धूम, पुं० ಹೊಗೆ; ಹುಳಿತೇಗು; ಧೂಮಕೇತು. **स्त्री०** ಸಡಗರ.

धूमधाम, स्त्री० ವಿಜೃಂಭಣೆ; ಆಡಂಬರ; ಸಡಗರ.

धूमपान, पुं० ಹೊಗೆಸುತ್ತು ಸೇದವಿಕೆ.

धूमपोत, पुं० ಜಹಜು; ಉಗಿನಾವೆ.

धूमर, वि० ಮಲಿನವಾದ; ಹೊಗೆ ಬಣ್ಣದ.

धूमला, वि० ಕೊಳೆಯಾದ; ಹೊಗೆ ಬಣ್ಣದ.

धूरा, पुं० ಧೂಳು; ಚೂರ್ಣ; ಪುಡಿ.

धूर्त, वि० ಕಪಟಿ; ವಂಚಕ.

धूर्तता, स्त्री० ವಂಚಕತನ.

धूल, स्त्री० ಧೂಳು; **—उड़ाना** ನಾಶಮಾಡು; **—उड़ना** ಪರಿಹಾಸಪಾತ್ರನಾಗು; **—चाटना** ದೈನ್ಯತೋರು; **—फाँकना** ಗೊತ್ತುಗುರಿಯಿಲ್ಲದೆ ಅಲೆದಾಡು; **—में मिलना** ನಾಶವಾಗು.

धूला, पुं० ಭಾಗ; ಹಿಸ್ಸೆ; ಚೂರು.

धूसना, स० ಅನಾದರ ತೋರು; ಬೈಯು.

धूसर, वि० ಧೂಳಿನಬಣ್ಣದ; ಖಾಕೀ ಬಣ್ಣದ.

धूहा, पुं० ಆಟದ ನಡುವೆ; ಮೋಸ.

धृति, स्त्री० ಧರ್ಮಪತ್ನಿ; ನಿರ್ಧಾರ; ಧೈರ್ಯ.

धृष्ट, वि० ನಾಚಿಕೆಯಿಲ್ಲದ; ದಿಟ್ಟತನದ.

धृष्टता, स्त्री० ದಾಷ್ಟೀಕ.

धेंगामुष्टि, स्त्री० ಸೂಕನುಗ್ಗಲು; ತಿಕ್ಕಾಟ. **क्रि०** ಬಲವಂತವಾಗಿ.

धेनु, स्त्री० ಆಕಳು; ಹಸು.

धेनुमती, स्त्री० ಗೋಮತೀನದಿ.

धेय, वि० ಧರಿಸಲು ಯೋಗ್ಯವಾದ.

धेर, पुं० ಕಾಡುಜಾತಿ; ದನಕಾಯುವ ಒಂದು ಗೊಲ್ಲರ ಉಪಜಾತಿ.

धेलचा / धेला पुं० ಒಂದೂವರೆ ಕಾಸಿನ ಒಂದು ನಾಣ್ಯ.

घेली, स्त्री० ಎಂಟಾಣೆಯ ನಾಣ್ಯ.
घोकड़ वि० ಗಟ್ಟಿಮುಟ್ಟಾದ.
घोंघा, पु० ವಿಕಾರ; ವಿಕಾರವಾದ ಆಕಾರ.
घोंकना, स० ಬೆಂಕಿಯುರಿಸಲು ತಿದಿಯೊತ್ತಿ ಊದು.
घोखा, पु० ಮೋಸ; ಕಪಟ; ವಂಚನೆ. घोखे की टट्टी ಮಾಯಾಜಾಲ.
घोखार, पु० ಕಡಲೇ ಹಿಟ್ಟಿನಿಂದ ಮಾಡಿದ ಒಂದು ಸೀತಿನುಸು ಅಥವಾ ಮಿಠಾಯಿ.
घोखेबाज़, वि० ಮೋಸಗಾರ.
घोखेबाज़ी, स्त्री० ಮೋಸಗಾರಿಕೆ.
घोती, स्त्री० ಧೋತ್ರ; ಪಂಚೆ.
घोना, स० ತೊಳೆ; ಉಜ್ಜು.
घोबन } स्त्री० ಅಗಸಿತಿ.
घोबिन }
घोबी, पु० ಮಡಿವಾಳ; ಅಗಸ.
घोरी, पु० ಮುಖ್ಯಸ್ಥ; ದೊಡ್ಡ ಮನುಷ್ಯ; ಭಾರಹೊರುವವ.
घोरे, क्रि० ಸಮೀಪ; ಹತ್ತಿರ; ನಾವ ಧಾನವಾಗಿ.
घोवन, पु० ತೊಳೆದನೀರು.
घोवाना, स० दे० धुलवाना.
धौंक, स्त्री० ತಿದಿಯಗಾಳಿ; ಬೆಂಗಾಳಿ.
धौंका, स्त्री० ಬಿಸಿಲಿನ ಝಳ.
धौंकनी } स्त्री० ತಿದಿ; ಊದುಗೊಳವಿ.
धौंकी }
धौंज, स्त्री० ಪ್ರಯತ್ನ; ಚಿಂತೆ.
धौंजना, स० ಪ್ರಯತ್ನಿಸು.
धौंस, स्त्री० ಗದರಿಕೆ; ಅಧಿಕಾರ; ಪ್ರತಾಪ; ಮೋಸ.
धौंसना, स० ಗದರಿಸು; ಹೊಡೆ.
धौंसा, पु० ದೊಡ್ಡನಗಾರಿ; ಸಾಮರ್ಥ್ಯ.
धौत, वि० ಸ್ವಚ್ಛ; ಸ್ನಾನಮಾಡಿದ; ಬೆಳ್ಳಿ.
धौतशिला, स्त्री० ಸ್ಫಟಿಕಶಿಲೆ.
धौल, स्त्री० ಅಂಗೈಹೊಡೆತ. वि० ಬಿಳಿಯ.
धौला, वि० ಬಿಳಿಯ; ಶ್ವೇತ.
धौलाई, स्त्री० ಬಿಳಿಪು.
ध्येय, पु० ಉದ್ದೇಶ್ಯ; ಗುರಿ.
ध्रुव, वि० ಶಾಶ್ವತವಾದ; ಸ್ಥಿರ.
ध्वज, पु० } ಬಾವುಟ; ಪತಾಕೆ; ಚಿಹ್ನೆ.
ध्वजा, स्त्री० }

न

नंग, पु० ಬೆತ್ತಲೆ; ನಗ್ನತೆ;—धड़ंग, ಬರೇ ಬೆತ್ತಲೆ
नंगटा, वि० ನಗ್ನ; ಬೆತ್ತಲೆ.
नंगा, वि० ಬೆತ್ತಲೆ; ...; ದಿಗಂಬರ.
नंगाबुच्चा } वि० ಕಡುಬಡವ; ಅತಿ ದರಿದ್ರ.
नंगाबूचा }
नंगियाना, स० ಎಲ್ಲವನ್ನೂ ಅಪಹರಿಸುವುದು.
नंदोई, पु० ನಾದಿನಿಯಗಂಡ.
नंबर, पु० ಸಂಖ್ಯೆ; ಅಂಕಿ.
नंबरदार, पु० ಪಟ್ಟೇದಾರ; ಪಟೇಲ.
नंबरवार, क्रि० ಸಂಖ್ಯಾನುಕ್ರಮ.

नंबरी, वि० ಪ್ರಖ್ಯಾತ; ಹೆಸರುವಾಸಿ.

न, अव्य० ಇಲ್ಲ; ಅಲ್ಲ; ಬೇಡ; ಕೂಡದು.

नईम, स्त्री० ಸ್ವರ್ಗ; ಅಲಭ್ಯವಸ್ತು; ಪ್ರೀತಿ; ಪುರಸ್ಕಾರ; ತಲುಪುವಿಕೆ.

नककटा, वि० ಮೂಗು ಹರುಕ; ಮಾನಮರ್ಯಾದೆಯಿಲ್ಲದ.

नकचढ़ा, पु० ಕೆಟ್ಟಸ್ವಭಾವ.

नक़्द, पु० ನಗದು ಹಣ.

नकफूल, पु० ಮೂಗುತಿ; ಮೂಗು ಬೊಟ್ಟು.

नक़ब, स्त्री० ಸುರಂಗ; ಕನ್ನ; ಕನ್ನ ಗತ್ತರಿ.

नकबेसर, स्त्री० ಮೂಗುಬೊಟ್ಟು; ಬೇಸರಿ.

नकमोती, पु० ಬುಲಾಕು; ನತ್ತು.

नकरा, पु० ಪರಿಚಯವಿಲ್ಲದ.

नक़ल, स्त्री० ಪ್ರತಿಲಿಪಿ; ನಕಲು; ಕಾಪಿ; ಅನುಕರಣ; ಹಾಸ್ಯ.

नक़लनवीस, पु० ಕಾಪಿ ಅಥವಾ ನಕಲು ತೆಗೆಯುವ ಗುಮಾಸ್ತೆ.

नक़ली, वि० ಕೃತ್ರಿಮದ; ಸೃಷ್ಟನೆಯ.

नकले-मज़हब, पु० ಧರ್ಮಪರಿವರ್ತನೆ.

नकसीर, स्त्री० ಮೂಗಿನ ಸಿರೆ; ಮೂಗು ಒಡೆಯುವಿಕೆ.

नकसूर, पु० ಉಸಿರಾಡುವ ಶಬ್ದ.

नक़ाब, स्त्री० ಬುರುಕಿ; ಮುಸುಕು.

नकार, पु० ಇಲ್ಲವೆನ್ನುವಿಕೆ; ಬೇಡವೆನ್ನುವಿಕೆ; ನಿರಾಕರಣೆ.

नकारना, स० ಇಲ್ಲವೆನ್ನು; ನಿರಾಕರಿಸು.

नकाशना, स० ನಕಾಸಿಮಾಡು.

नक़ाशी, स्त्री० दे० **नक्काशी.**

नकियाना, अ० ಮೂಗಿನಿಂದ ಮಾತನಾಡು; ಕಷ್ಟಪಡು. स० ಕಾಡಿಸು.

नकीज़, वि० ವಿರುದ್ಧ; ವ್ಯತಿರಿಕ್ತ.

नक़ीब, पु० ವಂದಿಮಾಗದ; ಚಾರಣ.

नक़ीह, वि० ಬಲಹೀನ.

नकुल, पु० ಮುಂಗುಸಿ.

नकेल, स्त्री० ಒಂಟೆಯ ಮೂಗಿಗೆ ಕಟ್ಟುವ ದಾರ; ಮೂಗುದಾರ.

नक्कार, पु० ಅಪಮಾನ.

नक्कारखाना, पु० ನಗಾರಿ ಬಾರಿಸುವ ಸ್ಥಳ.

नक्कारची, पु० ನಗಾರಿ ಬಾರಿಸುವವನು.

नक्कारी, पु० ನಗಾರಿ; ಭೇರಿ.

नक्काल, पु० ನಕಲಿಮಾಡುವವ.

नक्काली, स्त्री० ನಕಲಿ; ಹಾಸ್ಯ.

नक्काश, पु० ನಕಾಸಿಮಾಡುವವ.

नक्काशी, स्त्री० ಕೆತ್ತನೆಯ ಕೆಲಸ; ನಕಾಸಿ ಕೆಲಸ.

नक्कू, वि० ದೊಡ್ಡ ಮೂಗಿನವ; ಇತರರನ್ನು ಗಣನೆಗೆ ತಾರದೆ ತಾನೇ ಕೆಲಸಮಾಡುವವ.

नक्त, पु० ರಾತ್ರಿ.

नक्र, पु० ಮೊಸಳೆ.

नक़्श, वि० ಚಿತ್ರಿಸಿಲ್ಪಟ್ಟ; ಅಂಕಿತ.

नक़्शा, पु० ಚಿತ್ರ; ನಕ್ಷೆ; ರೇಖಾ ಚಿತ್ರ; ರೂಪ.

नक़्शा-नवीस, पु० ರೇಖಾ ಚಿತ್ರ; ಬರೆಯುವವನು; ಚಿತ್ರಗಾರ.

नक़्शा-नवीसी, स्त्री० ಚಿತ್ರಗಾರಿಕೆ.

नक़्शी, वि० ಕೆತ್ತನೆಯ; ನಕ್ಷೆಗಳಿರುವ.

नख, पु० ಉಗುರು; ನಖ.

नखना, अ० ಉಲ್ಲಂಘನೆಯಾಗು. स० ಉಲ್ಲಂಘಿಸು; ದಾಟು; ನಷ್ಟಗೊಳಿಸು.

नख़रा, पु० ಒಯ್ಯಾರ; ಬೆಡಗು; —तिल्ला ಬೆಡಗು ಬಿನ್ನಾಣ.

नख़रीला } वि० ಒಯ್ಯಾರಮಾಡುವವ; ಒಲಪುಗಾರ.
नख़रेबाज़ }

नख़रेबाज़ी, स्त्री० ಥಳಕು ಮಾಡುವಿಕೆ.

नख़ास, पु० ಗುಲಾಮರನ್ನೂ ಪಶುಗಳನ್ನೂ ಮಾರುವ ಸಂತೆ.

नखोटना, स० ಚಿವುಟು; ಪರಚು.

नख़्ल, पु० ಖರ್ಜೂರದ ಗಿಡ;—बंद ತೋಟಗಾರ.

नख़्लिस्तान, पु० ತೋಟ; ಓಯಸಿಸ್.

नग, पु० ಪರ್ವತ; ಮರ; ಸರ್ಪ; ಸೂರ್ಯ.

नगण्य, वि० ಗಣನೆಗೆ ಬಾರದ ತುಚ್ಛ.

नगद, पु० दे० नक़द.

नगदी, स्त्री० ಹಣಕಾಸು.

नगन, वि० ಬೆತ್ತಲೆ; ನಗ್ನ.

नग़मा, पु० ರಾಗ; ಆಲಾಪನೆ. (नग़्मा)

नगरी, स्त्री० ಪಟ್ಟಣ.

नगारा, पु० ನಗಾರಿ; ಭೇರಿ.

नगीना, पु० ರತ್ನ; ಮಣಿ.

नगीनासाज़, पु० ರತ್ನಗಾರ; ಕುಂದಣಗಾರ.

नग्न, वि० ಬೆತ್ತಲೆ.

नघना, स० ದಾಟು.

नघाना, स० ದಾಟಿಸು.

नचना, अ० ಕುಣಿ; ನರ್ತನಮಾಡು.

नचनि, स्त्री० ಕುಣಿತ; ನೃತ್ಯ.

नचवैया, पु० ಕುಣಿಯುವವನು.

नचाना, स० ಕುಣಿಸು; ನತಾಯಿಸು; ಅತ್ತಿತ್ತ ಓಡಾಡಿಸು.

नज़दीक, वि० ಸಮೀಪ; ಹತ್ತಿರ.

नज़दीकी, स्त्री० ಸಾಮೀಪ್ಯ; ಹತ್ತಿರ.

नज़म, स्त्री० ವ್ಯವಸ್ಥೆ.

नज़र, स्त्री० ನೋಟ; ಕೃಪಾದೃಷ್ಟಿ; ಉಡುಗೊರೆ: ಕಾಣಿಕೆ;—आना ಕಣ್ಣಿಗೆಬೀಳು: ಗೋಚರವಾಗು; —पर चढ़ना ಉತ್ತಮವಾಗಿ ಕಾಣುವುದು;—बांधना ಮಂತ್ರ ಬಲದಿಂದ ಒಂದನ್ನು ಮತ್ತೊಂದನ್ನಾಗಿ ಮಾಡುವುದು; ದಯೆ ತೋರುವುದು;—उतारना ನಿವಾಳಿಸುವುದು:—लगाना ದೃಷ್ಟಿಯಾಗುವುದು.

नज़रबंद, वि० ಬಂಧಿಸಲ್ಪಟ್ಟ; ಕಣ್ಗಾವಲಲ್ಲಿರುವ.

नज़रबंदी, स्त्री० ಕಾರಾಗೃಹವಾಸ; ಕಣ್ಣುಕಟ್ಟು ವಿದ್ಯೆ.
नज़रबाग, पु० ಅರಮನೆಯ ಉದ್ಯಾನವನ.
नज़रबाज़, वि० ಕಣ್ಣು ಮಿಟಿಕಿಸುವವ; ಕಣ್ಣು ಹೊಡೆಯುವವ.
नज़रसानी, स्त्री० ಪುನರ್ವಿಚಾರಣೆ.
नज़राना, पु० ಕಾಣಿಕೆ. अ० ದೃಷ್ಟಿ ದೋಷಕ್ಕೆ ಬಲಿಯಾಗು.
नज़ला, पु० ಶೀತ; ನೆಗಡಿ.
नज़लाबन्द, पु० ನೆಗಡಿಯನ್ನು ನಿಲ್ಲಿಸುವ ಔಷಧ.
नज़र-अन्दाज़, वि० ಗೌರವವಿಲ್ಲದ; ದೃಷ್ಟಿಗೋಚರವಾಗದ.
नज़र-गाह, स्त्री० ರಂಗಶಾಲೆ.
नज़ा, पु० ಅಂತಿಮಶ್ವಾಸ.
नज़ाकत, स्त्री० ಕೋಮಲತೆ.
नजात, स्त्री० ಮೋಕ್ಷ; ಬಿಡುಗಡೆ.
नज़ाबत, स्त्री० ಸಜ್ಜನತೆ; ಕುಲೀನತೆ.
नज़ामत, स्त्री० ರಾಜ್ಯದ; ಆಡಳಿತಗಾರನ ಪದವಿ; ಅಧಿಕಾರ ವಿಭಾಗ.
नज़ारत, स्त्री० ಮೇಲ್ವಿಚಾರಣೆ; ಪಾರುಪತ್ಯ.
नज़ारा, पु० ನೋಟ; ದೃಶ್ಯ; ದೃಷ್ಟಿ; ಪ್ರೇಮದೃಷ್ಟಿ.
नज़ाराबाज़ी, स्त्री० ಪ್ರೇಮದೃಷ್ಟಿಯಿಂದ ನೋಡುವುದು.
नजासत, स्त्री० ಕೊಳಕು.
नजिस, वि० ಅಪವಿತ್ರ.
नजीब, पु० ಸತ್ಕುಲದವ.
नज़ीर, स्त्री० ಉದಾಹರಣೆ.
नजूम, पु० ಜ್ಯೋತಿಷ್ಯ.
नजूमी, पु० ಜ್ಯೋತಿಷ್ಕ; ಜೋಯಿಸ.
नज़ूल, पु० ಎಲ್ಲಿಯಿಂದ ಹೊರಗಣ ಸರಕಾರದ ಭೂಮಿ.
नज़्द, पु० ಎತ್ತರದ ಪ್ರದೇಶ.
नज़्म, स्त्री० ಕವಿತೆ; ಮುತ್ತಿನಹಾರ.
नज़्ल, पु० ಸರಕಾರೀ ಜಮೀನು.
नट, पु० ಅಭಿನಯಕಾರ.
नटई, स्त्री० ಸ್ವರ; ಕೊರಳಗಂಟು.
नटखट, वि० ಗಲಾಟೆಗಾರ; ತುಂಟ; ಚೇಷ್ಟೆಗಾರ.
नटखटी, स्त्री० ತುಂಟತನ.
नटनी, स्त्री० ನರ್ತಕಿ; ನಟಿ.
नटवना, स० ಅಭಿನಯಿಸು.
नटवर, पु० ಅಭಿನಯಕಾರ.
नटसाल, स्त्री० ಮೈಯಲ್ಲಿ ಚುಚ್ಚಿಕೊಂಡು ಮುರಿದ ಮುಳ್ಳು.
नटी, स्त्री० ನರ್ತಕಿ; ಅಭಿನೇತ್ರಿ; ವೇಶ್ಯೆ.
नठना, अ० ನಾಶವಾಗು. स० ನಾಶ ಮಾಡು.
नढ़ना, स० ಪೋಣಿಸು.
नति, स्त्री० ನಮಸ್ಕಾರ; ವಿನಯ.
नतिनी, स्त्री० ಮಗಳಮಗಳು; ದೌಹಿತ್ರಿ.
नतीजा, पु० ಪರಿಣಾಮ; ಫಲ.
नतु, क्रि० ಇಲ್ಲವಾದರೆ.
नतैत, पु० ಸಂಬಂಧಿಕ; ನೆಂಟ.

नत्थी, स्त्री० ಕಾಗದ ಪತ್ರಗಳ ಕಟ್ಟು; ಕಾಗದಗಳನ್ನು ಪೋಣಿಸುವ ಧಾರ; ಲಗತ್ತಿಸಿದ ಕಾಗದಪತ್ರ; —**करना** ಲಗತ್ತು ಮಾಡು.

नथ, स्त्री० ಮೂಗುಬೊಟ್ಟು; ನತ್ತು.

नथना, पु० ಮೂಗಿನ ಮುಂಭಾಗ; ಮೂಗಿನ ತುದಿ.

नथनी, स्त्री० ಸಣ್ಣ ಮೂಗುಬೊಟ್ಟು; ಬುಲಾಕು.

नथुना, पु० दे० **नथना.**

नथुनी, स्त्री० दे० **नथनी.**

नद, पु० ನದಿ.

नदान, वि० दे० **नादान.**

नदारद, वि० ಅದೃಶ್ಯ; ಮಾಯವಾದ.

नदिया, स्त्री० ನದಿ; ಹೊಳೆ.

नदीदा, वि० ಕಾಣದ; ಲೋಭಿ.

नदीम, पु० ಪಕ್ಕದವ; ಸ್ನೇಹಿತ.

नद्दाफ़, पु० ಪಿಂಜಾರ.

नधना, स० (ನೊಗಕ್ಕೆ) ಕಟ್ಟು ಅಥವಾ ಹೂಡು.

ननंद } **ननद** } स्त्री० ಗಂಡನ ಸಹೋದರಿ; ನಾದಿನಿ.

ननदोई, पु० ನಾದಿನಿಯ ಗಂಡ.

ननसार, स्त्री० ತಾಯಿಯ ತವರು ಮನೆ; ಮಾತಾಮಹರ ಮನೆ

ननिया, वि० ತಾಯಿಯ ತಂದೆಗೆ ಸಂಬಂಧಿಸಿದ: ಮಾತಾಮಹರ.

ननिहाल, पु० दे० **ननसार.**

नन्हा, वि० ಚಿಕ್ಕ; ಪುಟ್ಟ.

नपाई, स्त्री० ಅಳತೆ ಮಾಡುವಿಕೆ; ಅಳತೆ ಮಾಡಿದುದರ ಮಜೂರಿ.

नपाक, वि० दे० **नापाक.**

नपुंसक, पु० ಪೌರುಷವಿಲ್ಲದವ; ಷಂಡ; ನಪುಂಸಕ.

नपुंसकता, स्त्री० ನಪುಂಸಕತನ.

नफ़र, पु० ಆಳು; ಸೇವಕ.

नफ़रत, स्त्री० ಹೇಸಿಕೆ; ಹೇವರಿಕೆ; ಅಸಹ್ಯ.

नफ़री, स्त्री० ಒಬ್ಬ ಆಳಿನ ಒಂದು ದಿನದ ಮಜೂರಿ; ಆಳುಗೆಲಸ.

नफ़स, पु० ಉಸಿರು.

नफ़स-परवर, वि० ಸುಂದರವಾದ.

नफ़सानियत, स्त्री० ಸ್ವಾರ್ಥಪರತೆ.

नफ़सानी, वि० ಆತ್ಮ ಸಂಬಂಧವಾದ.

नफ़सी, वि० ಸ್ವಂತವಾದ.

नफ़ा, पु० ಲಾಭ.

नफ़ाका, पु० ಊಟ ಉಪಚಾರದ ಖರ್ಚು.

नफ़ासत, स्त्री० ಮೇಲ್ಮೆ; ಉತ್ಕೃಷ್ಟತೆ.

नफ़ी, स्त्री० ತೆಗೆದು ಹಾಕುವುದು; ಇಲ್ಲದಿರುವಿಕೆ; ತಿರಸ್ಕಾರ.

नफ़ीरी, स्त्री० ತುತ್ತೂರಿ; ಕಹಳೆ.

नफ़ीस, वि० ಉತ್ತಮವಾದ; ಸುಂದರ.

नफ़्स, पु० ಆತ್ಮ; ಪ್ರಾಣ; ಲಿಂಗ.

नफ़्सानी, वि० ಇಂದ್ರಿಯ ಸಂಬಂಧವಾದ; ವಿಷಯ ವಿಲಾಸದ.

नफ़्से-अम्मारा, पु० ಇಂದ್ರಿಯ ಭೋಗ; ವಾಸನಾ ಪ್ರವೃತ್ತಿ. **(नफ़्से-बहीमी)**

नफ़्से-नफ़ीस, पुं० ಒಳ್ಳೆಯ ವ್ಯಕ್ತಿತ್ವವುಳ್ಳ.
नबर्द, स्त्री० ಯುದ್ಧ; ಕಾಳಗ.
नबात, स्त्री० ಹಸುರುವಾಣಿ; ತರಕಾರಿ.
नबी, पुं० ದೇವದೂತ.
नबेड़ना, स० ಇತ್ಯರ್ಥಪಡಿಸು; ತೀರ್ಮಾನಿಸು.
नबेड़ा, पुं० ತೀರ್ಮಾನ; ಇತ್ಯರ್ಥ.
नब्ज़, स्त्री० ನಾಡಿ; ನರ.
नब्बाज़, पुं० ವೈದ್ಯ.
नभ, पुं० ಆಕಾಶ.
नभस्थल, पुं० ಆಕಾಶ; ಶಿವ.
नम, वि० ಒದ್ದೆಯಾದ; ತೊಯಿದ.
नमक, पुं० ಉಪ್ಪು; ಲವಣ; ಲಾವಣ್ಯ; ಸೊಬಗು.
नमकख़्वार, वि० ಉಪ್ಪುಣ್ಣುವವ; ಪೋಷಿತ.
नमकसार, पुं० ಉಪ್ಪಿನ ಕಟ್ಟೆ.
नमकहराम, वि० ಕೃತಘ್ನ; ಉಂಡ ಮನೆಗೆ ಎರಡು ಬಗೆಯುವವ.
नमकहरामी, स्त्री० ಕೃತಘ್ನತೆ.
नमकहलाल, वि० ಸ್ವಾಮಿನಿಷ್ಠ; ಸ್ವಾಮಿಭಕ್ತ.
नमकहलाली, स्त्री० ಸ್ವಾಮಿನಿಷ್ಠೆ.
नमकीन, वि० ಉಪ್ಪು ಹೆಚ್ಚಿದ; ಚವುಳಿನ; ಲಾವಣ್ಯವುಳ್ಳ.
नमगीरा, पुं० ಡೇರಾ.
नमदा, पुं० ಪದರುಗಳನ್ನು ಅಂಟಿಸಿ ತಯಾರಾದ ಉಣ್ಣೆ ಕಂಬಳಿ ಅಥವಾ ಬಟ್ಟೆ.
नमन, पुं० ನಮಸ್ಕಾರ; ಬಾಗುವಿಕೆ.
नमना, अ० ನಮಸ್ಕರಿಸು.
नमनाक, वि० ತೊಯ್ದ; ತಣ್ಣಗಾದ.
नमाज़, स्त्री० ಮುಸಲ್ಮಾನರ ಪ್ರಾರ್ಥನೆ; ನಮಾಜು.
नमाज़-गाह, स्त्री० ಮಸೀದಿಯೊಳಗೆ ನಮಾಜುಮಾಡುವ ಸ್ಥಳ.
नमाज़ी, पुं० ನಮಾಜುಮಾಡುವವನು; ನಮಾಜುಮಾಡುವಾಗ ಹಾಸಿಕೊಳ್ಳುವ ಬಟ್ಟೆ.
नमाना, स० ಬಗ್ಗಿಸು; ಸೋಲಿಸು.
नमी, स्त्री० ಒದ್ದೆ; ತೇವ; ಥಂಡಿ.
नमूदार, वि० ಪ್ರಕಟ; ದೃಗ್ಗೋಚರ.
नमूना, पुं० ಮಾದರಿ; ನಮೂನೆ.
नम्र, वि० ವಿನೀತ; ವಿಧೇಯ.
नम्रता, स्त्री० ವಿನಯ.
नय, पुं० ನೀತಿ; ನಮ್ರತೆ.
नयन, पुं० ಕಣ್ಣು; ನೇತ್ರ.
नयनागर, वि० ನೀತಿ ನಿಪುಣ.
नयशील, वि० ನೀತಿಜ್ಞ; ವಿನೀತ.
नया, वि० ಹೊಸ; ನೂತನ; ನವೀನ.
नयापन, पुं० ಹೊಸತನ.
नयाम, पुं० ಖಡ್ಗಕೋಶ; ಒರೆ.
नर, पुं० ಮನುಷ್ಯ; ವಿಷ್ಣು; ಶಿವ; ಅರ್ಜುನ; ಗಂಡು.
नरकट, पुं० ಲಾಳದ ಕಡ್ಡಿ.
नरग़ा, पुं० ಬೇಟೆಗಾಗಿ ಒಂದುಗೂಡಿದ ಜನಸಮೂಹ; ಕಷ್ಟ.

नरगिस, स्त्री० ಉಳ್ಳೀಗಡ್ಡೆಯ ಗಿಡ ದಂತಹ ಒಂದು ಜಾತಿಯ ಗಿಡ ದಲ್ಲಿನ ಬಟ್ಟಲಿಯ ಆಕಾರದಹೂ, ಇದನ್ನು ಕಣ್ಣಿಗೆ ಹೋಲಿಸುತ್ತಾರೆ.

नरदन, स्त्री० ಗರ್ಜನೆ.

नरदवाँ, पु० ಬಚ್ಚಲು ತೂಬು.

नरदारा, पु० ನಪುಂಸಕ ; ಹೇಡಿ.

नरबदा, स्त्री० ನರ್ಮದಾನದಿ.

नरम, वि० ಮೃದು ; ಮೆತ್ತನೆಯ ; ಕೋಮಲ.

नरमा, स्त्री० ಬೂರುಗ ; ದೂದಿಹತ್ತಿ.

नरमाई, स्त्री० ಮೃದುತ್ವ ; ಕೋಮಲತೆ.

नरमाना,- स० ಮೆತ್ತಗೆಮಾಡು ; ಶಾಂತಪಡಿಸು.

नरमी, स्त्री० ಕೋಮಲತೆ; ಮೆತುವು.

नरमेत्र, पु० ಮನುಷ್ಯ ಮಾಂಸದ ನರಬಲಿಯನ್ನು ಕೊಡತಕ್ಕ ಒಂದು ವಿಧವಾದ ಯಜ್ಞ.

नरसिंवा, पु० ಕಹಳೆ ; ಕೊಂಬು.

नरसों, क्रि० ನಾಡಿದ್ದು.

नरहर, स्त्री० ಮೀನಕಂಡ.

नराच, पु० ಬಾಣ : ಅಂಬು.

नराजना, स० ಕೋಪಹುಟ್ಟಿಸು.

नरी, स्त्री० ಹದಮಾಡಿದ ತೊಗಲು ; ಲಾಳ ; ನಳಿಗೆ.

नरेंद्र, पु० ರಾಜ ; ಅರಸು.

नर्त्त, पु० ನರ್ತಕ ; ಕುಣಿಯುವವನು.

नर्द, स्त्री० ಪಗಡೆಕಾಯಿ.

नर्दबाजी, स्त्री० ಪಗಡೆಯಾಟ.

नर्दबान, स्त्री० ಏಣಿ ; ನಿಚ್ಚಣಿಗೆ.

नर्दन, स्त्री० ಗರ್ಜನೆ; ಭೀಷಣವಾದ ಧ್ವನಿ.

नर्बदा, स्त्री० दे० **नर्मदा.**

नर्म, पु० ಪರಿಹಾಸ್ಯ ; ನಗಚಾಟಿಗೆ ; ಚೇಷ್ಟೆ ; ಗೇಲಿ.

नर्मद, पु० ಪರಿಹಾಸ್ಯಗಾರ.

नर्मी, स्त्री० दे० **नरमी.**

नल, पु० ಕೊಳಾಯಿ; ನಳಿಗೆ; ನಳ.

नलनीरुह, पु० ಕಮಲನಾಳ ; ಮೃಣಾಳ ; ಬ್ರಹ್ಮ.

नला, पु० ಮೂತ್ರಾಶಯದ ನಾಳ.

नलाना, स० ಕಳೆ ಆರಿಸುವುದು.

नलिन, पु० ಕಮಲ; ನೀರು; ಸಾರಸ ಪಕ್ಷಿ.

नलिनी, स्त्री० ಕಮಲ ; ಮೂಗಿನ ಎಡಗಡೆಯ ಹೊಳ್ಳೆ ; ನದಿ.

नली, स्त्री० ಚಿಕ್ಕ ಕೊಳವೆ ; ನಳ.

नव, वि० ಹೊಸ; ನೂತನ; ನವೀನ; ಒಂಭತ್ತು.

नवना, अ० ಬಗ್ಗು ; ನಮ್ರತೆಯನ್ನು ತೋರು.

नवनि, स्त्री० ನಮ್ರತೆ ; ವಿನಯ.

नवनीत, पु० ಬೆಣ್ಣೆ.

नवम, वि० ಒಂಭತ್ತನೆಯ.

नवयुवक, नवयुवा, पु० ತರುಣ ; ನವಯುವಕ.

नवयौवना, स्त्री० ನವಯುವತಿ.

नवरंग, ವಿ॰ ಸುಂದರವಾದ; ನವೀನ ಶೋಭೆಯು.

नवरत्न, ಪು॰ ಮುತ್ತು ವಜ್ರ ಮೊದಲಾದ ಒಂಭತ್ತು ರತ್ನಗಳು.

नवरस, ಪು॰ ಕಾವ್ಯದ ಒಂಬತ್ತು ರಸಗಳು.

नवल, ವಿ॰ ನೂತನ; ಸುಂದರ; ಉಜ್ವಲ; ಯೌವನದ; ನವಯೌವನದ.

नवला, ಸ್ತ್ರೀ॰ ನವಯೌವನೆ; ತರುಣಿ.

नवसर, ಪು॰ ಒಂಭತ್ತು ಲಡಿಗಳ ಮಾಲೆ.

नवसिखा, ವಿ॰ ಹೊಸದಾಗಿ ಕಲಿತವನು.

नवाँ, ವಿ॰ ಒಂಭತ್ತನೆಯ; ನವಮ.

नवा, वि॰ दे॰ **नया.**

नवागत, ವಿ॰ ಹೊಸದಾಗಿ ಬಂದಿರುವ.

नवाज़, ವಿ॰ ಕರುಣಾಳು; ದಯಾಳು.

नवाज़िश, ಸ್ತ್ರೀ॰ ದಯೆ; ಕೃಪೆ.

नवाना, ಸ॰ ಬಗ್ಗಿಸು: ವಿಧೇಯನಾಗಿ ಮಾಡು.

नवाब, ಪು॰ ರಾಜ; ಚಕ್ರವರ್ತಿಯ ಪ್ರತಿನಿಧಿ. ವಿ॰ ಆಡಂಬರಕ್ಕೆ ಹಣ ವೆಚ್ಚಮಾಡುವವ.

नवाबज़ादा, ಪು॰ ನವಾಬನ ಮಗ.

नवाबी, ಸ್ತ್ರೀ॰ ನವಾಬ್ ಗಿರಿ; ನವಾಬನ ಪದವಿ; ರಾಜರ ದುಂದುವೆಚ್ಚ.

नवासा, ಪು॰ ಮಗಳ ಮಗ; ದೌಹಿತ್ರ.

'नवाह, ಪು॰ ಒಂಭತ್ತು ದಿವಸಗಳಲ್ಲಿ ಮುಗಿಯುವ ರಾಮಾಯಣ ಪಾರಾಯಣ.

नविश्ता, ವಿ॰ ಬರೆದ; ಬರೆದಿರುವ.

नवीन, ವಿ॰ ಹೊಸ; ನೂತನ; ವಿಚಿತ್ರ; ಅಪೂರ್ವ.

नवीस, ಪು॰ ಬರೆಯುವವನು; ಲೇಖಕ.

नवीसी, ಸ್ತ್ರೀ॰ ಬರೆಯುವಿಕೆ.

नवेद, ಸ್ತ್ರೀ॰ ನಿವೇದನೆ; ಆಮಂತ್ರಣ; ಆಮಂತ್ರಣ ಪತ್ರ.

नवेला, ಪು॰ ನವೀನ; ಹೊಸ; ತರುಣ.

नवेली, ಸ್ತ್ರೀ॰ ತರುಣಿ; ಯುವತಿ.

नवोढ़ा, ಸ್ತ್ರೀ॰ ನವವಿವಾಹಿತಳು; ನವಯುವತಿ.

नव्य, ವಿ॰ ನೂತನ; ಹೊಸ.

नव्वाब, पु॰ दे॰ **नवाब.**

नव्वाबी, स्त्री॰ दे॰ **नवाबी.**

नशाना, ಅ॰ ನಾಶವಾಗು; ನಷ್ಟವಾಗು.

नशा, ಪು॰ ಮತ್ತು; ಅಮಲು; ಮದ; ಸೊಕ್ಕು;—**उतारना** ಗರ್ವವನ್ನಿಳಿಸು.

नशाखोर, ಪು॰ ಮದ್ಯಪಾನ ಮಾಡುವವ; ಕುಡುಕ.

नशात, ಪು॰ ಉತ್ಪತ್ತಿ; ಪ್ರಾಣಿ.

नशाना, ಸ॰ ನಾಶಪಡಿಸು; ಹಾಳುಮಾಡು.

नशीन, वि० ಇರುವ; ಆರೂಢ;

नशीला, वि० ಮಾದಕ (ಪದಾರ್ಥ); ಮದಮತ್ತ.

नशेबाज़, पु० ಮಾದಕ ಪದಾರ್ಥ ಗಳನ್ನು ಸೇವಿಸುವವ.

नश्तर, पु० ಶಸ್ತ್ರಚಿಕಿತ್ಸೆಯ ಚಾಕು.

नश्वर, वि० ನಾಶವಾಗತಕ್ಕ

नस, स्त्री० ನಾಡಿ; ನರ; ಸ್ನಾಯು; —नस में ಸರ್ವಾಂಗಗಳಲ್ಲಿ.

नसकटा, पु० ನಪುಂಸಕ.

नसना, अ० ನಷ್ಟವಾಗು.

नसब, पु० ಮನೆತನ; ವಂಶ.

नसबनामा, पु० ವಂಶವೃಕ್ಷ.

नसबी, वि० ಮನೆತನಕ್ಕೆ ಸಂಬಂಧಿಸಿದ.

नसर, स्त्री० ಗದ್ಯ.

नसल, स्त्री० ವಂಶ.

नसवर, स्त्री० ನಶ್ಯ; ನಶ್ಯದ ಪುಡಿ.

नसा, स्त्री० ಮೂಗು; ನಾಸಿಕ.

नसाना, अ० ನಾಶವಾಗು; ಹಾಳಾಗು.

नसीनी, स्त्री० ಸಿಡ್ಡಣಿಕೆ; ಏಣಿ.

नसीब, पु० ಭಾಗ್ಯ; ಅದೃಷ್ಟ.

नसीबवर, वि० ಭಾಗ್ಯಶಾಲಿ.

नसीबा, पु० दे० **नसीब.**

नसीम, स्त्री० ತಂಪಾಗಿ ಬೀಸುವ ಸುವಾಸನೆಯ ಗಾಳಿ.

नसीर, पु० ಸಹಾಯಕ; ದೇವರ ಒಂದು ಹೆಸರು.

नसीला, वि० ನರನಾಡಿಗಳಿರುವ; ಉತ್ತಮ ಕುಲದ; ಒಳ್ಳೆಯ ತಳಿಯ.

नसीहत, स्त्री० ಉಪದೇಶ; ಶಿಕ್ಷಣ.

नस्ख़, पु० ಪ್ರತಿಲಿಪಿ; ನಕಲು.

नस्ता, स्त्री० ಮೂಗುದಾಣ ಹಾಕುವ ತೂತು.

नस्ब, पु० ಸ್ಥಾಪನೆ.

नस्य, पु० ನಶ್ಯ.

नस्ल, स्त्री० ವಂಶ; ವಂಶಪರಂಪರೆ; ತಳಿ.

नहछू, पु० ವಿವಾಹಕಾಲದಲ್ಲಿ ಗಂಡಿನ ಕೈ ಬೆರಳುಗಳಿಗೆ ಮದರಂಗಿ ಹಚ್ಚುವ ಪದ್ಧತಿ; ಮದರಂಗಿ ಶಾಸ್ತ್ರ.

नहज, पु० ರೀತಿ; ಪದ್ಧತಿ; ನೇರಾದ ಮಾರ್ಗ.

नहना, स० ಕೆಲಸಕ್ಕೆ ಹಚ್ಚು; ಹೂಡು.

नहर, स्त्री० ಕಾಲುವೆ; ನೀರಾವರಿ ನಾಲೆ.

नहरनी, स्त्री० ಉಗುರು ತೆಗೆಯುವ ಕತ್ತಿ.

नहला, पु० ಒಂಬತ್ತು ಚುಕ್ಕೆಗಳಿರುವ ಇಸ್ಪೀಟಿನ ಎಲೆ.

नहलाना, स० ಸ್ನಾನಮಾಡಿಸು.

नहस, वि० ಅಶುಭ.

नहसुत, पु० ಉಗುರಿನ ಗೀರು ಅಥವಾ ಗುರುತು.

नहाँ, पु० ಗಾಡಿಯ ಚಕ್ರದ ನಡುವಣ ತೂತು.

नहान, पुं० ಸ್ನಾನ.

नहाना, अं० ಮಿಂಯು; ಸ್ನಾನ ಮಾಡು.

नहार, पुं० ದಿನ; ಹಗಲು. वि० ಉಪವಾಸಮಾಡಿದ.

नहिं, अव्य० दे० **नहीं.**

नहीं, अव्य० ಇಲ್ಲ; ಅಲ್ಲ;—**तो** ಇಲ್ಲವಾದರೆ, ಅನ್ಯಥಾ;—**नहीं परवा** ಇಲ್ಲ, ಚಿಂತೆಯಿಲ್ಲ.

नहीफ़, वि० ದುರ್ಬಲ.

नहूसत, स्त्री० ಉದಾಸೀನತೆ; ಖಿನ್ನತೆ; ಅಶುಭಲಕ್ಷಣ.

नांघना, स० ದಾಟು; ಲಂಘಿಸು.

नांठना, अं० ನಷ್ಟವಾಗು; ಕೆಟ್ಟು ಹೋಗು.

नाँद, स्त्री० ರಂಜಣಿಗೆ; ಪಶುಗಳಿಗೆ ಹಲ್ಲು ನೀರು ಇಡತಕ್ಕ ದೊಡ್ಡ ಮತ್ತು ಅಗಲವಾದ ಮಣ್ಣಿನ ಪಾತ್ರೆ.

ना, अव्य० दे० **नहीं. प्रत्य०** ಶಬ್ದದ ಪ್ರಾರಂಭದಲ್ಲಿ ಅಭಾವವನ್ನು ಸೂಚಿಸಲು ಉಪಯೋಗಿಸುವ ಪ್ರತ್ಯಯ. ಉದಾ:—**नापाक, नाहक़.**

ना-आइना, वि० ಅಪರಿಚಿತ.

नाइत्तिफ़ाक़ी, स्त्री० ವಿರೋಧ; ಮತಭೇದ.

नाइन, स्त्री० ಹಜಾಮರವಳು.

नाइँ, स्त्री० ಸಮಾನ; ಸಮಾನತೆ. क्रि० ಅಂತೆ; ಸಮಾನವಾಗಿ.

नाई, पुं० ಕ್ಷೌರಕ; ನಾಯಿಂದ.

नाउम्मेद, वि० ನಿರಾಶೆಯಾದ; ಆಶಾರಹಿತ.

नाउम्मेदी, स्त्री० ನಿರಾಶೆ.

नाक, स्त्री० ಮೂಗು; ನಾಸಿಕ;—**कटना** ಮಾನಹೋಗು; **नाकों चने चबाना** ಬಹಳ ಕಷ್ಟಪಡಿಸುವುದು;—**रख लेना** ಗೌರವವನ್ನು ಳಿಸುವುದು;—**में दम करना** ಗೋಳಾಡಿಸು, ಬೇಸರಿಕೆಯನ್ನುಂಟುಮಾಡು;—**रगड़ना** ಅಂಗಲಾಚಿಬೇಡು, ಗೋಗರೆಯು;—**सिकोड़ना** ಅಸಹ್ಯ ಅಥವಾ ಬೇಸರಿಕೆಯನ್ನು ಪ್ರಕಟಿಸು.

नाकड़ा, पुं० ಮೂಗಿನ ಬಾವು.

नाकद्र, वि० ಗೌರವವಿಲ್ಲದ.

नाक़द्री, स्त्री० ಅಗೌರವ.

नाकवाला, वि० ಗೌರವಸ್ಥ.

नाकस, वि० ನೀಚ; ತುಚ್ಛ.

नांका, पुं० ರಸ್ತೆಯತುದಿ; ಬಾಗಿಲು; ಠಾಣೆ; ಸೂಜಿಯ ಕಣ್ಣು.

नाक़ाबंदी, स्त्री० ರಸ್ತೆಯನ್ನು ತಡೆಗಟ್ಟುವಿಕೆ.

नाक़ाबिल, वि० ಯೋಗ್ಯವಲ್ಲದ; ಅಶಿಕ್ಷಿತ.

नाकाम, वि० ಮನೋರಥವು ಕೈಗೂಡದ; ನಿರಾಶೆ.

नाकारा, वि० ಅಪ್ರಯೋಜಕ; ಕೆಲಸಕ್ಕೆ ಬಾರದ.

नाक़िल, वि० ನಕಲಿಮಾಡುವವ; ನಕಲು ತೆಗೆಯುವವ.

नाक़िस, वि० ದೋಷಯುಕ್ತ; ಅಪೂರ್ಣ.

नाकूप, पु० ಶಂಖ.

नाकेदार, पु० ಬಾಗಿಲಲ್ಲಿರುವ ಸಿಪಾಯಿ; ಕಾವಲುಗಾರ.

नाकेबंदी, स्त्री० दे० नाकाबंदी.

नाखना, स० ನಾಶಮಾಡು; ಬೀಳಿಸು.

नाख़लफ़, वि० ಅಯೋಗ್ಯ.

नाख़ुन, पु० ಉಗುರು. **नाख़ुने शमशेर** ಕತ್ತಿಯಹದ; ಗೊರಸು. **अक्ल के नाख़ुन लेना** ಬುದ್ಧಿಯನ್ನು ಉಪಯೋಗಿಸಿ ಕೆಲಸಮಾಡುವುದು.

नाख़ुना, पु० ಕಣ್ಣಿನ ಪರೆ.

नाख़ुश, वि० ಅತೃಪ್ತ.

नाख़ुशी, स्त्री० ಅತೃಪ್ತಿ.

नाख़ून, पु० ಉಗುರು; ನಖ.

नाखोरी, स्त्री० ಉಗುರುಸುತ್ತು.

नाग, पु० ಸರ್ಪ; ನಾಗರ ಹಾವು.

नागफनी, स्त्री० ಪಾಪಾಸ್ ಕಳ್ಳಿ.

नागबेल, स्त्री० ವೀಳೇದೆಲೆ ಬಳ್ಳಿ.

नागर, वि० ನಗರದ; ಪಟ್ಟಣದ. पु० ಚತುರನಾದ ಮನುಷ್ಯ; ಸಭ್ಯ; ನಾಗರಿಕ; ಶುಂಠಿ; ಗುಜರಾತಿ ಬ್ರಾಹ್ಮಣರ ಒಂದು ಪಂಗಡ.

नागरता, स्त्री० ನಾಗರಿಕತೆ; ಸಭ್ಯತೆ; ಚಾತುರ್ಯ.

नागरमोथा, पु० ಕೊನ್ನಾರಿ ಗೆಡ್ಡೆ; ನಾಗಮುಸ್ತಕ.

नागरिक, वि० ಪಟ್ಟಣದ; ಪಟ್ಟಣಿಗ; ಜಾಣ.

नागरी, स्त्री० ನಗರವಾಸಿ ಸ್ತ್ರೀ; ದೇವನಾಗರಿ ಅಕ್ಷರ.

नागवल्ली, स्त्री० ವೀಳೇದೆಲೆಯ ಬಳ್ಳಿ ಅಥವಾ ಎಲೆ.

नागवार, वि० ಅಸಹ್ಯ; ಅಪ್ರಿಯ; ಕೆಟ್ಟದೆನಿಸುವ.

नागहाँ, क्रि० ಅಕಸ್ಮಾತ್; ಆಕಸ್ಮಿಕವಾಗಿ; ದಿಢೀರನೆ.

नागहानी, वि० ಅಕಸ್ಮಾತ್ತಾದ; ಆಕಸ್ಮಿಕವಾದ.

नागा, पु० ಬೆತ್ತಲೆಯಾಗಿ ತಿರುಗಾಡುವ ಶೈವಸಾಧು.

नाग़ा, पु० ನಡುವೆ.

नागिन, स्त्री० ಹೆಣ್ಣು ಸರ್ಪ.

नागोद, पु० ಎದೆ ಕವಚ.

नाच, पु० ನಾಟ್ಯ; ನೃತ್ಯ; ಕುಣಿತ; ಆಟ;—**नचाना,** ಆಟವಾಡಿಸು; ಗೋಳಾಡಿಸು.

नाचकूद, स्त्री० ನಾಟ್ಯ; ಕುಣಿದಾಟ; ಹಾರಾಟ; ಪ್ರಯತ್ನ; ಜಂಬ.

नाचगोत, पु० ಆಟಪಾಟ; ನೃತ್ಯ.

नाचघर, पु० ನಾಟ್ಯಶಾಲೆ.

नाचना, अ० ಕುಣಿ; ನೃತ್ಯಮಾಡು; ನರ್ತಿಸು; ಕುಣಿದಾಡು.

नाचमहल, पु० ನಾಟ್ಯಶಾಲೆ.

नाचरंग, पु॰ ವಿಲಾಸ; ವಿನೋದ; ಆನಂದೋತ್ಸವ.

नाचाक़, वि॰ ರೋಗಿ; ವಿರಸವಾದ; ಸಪ್ಪೆ.

नाचार, वि॰ ಉಪಾಯವಿಲ್ಲದೆ; ಅಸಹಾಯ; ವ್ಯರ್ಥ; ತುಚ್ಛವಾದ.

नाचारी, स्त्री॰ दे॰ **लाचारी.**

नाचीज़, वि॰ ತುಚ್ಛ; ಅಕಿಂಚನ; ಕೆಲಸಕ್ಕೆ ಬಾರದ.

नाज, पु॰ ದವಸ; ಧಾನ್ಯ.

नाज़, पु॰ ಬೆಡಗು; ಒಯ್ಯಾರ; ಒಲವು;—**नख़रा** ಒಲವು ಒಯ್ಯಾರ.

नाज़नीं, स्त्री॰ ಸುಂದರಿ; ಚೆಲುವಿ.

नाज़बरदार, पु॰ ಮುಖಸ್ತುತಿ ಮಾಡುವವ.

नाज़बरदारी, स्त्री॰ ಹಾವಭಾವ ವಿಲಾಸ.

नाज़-बालिश, पु॰ ಚಿಕ್ಕದಿಂಬು.

नाज़ाँ, वि॰ ಹೆಮ್ಮೆಗಾರ; ಗರ್ವಿಷ್ಠ; ಜಂಬಗಾರ.

नाजायज़, वि॰ ಅನುಚಿತವಾದ; ಯೋಗ್ಯವಲ್ಲದ; ಅನುಪಯುಕ್ತ; ನಿಯಮಕ್ಕೆ ವಿರುದ್ಧ.

नाज़िम, पु॰ ರಾಜ್ಯದ ಆಡಳಿತಗಾರ; ವ್ಯವಸ್ಥಾಪಕ.

नाज़िर, पु॰ ನೋಡುವವ; ನಿರೀಕ್ಷಕ; ಕೋರ್ಟಿನ ಗುಮಾಸ್ತೆ; ವೇಶ್ಯೆಯರ ಮಧ್ಯಸ್ಥಗಾರ.

नाज़िरा, पु॰ ನೋಡುವವರು; ಪ್ರೇಕ್ಷಕರು.

नाज़िरात, स्त्री॰ ವೇಶ್ಯೆಯರ ಮಧ್ಯಸ್ಥಗಾರನಿಗೆ ದೊರಕುವ ಹಣ.

नाज़िल, वि॰ ಇಳಿಯುವ; ಧುಮುಕುವ.

नाज़िश, स्त्री॰ ಬಿಗುಮಾನ; ಗರ್ವ.

नाज़ुक, वि॰ ಕೋಮಲ; ಸೂಕ್ಷ್ಮ; ನುಣುಪಾದ; ನಾಜೂಕಾದ.

नाज़ुक-तबा, वि॰ दे॰ **नाज़ुक-मिज़ाज.**

नाज़ुक-दिमाग, वि॰ ಸಣ್ಣ ಪುಟ್ಟ ವಿಷಯಗಳಿಗೆ ಕೋಪಿಸಿಕೊಳ್ಳುವವ; ಜಂಬಗಾರ.

नाज़ुक-मिज़ाज, वि॰ ಸಣ್ಣ ಕಷ್ಟಗಳನ್ನು ಸಹ ಸಹಿಸದ; ಅಸಹನೆಯುಳ್ಳ.

नाज़ुकी, स्त्री॰ ಸೂಕ್ಷ್ಮತೆ; ನುಣುಪು.

नाटकी, पु॰ ಅಭಿನಯಗಾರ.

नाटकीय, वि॰ ನಾಟಕದ.

नाटना, अ॰ ಮಾತಿಗೆ ತಪ್ಪು. स॰ ಮಾತು ಹೊರಳಿಸು.

नाटा, वि॰ ಕುಳ್ಳ. पु॰ ಕುಳ್ಳಾದ ಎತ್ತು ಅಥವಾ ಆಕಳು.

नाटिका, स्त्री॰ ನಾಲ್ಕು ಅಂಕಗಳ ನಾಟಕ.

नाठ, पु॰ ನಷ್ಟ; ನಾಶ; ಅಭಾವ.

नाठना, अ॰ ನಾಶವಾಗು; ಧ್ವಂಸವಾಗು.

नाठा, पु॰ ವಾರಸುದಾರರಿಲ್ಲದವ.

नाड़, स्त्री० ಕುತ್ತಿಗೆ; ಕೊರಳು.
नाड़ा, पु० ನಡುಕಟ್ಟು; ಲಾಡಿ.
नाड़िया, पु० ವೈದ್ಯ; ಚಿಕಿತ್ಸಕ.
नाड़ी, स्त्री० ನಾಡಿ; ನರ; ನಳಿಗೆ.
नाड़ीमंडल, पु० ವಿಷುವದ್ರೇಖೆ; ಭೂಮಧ್ಯ ರೇಖೆ.
नात, पु० ಜ್ಞಾತಿ; ನೆಂಟ; ಬಂಧು.
नातराश, वि० ಸುಲಿಯದೆ ಇರುವ; ಅಸಭ್ಯ.
नातवाँ, वि० ದುರ್ಬಲ; ಅಶಕ್ತ.
नाता, पु० ನೆಂಟಸ್ತಿಕೆ; ಸಂಬಂಧ; ಸ್ನೇಹ.
नाताक़त, वि० ಅಶಕ್ತ; ದುರ್ಬಲ; ಬಲಹೀನ.
नातिका, पु० ವಾಚಾಳತನ; ಬುದ್ಧಿವಂತ.
नातिन, स्त्री० ಮಗಳ ಮಗಳು; ಪೌತ್ರಿ.
नाती, पु० ಮೊಮ್ಮಗ; ದೌಹಿತ್ರ.
नाते, क्रि० ಸಂಬಂಧವಾಗಿ; ಸಲುವಾಗಿ; ನಿಮಿತ್ತ.
नातेदार, वि० ಸಂಬಂಧಿಕ; ನೆಂಟ; ಬಾಂಧವ.
नाथ, पु० ಒಡೆಯ; ಸ್ವಾಮಿ; ಅಧಿಪತಿ: ಪತಿ.
नाथना, स० ಮೂಗುದಾರ ಹಾಕು.
नाद, पु० ಶಬ್ದ; ಧ್ವನಿ.
नादना, स० ಬಾರಿಸು. अ० ಶಬ್ದವುಂಟಾಗು; ಆನಂದಿಸು; ಚಿಗುರು.
नादान, वि० ತಿಳುವಳಿಕೆಯಿಲ್ಲದ; ಮೂರ್ಖ; ಅಜ್ಞಾನಿ.
नादानी, स्त्री० ತಿಳಿಗೇಡಿತನ; ಮೂರ್ಖತನ; ಅಜ್ಞಾನ.
नादार, वि० ಬಡವ; ನಿರ್ಧನ.
नादारी, स्त्री० ಬಡತನ; ದಾರಿದ್ರ್ಯ.
नादिम, वि० ಲಜ್ಜೆಗೊಂಡ; ನಾಚಿಕೆಪಟ್ಟ.
नादिया, पु० ನಂದಿ; ಕಪಿಲೆ ಬಸವ; ಗಂಗೆತ್ತು.
नादिर, वि० ಅದ್ಭುತವಾದ; ವಿಚಿತ್ರವಾದ.
नादिरशाही, स्त्री० ಗೊತ್ತು ಗುರಿಯಿಲ್ಲದ ಆಡಳಿತ; ಅತ್ಯಾಚಾರ.
नादिरी, स्त्री० ಒಂದು ಬಗೆಯ ಜುಬ್ಬ.
नादिहंद, वि० ಕೊಡದವನು; ಜಿಪುಣ; ಕೊಟ್ಟಹಣ ಹಿಂದಿರುಗಿಸದವನು.
नादिहंदी, स्त्री० ಕೊಡದಿರುವಿಕೆ.
नादी, वि० ಶಬ್ದ ಮಾಡುವ; ಬಾರಿಸುವ.
नादीदा, वि० ಕಾಣದ; ಊಟದ ಸಾಮಗ್ರಿಗಳನ್ನು ಕಾಪಾಡಿಕೊಂಡಿರುವ.
नादुरुस्त, वि० ಅಶುದ್ಧ; ತಪ್ಪು.
नाधना, स० ಕಟ್ಟು; ನೊಗಕೆ ಹೂಡು.
नान, स्त्री० ರೊಟ್ಟಿ; ಚಪಾತಿ.
नानकशाही, वि० ಗುರು ನಾನಕನ ಶಿಷ್ಯರು.

नानकार, पु० ಹಣ ಅಥವಾ ಅಸ್ತಿಗಳನ್ನು ಸರಿಯಾದ ವ್ಯವಸ್ಥೆಗಾಗಿ ಬೇರೊಬ್ಬರ ವಶಕ್ಕೆ ಒಪ್ಪಿಸುವುದು.

नानख़ताई, स्त्री० ಬಿಲ್ಲೆಯಂತಿರುವ ಒಂದು ಮಿಠಾಯಿ; ಕತ್ತಾಯಿ.

नानबाई, पु० ರೊಟ್ಟಿಗಳನ್ನು ತಯಾರಿಸಿ ಮಾರುವವನು.

नाना, पु० ತಾಯಿಯ ತಂದೆ. वि० ವಿವಿಧ; ಅನೇಕ ಪ್ರಕಾರದ.

नानिहाल, पु० ಮಾತಾಮಹರಮನೆ; ತಾಯಿಯ ತಂದೆಯ ಮನೆ.

नानी, स्त्री० ತಾಯಿಯ ತಾಯಿ.

नानुकर, पु० ತಿರಸ್ಕಾರ; ಒಲ್ಲೆ: ಊಹೂ; ನಿಷೇಧಾರ್ಥ.

नान्ह, वि० ಚಿಕ್ಕ; ಸಣ್ಣ.

नाप, स्त्री० ಅಳತೆ; ಪರಿಮಾಣ; ಅಳೆಯುವ ಕೋಲು.

नापजोख / **नापतौल** स्त्री० ಅಳತೆ: ಮತ್ತು ತೂಕಮಾಡುವ ಕೆಲಸ.

नापना, स० ಅಳೆ: ಅಳತೆಮಾಡು; ತೂಕಮಾಡು.

नापसंद, वि० ಇಷ್ಟವಿಲ್ಲದ: ಅಪ್ರಿಯ; ಮನಸ್ಸಿಗೆ ಒಪ್ಪದ.

नापसंदगी, स्त्री० ಮನಸ್ಸಿಗೆ ಒಪ್ಪದಿರುವಿಕೆ; ಅಪ್ರಿಯತೆ.

नापाक, वि० ಅಪವಿತ್ರ; ಅಶುದ್ಧ.

नापाकी, स्त्री० ಅಪವಿತ್ರತೆ; ಅಶುದ್ಧತೆ.

नापायदार, वि० ಆಧಾರ ರಹಿತ; ಕ್ಷಣ ಭಂಗುರ; ಬಾಳಿಕೆಯಿಲ್ಲದ.

नापित, पु० ಕ್ಷೌರಿಕ; ನಾಯಿಂದ.

नाफ़, स्त्री० ನಾಭಿ; ಹೊಕ್ಕಳು.

नाफ़रमाँ, पु० ವಿರೋಧ ಮತ್ತು ತಿರಸ್ಕಾರಭಾವ ತೋರಿಸುವವನು.

नाफ़हम, त्रि० ಅರಿಯದವ; ಅಜ್ಞಾನಿ.

नाफ़हमी, स्त्री० ಅಜ್ಞಾನ; ಅವಿವೇಕ.

नाफ़ा, पु० ಕಸ್ತೂರಿ ಮೃಗದ ಹೊಕ್ಕುಳ ಚೀಲ.

नाफ़िर, वि० ಅಸಹ್ಯಪಡುವವ.

नाब, वि० ಶುದ್ಧವಾದ. पु० ಹಾವಿನ ವಿಷದಂತಹ; ದವಡೆಹಲ್ಲು.

नाबदान, पु० ಬಚ್ಚಲು; ಚರಂಡಿ.

नाबालिग़, वि० ವಯಸ್ಸುಬಾರದ; ಪ್ರಾಯಕ್ಕೆ ಬಾರದ.

नाबूद, वि० ನಾಶವಾದ; ಧ್ವಂಸವಾದ.

नाभ, स्त्री० ವತ್ಸನಾಭಿ ಎಂಬ ವಿಷ; ಹೊಕ್ಕಳು.

नाभक, पु० ಅಳಲೆಕಾಯಿ.

नाभि, स्त्री० ಹೊಕ್ಕಳು.

नामंजूर, वि० ಅಸ್ವೀಕೃತ: ಒಪ್ಪಿಗೆಯಾಗದ.

नामंजूरी, स्त्री० ಒಪ್ಪಿಗೆಯನ್ನು ಕೊಡದಿರುವುದು.

नाम, पु० ಹೆಸರು; ಕೀರ್ತಿ;—**लेना** ಹೆಸರೆತ್ತು, ಪ್ರಸ್ತಾಪಿಸು, ಜಪಿಸು.

नामक, वि० ಹೆಸರುಳ್ಳ; ಹೆಸರಿನ.

नामज़द, वि० ಯಾವುದಾದರೊಂದು ಕೆಲಸಕ್ಕೆ ನೇಮಿಸಲ್ಪಟ್ಟ; ಪ್ರಸಿದ್ಧ.

नामधाम, पु० ಹೆಸರು; ಮತ್ತು ಸ್ಥಳ ವಿಳಾಸ; ಪತ್ತೆ.

नामर्द, वि० ನಪುಂಸಕ; ಹೇಡಿ.

नामर्दी, स्त्री० ನಪುಂಸಕತನ.

नाम व निशान, पु० ಹೆಸರು ಮತ್ತು ಗುರುತು; ಪತ್ತೆ.

नामवर, वि० ಹೆಸರುಳ್ಳ; ಪ್ರಸಿದ್ಧ.

नामवरी, स्त्री० ಪ್ರಸಿದ್ಧಿ; ಹೆಸರುವಾಸಿ.

नामशेष, वि० ಹೆಸರು ಮಾತ್ರ ಉಳಿದಿರುವ; ಗತಿಸಿದ.

ना-महदूद, वि० ಮೇರೆಯಿಲ್ಲದ; ಅಪಾರ.

नामा, पु० ಪತ್ರ; ಗ್ರಂಥ.

नामाकूल, वि० ಅಯೋಗ್ಯ; ಅನುಚಿತ.

नामानिगार, वि० ಸುದ್ದಿಗಾರ; ಬಾತ್ಮೀದಾರ.

ना-मालूम, वि० ಗೊತ್ತಿಲ್ಲದ; ತಿಳಿಯದ; ಅಪರಿಚಿತ.

नामी, वि० ಹೆಸರಿನ; ಹೆಸರುವಾಸಿಯಾದ;—**गिरामी** ಸುಪ್ರಸಿದ್ಧ.

ना-मुनासिब, वि० ಸರಿಯಲ್ಲದ; ಅನುಚಿತ.

ना-मुबारक, वि० ಅಶುಭ; ಅಮಂಗಳ.

ना-मुमकिन, वि० ಅಸಂಭಾವ್ಯ; ಆಗದ ಹೋಗದ.

ना-मुराद, वि० ನಿಷ್ಫಲ; F.

ना-मुवाफ़िक़, वि० ವಿರುದ್ಧ; ಪ್ರತಿಕೂಲ.

नामूस, स्त्री० ಗೌರವ; ಮಾನ; ಪಾತಿವ್ರತ್ಯ.

नामूसी, स्त्री० ಅಗೌರವ; ಅವಮಾನ.

ना-मेहरबान, वि० ದಯೆಯಿಲ್ಲದ.

नामोनिशान, पु० ಗುರುತು; ಪತ್ತೆ; —**न रहना** ನಿರ್ನಾಮವಾಗು.

नायक, पु० ಮುಂದಾಳು; ಅಧಿಪತಿ.

नायब, पु० ಯಾವನಾದರೊಬ್ಬನಿಗೆ ಬದಲಾಗಿ ಕೆಲಸಮಾಡುವವ; ಸಹಾಯಕ.

नायबी, स्त्री० ಬದಲೀ ಕೆಲಸ.

नायाब, वि० ಬೇಗನೆ ದೊರಕದ; ಅಪ್ರಾಪ್ಯ.

नायिका, स्त्री० ಮುಖಂಡಳು; ಸುಂದರ ಸ್ತ್ರೀ; ಕಥಾನಾಯಿಕಿ.

नारंग, पु० ಕಿತ್ತಳೆ; ಕಿಮ್ಮೂಲಂಗಿ; ಪಿಪ್ಪಲಿ.

नारंगी, स्त्री० ಕಿತ್ತಳೆ.

नार, स्त्री० ಕುತ್ತಿಗೆ; ಕೊರಳು. **पु०** ಹಗ್ಗ; ಲಾಡಿ.

नारक, पु० ನರಕದಲ್ಲಿರುವವನು.

नारना, स० ಆಳ ನೋಡು; ಗೊತ್ತುಹಚ್ಚು.

नारा, पु० ಲಾಡಿ; ನೊಗದ ಹಗ್ಗ; ಘೋಷ; ಜಯಜಯಕಾರ.

नाराज़, वि॰ ಅಪ್ರಸನ್ನ; ಅಸಂತುಷ್ಟ; ಸಿಟ್ಟಾದ.

नाराज़गी, नाराज़ी स्त्री॰ ಕೋಪ; ಅಸಮಾಧಾನ.

नारियल, पु॰ ತೆಂಗಿನಕಾಯಿ; ನಾರಿಕೇಳ.

नारियली, स्त्री॰ ತೆಂಗಿನಕಾಯಿಯ ಬುರುಡೆ; ಕೊಬ್ಬರಿ; ತೆಂಗಿನ ಹೆಂಡ.

नारी, स्त्री॰ ಹೆಂಗಸು; ಮಹಿಳೆ.

नारू, पु॰ ನಾರುಹುಣ್ಣು ಎಂಬ ರೋಗ.

नाल, स्त्री॰ ದಂಟು; ಕಾಂಡ; ನಳಿಗೆ; ಕೊಳವಿ; ಹೊಕ್ಕಳು; ಲಾಳ. पु॰ ಹೊಕ್ಕಳು ಬಳ್ಳಿ; ನಾಲೆ; ಮೋರಿ.

नालबंद, पु॰ ಲಾಳ ಕಟ್ಟುವವನು

नालाबंदी, स्त्री॰ ಲಾಳಕಟ್ಟುವ ಕೆಲಸ.

नालकी, स्त्री॰ ಒಂದು ವಿಧವಾದ ಪಾಲಕಿ.

नाला, वि॰ ಅಳುತ್ತಿರುವ; ದುಃಖಿಸುತ್ತಿರುವ.

नाला, पु॰ ಜಲಪ್ರವಾಹದ ನಾಲೆ; ಚಿಕ್ಕನದಿ; ಕಾಲುವೆ.

ना लायक़, वि॰ ಕೆಲಸಕ್ಕೆಬಾರದ; ಮೂರ್ಖ.

नालिका, स्त्री॰ ಚಿಕ್ಕದಂಟು; ಕೊಳವಿ; ನಳಿಗೆ.

नालिश, स्त्री॰ ಫಿರ್ಯಾದು; ದೂರು; ದಾವೆ.

नालिशी, वि॰ ದಾವೆಮಾಡುವವನು.

नाली, स्त्री॰ ಚಿಕ್ಕನಾಲೆ ಅಥವಾ ಕಾಲುವೆ; ಕೊಳವಿ; ನಳಿಗೆ; ರಕ್ತನಾಳ; ನಾಡಿ; ಗಡಿಯಾರ; ಕಮಲ.

नालोट, वि॰ ಭಾಷೆಗೆ ತಪ್ಪುವವನು; ಮಾತುಕೊಟ್ಟು ಮೋಸಮಾಡುವವನು.

नाव, स्त्री॰ ದೋಣಿ; ನಾವೆ; ನೌಕೆ.

नावघाट, पु॰ ದೋಣಿಗಳು ನಿಲ್ಲುವ ಸ್ಥಳ; ದಂಡೆ.

नावक, पु॰ ಒಂದುವಿಧವಾದ ಬಾಣ; ನಾವಿಕ.

नावना, स॰ ಬಗ್ಗಿಸು.

नावर, स्त्री॰ ದೋಣಿ; ತೆಪ್ಪ.

नावाक़िफ़, वि॰ ಪರಿಚಯವಿಲ್ಲದ; ತಿಳಿಯದ.

नावाजिब, वि॰ ಸರಿಯಲ್ಲದ; ಅನುಚಿತ.

नाश, पु॰ ಕೇಡು; ಅಳಿವು.

नाशक, वि॰ ನಾಶಮಾಡುವವ.

नाशपाती, स्त्री॰ ಮರಸೇಬು; ಜೇರಿಕಾಯಿ.

नाशवान्, वि॰ ಅನಿತ್ಯವಾದ; ನಶ್ವರವಾದ.

ना-शाइस्ता, वि॰ ಅಸಭ್ಯತನದ; ಅನುಚಿತವಾದ.

ना-शाद, वि॰ ಅಪ್ರಸನ್ನ.

नाश्ता, पु॰ ಬೆಳಿಗ್ಗಿನ ಫಲಾಹಾರ; ಉಪಹಾರ; ತಿಂಡಿ; ತೀರ್ಥ.

नास, स्त्री० ನಶ್ಯ; ನಶ್ಯದಪುಡಿ.

नासदान, पु० ನಶ್ಯದ ಡಬ್ಬಿ.

नासना, स० ನಾಶಪಡಿಸು.

नासबूर, वि० ಅಶಾಂತ; ಸಮಾಧಾನವಿಲ್ಲದ.

ना-समझ, वि० ಬುದ್ಧಿಹೀನ; ಮೂರ್ಖ.

ना-समझी, स्त्री० ಮೂರ್ಖತನ; ತಿಳಿಗೇಡಿತನ.

नासह, वि० ಉಪದೇಶಮಾಡುವವ.

नासा, स्त्री० ಮೂಗು.

नासापुट, पु० ಮೂಗಿನ ಹೊಳ್ಳೆ.

नासिका, स्त्री० ಮೂಗು.

नासिख़, पु० ಲೇಖಕ; ಹಾಳುಮಾಡುವವ.

ना-साज़, वि० ಅಸ್ವಸ್ಥ; ಬೇನೆಯುಳ್ಳ.

नासीर, पु० ಸೇನಾನಾಯಕನಮುಂದೆ ಜಯಘೋಷವನ್ನು ಮಾಡುತ್ತಾ ಹೋಗುವ ದಳ.

नासूर, पु० ಸೋರುತ್ತಿರುವ ಗಾಯ; ನಾಡೀ ವ್ರಣ.

नास्तिक, पु० ಪರಮಾತ್ಮ ಪರಲೋಕ ಪುನರ್ಜನ್ಮಾದಿಗಳನ್ನು ನಂಬದವನು.

नाहंजार, वि० ನೀಚತನದ; ಕೆಟ್ಟ ನಡತೆಯ.

नाहक़, क्रि० ವ್ಯರ್ಥವಾಗಿ; ನಿಷ್ಪ್ರಯೋಜನವಾಗಿ.

नाहनूह, स्त्री० 'ಇಲ್ಲ ಇಲ್ಲ' ಅನ್ನುವ ಶಬ್ದ.

ना-हमवार, वि० ಎತ್ತುತಗ್ಗಾದ; ಏರಿಳಿತಗಳಿರುವ.

नाहर, पु० ಸಿಂಹ; ಹುಲಿ.

नाहीं, अव्य० ಇಲ್ಲ; ಅಲ್ಲ.

निंदक, पु० ನಿಂದಿಸುವವನು.

निंदन, पु० ನಿಂದನೆ; ದೂಷಣೆ.

निंदना, स० ನಿಂದಿಸು.

निंदनीय, वि० ನಿಂದಿಸತಕ್ಕ; ಗರ್ಹಣೀಯವಾದ.

निंदरना, स० ನಿಂದಿಸು.

निंदा, स्त्री० ನಿಂದೆ; ಅಪವಾದ; ಅಪಕೀರ್ತಿ.

निंदाई, स्त्री० ಕಳೆತೆಗೆಯುವುದು.

निंदासा, वि० ತೂಕಡಿಕೆಯ ಅಥವಾ ನಿದ್ದೆಗಣ್ಣಿನವನು.

निंदित, वि० ನಿಂದಿಸಲ್ಪಟ್ಟ; ದೂಷಿತವಾದ.

निंदिया, स्त्री० ನಿದ್ದೆ; ತೂಕಡಿಕೆ.

निंब, स्त्री० ಬೇವು.

निंबू, पु० ನಿಂಬೆ ಹಣ್ಣು.

निःस्पृह, वि० ಇಚ್ಛಾರಹಿತವಾದ; ಪ್ರತಿಫಲಾಪೇಕ್ಷೆಯಿಲ್ಲದ.

निःस्वार्थ, वि० ಸ್ವಾರ್ಥರಹಿತವಾದ.

निअर, अव्य० ಸಮೀಪ; ಹತ್ತಿರ.

निअराना, स० ಸಮೀಪಿಸು; ಹತ್ತಿರ ಬರು.

निआन, पु० ಕೊನೆ; ಪರಿಣಾಮ. **अव्य०** ಕೊನೆಗೆ.

निआमत, स्त्री० ಉತ್ತಮೋತ್ತಮ ವಾದ ಪದಾರ್ಥ; ಅಲಭ್ಯವಸ್ತು.

निकट, क्रि० ಬಳಿಯು; ಹತ್ತಿರ; ಸಮೀಪ.

निकम्मा, वि० ಕೆಲಸಕ್ಕೆ ಬಾರದ; ಕೆಟ್ಟ.

निकर, पु० ಸಮೂಹ; ಗುಂಪು.

निकरिस, पु० ಕಾಲಿನಲ್ಲಿ ಆಗುವ ಒಂದು ಬಗೆಯ ಕೀಲುವಾಯುವು.

निकर्मा, वि० ನಿರುದ್ಯೋಗಿ; ಸೋಮಾರಿ.

निकलना, अ० ಹೊರಗೆ ಬರು; ಹೊರಡು; ಹೊರಗಾಗು; ಹೊಮ್ಮು; ಹುಟ್ಟು; ಹೋಗು; ಪ್ರಕಟವಾಗು; ಸಿದ್ಧವಾಗು; ಕಳೆದುಹೋಗು.

निकलवाना, स० ಬೇರೆಯವರ ಮುಖಾಂತರ ಹೊರಡಿಸು.

निकाई, स्त्री० ಸೌಂದರ್ಯ; ಚೆಲುವು.

निकाज, वि० ಕೆಲಸವಿಲ್ಲದವ.

निकाना, स० ಕಳೆ ತೆಗೆ; ಕೀಳು.

निकाम, वि० ಕೆಲಸವಿಲ್ಲದ; ಕೆಲಸಕ್ಕೆ ಬಾರದ: ವ್ಯರ್ಥ. क्रि० ವ್ಯರ್ಥವಾಗಿ.

निकाय, पु० ಸಮೂಹ; ರಾಶಿ; ಗುಂಪು; ಮನೆ; ಪರಮಾತ್ಮ.

निकाल, पु० ಹೊರಡಿಸುವಿಕೆ; ಸಾಗಿಸುವಿಕೆ; ಉಪಾಯ.

निकालन, स्त्री० ಹೊರಗೆಡಹಿದ ಅಥವಾ ತೆಗೆಯಲ್ಪಟ್ಟ.

निकालना, स० ಹೊರಡಿಸು; ಹೊರಪಡಿಸು; ತೆಗೆ; ಕಲ್ಪಿಸು.

निकाला, पु० ಬಹಿಷ್ಕಾರ; ಹೊರಗೆ ಹಾಕುವ ಕೆಲಸ.

निकास, पु० ಹೊರಡುವಿಕೆ; ಹೊರಡುವ ದಾರಿ; ಮೈದಾನ; ಮೂಲಸ್ಥಾನ; ಬಿಡುಗಡೆಯ ಉಪಾಯ.

निकासी, स्त्री० ಹೊರಡುವಿಕೆ; ಪ್ರಸ್ಥಾನ; ಆದಾಯ; ಲಾಭ; ಬಿಕರಿ; ಮಾರಾಟ; ಸುಂಕ.

निकाह, पु ಮುಸಲ್ಮಾನರ ಪದ್ಧತಿಯಂತೆ ನೆರವೇರುವ ಮದುವೆ.

निकियाना, स० ಕಿತ್ತುಹಾಕು; ಎಳೆಯೆಳೆಯಾಗಿ ಬಿಡಿಸು.

निकुंज, पु० ಲತಾಮಂಡಪ; ಹೂಬಳ್ಳಿಯ ಮನೆ; ಉದ್ಯಾನ.

निकेतन, पु० ನಿವಾಸಸ್ಥಳ; ಮನೆ.

निकृष्ट, वि० ನೀಚ.

निकोसना, स० ಹಲ್ಲುಕಿರಿ ಹಲ್ಲುಕಿಸಿ.

निक्षिप्त, वि० ಬಿಸಾಡಿರುವ; ಹಾಕಿಬಿಟ್ಟಿರುವ.

निक्षेप, पु० ಬಿಸಾಡುವಿಕೆ; ಹಾಕಿಬಿಡುವಿಕೆ; ಅಡವು; ಅಮಾನತ್ತು.

निखंग, पु० ಬತ್ತಳಿಕೆ.

निखट्टू, वि० ದಾರಿಗೆ ಬಾರದವ; ಕೆಲಸಗಳ್ಳ; ತನ್ನ ಮೈಗಳ್ಳತನದಿಂದ ಎಲ್ಲಿಯೂ ನೆಲೆಯಾಗದವ.

निखरना, अ० ನಿರ್ಮಲವಾಗು; ಸ್ವಚ್ಛವಾಗು.

निखरवाना, स० ನಿರ್ಮಲಗೊಳಿಸು.

निखरी, स्त्री० ಘೃತಪಕ್ವ; ತುಪ್ಪದಲ್ಲಿ ಕರಿದದ್ದು.

निखार, पु० ಸ್ವಚ್ಛತೆ; ನಿರ್ಮಲತೆ.

निखारना, स० ಸ್ವಚ್ಛಮಾಡು.

निख़ालिस, वि० ಪರಿಶುದ್ಧ; ನಿರ್ಮಲ.

निखिल, वि० ಅಖಿಲ; ಸಂಪೂರ್ಣ.

निखोट, वि० ನಿರ್ದೋಷ; ಸ್ಪಷ್ಟ. क्रि० ನಿಸ್ಸಂಕೋಚವಾಗಿ; ನಿಷ್ಕಪಟವಾಗಿ.

निगंदना, स० ಒಳಗೆ ಅರಳೆಯನ್ನು ತುಂಬಿಸಿ ಹೊಲಿಯುವುದು.

निगड़, स्त्री० ಆನೆಯ ಕಾಲುಗಳನ್ನು ಬಿಗಿಯುವ ಸರಪಳಿ; ಬೇಡಿ.

निगरां, पु० ರಕ್ಷಕ; ಮೇಲ್ವಿಚಾರಣೆ ಮಾಡತಕ್ಕವನು.

निगरानी, स्त्री० ಕಣ್ಣೋಟ; ಕಣ್ಗಾವಲು; ನಿರೀಕ್ಷಣೆ; ಮೇಲ್ವಿಚಾರಣೆ.

निगरू, वि० ಹಗುರ; ಭಾರಕಡಿಮೆಯಾದ.

निगलना, स० ನುಂಗಿ ಬಿಡು; ತಿಂದುಬಿಡು.

निगह, स्त्री० ದೃಷ್ಟಿ.

निगहबान, पु० ಕಾಪಾಡುವವ.

निगहबानी, स्त्री० ಮೇಲ್ಗಾವಲು; ಸಂರಕ್ಷಣೆ.

निगार, पु० ಚಿತ್ರ; ಕಸೂತಿ;—ए-आलम ಸಂಸಾರದಲ್ಲಿ ಅತ್ಯಧಿಕ ಸುಂದರವಾದ.

निगाली, स्त्री० ಗುಡಿಗುಡಿಯ ಕೊಳವೆ.

निगाह, स्त्री० ದೃಷ್ಟಿ; ಕೃಪಾದೃಷ್ಟಿ; ಗಮನ; ನಿಗಾ; ನೋಟ.

निगुनी, वि० ಗುಣರಹಿತವಾದ.

निगूढ़, वि० ಅತ್ಯಂತ ಗುಪ್ತವಾದ.

निगोड़ा, वि० ಭಾಗ್ಯಹೀನ; ಗುರು ಹಿರಿಯರಾರೂ ಇಲ್ಲದವನು; ಅನಾಥ; ದಿಕ್ಕುದೆಸೆಯಿಲ್ಲದ.

निग्रह, पु० ತಡೆ; ಅಡ್ಡಿ; ದಮನ; ಚಿಕಿತ್ಸೆ; ಬಂಧನ.

निघंटु, पु० ಶಬ್ದಕೋಶ; ಶಬ್ದಸಂಗ್ರಹ.

निघटना, अ० ಕಡಿಮೆಯಾಗು; ಇಳಿ; ಕುಗ್ಗು.

निघरघट, वि० ಮನೆಮಠಗಳಿಲ್ಲದವನು; ದಿಕ್ಕಿಲ್ಲದವ; ನಾಚಿಕೆಯಿಲ್ಲದವ.

निघरा, वि० ದಿಕ್ಕಿಲ್ಲದವ; ಅನಾಥ.

निचय, पु० ಸಮೂಹ; ಸಂಚಯ; ನಿಶ್ಚಯ.

निचला, वि० ಕೆಳಗಣ.

निचाई, स्त्री० ತಗ್ಗು; ನೀಚತನ; ಆಳ; ಕೀಳುತನ.

निचान, स्त्री० ತಗ್ಗು; ಇಳಿಜಾರು; ಇಳಕಲು.

निचिंत, वि० ನಿಶ್ಚಿಂತೆಯಾದ.

निचुड़ना, अ० ಹಿಂಡಿಹೋಗು ; ಬತ್ತಿ ಹೋಗು.

निचोड़, पु० ಹಿಂಡಿದ್ದು ; ಸಾರ ; ಸತ್ವ ; ಸಾರಾಂಶ.

निचोड़ना, स० ಹಿಂಡು ; ಕಿವುಚು.

निचोल, पु० ಹೆಂಗಸರ ವಸ್ತ್ರ ; ಅಡ್ಡ ಸೆರಗು.

निचौहाँ, वि० ಕೆಳಗೆ ಬಗ್ಗಿಸಿದ ; ಬಗ್ಗಿದ ; ಬಾಗಿದ.

निछक्का, पु० ಶುದ್ಧವಾದ ; ನಿರ್ಜನ ಪ್ರದೇಶ.

निछल, वि० ನಿಷ್ಕಪಟ.

निछावर, स्त्री० ನಿವಾಳಿಸುವಿಕೆ ; ಇಳಿತೆಗೆಯುವಿಕೆ ; ಇನಾಮು ; —**होना** ಬಲಿಯಾಗು.

निछोह }
निछोही } वि० ನಿಷ್ಠುರ.

निज, वि० ತನ್ನ ; ಸ್ವಕೀಯ ; ಸ್ವಂತದ ; ಮುಖ್ಯವಾದ.

निजाबत, स्त्री० ಸತ್ಕುಲ.

निज़ाम, पु० ಏರ್ಪಾಡು ; ವ್ಯವಸ್ಥೆ ; ಮುತ್ತಿನಸರ ; ಅಸ್ತಿವಾರ.

निज़ामत, स्त्री० ವ್ಯವಸ್ಥೆ ; ವ್ಯವಸ್ಥಾಪಕರ ಕೆಲಸ.

निजी, वि० ಸ್ವ.

निझरना, अ० ಉದುರಿ ಬೀಳು ; ಒಣಗಿ ಹೋಗು.

निझाना, अ० ಮರೆಯಲ್ಲಿ ಇಣಿಕಿ ನೋಡು.

निझोटना, स० ಎಳೆದು ಕಸುಕೊಳ್ಳು.

निठल्ला }
निठल्लू } वि० ಕೆಲಸವಿಲ್ಲದ ; ನಿರುದ್ಯೋಗಿ.

निठाला, पु० ಕೆಲಸವಿಲ್ಲದವ ; ವರಮಾನವಿಲ್ಲದ ಕಾಲ ; ಬಿಡುವು ; ಅವಕಾಶ.

निठुर, वि० ಕಠೋರ ಹೃದಯದ.

निठुराई, स्त्री० ಕ್ರೂರತೆ.

निठौर, पु० ಕೆಟ್ಟಜಾಗ; ಕೇಡುಗಾಲ.

निडर, वि० ಅಂಜಿಕೆಯಿಲ್ಲದ ; ಸಾಹಸವುಳ್ಳ.

निढ़ाल, वि० ಬಿದ್ದುಹೋದ ; ಶಿಥಿಲ ; ಆಯಾಸಗೊಂಡ.

नितंब, पु० ಮುಕುಳಿ ; ಕುಂಡಿ ; ಭುಜ ; ಪರ್ವತದ ಇಳಿಜಾರು ಪ್ರದೇಶ.

नित, अव्य० ಪ್ರತಿದಿನವೂ.

नितराम, अव्य० ಸರ್ವದಾ; ಯಾವಾಗಲೂ.

नितांत, वि० ಅತ್ಯಂತ ; ಸರ್ವಥಾ.

नित्य, वि० ಯಾವಾಗಲೂ ; ಸದಾ.

नित्यता, स्त्री० ಶಾಶ್ವತವಾಗಿರುವಿಕೆ.

निथरना, अ० ತಿಳಿಗಟ್ಟು ; ತಿಳಿಯಾಗು ; ತೇಟವಾಗು.

निथार, पु० ತಿಳಿಗಟ್ಟಿದ ನೀರು.

निथारना, स० ತಿಳಿಯಿಡು; ತೀರಿಕ್ಕು.

निदरना, स० ಅನಾದರ ಮಾಡು ; ತಿರಸ್ಕರಿಸು.

निदर्शन, पु० ದೃಷ್ಟಾಂತ ; ತೋರಿಸುವಿಕೆ.

निदाहना, स० ಉರಿಸು ; ಸುಡು.

निदाघ, पुं० ಉಷ್ಣ ; ಬಿಸಿಲು.
निदान, पुं० ಆದಿಕಾರಣ ; ರೋಗದ ಲಕ್ಷಣ.
निदेश, पुं० ಆಜ್ಞೆ ; ಶಾಸನ.
निद्रा, स्त्री० ನಿದ್ದೆ ; ನಿದ್ರೆ.
निद्रालु, वि० ನಿದ್ರಿಸುವವನು.
निद्रित, वि० ನಿದ್ರೆಮಾಡುತ್ತಿರುವ.
निधड़क, क्रि० ತಡೆಯಿಲ್ಲದೆ; ಸ್ವಲ್ಪವೂ ಹೆದರಿಕೆಯಿಲ್ಲದೆ.
निधन, पुं० ನಾಶ ; ಮರಣ. **वि०** ಧನಹೀನವಾದ.
निधनी, वि० ದರಿದ್ರ.
निधान, पुं० ಆಧಾರ ; ಆಶ್ರಯ ; ಲಯಸ್ಥಾನ ; ನಿಧಿ.
निधि, स्त्री० ಹೂತಿಟ್ಟ ದ್ರವ್ಯ ; ನವರತ್ನ ; ಸಮುದ್ರ.
निनय, स्त्री० ವಿನಯ ; ವಿಧೇಯತೆ.
निनरा, वि० ಪ್ರತ್ಯೇಕ ; ಬೇರೆ.
निनाद, पुं० ಶಬ್ದ ; ಧ್ವನಿ.
निनान, पुं० ಅಂತ್ಯ ; ಅವಸಾನ ; ಲಕ್ಷಣ. **क्रि०** ಕೊನೆಗೆ. **वि०** ಸರ್ವಥಾ ; ಮೊದಲನೆಯ.
निनाया, पुं० ತಿಗಣೆ.
निनारा, वि० ಪ್ರತ್ಯೇಕವಾದ; ಬೇರೆ; ಭಿನ್ನ ; ದೂರವಾದ.
निनावाँ, पुं० ನಾಲಿಗೆಯಲ್ಲಿ ಮತ್ತು ದವಡೆಯ ಒಳಗಡೆ ಏಳುವ ಸಣ್ಣ ಗುಳ್ಳೆಗಳು; ಬಾಯಿ ಹುಣ್ಣು.
निनावीं, स्त्री० ಹೆಸರಿಲ್ಲದ ವಸ್ತು ; ಪಿಶಾಚಿ.
निनौना, स० ಬಗ್ಗಿಸು.
निनौरा, पुं० ಅಜ್ಜಿಯ ಮನೆ.
निपंग, वि० ಅಂಗಹೀನ ; ಕೆಲಸಕ್ಕೆ ಬಾರದ.
निपजना, अ० ಹುಟ್ಟು ; ವೃದ್ಧಿಯಾಗು ; ಸಿದ್ಧವಾಗು.
निपट, अ० ಕೇವಲ; ಪರಿಶುದ್ಧವಾದ; ಬರೇ ; ಸರ್ವಥಾ ; ಅತ್ಯಂತ.
निपटना, अ० दे० **निबटना.**
निपटाना, स० दे० **निबटाना.**
निपटारा, पुं० दे० **निबटारा.**
निपात, पुं० ಪತನ ; ವಿನಾಶ.
निपाती, वि० ಬೀಳಿಸುವವನು ; ಘಾತಕ. **पुं०** ಶಿವ.
निपान, पुं० ಕೊಳ ; ನೀರಿನತೊಟ್ಟಿ ; ಹಾಲು ಕರೆಯುವ ಪಾತ್ರೆ.
निपीड़क, वि० ಪೀಡಿಸುವವ ; ದುಃಖದಾಯಕ.
निपीड़ना, स० ಒತ್ತು ; ದಬಾಯಿಸು; ಪೀಡಿಸು.
निपूत, निपूता } वि० ಪುತ್ರಹೀನ ; ಮಕ್ಕಳಿಲ್ಲದ.
निफरना, अ० ಭೇದಿಸಿಕೊಂಡು ಹೊರಡು ; ಹೊರಸಾಸು.
निफ़ाक़, पुं० ಭೇದಭಾವ ; ಒಡಕು ; ವೈಮನಸ್ಯ.
निबंध, पुं० ಬಂಧನ ; ಲೇಖನ ; ಪ್ರಬಂಧ ; ಗೀತ.
निबंधन, पुं० ನಿರ್ಬಂಧ ; ನಿಬಂಧನೆ.
निबकौरी, स्त्री० ಬೇವಿನ ಹಣ್ಣು.

निबख़्ता, वि० ನಿರ್ಭಾಗ್ಯ.

निबटना, अ० ನಿವೃತ್ತನಾಗು ; ಪೂರೈಸು ; ಮುಕ್ತಾಯವಾಗು.

निबटाना, स० ಮುಕ್ತಾಯಗೊಳಿಸು; ಮುಗಿಸು ; ತೀರಿಸು.

निबटारा } पु० ತೀರ್ಮಾನ; ನಿರ್ಣಯ ; ಫೈಸಲು.
निबटाव
निबटेरा

निबद्ध, वि० ಬಂಧಿತವಾದ ; ತಡೆಯಲ್ಪಟ್ಟ.

निबरना, अ० ಬಿಡುಗಡೆ ಹೊಂದು ; ತೊಡಕು ದೂರವಾಗು ; ಪೂರ್ಣವಾಗು ; ಅಳಿದುಹೋಗು.

निबहना, अ० ಪಾರಾಗು ; ನಿರ್ವಹಿಸು.

निबाह, वि० ನಿರ್ವಾಹ; ಕಾಲಕ್ಷೇಪ.

निबाहक, वि० ನಿರ್ವಾಹಕ.

निबाहना, स० ನಿರ್ವಾಹ ಮಾಡು ; ನಿಭಾಯಿಸು.

निबिड़, वि० ಘನ ; ದಟ್ಟ; ನಿಬಿಡ.

निबुआ, पु० ನಿಂಬೆ.

निबेड़ना, स० ಬಂಧನದಿಂದ ಬಿಡಿಸು; ಬೇರೆ ಬೇರೆ ಮಾಡು ; ನಿರ್ಣಯಿಸು ; ತ್ಯಜಿಸು ; ಪೂರ್ತಿಗೊಳಿಸು.

निबेड़ा, पु० ಬಿಡುಗಡೆ ; ಮುಕ್ತಿ ; ಬೇರೆ ಬೇರೆಮಾಡುವಿಕೆ.

निबेरा, पु० ಬಿಡುಗಡೆ.

निबौरी, स्त्री० ಬೇವಿನ ಹಣ್ಣು.

निभना, अ० ನಿರ್ವಾಹವಾಗು ; ಪಾರುಗಾಣು ; ನೆರವೇರು.

निभरोस } वि० ಭರವಸೆಯಿಲ್ಲದ ; ಆಶಾರಹಿತವಾದ.
निभरोसी

निभाग, वि० ನಿರ್ಭಾಗ್ಯ ; ಭಾಗ್ಯಹೀನ.

निभाना, स० ನಿರ್ವಾಹಮಾಡು ; ನಿಭಾಯಿಸು; ಕೊನೆಗಾಣಿಸು.

निभाव, पु० ನಿರ್ವಾಹ ; ನಿಭಾಯಿಸುವಿಕೆ.

निभृत, वि० ಗುಪ್ತವಾದ ; ನಿರ್ಜನ ಪ್ರದೇಶ.

निमंत्रण, पु० ಆಮಂತ್ರಣ; ಆಹ್ವಾನ.

निमंत्रणपत्र, पु० ಆಹ್ವಾನ ಪತ್ರಿಕೆ.

निमंत्रित, वि० ಆಮಂತ್ರಿಸಲ್ಪಟ್ಟ.

निमक, पु० दे० नमक.

निमकी, स्त्री० ನಿಂಬೆಹಣ್ಣಿನ ಉಪ್ಪಿನಕಾಯಿ.

निमकौड़ी, स्त्री० ಬೇವಿನ ಹಣ್ಣು.

निमग्न, वि० ತನ್ಮಯ ; ಮುಳುಗಿದ.

निमज्जन, पु० ನೀರೊಳಗೆ ಮುಳುಗಿ ಮಾಡತಕ್ಕ ಸ್ನಾನ.

निमटना, अ० दे० निबटना.

निमाना, वि० ತಗ್ಗು ; ಇಳಿಜಾರು ; ವಿಧೇಯ ; ಮೊದ್ದು ಸ್ವಭಾವದ.

निमित्त, पु० ಕಾರಣ ; ಉದ್ದೇಶ್ಯ.

निमिष, पु० ಒಂದುಕ್ಷಣ ; ಕಣ್ಣು ಮುಚ್ಚಿ ತೆರೆಯುವಷ್ಟು ಸಮಯ; ಕಣ್ಣುರೆಪ್ಪೆ.

निमुहाँ, वि० ಮಾತನಾಡದವನು ; ಮಿತಭಾಷಿ ; ಮೌನಿ.

निमेष, पु० ಕಣ್ಣು ರೆಪ್ಪೆಯನ್ನು ಮುಚ್ಚುವುದು.

निम्न, वि० ಕೆಳಗೆ ; ಕೆಳಗಡೆ.

निम्नलिखित, वि० ಕೆಳಗೆ ಬರೆದಿರುವ.

नियंता पु० ನಿಯಮವನ್ನು ವಿಧಿಸುವವ ; ಶಾಸಕ.

नियंत्रण, पु० ನಿಯಮ ; ಕಟ್ಟು.

नियंत्रित, वि० ನಿಯಮಕ್ಕೆ ಒಳಪಟ್ಟಿರುವ.

नियत, वि० ನಿರ್ದಿಷ್ಟ ; ಗೊತ್ತಾದ ; ನಿಶ್ಚಿತವಾದ.

नियति, स्त्री० ನಿಶ್ಚಿತವಾಗುವಿಕೆ ; ನಿರ್ಣಯ ; ಭಾಗ್ಯ.

नियम, पु० ಕಟ್ಟು ; ವಿಧಿ ; ನಿಶ್ಚಿತವಾದ ನೀತಿ ; ಶಾಸನ.

नियमबद्ध, वि० ನಿಯಮಗಳಿಗೊಳಗಾದ.

नियराई, स्त्री० ಸಾಮೀಪ್ಯ.

नियराना, अ० ಸಮೀಪಿಸು ; ತಲಪು.

नियाज़, स्त्री० ಪ್ರೀತಿ ; ವಿನಂತಿ ; ನಮ್ರತೆ.

नियाज़मन्द, वि० ನಮ್ರ ; ವಿನೀತ.

नियाबत, स्त्री० ಪ್ರಾತಿನಿಧ್ಯ ; ಬದಲಿ.

नियाम, पु० ಖಡ್ಗಕೋಶ ; ಒರೆ.

नियामक, पु० ವ್ಯವಸ್ಥಾಪಕ.

नियामत, स्त्री० ಅಲಭ್ಯವಸ್ತು ; ಭರ್ಜರಿ ಊಟ ; ಐಶ್ವರ್ಯ.

नियार, पु० ಚಿನಿವಾರ ಅಥವಾ ಅಕ್ಕಸಾಲೆಯ ಅಂಗಡಿಯಲ್ಲಿನ ಚಿನ್ನದಪುಡಿ ಸೇರಿದ ಮಣ್ಣು.

नियारा, वि० ಬೇರೆ ; ಪೃಥಕ್ ; ದೂರ.

नियारिया, पु० ಒಟ್ಟುಸೇರಿದ ವಸ್ತುಗಳನ್ನು ಬೇರೆಬೇರೆಯಾಗಿ ಬಿಡಿಸುವವನು ; ಚಿನ್ನಬೆಳ್ಳಿ ಬೆರತ ಮಣ್ಣಿನಿಂದ ಚಿನ್ನಬೆಳ್ಳಿಯ ಪುಡಿ ಚೂರನ್ನು ಆರಿಸುವವನು; ಜಾಣ; ಚತುರ.

नियुक्त, वि० ನೇಮಕವಾದ.

नियुक्ति, स्त्री० ನೇಮಕ ; ನೇಮಣೂಕಿ.

नियोग, पु० ನೇಮಕ ; ನಿಶ್ಚಯ.

नियोजक, पु० ನೇಮಕ ಮಾಡುವವ.

नियोजन, पु० ನೇಮಕ ; ನಿಯುಕ್ತಿ.

निरंकुश, वि० ಪ್ರತಿಬಂಧಕವಿಲ್ಲದ ; ನಿರ್ಭಯವಾದ.

निरंतर, क्रि० ಸದಾ ; ಎಡಬಿಡದೆ.

निरक्षर, वि० ಓದು ಬರಹ ತಿಳಿಯದ.

निरखना, स० ನೋಡು; ನಿರೀಕ್ಷಿಸು.

निरच्छू, वि० ಯೋಚನೆಯಿಲ್ಲದ ; ನಿಶ್ಚಿಂತೆಯ ; ನೆಮ್ಮದಿಯಾದ.

निरत, वि० ತತ್ಪರ ; ಮಗ್ನ.

निरधारना, स० ನಿಶ್ಚಯಿಸು; ನಿರ್ಧರಿಸು.

निरन्न, वि० ಅನ್ನವಿಲ್ಲದ; ನಿರಾಹಾರ.

निरपराध, वि० ನಿರ್ದೋಷಿ.

निरपेक्ष, वि० ಬೇರೊಬ್ಬರನ್ನು ಅವಲಂಬಿಸದ; ತಟಸ್ಥ.

निरपेक्षी, वि० ಬಯಸದ.

निरबंसी, वि० ಸಂತಾನವಿಲ್ಲದ.

निरभिमान, वि० ಅಹಂಕಾರವಿಲ್ಲದ.

निरभ्र, वि० ಮೋಡವಿಲ್ಲದ.

निरमना, स० ನಿರ್ಮಾಣಮಾಡು.

निरर्थक, वि० ಅರ್ಥಶೂನ್ಯ; ಪ್ರಯೋಜನವಿಲ್ಲದ; ವ್ಯರ್ಥ.

निरवार, पु० ಬಿಡುಗಡೆ; ನಿವಾರಣೆ; ತಪ್ಪಿಸಿಕೊಳ್ಳುವುದು.

निरवारना, स० ತಳ್ಳು; ದೂಡು; ತೊಲಗಿಸು; ಬಿಡಿಸು.

निरशन, पु० ಉಪವಾಸ.

निरस, वि० ರಸಹೀನವಾದ; ಸಪ್ಪೆ; ನಿಸ್ಸಾರ.

निरा, वि० ಶುದ್ಧ; ಕೇವಲ; ಮಾತ್ರ; ಬರಿಯ.

निराई, स्त्री० ಕಳೆ ತೆಗೆಯುವುದು; ಕಳೆ ತೆಗೆಯುವುದರ ಕೂಲಿ.

निरादर, पु० ನಿರಾದರಣೆ; ಅವಮಾನ; ಅಮರ್ಯಾದೆ.

निराधार, वि० ಆಶ್ರಯ ಅಥವಾ ಆಧಾರವಿಲ್ಲದ.

निराना, स० ಕಳೆ ತೆಗಿ; ಕಳೆಕೀಳು.

निरापद, वि० ಆಪತ್ತಿಲ್ಲದ; ಅನರ್ಥ ರಹಿತ.

निरामय, वि० ರೋಗವಿಲ್ಲದ.

निरामिष, वि० ಮಾಂಸಭಕ್ಷಣ ಮಾಡದ; ಸಸ್ಯಾಹಾರಿ.

निरारा, वि० ಬೇರೆ; ಪ್ರತ್ಯೇಕ.

निरालस्य, वि० ಸೋಮಾರಿತನವಿಲ್ಲದ; ಚುರುಕು.

निराला, पु० ಏಕಾಂತಸ್ಥಾನ. वि० ಅದ್ಭುತ; ವಿಲಕ್ಷಣ; ಏಕಾಂತ.

निरावना, स० दे० **निराना.**

निराश, वि० ನಿರಾಶೆಯಾದ; ಹತಾಶ.

निराशा, स्त्री० ನಿರಾಶೆ; ಆಶಾಭಂಗ.

निराश्रय, वि० ಆಶ್ರಯವಿಲ್ಲದ.

निरीक्षक, पु० ನೋಡತಕ್ಕವನು; ಮೇಲ್ವಿಚಾರಕ.

निरीक्षण पु० } ನೋಡಿಕೊಳ್ಳುವಿಕೆ;
निरीक्षा स्त्री० } ಮೇಲ್ವಿಚಾರಣೆ.

निरीह, वि० ಯಾವ ವಿಷಯಕ್ಕಾಗಿಯೂ ಪ್ರಯತ್ನಿಸದ; ತಟಸ್ಥ; ಶಾಂತಿಪ್ರಿಯ.

निरुद्यम, वि० ಉದ್ಯೋಗವಿಲ್ಲದ.

निरुपम, वि० ಉಪಮೆಯಿಲ್ಲದ.

निरुपाय, वि० ದಿಕ್ಕಿಲ್ಲದ; ನಿರ್ವಾಹವಿಲ್ಲದ.

निरूपण, पु० ವಿವೇಚನೆ; ನಿರ್ಣಯ; ನಿದರ್ಶನ.

निरोग, वि० ಆರೋಗ್ಯವಾದ; ರೋಗರಹಿತವಾದ.

निरोध } पु० ತಡೆ; ಅಡ್ಡಿ; ಪ್ರತಿ
निरोधन } ಬಂಧಕ.

निर्ख़, पु० ದರ; ಧಾರಣೆ.

निर्ख़नामा, पु० ಧಾರಣೆಪಟ್ಟಿ; ನಿರಖುಪಟ್ಟಿ.

निर्ख़बंदी, स्त्री० ಪೇಟೆಯ ಧಾರ ಣೆಯನ್ನು ನಿಶ್ಚಯಿಸುವಿಕೆ.

निर्गंध, वि० ವಾಸನೆಯಿಲ್ಲದ.

निर्गम, पु० ಹೊರಡುವಿಕೆ.

निर्जन, वि० ಯಾರೂ ಇಲ್ಲದ; ಜನ ರಹಿತವಾದ.

निर्जर, वि० ಎಂದಿಗೂ ಮುದಿತನ ವಿಲ್ಲದ.

निर्जीव, वि० ಪ್ರಾಣವಿಲ್ಲದ.

निर्झर, पु० ಜಲಸ್ರೋತ; ಝರಿ.

निर्णय, पु० ತೀರ್ಮಾನ; ನಿಶ್ಚಯ; ನಿಷ್ಕರ್ಷೆ.

निर्दयता, स्त्री० ಕ್ರೌರ್ಯ; ನಿರ್ದ ಯತೆ.

निर्दिष्ट, वि० ನಿಶ್ಚಯವಾಗಿರುವ; ಹೇಳಿ ತೋರಿಸಿದ; ನಮೂದಿ ಸಿದ.

निर्देश, पु० ಆದೇಶ; ಅಪ್ಪಣೆ; ಆಜ್ಞೆ; ಉಲ್ಲೇಖ; ಹೆಸರು.

निर्दोष, वि० ದೋಷರಹಿತ.

निर्धन, वि० ಬಡವ; ದರಿದ್ರ.

निर्धनता, स्त्री० ಬಡತನ.

निर्धार / **निर्धारण** पु० ನಿಶ್ಚಯ; ತೀರ್ಮಾನ.

निर्धारना, स० ನಿಶ್ಚಯಿಸು.

निर्निमित्त, क्रि० ಕಾರಣವಿಲ್ಲದೆ; ಅಕಾರಣ.

निर्निमेष, क्रि० ಎವೆಯಿಕ್ಕದೆ; ಒಂದೇ ಸಮನೆ.

निर्बंध, पु० ಅಡ್ಡಿ; ತಡ.

निर्बल, वि० ಬಲವಿಲ್ಲದ; ನಿಶ್ಶಕ್ತ.

निर्बलता, स्त्री० ಬಲಹೀನತೆ; ನಿಶ್ಶಕ್ತಿ.

निर्बोध, वि० ತಿಳಿವಳಿಕೆಯಿಲ್ಲದ; ಅರಿಯದ.

निर्भय, वि० ಭಯವಿಲ್ಲದ.

निर्भयता, स्त्री० ಭಯವಿಲ್ಲದಿರುವಿಕೆ.

निर्भर, वि० ತುಂಬಿದ; ಸೇರಿದ; ಆಶ್ರಿತ; ಅವಲಂಬಿತ.

निर्भीक, वि० ಭಯವಿಲ್ಲದ.

निर्भीकता, स्त्री० ಭಯವಿಲ್ಲದಿರುವಿಕೆ.

निर्मम, वि० ಮಮತೆಯಿಲ್ಲದ.

निर्मल, वि० ಕೊಳೆಯಿಲ್ಲದ; ಶುದ್ಧ.

निर्माण, पु० ರಚನೆ; ನಿರ್ಮಾಣ.

निर्माना, स० ನಿರ್ಮಿಸು; ರಚಿಸು.

निर्मूल, वि० ಬುಡವಿಲ್ಲದ; ಬುಡ ದೊಂದಿಗೆ ಕಿತ್ತುಹಾಕಿದ.

निर्यात, पु० ರಫ್ತುಮಾಡುವುದು.

निर्लज्ज, वि० ನಾಚಿಕೆಯಿಲ್ಲದ.

निर्लज्जता, स्त्री० ನಾಚಿಕೆಗೇಡಿತನ.

निर्वहना, अ० ನೆರವೇರು; ಸಾಗು.

निर्वाचक, पु० ಚುನಾಯಿಸುವವ.

निर्वाचन, पु० ಚುನಾವಣೆ; ಆರಿ ಸುವಿಕೆ.

निर्वाचित, वि० ಚುನಾಯಿಸಲ್ಪಟ್ಟ.

निर्वासन, पु० ಗಡೀಪಾರು: ದೇಶ ಭ್ರಷ್ಟಮಾಡುವಿಕೆ.

निर्वाह, पु० ನಿರ್ವಾಹ; ಪಾಲನೆ; ಪೂರೈಸುವಿಕೆ.

निर्वाहना, अ० ನಿರ್ವಹಿಸು; ನಿಭಾ ಯಿಸು.

निर्विघ्न, वि॰ ಎಡರು ತೊಡರುಗಳಿಲ್ಲದ; ತಡೆಯಿಲ್ಲದ. क्रि॰ ತಡೆಯಿಲ್ಲದೆ.

निर्विवाद, वि॰ ಚರ್ಚಾಸ್ಪದವಲ್ಲದ; ಆಕ್ಷೇಪಣೆಯಿಲ್ಲದ.

निर्वेद, पु॰ ಅನುತಾಪ; ಅವಮಾನ; ವೈರಾಗ್ಯ.

निलहा, वि॰ ನೀಲಿ ಬಣ್ಣದ; ನೀಲ.

निलाम, पु॰ दे॰ नीलाम.

निवाज, वि॰ ದಯೆ ತೋರುವವನು.

निवाजना, स॰ ದಯೆತೋರು; ಕರುಣಿಸು.

निवाज़िश, स्त्री॰ ದಯೆ; ಕರುಣೆ.

निवाड़ा, पु॰ ದೋಣಿ; ತೆಪ್ಪ.

निवार, स्त्री॰ ಅಗಲವಾದ ಲಾಡಿ; ಪಟ್ಟಿ.

निवारण, पु॰ ಪರಿಹಾರ; ನಿವಾರಣೆ.

निवारना, स॰ ನಿವಾರಿಸು; ಪರಿಹರಿಸು.

निवाला, पु॰ ತುತ್ತು; ಕವಳ.

निवासी, पु॰ ವಾಸವಾಗಿರುವವ.

निवेदक, पु॰ ಬೇಡುವವ; ಅರಿಕೆ ಮಾಡುವವ.

निवेदन, पु॰ ಪ್ರಾರ್ಥನೆ; ಅರಿಕೆ.

निवेदन-पत्र, पु॰ ಪ್ರಾರ್ಥನಾಪತ್ರ; ಅರ್ಜಿ.

निवेरना, स॰ ಪೂರೈಸು; ಮುಗಿಸು.

निवेश, पु॰ ಮನೆ; ಶಿಬಿರ.

निशंक, वि॰ ನಿರ್ಭಯ.

निशा, स्त्री॰ ರಾತ್ರಿ; ಇರುಳು.

निशा-ख़ातिर, स्त्री॰ ತೃಪ್ತಿ; ಶಾಂತಿ.

निशात, स्त्री॰ ಆನಂದ; ಸಂತೋಷ.

निशान, पु॰ ಗುರುತು; ಲಕ್ಷಣ; ಚಿಹ್ನೆ; ಬಾವುಟ.

निशानची, पु॰ ಬಾವುಟಗಾರ.

निशानदेही, स्त्री॰ ಒಬ್ಬನನ್ನು ಇಂತಹವನೇ ಎಂದು ಗುರುತಿಸಿ ಹೇಳುವುದು.

निशान-बरदार, पु॰ ಧ್ವಜಧಾರಿ; ಬಾವುಟಗಾರ.

निशाना, पु॰ ಲಕ್ಷ್ಯ; ಗುರಿ; ಉದ್ದೇಶ;—**बांधना** ಗುರಿಯಿಡು.

निशानी, स्त्री॰ ಜ್ಞಾಪಕಾರ್ಥವಾಗಿ ಕೊಟ್ಟ ಅಥವಾ ಏರ್ಪಡಿಸಿದ ವಸ್ತು; ಸ್ಮಾರಕ.

निशास्ता, पु॰ ಗೋಧಿಯ ಅಂಬಲಿ; ಗಂಜಿ.

निशीथ, पु॰ ಅರ್ಧರಾತ್ರಿ.

निश्चय, पु॰ ಖಂಡಿತ; ನಿಶ್ಚಯ; ಖಾತ್ರಿ.

निश्चल, वि॰ ಅಲ್ಲಾಡದ; ಕದಲದ.

निश्चलता, स्त्री॰ ಕದಲದಿರುವಿಕೆ.

निश्रेणी, स्त्री॰ ಏಣಿ; ನಿಚ್ಚಣಿಗೆ; ಮುಕ್ತಿ.

निश्शेष, वि॰ ಶೇಷವಿಲ್ಲದ; ಪೂರ್ಣ.

निषंग, पु॰ ಬತ್ತಳಿಕೆ; ಖಡ್ಗ.

निषादी, पु॰ ಮಾವುತ.

निषिद्ध, वि॰ ನಿಷೇಧಿಸಲ್ಪಟ್ಟ; ಮಾಡಬಾರದ.

निष्कर, पु० ಕಂದಾಯವಿಲ್ಲದ ಭೂಮಿ.

निष्कर्ष, पु० ನಿಶ್ಚಯ; ಸಾರಾಂಶ.

निष्क्रमण, पु० ಹೊರಡುವುದು.

निष्काम, वि० ಆಸಕ್ತಿ ಅಥವಾ ಅಭಿಲಾಷೆಯಿಲ್ಲದ.

निष्ठुर, वि० ಕಠೋರ; ಕ್ರೂರ; ನಿರ್ದಯ.

निष्ठुरता, स्त्री० ಕ್ರೂರತನ; ಕ್ರೌರ್ಯ.

निष्णात, वि० ನಿಪುಣ.

निष्पत्ति, स्त्री० ಸಮಾಪ್ತಿ; ಸಿದ್ಧಿ; ನಿರ್ವಾಹ.

निष्फल, वि० ನಿರರ್ಥಕ.

निसंक, वि० ಅಶಕ್ತ.

निसबत, स्त्री० ಸಂಬಂಧ; ಲಗ್ನ ನಿಶ್ಚಯಮಾಡುವಿಕೆ; ತುಲನೆ.

निसर्ग, पु० ಸ್ವಭಾವ; ರೂಪ.

निसस, वि० ಶ್ವಾಸರಹಿತ; ಚೇತನವಿಲ್ಲದ.

निसा, स्त्री० ಸ್ತ್ರೀಯರು.

निसाद, पु० ಜಲಗಾರ; ತೋಟಿ.

निशान, पु० दे० **निशान.**

निसाब, पु० ಸಂಪತ್ತು; ಐಶ್ವರ್ಯ.

निसार, पु० ಉತ್ಸರ್ಗ; ಅರ್ಪಣೆ.

निसारना, स० ಹೊರಗೆ ಹಾಕು.

निसास, पु० ನಿಶ್ವಾಸ वि० ಶ್ವಾಸೋಚ್ಛ್ವಾಸವಿಲ್ಲದ.

निसासी, वि० ಶ್ವಾಸಗತಿಯಿಲ್ಲದ.

निसेनी स्त्री० ಏಣಿ.

निस्केवल, वि० ಪರಿಶುದ್ಧವಾದ; ಮಿಶ್ರಣವಿಲ್ಲದ.

निस्तब्ध, वि० ಚೈತನ್ಯವಿಲ್ಲದ; ಸ್ತಬ್ಧವಾದ.

निस्तरण, पु० ಬಿಡುಗಡೆ; ಉದ್ಧಾರ.

निस्तरना, अ० ಪಾರಾಗು; ಬಿಡುಗಡೆ ಹೊಂದು.

निस्तार, पु० दे० **निस्तरण.**

निस्तारण, पु० ಪಾರಾಗುವಿಕೆ; ಜಯಿಸುವಿಕೆ.

निस्तारना, अ० ಬಿಡುಗಡೆಮಾಡು; ಉದ್ಧಾರಮಾಡು.

निस्पृह, वि० ಲೋಭವಿಲ್ಲದ; ಅಭಿಲಾಷೆಯಿಲ್ಲದ.

निस्फ़, वि० ಅರ್ಧಭಾಗ.

निस्बत, स्त्री० दे० **निसबत.**

निस्संतान, वि० ಮಕ್ಕಳು ಮರಿಗಳಿಲ್ಲದ.

निस्संदेह, क्रि० ಅವಶ್ಯವಾಗಿ.

निस्सार, वि० ಸಾರರಹಿತವಾದ.

निस्सीम, वि० ಬಹಳ ಹೆಚ್ಚು.

निहंग, पु० ಮೋಸಳೆ. वि० ಒಬ್ಬಂಟಿ; **निहंगे-अजल** ಯಮದೂತ.

निहत, वि० ಬಿಸಾಡಿದ; ಎಸೆದ; ನಷ್ಟವಾದ; ಕೊಲ್ಲಲ್ಪಟ್ಟ.

निहत्था, वि० ಶಸ್ತ್ರಹೀನ; ಬರಿಗೈಯವ; ದರಿದ್ರ.

निहल, पु० ನದಿಯು ಹಿಮ್ಮೆಟ್ಟಿದುದರಿಂದ ತಲೆದೋರಿದ ಜಮೀನು.

निहाँ, वि० ಒಬ್ಬಿಬ್ಬರಿರುವ; ಗುಪ್ತ.

निहाई, स्त्री० ಅಕ್ಕಸಾಲೆಯ ಅಥವಾ ಕಮ್ಮಾರನ ಚಮ್ಮಟಿಯ ಅಡಿಗಲ್ಲು.

निहाद, स्त्री० ಅಸ್ತಿವಾರ; ಮೂಲ; ಮನಸ್ಸು; ಸ್ವಭಾವ.

निहायत, वि० ಬಹಳ; ಹೆಚ್ಚು.

निहार, पु० ಇಬ್ಬನಿ; ಹಿಮ.

निहारना, स० ನೋಡು; ಗಮನಕೊಟ್ಟು ನೋಡು.

निहाल, वि० ಎಲ್ಲಾ ರೀತಿಯಿಂದಲೂ ಸಂತುಷ್ಟ ಮತ್ತು ಪ್ರಸನ್ನನಾದವನು.

निहालचा, पु० ಮಕ್ಕಳನ್ನು ಮಲಗಿಸುವ ಚಿಕ್ಕಹಾಸಿಗೆ.

निहाली, स्त्री० ಹಾಸಿಗೆ ಅಗಲವಾದ ದಿಂಬು.

निहुरना, स० ಬಗ್ಗು; ತಗ್ಗು.

निहुराना, स० ಬಗ್ಗಿಸು; ತಗ್ಗಿಸು.

निहोरना, स० ಪ್ರಾರ್ಥಿಸಿಕೊಳ್ಳು; ಬಿನ್ನವಿಸು; ವಿಜ್ಞಾಪಿಸಿಕೊಳ್ಳು.

निहोरा, पु० ಅನುಗ್ರಹ; ಉಪಕಾರ; ವಿನಂತಿ; ಬೇಡಿಕೆ; ಆಶ್ರಯ; ಭರವಸೆ.

नींद, स्त्री० ನಿದ್ದೆ; ನಿದ್ರೆ.

नीक } वि० ಒಳ್ಳೆಯ; ಸುಂದರ
नीका } ವಾದ; ಅನುಕೂಲ.

नीके, क्रि० ಚೆನ್ನಾಗಿ; ಒಳ್ಳೆಯ ರೀತಿಯಲ್ಲಿ.

नीचता, स्त्री० ನೀಚತನ; ಕೆಟ್ಟ ಕೆಲಸ.

नीचा, वि० ನಿಮ್ನ; ಕೆಳಗಣ; ತಗ್ಗಿರುವ;—दिखाना ಅಪಮಾನಪಡಿಸು.

नीचाशय, वि० ತುಚ್ಛವಾದ ವಿಚಾರವುಳ್ಳ.

नीचे, क्रि० ಕೆಳಗಡೆಗೆ; ತಳದಲ್ಲಿ.

नीज़, अव्य० ಮತ್ತು; ಸಹ.

नीजू, स्त्री० ನೀರು ಸೇದುವ ಹಗ್ಗ.

नीठि, स्त्री० ಅನಾಸಕ್ತಿ; ಅರುಚಿ. क्रि० ಹೇಗಾದರೂ; ಯಾವುದಾದರೊಂದು ರೀತಿಯಲ್ಲಿ.

नीठो, वि० ಅನಿಷ್ಟ; ಅಪ್ರಿಯವಾದ.

नीड़, पु० ವಾಸಿಸುವ ಅಥವಾ ಉಳಕೊಳ್ಳುವ ಸ್ಥಳ; ಹಕ್ಕಿಗಳ ಗೂಡು.

नीति, स्त्री० ವ್ಯವಹಾರದ ರೀತಿ; ಆಚಾರ ಪದ್ಧತಿ.

नीदना, स० ನಿಂದಿಸು.

नीबू, पु० ನಿಂಬೆ; ಲಿಂಬೆ.

नीम, पु० ಬೇವು; ಬೇವಿನ ಮರ. वि० ಅರ್ಧ; ಅರೆ;—हकीम ಅರೆ ವೈದ್ಯ; ಅಳಲೇಕಾಯಿ ಪಂಡಿತ.

नीमचा, पु० ಚಿಕ್ಕ ಕಠಾರಿ; ಚಾಕು.

नीमजाँ } वि० ಅರೆಜೀವದ; ಮರ
नीमजान } ಣಾವಸ್ಥೆಯಲ್ಲಿರುವ.

नीमटर, वि० ಅರ್ಧಓದಿದ.

नीमन, वि० ಸ್ವಸ್ಥ; ವಾಸಿ.

नीम-निगाह, स्त्री० ಅರೆ ನೋಟ.

नीमरज़ा, वि० ಸ್ವಲ್ಪ ಒಪ್ಪಿಕೆಯುಳ್ಳ; ಅರೆಮನಸ್ಸಿನ.

नीमराज़ी, वि० ಅರ್ಧಸಮ್ಮತವುಳ್ಳ.

नीमरोज़, पु० ಮಧ್ಯಾಹ್ನ; ನಡು ಹಗಲು.

नीमास्तीन, स्त्री० ಅರೆ ತೋಳಿನ ಜುಬ್ಬ.

नीयत, स्त्री० ಭಾವನೆ; ಇರಾದೆ; ಉದ್ದೇಶ್ಯ.

नीर, पु० ನೀರು; ದ್ರವಪದಾರ್ಥ.

नीरस, वि० ನಿಸ್ಸಾರವಾದ; ರಸವಿಲ್ಲದ.

नीरोग, वि० ಸ್ವಸ್ಥ; ರೋಗವಿಲ್ಲದ.

नील, वि० ನೀಲವರ್ಣದ; ಗಾಢವಾದ ಆಕಾಶಬಣ್ಣದ. पु० ನೀಲವರ್ಣ; ನೀಲಿ ಗಿಡ.

नीलगाय, स्त्री० ಒಂದುಬಗೆಯಜಿಂಕೆ.

नीलम, पु० ನೀಲಮಣಿ.

नीला, वि० ನೀಲ; ಆಕಾಶ ಬಣ್ಣದ.

नीलाम, पु० ಹರಾಜು; ಲಿಲಾವು.

नीलामी, वि० ಹರಾಜಿನಲ್ಲಿ ಕೊಂಡುಕೊಂಡ.

नीलिमा, स्त्री० ನೀಲವರ್ಣ.

नीलोफर, पु० ಕನ್ನೈದಿಲೆ; ನೀಲಕಮಲ.

नीव, नींव, स्त्री० ತಳಹದಿ; ಪಾಯ; ಅಸ್ತಿವಾರ.

नीवि, नीवी, स्त्री० ಸೀರೆಯ ಗಂಟು; ಸೀರೆ ನಿರಿಗೆ.

नीहार, पु० ಮಂಜು; ಇಬ್ಬನಿ.

नीहारिका, स्त्री० ಆಕಾಶಗಂಗೆ.

नुक़्ता, पु० ಚುಕ್ಕೆ; ಬೊಟ್ಟು.

नुक़्ताचीन, वि० ತಪ್ಪು ಹುಡುಕುವವ; ಹುಳುಕು ಹುಡುಕುವವ; ಛಿದ್ರಾನ್ವೇಷಿ.

नुक़्ताचीनी, स्त्री० ತಪ್ಪು ಹುಡುಕುವಿಕೆ; ಹುಳುಕು ಹುಡುಕುವಿಕೆ.

नुक़रा, पु० ಬೆಳ್ಳಿ; ಬಿಳೀಬಣ್ಣ. वि० ಬಿಳೀ ಬಣ್ಣದ.

नुक़सान, पु० ನಷ್ಟ; ಹಾನಿ.

नुकीला, वि० ಮೊನಚಾದ; ಚೂಪಾದ.

नुक्कड़ पु० ಮೊನೆ; ತುದಿ; ಕೊನೆ.

नुक़्स, पु० ದೋಷ.

नुचना, अ० ಪರಚು; ಕೆದರಲ್ಪಡು.

नुचवाना, स० **नोचना** ದ ಪ್ರೇರಣಾರ್ಥಕ ರೂಪ.

नुजूम, पु० ತಾರಾಗಣ; ನಕ್ಷತ್ರವಿದ್ಯೆ.

नुजूमी, पु० ಜ್ಯೋತಿಷ್ಕ.

नुत्फ़ा, पु० ವೀರ್ಯ; ಶುಕ್ಲ; ಸಂತಾನ.

नुदबा, पु० ಮೃತ್ಯುಶೋಕ; ಯಾರಾದರೂ ಸತ್ತಾಗ ಅತ್ತು ಬಡಿದುಕೊಳ್ಳುವ ಶಬ್ದ.

नुनखरा, वि० ಉಪ್ಪಿನ.

नुमा, वि० ಕಾಣುವ.

नुमाइन्दा, पु० ಕಂಡುಬರುವ; ಪ್ರತಿನಿಧಿ.

नुमाइश, स्त्री० ಪ್ರದರ್ಶನ.

नुमाइशगाह, स्त्री० ಪ್ರದರ್ಶನದ ಮನೆ; ಪ್ರದರ್ಶನಶಾಲೆ.

नुमाइशी, वि० ಕೇವಲ ನೋಡುವು ದಕ್ಕೋಸ್ಕರವಾಗಿರುವ; ಆಡಂ ಬರದ; ತೋರಿಕೆಯ.

नुमाई, स्त्री० ತೋರಿಸುವಿಕೆ.

नुमायाँ, वि० ಕಾಣುವ; ಪ್ರತ್ಯಕ್ಷ.

नुशूर, पु० ದೇವರಮುಂದೆ ಕರ್ಮ ವಿಚಾರಣೆ ನಡೆಯುವ ದಿನ.

नुसखा, पु० ಚಿಟ್ಟಿ. (नुस्खा)

नूत } नूतन वि० ಹೊಸ; ಅಪೂರ್ವ ವಾದ.

नूतनता, स्त्री० ಹೊಸತನ; ನವೀ ನತೆ.

नून, पु० ಉಪ್ಪು.

नूपुर, पु० ಪೈಜಣ.

नूर, पु० ಜ್ಯೋತಿ; ಬೆಳಕು; ಕಾಂತಿ.

नूरा } नूरानी वि० ಕಾಂತಿಯುಳ್ಳ; ಪ್ರಕಾಶಮಾನವಾದ.

नृत्य, पु० ನರ್ತನ.

नृपति, पु० ಅರಸ; ರಾಜ.

नृशंस, वि० ನಿರ್ದಯ.

नेक, वि० ಒಳ್ಳೆಯ; ಉತ್ತಮ; ಚೆನ್ನಾದ.

नेकचलन, वि० ಸದಾಚಾರಿ.

नेकचलनी, स्त्री० ಒಳ್ಳೆನಡತೆ; ಸದಾ ಚಾರ.

नेकनाम, वि० ಒಳ್ಳೆ ಹೆಸರಿನ.

नेकनामी, स्त्री० ಒಳ್ಳೆ ಹೆಸರು; ಕೀರ್ತಿ.

नेकनीयत, वि० ಒಳ್ಳೆ ವಿಚಾರಗ ಳುಳ್ಳ; ಸದ್ಭಾವನೆಗಳುಳ್ಳ.

नेकबख़्त, वि० ಭಾಗ್ಯವಂತ; ಪುಣ್ಯ ವಂತ.

नेकी, स्त्री० ಕಲ್ಯಾಣ; ಹಿತ; ಒಳಿ ತು;—**बदी** ಹಿತಾಹಿತ.

नेग, पु० ಮದಿವೆಯಲ್ಲಿ ಪರಸ್ಪರ ಒಪ್ಪಿಸುವ ಕಾಣಿಕೆ.

नेज़ा, पु० ಭಲ್ಲೆ; ಭರ್ಚಿ.

नेटा, पु० ಸಿಂಬಳ.

नेड़े, क्रि० ಸಮೀಪ; ಹತ್ತಿರ.

नेत, पु० ನಿಶ್ಚಯ; ಗೊತ್ತುವಳಿ; ವ್ಯವಸ್ಥೆ.

नेता, पु० ಮುಖಂಡ; ಮುಂದಾಳು.

नेत्र, पु० ಕಣ್ಣು.

नेत्री, स्त्री० ಮುಂದಾಳು (ಹೆಂಗಸು).

नेनुआ, पु० ತುಪ್ಪ ಹೀರೇಕಾಯಿ.

नेपथ्य, पु० ನಾಟಕ ಮಂದಿರದಲ್ಲಿ ವೇಷ ಹಾಕಿಕೊಳ್ಳಲು ಇರುವ ಕೋಣೆ; ಪರದೆಯ ತೆರೆ; ಮರೆ.

नेफ़ा, पु० ಷರಾಯಿಯಲ್ಲಿ ಲಾಡಿ ಪೋಣಿಸುವ ಭಾಗ.

नेब, पु० ಮಂತ್ರಿ; ದಿವಾನ.

नेम, पु० ಕಾಲ; ಸಮಯ; ನಿಯ ಮ; ರೀತಿ.

नेमत, स्त्री० ಅಪರೂಪವಾದ ವಸ್ತು; ಉತ್ತಮವಾದ ಊಟ.

नेमि, स्त्री० ಗಾಲಿಯ ಪಟ್ಟಿ; ಭಾವಿಯ ಕಟ್ಟೆ.

नेरे, क्रि० ಸಮೀಪ; ನಿಕಟ; ಹತ್ತಿರ.

नेवछावर, स्त्री० दे० **निछावर.**

नेवज, पु० ನೈವೇದ್ಯ.

नेवतना, ಸಂ ಔತಣ ಕೊಡುವುದು.
नेवता, ಪುಂ ನಿಮಂತ್ರಣ.
नेवर, ಪುಂ ನೂಪುರ. ವಿಂ ಕೆಟ್ಟ.
नेवला, ಪುಂ ಮುಂಗುಸಿ.
नेवा, ಪುಂ ರೂಢಿ; ಗಾದೆ.
नेवाज, ವಿಂ ದೇಂ निवाज.
नेवारना, ಸಂ ದೇಂ निवारना.
नेवारी, ಸ್ತ್ರೀಂ ಕಾಡುಮಲ್ಲಿಗೆ.
नेश, ಪುಂ ತುದಿ; ಚೇಳುಕೊಂಡಿ.
नेशकर, ಪುಂ ತಬ್ಬು.
नेश्तर, ಪುಂ ಶಸ್ತ್ರಚಿಕಿತ್ಸೆಯಲ್ಲಿ ಉಪಯೋಗಿಸುವ ಆಯುಧ.
नेस, ಪುಂ ಕೋರೆ ಹಲ್ಲು.
नेस्त, ವಿಂ ಇಲ್ಲದುದು;—**नाबूद** ನಷ್ಟಭ್ರಷ್ಟ.
नेस्ति, ಸ್ತ್ರೀಂ ಅನಸ್ತಿತ್ವ; ಇಲ್ಲದಿರುವಿಕೆ; ನಾಶ.
नेह, ಪುಂ ಪ್ರೀತಿ; ಸ್ನೇಹ.
नेही, ವಿಂ ಪ್ರೀತಿಸುವವ.
नैचा, ಪುಂ ಹುಕ್ಕದ ಕೊಳವೆ.
नैनसुख, ಪುಂ ಒಂದು ಬಗೆಯ ಹೊಳಪಾದ ನೂಲಿನ ಬಟ್ಟೆ.
नैनू, ಪುಂ ಬುಟ್ಟೆ ಹೊಲೆದ ಅರಿವೆ; ಪುಂ ಬೆಣ್ಣೆ.
नैया, ಸ್ತ್ರೀಂ ದೋಣಿ.
नैरंग, ಪುಂ ಮೋಸ; ಗಾರುಡಿ ಕೆಲಸ.
नैसर्गिक, ವಿಂ ಪ್ರಾಕೃತಿಕ; ಸ್ವಾಭಾವಿಕ.
नैसा, ವಿಂ ಕೆಟ್ಟ; ಕೆಡುಕಾದ.
नैहर, ಪುಂ ತವರುಮನೆ.
नोक, ಸ್ತ್ರೀಂ ತುದಿ.
नोक-झोंक, ಸ್ತ್ರೀಂ ಶೃಂಗಾರ; ಸೊಗಸು; ಚುಚ್ಚುವಮಾತು.
नोक-दार, ವಿಂ ಮೊನೆಯುಳ್ಳ; ಚೂಪಾದ.
नोके-ज़बाँ, ವಿಂ ಕಂಠಸ್ಥವಾದ.
नोखा, ವಿಂ ಅದ್ಭುತ; ವಿಚಿತ್ರ.
नोच, ಸ್ತ್ರೀಂ ಕಸಿದುಕೊಳ್ಳುವ ಕಾರ್ಯ; ಲೂಟಿ; ಅಪಹರಣ.
नोचना, ಸಂ ಕೆರೆ; ಕೆದರು; ಕುಕ್ಕು.
नोन, ಪುಂ ಉಪ್ಪು.
नोना, ಪುಂ ಉಪ್ಪುಮಣ್ಣು; ಚವಳು ಮಣ್ಣು.
नोनिया, ಪುಂ ಉಪ್ಪು ಮಣ್ಣಿನಿಂದ ಉಪ್ಪು ತಯಾರಿಸುವ ಒಂದು ಜಾತಿಯುವನು; ಉಪ್ಪಾರ.
नोनी, ಸ್ತ್ರೀಂ ಚವಳು ಮಣ್ಣು.
नोल, ಸ್ತ್ರೀಂ ಕೊಕ್ಕು.
नोश, ವಿಂ ರುಚಿಕರವಾದ; —**फ़रमाना** ಊಟಮಾಡುವದು.
नौ, ವಿಂ ಹೊಸದು; ಒಂಭತ್ತು; —**दो ग्यारह होना** ಓಡಿಹೋಗು.
नौउम्र, ವಿಂ ಯುವಕ.
नौकर, ಪುಂ ಸೇವಕ; ಆಳು.
नौकरशाही, ಸ್ತ್ರೀಂ ಅಧಿಕಾರಿಗಳು ನಡೆಸುವ ಪ್ರಭುತ್ವ; ರಾಜಸೇವಕರು ನಡೆಸುವ ಆಳ್ವಿಕೆ.
नौकरानी, ಸ್ತ್ರೀಂ ದಾಸಿ; ತೊತ್ತು.
नौकरी, ಸ್ತ್ರೀಂ ಊಳಿಗ; ಸೇವೆ; ಉದ್ಯೋಗ.

नौका, स्त्री० ನೌಕೆ; ದೋಣಿ.

नौज, अव्य० ದೇವರು ಕಾಪಾಡಲಿ; ದೋಷವಿಲ್ಲ.

नौजवान, वि० ನವಯುವಕ.

नौजवानी, स्त्री० ತಾರುಣ್ಯ.

नौजा, पु० ಬಾದಾಮಿ.

नौतम, वि० ತೀರ ಹೊಸದಾದ; ಹಸನಾದ.

नौता, पु० ನಿಮಂತ್ರಣ; ಔತಣ.

नौधा, पु० ಹೊಸತೋಟ; ಒಂಬತ್ತು ಬಗೆಯು.

नौना, अ० ಬಾಗು; ಬಗ್ಗು.

नौनिहाल, पु० ಸಸಿ; ನವಯುವಕ; ತರುಣ.

नौबत, स्त्री० ಬಾರಿ; ಸಲ; ನಗಾರಿ.

नौबतख़ाना, पु० ನಗಾರಿ ಬಾರಿಸುವ ಸ್ಥಳ.

नौबती, पु० ನಗಾರಿ ಬಾರಿಸುವವ; ಸಿಂಗರಿಸಿದ ಕುದುರೆ; ಡೇರೆ.

नौरोज़, पु० ಪಾರಸಿ ಜನರ ಯುಗಾದಿ; ಆನಂದದ ದಿನ.

नौला, पु० ಮುಂಗುಸಿ.

नौलासी, वि० ಕೋಮಲ; ಮೆತ್ತನೆಯ; ಮೃದುವಾದ.

नौशा, पु० ಮದುಮಗ; ವರ.

नौशी, स्त्री० ಮದುಮಗಳು; ಕನ್ಯೆ.

नौशेरवाँ, पु० ಇರಾನದ ಓರ್ವ ಪ್ರಸಿದ್ಧ ನ್ಯಾಯಾಧೀಶನೂ ಪ್ರತಾಪಿಯೂ ಆದ ಅರಸನು.

नौसत, पु० ಶೃಂಗಾರ; ಅಲಂಕಾರ.

नौसादर, पु० ನವಾಸಾಗರ.

नौसिख } नौसिखिया } वि० ಹೊಸದಾಗಿ ಕಲಿತವ.

नौसेना, स्त्री० ನೌಕಾ ಸೈನ್ಯ.

न्यारा, वि० ಬೇರೆ; ಭಿನ್ನವಾದ; ಅಸಾಧಾರಣ; ವಿಚಿತ್ರ.

न्यारे, क्रि० ದೂರವಾಗಿ; ಬೇರೆ.

न्याव, पु० ನ್ಯಾಯ; ಕ್ರಮ.

न्यास, पु० ಇಡುವಿಕೆ; ಠೇವಣಾತಿ; ಅರ್ಪಣ.

न्यून, वि० ಸ್ವಲ್ಪ; ಕೊರೆಯಾದ; ಕಡಿಮೆ.

न्यूनता, स्त्री० ಕೊರತೆ; ಕುಂದು.

न्योछावर, स्त्री० दे० **निछावर.**

न्योतनी, स्त्री० ಅನ್ನ ಸಂತರ್ಪಣೆ.

न्योतहरी, पु० ಆಮಂತ್ರಿಸಲ್ಪಟ್ಟ ಮನುಷ್ಯ.

न्योता, पु० ಔತಣ; ನಿಮಂತ್ರಣ.

न्योला, पु० ಮುಂಗುಸಿ.

न्योली, स्त्री० ನೀರಿನಿಂದ ಕರುಳನ್ನು ತೊಳೆಯುವ ಹಠಯೋಗದ ಒಂದು ಕ್ರಿಯೆ.

न्हाना, अ० ಸ್ನಾನಮಾಡು.

प

पंक, पु० ಕೆಸರು.

पंकिल, वि० ಕೆಸರುಳ್ಳ.

पंक्ति, स्त्री० ಸಾಲು; ವರಸೆ.

पंख, पु० ರೆಕ್ಕೆ; ಪುಕ್ಕ.

पंखी, पु० ರೆಕ್ಕೆ; ಪುಕ್ಕ; ಗರಿ; ಪಕ್ಷಿ. वि० ರೆಕ್ಕೆಯುಳ್ಳ.

पंखड़ी, स्त्री० ಹೂವಿನ ರೇಕು; ಎಸಳು.

पंखा, पु० ಬೀಸಣಿಗೆ; ಪಂಖಾ.

पंखी, पु० ಪಕ್ಷಿ; ಹಕ್ಕಿ. स्त्री० ಚಿಕ್ಕ ರೆಕ್ಕೆ.

[illegible]ड़ा, पु० ಭುಜದ ಕೀಲು.

स्त्री० दे० **पंखड़ी.**

पंग - वि० ಕುಂಟ.

पंगत
पंगति } स्त्री० ಸಾಲು; ಪಂಕ್ತಿ.

पंगु, वि० ಕುಂಟ.

पंचक - पु० ಐದರ ಸಮೂಹ.

पंचकनामा, पु० ಪಂಚಾಯಿತರು ತೀರ್ಮಾನ ಬರೆದಿರುವ ಕಾಗದ.

पंचहजारी, पु० ಐದುಸಾವಿರ ಸೈನಿಕರುಳ್ಳ ಸೇನೆಯ ನಾಯಕ.

पंचायत, स्त्री० ಪಂಚಾಯಿತಿ.

पंछा, पु० ಬೊಬ್ಬೆ ಗುಳ್ಳೆ ಇವುಗಳಿಂದ ಬಸಿಯುವ ನೀರು; ರಸಿಕೆ.

पंछी, पु० ಪಕ್ಷಿ; ಹಕ್ಕಿ.

पंजा, पु० ಐದರ ಸಮೂಹ; ಪಂಚಕ; ಕೈಕಾಲುಗಳ ಐದು ಬೆರಳುಗಳ ಸಮೂಹ; ಅಂಗೈ; ಹಿಡಿ; ಇಸ್ಪೀಟು ಐದನೆಯ ಬಂದು; ಮೊಹರಂ ಹಬ್ಬದಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗುವ ಕೈನಂತಿರುವ ರೇಕು. **छक्का पंजा** ಮೋಸ.

पजारा, पु० ಪಿಂಜಾರ.

पंजीरी, स्त्री० ಹಾಲು, ಸಕ್ಕರೆ, ರವೆ, ತುಪ್ಪಗಳಿಂದ ತಯಾರಿಸಿದ ಒಂದು ಮಿಠಾಯಿ.

पंजेरा, पु० ಕಂಚುಗಾರ.

पंडा, पु० ಪೂಜಾರಿ.

पंडाल, पु० ಚಪ್ಪರ; ಮಂಟಪ.

पंडिताऊ, वि० ಪಾಂಡಿತ್ಯದ; ಪಂಡಿತರ.

पंडितानी, स्त्री० ಬ್ರಾಹ್ಮಣ ಸ್ತ್ರೀ.

पंडु, वि० ಬಿಳಿ.

पंडुक, पु० ಕಾಡು ಪಾರಿವಾಳ.

पंथ, पु० ದಾರಿ; ಮಾರ್ಗ; ಸಂಪ್ರದಾಯ.

पंथी, पु० ಹಾದಿಗ; ದಾರಿಕಾರ; ಸಂಪ್ರದಾಯಸ್ಥ.

पंद, स्त्री० ಉಪದೇಶ; ಬುದ್ಧಿವಾದ.

पंवरना, अ० ಈಜು; ಆಳನೋಡು.

पंवरि, स्त्री० ಬಾಗಿಲು; ದ್ವಾರ.

पंवरिया, पु० ದ್ವಾರಪಾಲಕ.

पंवाड़ा, पु० ವೃತ್ತಾಂತ; ಕತೆ; ಕಗ್ಗ.

पंसारी, पु० ಕಿರಾಣಿ ಅಂಗಡಿಯವ; ಗಂದಿಗೆ ಅಂಗಡಿಯವ.

पंसुल, स्त्री० ಪಕ್ಕೆಲುಬು.

पंसेरी, स्त्री० ಐದು ಸೇರಿನ ತೂಕದ ಕಲ್ಲು.

पकड़, स्त्री० ಹಿಡಿತ; ಮುಷ್ಟಿ; ಪಟ್ಟು.

पकड़ना, स० ಹಿಡಿ.

पकड़वाना
पकड़ाना } स० ಹಿಡಿಸು.

पकना, अं॰ ಪಕ್ವವಾಗು; ಮಾಗು; ಕೂದಲು ನೆರೆಯು.

पकवान, पु॰ ಭಕ್ಷಣ; ಪಣ್ಯಾರ.

पकाई, स्त्री॰ ಅಡಿಗೆ; ಅಡಿಗೆಮಾಡಿದುದರ ಕೂಲಿ.

पकौड़ा, पु॰ } ಪಕೋಡ.
पकौड़ी, स्त्री॰ }

पक्का, वि॰ ಬಲಿತ; ಮಾಗಿದ; ಅನುಭವವುಳ್ಳ.

पक्ष, पु॰ ಪಕ್ಕ; ಪಾರ್ಶ್ವ.

पक्षाघात, पु॰ ಪಾರ್ಶ್ವವಾಯು.

पक्षी, पु॰ ಹಕ್ಕಿ.

पख, स्त्री॰ ಜಗಳ.

पखवारा, पु॰ ಪಕ್ಷ; ಹದಿನೈದುದಿನ.

पख़, स्त्री॰ ಮಲ; ಗಲಾಟೆ; ದುರ್ಭಾಷೆ.

पखड़ी, स्त्री॰ ಎಸಳು; ಹೂವಿನ ರೇಕು.

पखान, पु॰ ಕಲ್ಲು; ಬಂಡೆ.

पखारना, स॰ ತೊಳೆ; ಸ್ವಚ್ಛಮಾಡು.

पखाल, स्त्री॰ ಪಕಾಲಿ; ನೀರು ತುಂಬಲು ಮಾಡಿದ ಚರ್ಮದ ಚೀಲ.

पखावज, स्त्री॰ ಮೃದಂಗ; ಮದ್ದಲೆ.

पखुड़ी } स्त्री॰ दे॰ पखड़ी.
पखुरी }

पखेरू, पु॰ ಪಕ್ಷಿ.

पग, पु॰ ಹೆಜ್ಜೆ; ಪಾದ; ಕಾಲು.

पगडंडी, स्त्री॰ ಕಾಲುದಾರಿ.

पगड़ी, स्त्री॰ ರುಮಾಲು; ಪಾಗು; ಪೇಟಾ.

पगतरी, स्त्री॰ ಮೆಟ್ಟು; ಪಾದರಕ್ಷೆ.

पगना, अं॰ ಪರಿಪಕ್ವವಾಗು; ಬೆರೆ; ಹೆಚ್ಚು ಅನುರಕ್ತವಾಗು.

पगरा, पु॰ ಹೆಜ್ಜೆ.

पगला, वि॰ दे॰ पागल.

पगहा, पु॰ ಕಣ್ಣಿ; ಹಗ್ಗ.

पगा, पु॰ ಶಾಲು; ಸೆಲ್ಲಿ; ಉಪ್ಪರಣಿ.

पगाना, स॰ ನೆನಸು; ಬೆರೆಸು; ಕೂಡಿಸು.

पगार, पु॰ ಆವರಣ ಗೋಡೆ; ಪ್ರಾಕಾರ; ವೇತನ.

पगाह, स्त्री॰ ಮುಂಜಾನೆ; ಪ್ರಾತಃಕಾಲ.

पगुराना, अं॰ ಮೆಲುಕಾಡಿಸು; ಮೆಲ್ಲು.

पघा, पु॰ ಕಣ್ಣಿ; ಪಶುಗಳ ಕೊರಳಲ್ಲಿ ಕಟ್ಟುವ ಹಗ್ಗ.

पघिलना, अं॰ ಕರಗು.

पचकना, अं॰ ಅದುಮಿ ಹೋಗು.

पचड़ा, पु॰ ತೊಂದರೆ; ಜಗಳ; ರಗಳೆ.

पचना, अं॰ ಜೀರ್ಣವಾಗು; ಕ್ಷಯವಾಗು.

पचमेल, वि॰ ಐದು ವಸ್ತುಗಳ ಸಮ್ಮಿಶ್ರಣದಿಂದಾದ ಪಂಚಗವ್ಯ; (ಪಂಚಾಮೃತದಂತೆ).

पचाना, स॰ ಜೀರ್ಣಿಸು; ಅರಗಿಸು.

पच्चड़, पु॰ } ಬೆಣೆ; ಗೂಟ; ಆಪ್ಪು.
पच्चर, स्त्री॰ }

पच्ची, स्त्री० ಜೊನ್ನಾಗಿ ಬೆರತು ಹೋಗುವಿಕೆ ಅಥವಾ ಕೂಡಿ ಹೋಗುವಿಕೆ.

पच्चीकारी, स्त्री० ಕೂಡಿಸುವ ಕಾರ್ಯ.

पच्छि } पु० ಪಕ್ಷಿ.
पच्छी }

पछड़ना, अ० ಕೆಳಕ್ಕೆ ಬೀಳು; ಹಿಂದುಳಿ.

पछताना, अ० ಪಶ್ಚಾತ್ತಾಪ ಪಡು.

पछतावाँ, वि० ಪಶ್ಚಾತ್ತಾಪ.

पछवाँ, वि० ಪಶ್ಚಿಮದ.

पछाँह, पु० ಪಶ್ಚಿಮ ಪ್ರದೇಶ.

पछाँहिया, वि० ಪಶ್ಚಿಮ ಪ್ರದೇಶದ.

पछाड़ना, स० ಹಿಂದಟ್ಟು; ಬಗೆ; ಬಡಿ; ಅಪ್ಪಳಿಸು.

पछाहीं, वि० ಪಶ್ಚಿಮದೇಶದ.

पछिआना, स० ಹಿಂಬಾಲಿಸು; ಬೆನ್ನಟ್ಟು.

पछितावा, पु० ಪಶ್ಚಾತ್ತಾಪ.

पछुआ, पु० ಕಡಗ.

पछोड़ना, स० ಕೇರು; ಸಾಣಿಸು.

पज़मुरदा, वि० ಬಾಡಿದ; ಕಂದಿದ; ಸೊರಗಿದ.

पजरना, अ० ಉರಿ; ತಪಿಸು.

पजामा, पु० ಷರಾಯಿ.

पजारना, स० ಹೊತ್ತಿಸು; ಸುಡು.

पजावा, पु० ಭಟ್ಟಿ; ಉಬ್ಬೆ; ಆವಿಗೆ.

पटंबर, पु० ರೇಶ್ಮೆಯ ವಸ್ತ್ರ.

पट, पु० ವಸ್ತ್ರ; ಅರಿವೆ; ಪರದೆ; ಹಲಿಗೆ; ಬಾಗಿಲು; ಅರಳೆ; ಸಿಂಹಾಸನ.

पटकन, स्त्री० ಏಟು.

पटकना स० ಎಸೆಯು; ಅಪ್ಪಳಿಸು.

पटका, पु० ಪಟ್ಟಿ; ಸೊಂಟಕ್ಕೆ ಕಟ್ಟುವ ವಸ್ತ್ರ.

पटकार, वि० ನೇಕಾರ; ಚಿತ್ರಕಾರ.

पटड़ी, स्त्री० दे० **पटरी.**

पटतर, पु० ಹೋಲಿಕೆ; ಸಮಾನತೆ; ಉಪಮೆ; ಬಯಲು; ಮೈದಾನ. वि० ಸಮವಾದ; ಸಮತಲ.

पटतरना, अ० ಹೋಲು.

पटना, अ० ಹೂಳು ತುಂಬು; ಸಮ ಲತವಾಗು; ಪರಿಪೂರ್ಣವಾಗು; ಮನಸ್ಸು ಒಂದಾಗು.

पटपर, वि० दे० **पटतर.**

पटबीजना, पु० ಖದ್ಯೋತ; ಮಿಂಚು ಹುಳ.

पटरा, पु० ಹಲಗೆ; ಮಣೆ; ಚಪ್ಪಡಿ ಕಲ್ಲು.

पटरानी, स्त्री० ಪಟ್ಟದರಿಸಿ; ಪಟ್ಟದ ರಾಣಿ.

पटरी, स्त्री० ಹಲಗೆ; ಕಪ್ಪುಹಲಗೆ; ಪಾಟಿ; ಅಂಚು.

पटल, पु० ಸಮೂಹ.

पटली, स्त्री० ಮಾಳಿಗೆ; ಚಪ್ಪರ.

पटवाना, स० ಹೊದಿಸು; ಹಾಸು; ಸಮತಲ ಮಾಡಿಸು; ತೀರಿಸು; ಸಮಾಧಾನ ಪಡಿಸು.

पटवारी, पु० ಕುಲಕರ್ಣಿ; ಶಾನು ಭೋಗ.

पटवास, पु० ವಸತಿಗೃಹ; ಶಿಬಿರ.

पटसन, ಪುಂ ನಾರಿನಗಿಡ; ಸೆಣಬು.
पटहार, ಪುಂ ಪಟ್ಟಿಗಾರ.
पटा, ಪುಂ ಆಸನ; ಪಟ್ಟಾ ಕತ್ತಿ, ಎಂಬ ಆಯುಧ.
पटाई, ಸ್ತ್ರೀಂ ಹೊಲಗದ್ದೆಗಳಿಗೆ ನೀರು ಬಿಡುವ ಕಾರ್ಯ.
पटाका / **पटाखा** } ಪುಂ ಬಾಣಬಿರುಸು.
पटाना, ಸಂ ಮುಚ್ಚಿಸು; ಹೂಳು; ತುಂಬು.
पटिया, ಸ್ತ್ರೀಂ ಹಾಸು ಕಲ್ಲು.
पटीलना, ಸಂ ಮೋಸಮಾಡುವುದು.
पटु, ವಿಂ ಪ್ರವೀಣ; ಚತುರ; ಧೂರ್ತ.
पटुका, ಪುಂ ವಸ್ತ್ರ; ಸೆಲ್ಲೆ.
पटुता, ಸ್ತ್ರೀಂ ಪ್ರಾವೀಣ್ಯ.
पटुवा, ಪುಂ ಸೆಣಬು; ನಾರು.
पटेबाज़, ಪುಂ ಪಟ್ಟಾವರಸೆ ಬಲ್ಲವ.
पटेर, ಪುಂ ನೀರು ಹುಲ್ಲು.
पटेल, ಪುಂ ಹಳ್ಳಿಯ ಮುಖಂಡ; ಪಾಟೀಲ.
पटोर, ಪುಂ ರೇಶ್ಮೆ ವಸ್ತ್ರ; ರೇಶ್ಮೆ ಸೀರೆ.
पट्ट, ಪುಂ ಮಣೆ; ಸಿಂಹಾಸನ; ಕಲ್ಲು.
पट्टन, ಪುಂ ಪಟ್ಟಣ; ನಗರ.
पट्टा, ಪುಂ ಅಧಿಕಾರ ಪತ್ರ; ಸನದು.
पट्टी, ಸ್ತ್ರೀಂ ಕಟ್ಟಿಗೆಯ ಹಲಗೆ; ಸ್ಲೇಟು; ಪಾಠ; ಉಪದೇಶ; ತಪ್ಪು ತಿಳಿವಳಿಕೆ; ಅರಿವೆಯ ಉದ್ದವಾದ ತುಂಡು; ಭಾಗ.
पट्टीदार, ಪುಂ ಪಾಲುಗಾರ; ಭಾಗದಾರ.
पट्टू, ಪುಂ ಒಂದು ಬಗೆಯ ಉಣ್ಣೆ ಒಟ್ಟಿ; ಪಟ್ಟು.
पट्ठैत, ಪುಂ ಮೂರ್ಖ.
पट्ठा, ಪುಂ ಪ್ರಾಯಸ್ಥ; ಬಲಿತ ಹುಡುಗ; ತರುಣ; ಮಲ್ಲ.
पट्ठी, ಸ್ತ್ರೀಂ ಬಲಿತ ಹುಡುಗಿ; ಮಲ್ಲಿ.
पठन, ಪುಂ ಓದುವುದು; ಓದುವಿಕೆ.
पठनीय, ವಿಂ ಓದಬೇಕಾದ.
पठवाना, ಸಂ ಕಳುಹಿಸು.
पठान, ಪುಂ ಪಠಾಣರು.
पठाना, ಸಂ ಕಳುಹಿಸು; ಕಳಹು.
पठानी, ಸ್ತ್ರೀಂ ಪಠಾಣರ ಗುಣ; ಪಠಾಣರ ಹೆಂಗಸು.
पठित, ವಿಂ ಓದಿದ; ಪಾಠವಾದ.
पड़ता, ಪುಂ ಮೂಲ ಬೆಲೆ; ಅಸಲು; ದರ.
पड़ताल, ಪುಂ ಪರಿಶೀಲನೆ; ಪರೀಕ್ಷಣ. (**जाँच-पड़ताल**)
पड़तालना, ಸಂ ಪರಿಶೋಧಿಸು; ಪರಿಶೀಲಿಸು.
पड़ती, ಸ್ತ್ರೀಂ ಪಡಬಿದ್ದ ಜಮೀನು; ಬಂಜರು.
पड़ना, ಅಂ ಬೀಳು; ಒದಗು; ಸಂಭವಿಸು.
पड़पड़ाना, ಅಂ ಹಾತೊರೆಯು.
पड़पोता, ಪುಂ ಮಗನ ಮೊಮ್ಮಗ.
पड़वा, ಸ್ತ್ರೀಂ ಪಾಡ್ಯಮಿ; ಪ್ರತಿಪತ್ತು.
पड़ाव ಪುಂ ತಂಗುವ ಸ್ಥಳ; ಬೀಡು; ಪಾಳೆಯ.

पड़ोस, पुं० ನೆರೆ ; ಅಕ್ಕಪಕ್ಕ.
पड़ोसिन, स्त्री० ನೆರೆ ಮನೆಯವಳು.
पड़ोसी, पुं० ನೆರೆಮನೆಯವ.
पढ़ना, स० ಓದು ; ಕಲಿ ; ಪಠಿಸು.
पढ़वाना, स० ಓದಿಸು ; ಕಲಿಸು.
पढ़ाई, स्त्री० ಓದುವಿಕೆ ; ಅಧ್ಯಯನ; ಅಧ್ಯಾಪನ ; ಶಿಕ್ಷಣ.
पढ़ाना, स० ಓದಿಸು ; ವಿದ್ಯೆಕಲಿಸು ; ಪಾಠಹೇಳು.
पढ़ा-लिखा, वि० ಓದು ಬರಹ ತಿಳಿದವ; ವಿದ್ಯಾವಂತ.
पण, पुं० ಪ್ರತಿಜ್ಞೆ ; ಒಪ್ಪಂದ; -ಪ್ಯ
पण्य, वि० ವ್ಯಾಪಾರದ.
पतंग, पुं० ದೀಪದ ಹುಳು ; ಗಾಳಿಪಟ ; ಪತಂಗ.
पतंगबाज़, पुं० ಗಾಳಿಪಟ ಹಾರಿಸುವವ.
पतंगा, पुं० ದೀಪದ ಹುಳು; ಪತಂಗ; ಕಿಡಿ.
पत, पुं० ಒಡೆಯ ; ಎಲೆ. स्त्री० ಮಾನ ; ಗೌರವ.
पतझड़ / पतझर } स्त्री० ಎಲೆಯುದುರುವ ಕಾಲ ; ಶಿಶಿರಋತು.
पतन, पुं० ಬೀಳುವಿಕೆ ; ಅವನತಿ ; ನಾಶ.
पतनोन्मुख, वि० ಬೀಳುತ್ತಿರುವ ; ಪತನವಾಗುತ್ತಿರುವ.
पत-पानी, पुं० ಮಾನ ಮರ್ಯಾದೆ ; ಗೌರವ.
पतला, वि० ತೆಳ್ಳಗೆ ; ಕೃಶವಾದ ; ಸೂಕ್ಷ್ಮ.
पतलून, पुं० ಇಜಾರು ; ಷರಾಯಿ.
पतवार, स्त्री० ದೋಣಿಯ ಚುಕ್ಕಾಣಿ.
पता, पुं० ಪತ್ತೆ; ವಿಳಾಸ; ಗುರುತು; ಚಿನ್ಹೆ.
पताका, स्त्री० ಬಾವುಟ ; ಧ್ವಜ.
पताकिनी, स्त्री० ಸೇನೆ.
पति, पुं० ಒಡೆಯ ; ಯಜಮಾನ ; ಗಂಡ.
पतित, वि० ಬಿದ್ದ.
पतियाना, स० ನಂಬು ; ನೆಚ್ಚು.
पतियारा, पुं० ನಂಬಿಕೆ ; ನೆಚ್ಚಿಕೆ.
पतीजना, अ० ನಂಬು.
पतील, पुं० ದೀಪದಬತ್ತಿ.
पतीली, स्त्री० ಚಿಕ್ಕತಪ್ಪಲೆ.
पतुकी, स्त्री० ಮಡಿಕೆ.
पतुरिया, स्त्री० ವೇಶ್ಯೆ ; ಸೂಳೆ.
पतोखा, पुं० ದೊನ್ನೆ.
पतोह, पतोहू, स्त्री० ಸೊಸೆ.
पत्तन, पुं० ಪಟ್ಟಣ.
पत्तर, पुं० ತಗಡು.
पत्तल, स्त्री० ಊಟದೆಲೆ.
पत्ता, पुं० ಎಲೆ.
पत्ती, स्त्री० ಚಿಕ್ಕ ಎಲೆ; ಪಾಲು ; ಹೂವಿನ ರೇಕು.
पत्थर, पुं० ಕಲ್ಲು ; ಶಿಲೆ.
पत्र, पुं० ಎಲೆ ; ಕಾಗದ.
पत्रकार, पुं० ಪತ್ರಿಕೆಯ ಸಂಪಾದಕ.
पत्रवाहक, पुं० ಓಲೆಕಾರ.

पत्रव्यवहार, पुं० ಕಾಗದ ಮತ್ತು ಉತ್ತರ ಬರೆಯುವುದು.

पत्रा, पुं० ಪಂಚಾಂಗ; ಹಾಳೆ.

पत्री, स्त्री० ಚಿಕ್ಕಪತ್ರ; ಪತ್ರಿಕೆ.

पथ, पुं० ದಾರಿ; ಮಾರ್ಗ.

पथराना, अ० ಒಣಗಿ ಬಿರುಸಾಗು; ಕಲ್ಲಾಗು.

पथरी, स्त्री० ಕಲ್ಲು ಮರಿಗೆ; ಸಾಣೆ ಕಲ್ಲು.

पथरीला, वि० ಕಲ್ಲುಗಳುಳ್ಳ; ಕಲ್ಲಿನ.

पथिक, पुं० ದಾರಿಗ; ಮಾರ್ಗಸ್ಥ.

पद, पुं० ಪದವಿ; ಅಂತಸ್ತು; ಪಾದ; ಚರಣ;—**चर** ಕಾಲಾಳು.

पदक, पुं० ಪದಕ; ಮೆಡಲು.

पदच्छेद, पुं० ಶಬ್ದಗಳನ್ನು ಬಿಡಿಸುವುದು.

पदच्युत, वि० ಪದವಿಯಿಂದ ತೆಗೆಯಲ್ಪಟ್ಟ.

पदत्राण, पुं० ಕೆರ; ಎಕ್ಕಡ.

पदवी, स्त्री० ಬಿರದು; ಅಂತಸ್ತು.

पदाधिकारी, पुं० ಪದವೀಧರ; ಅಧಿಕಾರಸ್ಥ.

पदाना, स० ಪೀಡಿಸು; ಕಾಡು.

पद्धति, स्त्री० ರೂಢಿ; ವಾಡಿಕೆ.

पधराना, स० ಸ್ವಾಗತಿಸು.

पधारना, अ० ಆಗಮಿಸು; ದಯಮಾಡಿಸು.

पन, पुं० ಪ್ರತಿಜ್ಞೆ; ಸಂಕಲ್ಪ. **प्रत्य०** ಭಾವವಾಚಕ ಪ್ರತ್ಯಯ; ಉದಾ: **पागलपन.**

पनकुकड़ी, स्त्री० ನೀರು ಕೋಳಿ.

पनघट, पुं० ಭಾವಿಕಟ್ಟೆ.

पनच, स्त्री० ಹೆದೆ; ಬಿಲ್ಲಿನ ಹಗ್ಗ.

पनचक्की, स्त्री० ನೀರಿನ ಯಂತ್ರ.

पनडुब्बा, पुं० ನೀರಿನಲ್ಲಿ ಮುಳುಕ ಹಾಕುವವ; ಬುಡಗನ ಹಕ್ಕಿ.

पनडुब्बी, स्त्री० ಸಮುದ್ರದಲ್ಲಿ ಮುಳಗಿ ಸಂಚರಿಸುವ ಹಡಗು; ಸಬ್ ಮೆರೀನ್.

पनपना, अ० ಚಿಗುರು; ಅಂಕುರಿಸು; ಏಳಿಗೆಗೆ ಬರು.

पनबट्टा, पुं० ವೀಳೇದೆಲೆಯ ಡಬ್ಬಿ.

पनवाड़ी, स्त्री० ವಿಳೇದೆಲೆ ತೋಟ; ಎಲೆತೋಟ.

पनवारा, पुं० ಊಟದೆಲೆ.

पनस, पुं० ಹಲಸಿನಮರ; ಹಲಸಿನ ಹಣ್ಣು.

पनसल्ला, पुं० दे० **पनसाल.**

पनसारी, पुं० ಕಿರಾಣಿ ಅಂಗಡಿಯವ.

पनसोल, स्त्री० ಅರವಟ್ಟಿಗೆ.

पनहरा, पुं० ನೀರು ಹೊರುವವ; ನೀರಿನವ.

पनहा, पुं० ಒಟ್ಟೆಯ ಪನ್ನ; ಗೋಡೆಯ ಅಗಲ; ಮರ್ಮ.

पनहारा, पुं० दे० **पनहरा.**

पनहारिन, स्त्री० ನೀರು ಹೊರುವವಳು.

पनही, स्त्री० ಕೆರ; ಎಕ್ಕಡ; ಮೆಟ್ಟು.

पनाला, पुं० ಕಾಲುವೆ; ಚರಂಡಿ.

पनाह, स्त्री० ಶರಣ; ಮರೆ; ಆಶ್ರಯ.
पनिहा, वि० ನೀರು ಸೇರಿದ; ನೀರಿನಲ್ಲಿರುವ.
पनीर, पु० ಹಾಲುಖೋವ; ಕೆನೆ.
पनीरी, स्त्री० ನಾಟಿಹಾಕಲು ಪೈರು ತಯಾರಿಸುವ ಭೂಮಿ.
पनीला, वि० ನೀರುಳ್ಳ.
पन्ना, पु० ಹಾಳೆ; ಪುಟ; ಪಾನು; ಪಚ್ಚೆ.
पन्नी, स्त्री० ಗುನ್ನಾಂಪಟ್ಟಿ; ವರಕು.
पपड़ा, पु० } ಸಿಪ್ಪೆ; ತೊಗಟೆ;
पपड़ी, स्त्री० } ಹುರುಕು.
पपीता, पु० ಪಪ್ಪಾಯಹಣ್ಣು; ಪರಂಗೀ ಹಣ್ಣು.
पपीहा, पु० ಚಾತಕ ಪಕ್ಷಿ.
पपोटा, पु० ಕಣ್ಣು ರೆಪ್ಪೆ.
पय, पु० ಹಾಲು; ನೀರು.
पयान, पु० ಪ್ರಯಾಣ; ಯಾತ್ರೆ.
पयाम, पु० ಸಂದೇಶ.
पयार } पु० ಒಣ ಹುಲ್ಲು.
पयाल }
पयोद, पु० ಮೇಘ.
पयोधर, पु० ಸ್ತನ; ಮೇಘ; ಕೊಳ; ಸಮುದ್ರ.
पयोनिधि, पु० ಸಮುದ್ರ.
परंच, अव्य० ಮತ್ತೂ; ಆದರೂ.
परंतु, अव्य० ಆದರೆ.
परंपरा, स्त्री० ಕ್ರಮವಾಗಿ ಬಂದದ್ದು.
परंदा, पु० ಪಕ್ಷಿ.
पर, वि० ಪರ; ಇತರ; ಅನಂತರದ. अव्य० ಆದರೆ; ಪರಂತು; ಮೇಲೆ. पु० ರೆಕ್ಕೆ.
परकना, अ० ಅಭ್ಯಾಸವಾಗುವುದು.
परकाजी, वि० ಪರೋಪಕಾರಿ; ಲೋಕೋಪಕಾರಿ.
परकार } पु० ಕೈವಾರ; ಕಂಪಾಸು.
परकाल }
परकारना, स० ಕೈವಾರದಿಂದ ವರ್ತುಲ ಬರೆ; ಸುತ್ತುಗಟ್ಟು.
परकाला, पु० ಏಣಿ; ನಿಚ್ಚಣಿಕೆ. आफ़त का परकाला, ಆಶ್ಚರ್ಯವನ್ನುಂಟುಮಾಡುವ; ಭಯಂಕರವಾದ.
परकीय, वि० ಇತರರ.
परकोटा, पु० ಸುತ್ತುಗೋಡೆ.
परख, स्त्री० ಪರೀಕ್ಷೆ; ಪರಿಶೋಧನೆ.
परखना, स० ಪರೀಕ್ಷಿಸು; ಪರಿಶೀಲಿಸು.
परखाना, स० ಪರೀಕ್ಷೆ ಮಾಡಿಸು.
परगना, पु० ಹೋಬಳಿ; ಪರಗಣೆ.
परचा, पु० ಚೀಟಿ; ಕಾಗದದ ತುಂಡು; ಪ್ರಶ್ನಪತ್ರ.
परचाना, स० ಸೇರಿಸು; ಆಕರ್ಷಿಸು.
परचून, पु० ಆಹಾರ ಪದಾರ್ಥಗಳು. ಅಕ್ಕಿಬೇಳೆ; ಕಾಳುಕಡಿ.
परचूनी, पु० ದಿನಸಿನ ಅಂಗಡಿಯವ.
परछन, पु० ನೀವಾಳಿಸುವಿಕೆ; ಆರತಿ.
परछना, स० ಇಳಿ ತೆಗೆ; ಆರತಿ ಎತ್ತು.
परछाईं, स्त्री० ಪ್ರತಿಬಿಂಬ; ನೆಳಲು.

परजा, स्त्री० ಪ್ರಜೆ.
परतंत्र, वि० ಪರಾಧೀನ; ಪರಾಶ್ರಿತ.
परत, स्त्री० ಪದರು; ಮಡಿಕೆ; ನಿರಿಗೆ.
परती, स्त्री० ಪಡ್ಡಬಿದ್ದ ಜಮೀನು; ಬಂಜರು.
परथन, पु० ರೊಟ್ಟಿ ಅಥವಾ ಹಪ್ಪಳ ಲಟ್ಟಿಸುವಾಗ ಉಪಯೋಗಿಸುವ ಹಿಟ್ಟು.
परदा, पु० ತೆರೆ; ತಡಿಕೆ; ಮರೆ; ಬುರುಕಿ.
परदाज़, पु० ಸಿಂಗಾರ; ಅಲಂಕಾರ.
परदादा, पु० ಮುತ್ತಜ್ಜ; ಮುತ್ತಾತ.
परदादी, स्त्री० ಮುತ್ತಜ್ಜಿ.
परदा-नशीन, वि० ಬುರಕಿ ಹಾಕಿದ; ಗೋಷಾ.
परपट, पु० ಸಮಭೂಮಿ; ಬಯಲು.
परपराना, अ० ಉರಿ.
परपोता, पु० ಮರಿಮಗ.
परला, वि० ಒಂದುತುದಿ;—**परले दर्जे का, परले सिरे का**, ಅತ್ಯಧಿಕ.
परवर, वि० ಕಾಪಾಡುವ.
परवरदा, वि० ಬೆಳೆಸಿದ.
परवरदिगार, पु० ಸಂರಕ್ಷಕ; ಈಶ್ವರ.
परवरिश, स्त्री० ಪಾಲನೆ; ಪೋಷಣೆ; ಸಂರಕ್ಷಣೆ.
परवल, पु० ತೊಂಡೇಕಾಯಿ ಜಾತಿಯ ಒಂದು ತರಕಾರಿ. ಇದರಿಂದ ಪಲ್ಯೆಮಾಡುತ್ತಾರೆ.
परवा, स्त्री० ಪಾಡ್ಯಮಿ; ಚಿಂತೆ.
परवाज़, स्त्री० ಅಭ್ಯುದಯ; ಏಳಿಗೆ.
परवानगी, स्त्री० ಅನುಮತಿ; ಅನುಜ್ಞೆ.
परवाना, पु० ಅನುಮತಿಯ ಪತ್ರ; ದೀಪದ ಹುಳ; ಪತಂಗ.
परवाह, स्त्री० ಚಿಂತೆ; ಪರವಾ.
परवेज़, पु० ಜಯಶಾಲಿ.
परश, पु० ಸ್ಪರ್ಶಮಣಿ.
परशु पु० ಕೊಡಲಿ.
परस, पु० ಸ್ಪರ್ಶಮಣಿ.
परसना, स० ಮುಟ್ಟು; ಬಡಿಸು.
परसाल, पु० ಕಳೆದ ವರ್ಷ.
परसों, अव्य० ನಾಡದ್ದು; ಮೊನ್ನೆ.
परस्त, वि० ಪೂಜಿಸುವವ; ಉಪಾಸಕ.
परस्तिश, स्त्री० ಉಪಾಸನೆ; ಪೂಜೆ; ಪೂಜಕ.
परहेज़, पु० ಪಥ್ಯ; ಸಂಯಮ.
परहेज़गार, पु० ಸಂಯಮಿ; ಪಥ್ಯದಲ್ಲಿರುವವ.
परौंठा, पु० दे० **परोठा.**
परा, पु० ಪಂಕ್ತಿ; ಸಾಲು.
पराकाष्ठा, स्त्री० ಎಲ್ಲೆ.
पराग, पु० ಹೂವಿನ ಧೂಳು; ಪರಾಗ.
पराजय, स्त्री० ಸೋಲು.
पराजित, वि० ಸೋಲಿಸಲ್ಪಟ್ಟ.
परात, स्त्री० ಹರಿವಾಣ; ದೊಡ್ಡ ತಟ್ಟೆ.
पराना, अ० ಓಡು; ಓಡಿ ಹೋಗು.

पराभव, पुं० ಸೋಲು.

परामर्श, पुं० ಆಲೋಚನೆ.

पराया, वि० ಹೆರರ; ಅನ್ಯರ.

परास्त, वि० ಸೋತ.

परिंद } पुं० ಹಕ್ಕಿ; ಪಕ್ಷಿ.
परिंदा }

परिकर, पुं० ಮಂಚ; ಪರಿವಾರ.

परिक्रमा, स्त्री० ಪ್ರದಕ್ಷಿಣೆ.

परिखन, वि० ಕಾವಲುಗಾರಿಕೆಯು.

परिखा, स्त्री० ಕಂದಕ.

परिगत, वि० ಕಳೆದುಹೋದ; ಅರಿತ.

परिग्रह, पुं० ಹಿಡಿದುಕೊಳ್ಳುವಿಕೆ; ಸ್ವೀಕಾರ.

परिघ, पुं० ಸುತ್ತಿಗೆ; ಸಿಡಿಲು; ಮನೆ; ಬೆಟ್ಟ.

परिचर, पुं० ಸೇವಕ.

परिचरण, पुं० } ಸೇವೆ.
परिचर्या, स्त्री० }

परिचायक, पुं० ಸೂಚಿಸುವವ; ತೋರಿಸುವವ.

परिचार, पुं० ಸೇವೆ.

परिचालन, पुं० ನಡೆಸುವುದು.

परिचित, वि० ಪರಿಚಯವುಳ್ಳ.

परिच्छद, पुं० ಹೊದೆಯುವ ವಸ್ತ್ರ.

परिच्छिन्न, वि० ಎಲ್ಲೆಗೊಳಪಟ್ಟ.

परिच्छेद, पुं० ಬಿರಿಕೆ; ಅಧ್ಯಾಯ.

परिछाहीं, स्त्री० ಪ್ರತಿಬಿಂಬ; ನೆರಳು.

परिजन, पुं० ಪರಿವಾರ; ಸೇವಕ.

परिज्ञान, पुं० ಪೂರ್ಣಜ್ಞಾನ.

परिणत, वि० ನಮ್ರ; ಬಗ್ಗಿದ; ಬದಲಾಯಿಸಲ್ಪಟ್ಟ.

परिणति, स्त्री० ಬದಲಾವಣೆ.

परिणय, पुं० ಮದುವೆ.

परित्याग, पुं० ಕೈಬಿಡುವಿಕೆ.

परित्राण, पुं० ಸಂರಕ್ಷಣೆ.

परिधान, पुं० ಉಡುಪು.

परिधि, स्त्री० ಸುತ್ತಳತೆ.

परिपाटी, स्त्री० ಸಂಪ್ರದಾಯ; ರೂಢಿ; ವಾಮೂಲು.

परिप्लुत, वि० ಸರ್ವವಿಧದಲ್ಲೂ ತುಂಬಿದ.

परिभव } पुं० ಅಪಮಾನ.
परिभाव }

परिभाषा, स्त्री० ಸ್ಪಷ್ಟವಾಗಿ ಹೇಳುವುದು; ಯಾವುದಾದರೊಂದು ವಸ್ತುವಿನ ಲಕ್ಷಣಗಳನ್ನು ಹೇಳುವುದು.

परिभूत, वि० ಸೋಲಿಸಲ್ಪಟ್ಟ.

परिमल, पुं० ಸುವಾಸನೆ.

परिमाण, पुं० ಅಳತೆ.

परिमार्जन, पुं० ಚೆನ್ನಾಗಿ ತೊಳೆಯುವಿಕೆ; ಪರಿಶೋಧನೆ.

परिमार्जित, वि० ತೊಳೆಯಲ್ಪಟ್ಟ; ಪರಿಷ್ಕೃತ.

परिमित, वि० ಸ್ವಲ್ಪ; ಎಲ್ಲೆಗೊಳಗಾದ.

परिमिति, स्त्री० ಅಳತೆ.

परिमेय, वि० ಅಳೆಯಬಹುದಾದ.

परिरंभ } पुं० ಆಲಿಂಗನೆ.
परिरंभण }

परिवर्तन, पुं० ಬದಲಾವಣೆ; ತಿರುಗುವಿಕೆ.

परिवा, स्त्री० ಪಾಡ್ಯಮಿ.

परिवार, पु० ಕುಟುಂಬ; ಕುಲ.

परिव्राज }
परिव्राजक } पु० ಸನ್ಯಾಸಿ.

परिशिष्ट, पु० ಪುರವಣಿ; ಅನುಬಂಧ.

परिश्रम, पु० ಪ್ರಯಾಸ; ಶ್ರಮ.

परिश्रमी, वि० ಶ್ರಮಪಡುವವ.

परिषद, स्त्री० ಸಭೆ; ಸಮೂಹ. पु० ಸದಸ್ಯ.

परिष्कार, पु० ಶುದ್ಧಿ; ಅಲಂಕಾರ.

परिस्तान, पु० ಅಪ್ಸರೆಯರಿರುವ ಸ್ಥಳ.

परिहास, पु० ಹಾಸ್ಯ; ವಿನೋದ; ಗೇಲಿ.

परिहार, पु० ನಿವಾರಣೆ; ಹುಲ್ಲು ಗಾವಲು.

परिहार्य, वि० ನಿವಾರಣೆಮಾಡಬಹುದಾದ.

परी, स्त्री० ಅಪ್ಸರೆ; ಚೆಲುವೆ.

परीक्षक, पु० ಪರೀಕ್ಷಿಸುವವ.

परीक्षा, स्त्री० ಪರೀಕ್ಷೆ; ಪರಿಶೀಲನೆ.

परीज़ाद, वि० ಬಹಳ ಸುಂದರವಾದ.

परीपैकर, वि० ಅಪ್ಸರೆಯಂತೆ ಸುಂದರವಾದ.

परीबन्द, पु० ಕಂಕಣ.

परुष, वि० ಕಠಿಣವಾದ; ಕೆಟ್ಟ; ನಿರ್ದಯ.

परे, क्रि० ಅತ್ತ; ಆಚೆ; ದೂರವಾಗಿ; ಮೇಲು.

परेई, स्त्री० ಪಾರಿವಾಳ.

परेखना, स० ನೋಡು; ಪರೀಕ್ಷಿಸು.

परेता, पु० ನೂಲುಸುತ್ತುವ ಕೋಲು.

परेवा, पु० ಪಾರಿವಾಳ; ಓಲೆಕಾರ.

परेशान, वि० ವಿಹ್ವಲ; ವ್ಯಗ್ರ; ಪೇಚಾಡುವ.

परेशानी, स्त्री० ಪೇಚಾಟ; ದಿಗಿಲು.

परोसना, स० ಬಡಿಸು.

परोसा, पु० ಎಲೆಯಲ್ಲಿ ಬಡಿಸಿದ ಊಟ; ಬಡಿಸಿದ ಊಟದೆಲೆ.

परौंठा, पु० ತುಪ್ಪ ಸವರಿ ಬೇಯಿಸಿದ ಗೋಧಿಯ ರೊಟ್ಟಿ.

परौहा, पु० ಕಪಿಲೆ ಬಾನೆ. (मोट)

पर्जन्य, पु० ಮೇಘ.

पर्ण, पु० ಎಲೆ; ಆಲದೆಲೆ.

पर्त, स्त्री० ಮಡತೆ; ಸುಕ್ಕು. (परत)

पर्दा, पु० दे० परदा.

पर्यंक, पु० ಮಂಚ.

पर्यंत, अ० ವರೆಗೆ; ತನಕ.

पर्यटन, पु० ಸಂಚಾರ; ಪ್ರಯಾಣ.

पर्यवसान, पु० ಕೊನೆ.

पर्याप्त, वि० ಸಾಕಾದ.

पर्याय, पु० ಒಂದೇ ಅರ್ಥವನ್ನು ಕೊಡುವ ಶಬ್ದ.

पर्यालोचना, स्त्री० ಪೂರ್ಣವಾದ ವಿಚಾರಣೆ.

पर्व, पु० ಪರ್ವಕಾಲ; ಪುಣ್ಯದಿನ.

पर्वरिश, स्त्री० ಪೋಷಣೆ; ಸಂರಕ್ಷಣೆ.

पर्हेज़, पु० दे० परहेज़.

पलँगिया, स्त्री० ಚಿಕ್ಕಮಂಚ.

पल, पु० ವಿಘಟಿಕೆ; ಕ್ಷಣ; ಗಳಿಗೆ.

पलक, स्त्री० ಕ್ಷಣ; ಎವೆ; ಕಣ್ಣು ರೆಪ್ಪೆ.

पलकदरिया } **पलकनेवाज़** } वि० ದಾನಿ; ಮಹಾ ದಾನಿ.

पलका, पु० ಮಂಚ.

पलटन, स्त्री० ಸೇನೆಯ ಒಂದು ಭಾಗ; ಪಡೆ.

पलटना, अ० ಮೊಗುಚಿ ಬೀಳು; ಹೊರಳು. **स०** ಮೊಗುಚು; ಬೋರಲಿಸು.

पलटा, पु० ಹೊರಳು; ಬದಲು; ಪ್ರತಿ ಫಲ; ಪಲ್ಲಟ.

पलटाना, स० ತಿರುಗಿಸು; ಮೊ ಗುಚು.

पलड़ा, पु० ತಕ್ಕಡಿಯ ತಟ್ಟೆ.

पलथी, स्त्री० ಚಕ್ಕಳ ಮುಕ್ಕಳಿ; **—मारकर बैठना** ಚಕ್ಕ ಮುಕ್ಕಳಿ ಹಾಕಿಕೊಂಡು ಕೂಡು; ಪದ್ಮಾ ಸನ.

पलना, अ० ಸಾಕಲ್ಪಡು; ಬೆಳೆ.

पलवाना, स० ಸಾಕು; ಸಲಹು.

पलस्तर, पु० ಗಾರೆ ಕೆಲಸ; ಗಚ್ಚು.

पलाना, अ० ಓಡು; ಪಲಾಯನ ಮಾಡು. **स०** ಓಡಿಸು.

पलायन, पु० ಓಡಿಹೋಗುವಿಕೆ.

पलास, पु० ಪಲಾಶ; ಡೇಗೆ; ಮುತ್ತುಗದಗಿಡ; ಗೋಣೀಪಟ್ಟೆ.

पलित, वि० ನರೆತುಹೋದ.

पली, स्त्री० ಚಮಚ; ಮಿಳ್ಳೆ.

पलीता, पु० ಹರಕುಬಟ್ಟೆ; ಚಿಂದಿ.

पलीद, वि० ಹೊಲಸು; ಹೇಯ.

पलुआ, पु० ಸಾಕು ಪ್ರಾಣಿ.

पलोटना, स० ಮೆತ್ತಗೆ ತುಳಿ; ಮೆಟ್ಟು. **अ०** ತಳಮಳಿಸು.

पल्ला, पु० ದೂರ; ಅಂಚು; ಸೆರಗು; ಮಡಿಕೆ; **—छुड़ाना** ಬೆನ್ನು ಹತ್ತಿದ ವನ ಕೈಯಿಂದ ಬಿಡಿಸಿಕೊಳ್ಳು. **हम पल्ला** ಸರಿಸಮಾನ. **पल्ले पड़ना** ಹೊಂದುವುದು, ದೊರೆಯು ವುದು; **—बांधना** ಜವಾಬ್ದಾರಿ ಹೊರಿಸುವುದು; **— पसारना** ಬೇಡುವುದು; **—झुकना या भारी होना** ಒಂದು ಪಕ್ಷದವರಿಗೆ ಶಕ್ತಿ ಹೆಚ್ಚಾಗುವುದು.

पल्लव, पु० ಚಿಗುರು; ತಳಿರು.

पल्ली, स्त्री० ಕುಗ್ರಾಮ; ಹಳ್ಳಿ.

पवनचक्की, स्त्री० ಗಾಳಿಯ ಬಲ ದಿಂದ ತಿರುಗುವಯಂತ್ರ.

पवाड़ा, पु० ವೃತ್ತಾಂತ; ಕಥೆ; ಕಗ್ಗ.

पवाना, स० ತಿನ್ನಿಸು.

पवि, पु० ಮಿಂಚು.

पशम, पु० ಒಂದು ಬಗೆಯ ನಯ ವಾದ ಉಣ್ಣೆ; ತುಪ್ಪಟ.

पशमीना, पु० ನಯವಾದ ಉಣ್ಣೆ ಯಿಂದಮಾಡಿದ ಬಟ್ಟೆ.

पशुता, स्त्री० ಮೃಗದ ಸ್ವಭಾವ.

पश्चात्, अव्य० ತರುವಾಯ.

पश्ता, पु० ದಡ (**किनारा**)

पश्म, पु० **दे० पशम.**

पसंद, वि० ಇಷ್ಟವಾದ; ಒಪ್ಪುವ.

पसंदीदा, वि० ಇಷ್ಟದ; ಮೆಚ್ಚಿಗೆಯ.

पस, क्रि० ಆದುದರಿಂದ; ಬಳಿಕ.

पसर, पु० ಬೊಗಸೆ; ವಿಸ್ತಾರ.

पसरना, अ० ಹರಡು; ಕಾಲುಚಾಚಿಕೊಳ್ಳು.

पसरहट्टा, पु० ಕಿರಾಣಿ ಅಂಗಡಿಗಳ ಬೀದಿ.

पसली, स्त्री० ಪಕ್ಕೆಲುಬು.

पसाना, स० ಗಂಜಿ ಬಸಿಯುವುದು. अ० ಸಂತೋಷಪಡುವುದು.

पसारना, स० ಹರಡು.

पसाव, पु० ಗಂಜಿ.

पसीजना, अ० ಬೆವರು; ಕರಗು; ದ್ರವಿಸು.

पसीना, पु० ಬೆವರು.

पसेरी, स्त्री० दे० **पंसेरी.**

पसेव, पु० ರಸ; ಕಟ್ಟು.

पसोपेश, पु० ಹಿಂದುಮುಂದೆ ನೋಡುವಿಕೆ; ಮೀನಮೇಷ.

पस्त, वि० ಸೋತ; ದಣಿದ.

पस्त-हिम्मत, वि० ಎದೆಗುಂದಿದ; ಧೈರ್ಯಗುಂದಿದ.

पस्ती, स्त्री० ತಗ್ಗು; ಕುಂದು; ಅಭಾವ.

पहंसुल, स्त्री० ಈಳಿಗೆ ಮಣೆ.

पहचान, स्त्री० ಗುರುತು; ಪರಿಚಯ.

पहचानना, स० ಗುರುತಿಸು.

पहनना, स० ಉಡು; ತೊಡು; ಧರಿಸು.

पहनवाना, स० **पहनाना** ದ ಪ್ರೇರಣಾರ್ಥಕರೂಪ.

पहनाई, स्त्री० ಉಡುವಿಕೆ.

पहनाना, स० ಉಡಿಸು; ತೊಡಿಸು.

पहनावा, पु० ಉಡಿಗೆ; ತೊಡಿಗೆ; ಉಡುಪು.

पहर, पु० ಜಾವ; ಮೂರು ಗಂಟೆಗಳ ಕಾಲ.

पहरा, पु० ಕಾವಲು; ಪಹರೆ; ಸೆರೆ.

पहराना, स० दे० **पहनाना.**

पहरावनी, स्त्री० ಬಟ್ಟೆ ಉಡಿಸುವಳು; ಉಡುಗೊರೆ.

पहरी, पु० ಪಹರೆಯವ; ಕಾವಲುಗಾರ.

पहल, पु० ಮಗ್ಗಲು; ಪಾರ್ಶ್ವ; ಪ್ರಾರಂಭ.

पहलवान, पु० ಮಲ್ಲ; ಜಟ್ಟಿ.

पहलवानी, स्त्री० ಮಲ್ಲವಿದ್ಯೆ.

पहला, वि० ಮೊದಲನೆಯ; ಒಂದನೆಯ.

पहलू, पु० ಮಗ್ಗಲು; ಪಾರ್ಶ್ವ; ಮುಖ; ರಹಸ್ಯ.

पहलूदार, वि० ಪಾರ್ಶ್ವಗಳಿರುವ.

पहले, अव्य० ಮೊದಲು; ಮುನ್ನ; ಪೂರ್ವದಲ್ಲಿ;—**पहल** ಮೊಟ್ಟಮೊದಲು.

पहलौटा, वि० ಮೊದಲು ಹುಟ್ಟಿದ (ಮಗ); ಜ್ಯೇಷ್ಠಪುತ್ರ.

पहलौटी, स्त्री० ಪ್ರಥಮ ಗರ್ಭ; ಚೊಚ್ಚಲ ಬಸರು.

पहाड़, पु० ಬೆಟ್ಟ ; ಪರ್ವತ.

पहाड़ा, पु० ಮಗ್ಗಿಯಕೋಷ್ಟಕ.

पहाड़ी, वि० ಬೆಟ್ಟಗುಡ್ಡದ; ಬೆಟ್ಟಗುಡ್ಡಗಳುಳ್ಳ; ಮಲೆನಾಡಿನ.

पहिचान, स्त्री० दे० **पहचान.**

पहिया, पु० ಗಾಲಿ ; ಚಕ್ರ.

पहिला, वि० ಮೊದಲನೆಯ.

पहुँच, स्त्री० ಮುಟ್ಟುವಿಕೆ ; ಪ್ರವೇಶ ; ನಿಲುಕು; ಎಟಕು; ಗ್ರಹಣಶಕ್ತಿ.

पहुँचना, अ० ತಲಪು ; ಮುಟ್ಟು ; ಸೇರು ; ಎಟಕು.

पहुँचा, पु० ಮಣಿಕಟ್ಟು.

पहुँचाना, स० ಮುಟ್ಟಿಸು ; ತಲಪಿಸು.

पहुँची, स्त्री० ಮಣಿಕಟ್ಟಿನಲ್ಲಿ ಧರಿಸುವ ಒಂದು ಆಭರಣ.

पहुड़ना, अ० ಮಲಗು; ವಿಶ್ರಮಿಸು; ಪವಳಿಸು.

पहुना, पु० ಅತಿಥಿ.

पहुनाई, स्त्री० ಆತಿಥ್ಯ ; ಅತಿಥಿ ಸತ್ಕಾರ.

पहेली, स्त्री० ಸಮಸ್ಯೆ ; ಒಗಟು.

पांक / **पांका** } पु० ಕೆಸರು.

पांख, पु० ರೆಕ್ಕೆ ; ಪುಕ್ಕ.

पांखी, स्त्री० ದೀಪದ ಹುಳು.

पांखुरा, स्त्री० ಹೂವಿನ ರೇಕು ; ಎಸಳು.

पांग, पु० (निहल) ನದಿಯು ಹಿಮ್ಮೆಟ್ಟಿದುದರಿಂದ ಆದ ಭೂಮಿ.

पांजना, स० ಬೆಸಗೆ ಹಾಕು.

पांजर, पु० ಪಕ್ಕೆಲುಬು.

पांडित्य, पु० ವಿದ್ವತ್ತು.

पांडु, पु० ಬಿಳಿಯಬಣ್ಣ; ತೊನ್ನು.

पांडुलिपि, स्त्री० ಗ್ರಂಥದ ಹಸ್ತಲಿಖಿತ ಪ್ರತಿ.

पांड़े, पु० ಪಂಡಿತ; ಉಪಾಧ್ಯಾಯ.

पांत, स्त्री० ಪಂಕ್ತಿ ; ವರಸೆ.

पांति, स्त्री० ಪಂಕ್ತಿ; ಸಾಲು; ಕೂಟ; ಸಮುದಾಯ.

पांथ, वि० ಯಾತ್ರೆಯಲ್ಲಿರುವ. पु० ದಾರಿಗ.

पांय, पु० ಪಾದ ; ಅಡಿ.

पांयता, पु० ಮಂಚದ ಕಾಲುಕಡೆ.

पांव, पु० ಪಾದ ; ಕಾಲು ; ಅಡಿ ; ಪಾಯ.

पांवड़ा, पु० ನಡೆಮಡಿ ; ದೊಡ್ಡವರು ನಡೆಯುವಾಗ ದಾರಿಯಲ್ಲಿ ಹಾಸುವ ವಸ್ತ್ರ ; ಪಾವಡೆ.

पावदान, पु० ಗಾಡಿ ಹತ್ತುವಾಗ ಕಾಲಿಡಲು ಇರಿಸಿರುವ ಕಬ್ಬಿಣದ ತಗಡು.

पांवरी, स्त्री० ನಿಚ್ಚಣಿಗೆ; ಮೆಟ್ಟಲು; ಸೋಪಾನ.

पांसा, पु० ದಾಳ; ಕವಡೆ;—**उलटना** ಗತಿಬದಲಾಗುವುದು.

पा, पु० ಪಾದ ; ಕಾಲು ; ಅಡಿ.

पाई, स्त्री० ಪಾದ ; ಕಾಲು ; ಕಾಸು. ಪೂರ್ಣ ವಿರಾಮ ಚಿನ್ಹೆ.

पाक, पु० ಪಾಕ ; ಅಡಿಗೆ. वि० ಪವಿತ್ರ ; ಪುನೀತ.

पाक-दामन, वि० ಪತಿವ್ರತೆ; ಸತಿ.
पाक-दामिनी, स्त्री० ಪಾತಿವ್ರತ್ಯ.
पाक-बाज़, वि० ಒಳ್ಳೆಯ ನಡತೆಯುಳ್ಳ.
पाकर, पु० ಬಸರಿ ಮರ.
पाकी, स्त्री० ಪವಿತ್ರತೆ; ಶುದ್ಧತೆ.
पाकीज़गी, स्त्री० ನೈರ್ಮಲ್ಯ; ಸ್ವಚ್ಛತೆ
पाकीज़ा, वि० ಶುದ್ಧವಾದ.
पाखंड, पु० ಬೂಟಾಟಿಕೆ.
पाखंडी, वि० ವೇಷಧಾರಿ.
पाख, पु० ಪಕ್ಷ.
पाखा, पु० ಮೂಲೆ; ಕೊನೆ.
पाख़ाना, पु० ಕಕ್ಕಸು; ಪಾಯಖಾನೆ; ಮಲ.
पाग, स्त्री० ಪೇಟಾ; ರುಮಾಲು. पु० ಸಕ್ಕರೆ ಪಾಕ.
पागना, स० ಪಾಕದಲ್ಲಿ ಹಾಕು. अ० ಅನುರಕ್ತನಾಗು.
पागल, वि० ಹುಚ್ಚ.
पागलखाना, पु० ಹುಚ್ಚಾಸ್ಪತ್ರೆ; ಹುಚ್ಚರನ್ನು ಇಡುವ ಸ್ಥಳ.
पागलपन, पु० ಹುಚ್ಚುತನ; ಹುಚ್ಚು.
पागा, पु० ರಾವುತರ ಪಡೆ.
पागुर, पु० ಮೆಲುಕು ಹಾಕುವಿಕೆ; ಮೆಲುಕು.
पागुरना, स० ಮೆಲಕು ಹಾಕು; ಮೆಲ್ಲು.
पाचक, वि० ಜೀರ್ಣಕಾರಿ; ಜೀರ್ಣ ಮಾಡುವ; ಅಡಿಗೆಯವ.
पाचक़, पु० ಬೆರಣಿ.
पाचन, पु० ಜೀರ್ಣಿಸುವಿಕೆ; ಅಡಿಗೆ ಮಾಡುವಿಕೆ.
पाछ, स्त्री० ತೊಗಟೆ ಅಥವಾ ಚರ್ಮವನ್ನು ಸ್ವಲ್ಪ ಸೀಳುವಿಕೆ; ಮರಗಿಡಗಳ ಹಾಲು ಅಥವಾ ಸೊನೆ ಸುರಿಸುವಿಕೆ.
पाछना, स० ಅಮ್ಮೆ ಹಾಕು.
पाजामा, पु० ಇಜಾರು; ಚಲ್ಲಣ.
पाजी, वि० ದುಷ್ಟ; ಪುಂಡ; ನೀಚ.
पाजीपन, पु० ದುಷ್ಟತನ; ನೀಚತನ.
पाज़ेब, स्त्री० ಅಂದುಗೆ.
पाट, पु० ರೇಷ್ಮೆ; ನಾರುಮಡಿ; ಗದ್ದುಗೆ; ಮಣೆ; ಹಾಸುಗಲ್ಲು.
पाटना, स० ಹೂಳು; ಮುಚ್ಚು.
पाटल, पु० ಗುಲಾಬಿ ಬಣ್ಣ.
पाटव, पु० ದಕ್ಷತೆ; ಕುಶಲತೆ.
पाटी, स्त्री० ವಾಡಿಕೆ; ನಿಯಮ. पु० ಕಪ್ಪು ಹಲಗೆ; ಮಂಚದ ಪಟ್ಟಿ.
पाठ, पु० ಪಠನ; ಪಾಠ.
पाठक, पु० ಓದುವವ.
पाठशाला, स्त्री० ವಿದ್ಯಾಲಯ.
पाठा, वि० ಕೊಬ್ಬಿದ; ಬಲಿತ.
पाठ्य, वि० ಓದಬೇಕಾದ.
पाड़, पु० ಧೋತ್ರದ ಅಂಚು; ಮಂಚಿಗೆ; ಅಟ್ಟ.
पाढ़, पु० ಪೀಠ; ಮಣೆ; ಮಂಚಿಗೆ.
पाढ़ी, स्त्री० ನೂಲಿನ ಚಿಟ್ಟಾ.
पात, पु० ಬೀಳುವಿಕೆ; ಅಳಿವು; ಎಲೆ.
पातर, स्त्री० ಊಟದೆಲೆ.

पातावा, पुं० ಕಾಲು ಚೀಲ; ಮೇಜೋಡು.

पाती, स्त्री० ಎಲೆ; ಕಾಗದ; ಚೀಟು.

पातुर, स्त्री० ವೇಶ್ಯೆ.

पाथना, स० ಕೆತ್ತು; ತಟ್ಟು.

पाथेय, पुं० ದಾರಿ ಖರ್ಚು.

पाद, पुं० ಪಾದ; ಚರಣ; ಹೂಸು.

पादना, अ० ಹೂಸು; ಹೂಸು ಬಿಡು.

पादप, पुं० ಮರ.

पादशाह, पुं० दे० बादशाह.

पाधा, पुं० ಉಪಾಧ್ಯಾಯ.

पान, पुं० ಕುಡಿತ; ವೀಳ್ಯದೆಲೆ; ಇಸ್ಪೀಟು; ಬಟ್ಟದ ಕೆಲಸ.

पानदान, पुं० ವೀಳೆದೆಲೆ ಪೆಟ್ಟಿಗೆ.

पाना, स० ಹೊಂದು; ಗಳಿಸು.

पानिप, पुं० ಕಾಂತಿ; ಹೊಳಪು.

पानी, पुं० ನೀರು;—दार ಕಾಂತಿಯುಳ್ಳ; ಗೌರವಸ್ಥ;—पानी होना ನಾಚಿಗೆಗೊಳ್ಳುವುದು; — फेरना-ಸರ್ವನಾಶಮಾಡುವುದು; — में आग लगाना ಅಸಂಭವವಾದುದನ್ನು ಸಂಭವಿಸುವಂತೆ ಮಾಡುವುದು;—उतरना ಅಂಡಕೋಶ ವೃದ್ಧಿಯಾಗುವುದು;—उतारना या लेना ಅವಮಾನಪಡಿಸುವುದು; —देवा ವಂಶದಲ್ಲಿ ಹುಟ್ಟಿದ.

पानीय, पुं० ನೀರು; ಕುಡಿಯ ಬಹುದಾದ ಪದಾರ್ಥ.

पापड़, पुं० ಹಪ್ಪಳ.

पापोश, पुं० ಪಾಪಾಸು; ಪಾದರಕ್ಷೆ ಕೆರ.

पाबंद, वि० ನಿಯಮಾದಿ ಬಂಧನಗಳಿಗೆ ಒಳಪಟ್ಟ; ಕಟ್ಟಲ್ಪಟ್ಟ.

पाबंदी, स्त्री० ಕಟ್ಟು; ಕಟ್ಟಳೆ; ನಿಯಮಾನುಸರಣೆ.

पाबोस, वि० ಪಾದಗಳನ್ನು ಕಣ್ಣಿಗೊತ್ತುವುದು.

पामर, वि० ಅಧಮ; ಪಾಪಿ.

पामाल, वि० ಪದದಳಿತವಾದ; ನಷ್ಟಭ್ರಷ್ಟವಾದ.

पामाली, स्त्री० ಸರ್ವನಾಶ; ಧ್ವಂಸ.

पायँता, पुं० ಮಂಚದ ಕಾಲುಕಡೆ.

पायंदाज़, पुं० ಕಾಲೊರಸಿಕೊಳ್ಳುವ ಹಾಸುಪಟ್ಟಿ.

पायक, पुं० ಕಾಲಾಳು; ಪದಾತಿ.

पायख़ाना, पुं० दे० पाख़ाना.

पायजामा, पुं० दे० पाजामा.

पायज़ेब, पुं० ಕಾಲಂದುಗೆ.

पायतख़्त, पुं० ರಾಜಧಾನಿ.

पायताबा, पुं० ಕಾಲುಚೀಲ; ಮೇಜೋಡು.

पायदार, वि० ಬಾಳಿಕೆಬರುವ; ತಾಳಿಕೆಯ.

पायपोश, स्त्री० दे० पापोश.

पायमाल, वि० दे० पामाल.

पायमाली, स्त्री० दे० पामाली.

पायल, पुं० ನೂಪುರ; ಕಾಲಂದುಗೆ; ಏಣಿ.

पाया, पुं० ಸ್ತಂಭ; ಆಧಾರ; ಕಂಬ.

पारंगत, वि० ಪಾಂಡಿತ್ಯವುಳ್ಳ; ದಾಟಿ ರುವ.

पार, पु० ಆಚೆಯದಡ; ಎರಡನೆಯ ಪಕ್ಕ; ಕೊನೆ; ಕಡೆ. **आरपार** ಆದಿ ಅಂತಗಳು ;—**उतरना** ಸಫಲತೆ ಹೊಂದುವುದು ;—**पाना** ಜಯ ಹೊಂದುವುದು.

पारखी, पु० ಪರೀಕ್ಷಕ.

पारचा, पु० ಚೂರು ; ತುಣುಕು.

पारद, पु० ಪಾದರಸ.

पारदर्शक, वि० ಆಚೆ ಕಡೆಯ ಅಥವಾ ಆ ಪಕ್ಕದ ವಸ್ತುವು ಕಾಣಿಸತಕ್ಕ.

पारदर्शी, वि० ದೂರದರ್ಶಿ ; ಚತುರ.

पारना, स० ಹಾಕು; ಬೀಳಿಸು ; ಮಲಗಿಸು.

पारलौकिक, वि० ಪರಲೋಕ ಸಂಬಂಧವಾದ.

पारस, पु० ಸ್ಪರ್ಶಮಣಿ; ಪರ್ಷಿಯಾ ದೇಶ.

पारसा, वि० ಸದಾಚಾರಿ.

पारसाई, स्त्री० ಧರ್ಮನಿಷ್ಠೆ; ಸದಾಚಾರ.

पारस्परिक, वि० ಪರಸ್ಪರದ.

पारा, पु० ಪಾದರಸ.

पारावत, पु० ಪಾರಿವಾಳ; ಕಪೋತ.

पारावार, पु० ಎಲ್ಲೆ; ಸಮುದ್ರ.

पारि, स्त्री० ಎಲ್ಲೆ ; ಪಕ್ಕ ; ದಂಡೆ.

पारितोषिक, पु० ಬಹುಮಾನ; ಇನಾಮು.

पारिभाषिक, वि० ಅರ್ಥ . ವಿಶೇಷವನ್ನು ಕೊಡತಕ್ಕ ; ಸಾಂಕೇತಿಕ.

पारिषद, पु० ಸದಸ್ಯ ; ಸಭಾಸದ.

पारी, स्त्री० ತಡವೆ ; ಸಲ ; ಬಾರಿ.

पार्थिव, वि० ಪೃಥ್ವಿಗೆ ಸಂಬಂಧಿಸಿದ.

पार्श्व, पु० ಪಕ್ಕ ; ಬದಿ.

पाल, पु० ಹಣ್ಣುಮಾಡಲು ಕಾವಿಗೆ ಹಾಕುವುದು ; ಕಟ್ಟೆ ; ಪಾಲಕ ; ಹಡಗು ಅಥವಾ ದೋಣಿಗೆ ಕಟ್ಟುವ ಗೋಣಿತಟ್ಟು.

पालक, पु० ಬಚ್ಚಲೆ ಸೊಪ್ಪು.

पालकी, स्त्री० ಪಲ್ಲಕ್ಕಿ.

पालतू, वि० ಸಾಕಿ ಬೆಳೆಸಿದ; ಸಾಕು.

पालथी, स्त्री० ಪದ್ಮಾಸನ ಹಾಕಿ ಕೂಡುವುದು.

पालना, स० ಸಾಕು ; ಸಲಹು ; ಸಂರಕ್ಷಿಸು. पु० ತೊಟ್ಟಿಲು.

पाला, पु० ಇಬ್ಬನಿ; ಮಂಜು;—**पड़ना** ಮಂಜು ಬೀಳುವುದು. **पाले पड़ना** ವಶವಾಗುವುದು — **मार जाना** ಮಂಜುಬಿದ್ದು ನಷ್ಟವಾಗುವುದು.

पालागन, स्त्री० ಪ್ರಣಾಮ; ನಮಸ್ಕಾರ; ಕಾಲಿಗೆರುಗುವಿಕೆ.

पालित, वि० ಸಾಕಲ್ಪಟ್ಟ.

पाली, वि० ರಕ್ಷಿಸುವವನು. स्त्री० ಒಂದು ಪ್ರಾಚೀನ ಭಾಷೆ.

पाँव, पु० ಕಾಲು ; ಕಾಲುಭಾಗ ; —**अड़ाना** ಬೇರೊಬ್ಬರ ಕೆಲಸದಲ್ಲಿ ಅನಾವಶ್ಯಕವಾಗಿ ಕೈ ಹಾಕುವುದು;—**उखड़ना** ಸೋತು ಹೋಗುವುದು ;—**फूँक फूँक कर रखना** ಎಚ್ಚರಿಕೆಯಿಂದ ಕೆಲಸಮಾಡು

ವುದು ;—भारी होना ಗರ್ಭಿಣಿ ಯಾಗುವುದು ;—रोपना ಶಪಥ ಮಾಡುವುದು.

पाँवड़ा, पु० ನಡೆಮಡಿಯ ಬಟ್ಟೆ; ಪಾವಡೆ.

पाव, पु० ಕಾಲುಭಾಗ ; ಪಾವು

पावक, पु० ಅಗ್ನಿ ; ಬೆಂಕಿ.

पावदान, पु० ಕಾಲಿಡುವಸ್ಥಳ ಅಥವಾ ಮಣೆ.

पावन, वि० ಶುದ್ಧ; ಪವಿತ್ರ.

पावना, स० ಹೊಂದು ; ಪಡೆ. पु० ಪಡೆಯಬೇಕಾದ ಹಣ ; ಬರ ತಕ್ಕ ಹಣ.

पावली, स्त्री० ಕಾಲು ರೂಪಾಯಿ ನಾಣ್ಯ ; ಪಾವಲಿ.

पावस, स्त्री० ಮಳೆಗಾಲ.

पाश, पु० ಬಲೆ; ಹಗ್ಗ.

पाशा, पु० ತುರ್ಕೀದೇಶದ ಸರದಾರನ ಬಿರುದು.

पाश्चात्य, वि० ಪಶ್ಚಿಮ ದಿಕ್ಕಿನ.

पाषाण, पु० ಕಲ್ಲು ; ಶಿಲೆ.

पासंग, पु० ಪೇರು ಕಟ್ಟುವಿಕೆ ; ದಡೆ ಕಟ್ಟುವಿಕೆ.

पास, पु० ಪಕ್ಕ; ಸಮೀಪ. क्रि० ಬಳಿ; ಹತ್ತಿರ. आस—ನೆರೆಹೊರೆ; ಅಕ್ಕಪಕ್ಕ.

पासबाँ } **पासबान** } पु० ಕಾವಲುಗಾರ ; ರಕ್ಷಕ.

पासा, पु० ಪಗಡೆಯ ದಾಳ.

पासी, स्त्री० ಹಗ್ಗ; ಪಾಶ; ಉರುಲು.

पाहन, पु० ಕಲ್ಲು ; ಪಾಷಾಣ.

पाहरू, पु० ಕಾವಲುಗಾರ; ಪಹರೆಯವನು.

पाहुना, पु०

पाहुर, पु० ಕಾಣಿಕೆ; ನಜರು.

पिंग, वि० ಹಳದಿ ; ಬೂದು.

पिंगल, वि० ಹಳದಿ. पु० ಛಂದಶ್ಶಾಸ್ತ್ರ.

पिंजड़ा, पु० दे० पिंजरा.

पिंजर, पु० ಗೂಡು; ಎಲುಬಿನ ಗೂಡು.

पिंजरा, पु० ಪಂಜರ.

पिंजरापोल, पु० ದೊಡ್ಡಿ.

पिंड, पु० ಉಂಡೆ; ಮು ; ರಾಶಿ; ಪಿಂಡ; ಆಹಾರ; ಶರೀರ; —छुड़ाना ತಪ್ಪಿಸಿಕೊಳ್ಳುವುದು.

पिंडज, पु० ಗರ್ಭದಲ್ಲಿ ಮರಿಯಾಗಿ ಹುಟ್ಟುವ ಪ್ರಾಣಿ.

पिंडरी } **पिंड़ली** } स्त्री० ಹಿಮ್ಮಡಿ.

पिंडी, स्त्री० ಉಂಡೆ; ತೆರಳೆ; ಬಲಿ ಪೀಠ.

पिक, पु० ಕೋಗಿಲೆ.

पिघलना, अ० ಕರಗು ; ನೀರಾಗು.

पिघलाना, स० ಕರಗಿಸು.

पिचकना, अ० ಅದಮು; ಕುಸಿ.

पिचकारी, स्त्री० ಜೀಕೊಳವಿ.

पिच्छल, पु० ಗೋಂದು.

पिछड़ना, अ० ಹಿಂದೆ ಬೀಳು; ಹಿಂದುಳಿ.

पिछलगा, पुं० ಅನುಯಾಯಿ; ಹಿಂಬಾಲಕ.

पिछला, वि० ಹಿಂದಿನ; ಕಳೆದ; ಗತ.

पिछवाड़ा, पुं० ಹಿತ್ತಲು.

पिछाड़ी, स्त्री० ಹಿಂಭಾಗ; ಹಿಂಬದಿ.

पिछौरा, पुं० ದುಪ್ಪಟಿ.

पिटंत, स्त्री० ಹೊಡೆತ.

पिटना, अ० ಬಡಿಯಲ್ಪಡು; ಹೊಡೆಯಲ್ಪಡು.

पिटवाना स० ಹೊಡೆಯಿಸು; ಬಾರಿಸು.

पिटाई, स्त्री० ಹೊಡೆತ; ಹೊಡೆದಾಟ.

पिटारा, पुं० ದೊಡ್ಡ ಬುಟ್ಟಿ; ಹೆಡಿಗೆ.

पिटारी, स्त्री० ಚಿಕ್ಕ ಬುಟ್ಟಿ.

पिट्ठू, पुं० ಹಿಂಬಾಲಿಸುವವ; ಅನುಯಾಯಿ; ಸಹಾಯಕ.

पितर, पुं० ತಂದೆ.

पित्ती, स्त्री० ಬೆವರು ಗುಳ್ಳೆ.

पिद्र पुं० ಗತಿಸಿದ ಪೂರ್ವಜರು; ಪಿತೃಗಳು.

पिद्दी, स्त्री० ಒಂದು ಜಾತಿಯ ಚಿಕ್ಕ ಪಕ್ಷಿ.

पिधान पुं० ಹೊದಿಕೆ.

पिनकना, अ० ತೂಕಡಿಸು.

पिनपिनाना, अ० ಮೂಗಿನಿಂದ ಅಳು; ಗೊಣಗು.

पिनहां, वि० ಬಚ್ಚಿಟ್ಟ; ಗುಪ್ತ.

पिपासा, स्त्री० ದಾಹ; ಆಸೆ.

पिपीलिका, स्त्री० ಇರುವೆ.

पिय, पुं० ಪ್ರಿಯ; ಪತಿ.

पियक्कड़, पुं० ಕುಡುಕ.

पियराई, स्त्री० ಹಳದಿ ಬಣ್ಣ.

पियराना, अ० ಹಳದಿ ಬಣ್ಣವಾಗು; ವಿವರ್ಣವಾಗು.

पियूष, पुं० ಅಮೃತ.

पिराना, अ० ನೋಯು: ನೋವಾಗು.

पिरोना, स० ಪೋಣಿಸು; ಸೂಜಿಗೆ ದಾರ ಹಾಕು.

पिलना / **पिल पड़ना** अ० ತಲ್ಲೀನತೆಯಿಂದ ಸಾಧಿಸು.

पिलचना, अ० ಅಂಟಿಕೊಳ್ಳು; ತಲ್ಲೀನವಾಗು.

पिलाना, स० ಕುಡಿಸು.

पिल्लू, पुं० ಕೊಳೆತ ಹಣ್ಣು ಅಥವಾ ಹುಣ್ಣಿನಲ್ಲಿರುವಹುಳ.

पिष्ट वि० ಬೀಸಿದ. पुं० ಹಿಟ್ಟು; —पेषण ಹೇಳಿದ್ದನ್ನೇ ಹೇಳುತ್ತಿರುವುದು.

पिसनहारी, स्त्री० ಬೀಸುವವಳು.

पिसना, अ० ಪುಡಿಯಾಗು; ಹಿಟ್ಟಾಗು.

पिसवाना, स० ಬೀಸಿಸು.

पिसाई, स्त्री० ಹಿಟ್ಟು ಬೀಸುವಿಕೆ; ಬೀಸಿದ ಮಜೂರಿ.

पिसाच, पुं० ಪಿಶಾಚ; ಭೂತ.

पिसान, पुं० ಬೀಸಿದ್ದು; ಹಿಟ್ಟು.

पिस्ता, पुं० ಒಂದು ಹಣ್ಣಿನ ಬೀಜ.

पिस्तौल, स्त्री० ಕೈಕೋವಿ; ಚಿಕ್ಕ ಬಂದೂಕು.

पिहकना, अ० ಚಿಲಿಪಿಲಿಗುಟ್ಟು.

पिहित, वि० ಬಚ್ಚಿಟ್ಟಿರುವ.

पींजना, स० ಹಿಂಜು.

पी, पु० ಪ್ರಿಯ.

पीक, स्त्री० ವೀಳೇದೆಲೆ ಉಗುಳು.

पीकदान, पु० ವೀಳೇದೆಲೆಯನ್ನು ಅಗೆದು ಉಗುಳುವ ಪಾತ್ರೆ; ಪೀಕದಾನಿ.

पीका, पु० ಚಿಗುರು; ತಳಿರು.

पीछा, पु० ಹಿಂಭಾಗ; ಹಿಂಬಾಲಿಸುವಿಕೆ;—करना ಹಿಂಬಾಲಿಸು, ಬೆನ್ನು ಹತ್ತು.

पीछे, अव्य० ಹಿಂದೆ; ಹಿಂದುಗಡೆ; ಅನಂತರ.

पीटना, स० ಹೊಡೆ; ಬಡಿ.

पीठ, पु० ಪೀಠ. स्त्री० ಬೆನ್ನು.

पीठा, पु० ಕಜ್ಜಾಯ.

पीठी, स्त्री० ಬೇಳೆಯನ್ನು ನೆನೆಹಾಕಿ ತಿರುವಿದ ಹಿಟ್ಟು.

पीड़क, पु० ಪೀಡಿಸುವವನು.

पीड़न, पु० ಕಾಟ; ತೊಂದರೆ.

पीड़ा, स्त्री० ನೋವು; ಬಾಧೆ; ಕಾಟ.

पीढ़ा, पु० ಮಣೆ; ಪೀಠ.

पीढ़ी, स्त्री० ಪೀಳಿಗೆ; ವಂಶಪರಂಪರೆ; ತಲೆಮಾರು; ಚಿಕ್ಕಮಣೆ.

पीत, वि० ಹಳದಿ.

पीतम, पु० ಇನಿಯ; ಪ್ರಿಯತಮ.

पीन, वि० ದಪ್ಪನಾದ.

पीनक, स्त्री० ಅಮಲುಹತ್ತಿ ತಲೆ ತಿರುಗುವುದು.

पीनता, स्त्री० ದಪ್ಪ.

पीनस, पु० ಮೂಗಿನ ಒಂದುರೋಗ. स्त्री० ಪಲ್ಲಕ್ಕಿ.

पीना, स० ಕುಡಿ.

पीप, स्त्री० ಕೀವು. (**पीब**)

पीपर } **पीपल** } पु० ಅಶ್ವತ್ಥದ ಮರ.

पीपा, पु० ಪೀಪಾಯಿ.

पीयूष, पु० ಅಮೃತ.

पीर, स्त्री० ನೋವು; ವೇದನೆ; ಅನುತಾಪ पु० ಹಿರಿಯರು; ದೊಡ್ಡವರು; ಮಹಾತ್ಮ.

पीरी, स्त्री० ವೃದ್ಧಾಪ್ಯ; ಮುದಿತನ.

पील, पु० ಆನೆ.

पीलपांव, पु० ಆನೆಗಾಲು ಕಾಯಿಲೆ.

पीला, वि० ಹಳದಿ.

पीलापन, पु० ಹಳದಿ ಬಣ್ಣ; ವಿವರ್ಣತೆ.

पीलिया, पु० ಅರಿಸಿನ ಕಾಮಾಲೆ.

पीव, पु० ಪ್ರಿಯ; ಇನಿಯ.

पीवर, वि० ಭಾರಿ; ದೊಡ್ಡ.

पीसना, स० ಬೀಸು; ಅರೆ; ಪುಡಿ ಮಾಡು.

पीहर, पु० ತವರು ಮನೆ.

पुआ, पु० ಕಜ್ಜಾಯ.

पुआल, पु० ಜೋಳದ ಕಡ್ಡಿ. (**पयाल**)

पुकार, स्त्री० ಕೂಗು; ಕರೆ; ದೂರು.

पुकारना, स० ಕೂಗು; ಕರೆ.

पुखर, पु० ಕೆರೆ; ಕೊಳ.

पुखराज, पु० ಪುಷ್ಯರಾಗ.

पुख़्ता, वि० ದೃಢವಾದ; ನಿಶ್ಚಯವಾದ.

पुचकार, स्त्री० ತುಟಿ ಚಪ್ಪರಿಸುವಿಕೆ; ಮುದ್ದಾಟ.

पुचकारना, स० ಮುದ್ದಾಡು.

पुचकारी, स्त्री० दे० पुचकार.

पुचारा, पु० ಬಳಿಯುವಿಕೆ; ಒದ್ದೆ ಬಟ್ಟೆಯಿಂದ ಸ್ವಚ್ಛಮಾಡುವಿಕೆ.

पुच्छ, स्त्री० ಬಾಲ.

पुच्छल, वि० ಬಾಲವಿರುವ.

पुछल्ला, पु० ದೊಡ್ಡಬಾಲ; ಹಿಂಬಾಲಿಸುವವ.

पुछार, पु० ಹಿತೈಷಿ; ಗೌರವಿಸುವವ.

पुजना, अ० ಪೂಜಿಸಲ್ಪಡು; ಸನ್ಮಾನಿಸಲ್ಪಡು.

पुजवाना, स० ಪೂಜೆ ಮಾಡಿಸು.

पुजापा, पु० ಪೂಜೆಯ ಸಾಮಗ್ರಿ.

पुजारी, पु० ಪೂಜಾರಿ; ಅರ್ಚಕ.

पुट, पु० ಚಿಮುಕಿಸುವುದು; ಮೆರುಗು.

पुटपाक, पु० ಔಷಧವನ್ನು ಪುಟ ಹಾಕುವುದು.

पुट्ठा, पु० ಪಿರ್ರೆ; ಪುಸ್ತಕದ ಹಿಂದುಗಡೆಯ ರಟ್ಟು.

पुड़िया, स्त्री० ಪೊಟ್ಟಣ.

पुतला, पु० } ಬೊಂಬೆ; ಗೊಂಬೆ;
पुतली, स्त्री० } ಕಣ್ಣುಪಾಪೆ.

पुतलीघर, पु० ನೆಯ್ಗೆಯ ಕಾರ್ಖಾನೆ.

पुताई, स्त्री० ಸುಣ್ಣ ಬಳಿಯುವಿಕೆ; ಸಾರಣೆ.

पुत्तलिका, स्त्री० ಗೊಂಬೆ; ಬೊಂಬೆ.

पुत्रवधू, स्त्री० ಸೊಸೆ.

पुदीना, पु० ಪುದೀನ್ ಸೊಪ್ಪು.

पुनरावृत्ति, स्त्री० ಪುನಃ ಮಾಡುವುದು ಅಥವಾ ಓದುವುದು; ಎರಡನೆಯ ಮುದ್ರಣ.

पुनरुक्ति, स्त्री० ಹೇಳಿದ್ದನ್ನೇ ಹೇಳುವುದು.

पुनीत, वि० ಪವಿತ್ರ.

पुर, वि० ಭರ್ತಿಯಾದ; ತುಂಬ.

पुरइन, पु० ತಾವರೆ; ಕಮಲ.

पुरखा, पु० ಪೂರ್ವಿಕರು; ಹಿರಿಯರು.

पुरज़ा, पु० ಭಾಗ; ತುಂಡು; ತುಣಕು.

पुरबिया, वि० ಪೂರ್ವ ದಿಕ್ಕಿನ.

पुरवा, पु० ಸಣ್ಣ ಗ್ರಾಮ; ಮೂಡಣ ಗಾಳಿ; ಮಣ್ಣಿನ ಹೂಜಿ.

पुरवाई } स्त्री० ಮೂಡಣ ಗಾಳಿ.
पुरवैया }

पुरसा, पु० ನಾಲ್ಕುವರೆ ಅಥವಾ ಐದುಮೊಳದ ಒಂದು ಅಳತೆ; ಸತ್ತವರ ಸಂಬಂಧೀಕರಿಗೆ ಸಮಾಧಾನ ಹೇಳುವುದು. (मातमपुरसी)

पुरस्कार, पु० ಬಹುಮಾನ; ಇನಾಮು.

पुरस्कृत, वि० ಬಹುಮಾನಿಸಲ್ಪಟ್ಟ; ಗೌರವಿಸಲ್ಪಟ್ಟ.

पुरातत्त्व, पु० ಪ್ರಾಚೀನ ಕಾಲಕೆ, ಸಂಬಂಧಿಸಿದ ಶಾಸ್ತ್ರ.

पुराना, वि० ಹಳೆಯ; ಪುರಾತನ.

पुल, पु० ಸೇತುವೆ;—बांधना ಸ್ವಲ್ಪವಾದುದನ್ನು ಅತಿಶಯವಾಗಿ ಹೇಳುವುದು.

पुलक, पु० ರೋಮಾಂಚ.
पुलकना, अ० ರೋಮಾಂಚವಾಗು.
पुलकित, वि० ರೋಮಾಂಚಗೊಂಡ.
पुलटिस, स्त्री० ಪೋಲ್ಟೀಸು.
पुलपुला, वि० ಮೆತ್ತಗಾದ.
पुलपुलाना, स० ಹೀರು; ಸೀಪು.
पुलिंदा, पु० ಕಟ್ಟು; ಕಡತ.
पुलिन, पु० ದಂಡೆ; ದಡ; ತೀರ.
पुलिस, स्त्री० ಪೋಲೀಸು ಶಾಖೆ; ಪೋಲೀಸು ಸಿಪಾಯಿ.
पुश्त, स्त्री० ಹಿಂಭಾಗ; ಬೆನ್ನು; ಪೀಳಿಗೆ; ತಲೆಮಾರು.
पुश्तक, स्त्री० ಹಿಂಗಾಲೇಟು.
पुश्तनामा, पु० ವಂಶಾವಳಿ.
पुश्त-पनाह, स्त्री० ಬೆಂಬಲ; ಆಸರೆ.
पुश्ता, पु० ಆಧಾರ; ಏರಿ; ಕಟ್ಟೆ; ಪುಸ್ತಕದ ಹಿಂದುಗಡೆ ರಟ್ಟು.
पुश्तारा, पु० ಒಮ್ಮೆಲೇ ಬೆನ್ನಿನ ಮೇಲೆ ಹೊರುವಷ್ಟು ಹೇರು.
पुश्ती, स्त्री० ಸಹಾಯ; ನೆರವು.
पुश्तैनी, वि० ಪರಂಪರಾಗತವಾದ; ಬಹಳ ಕಾಲದ.
पुष्कल, वि० ಅಧಿಕವಾದ.
पुष्ट, वि० ಪುಷ್ಟನಾದ; ಪೌಷ್ಟಿಕವಾದ.
पुष्टई, स्त्री० ಪೌಷ್ಟಿಕ ವಸ್ತು.
पुष्टि, स्त्री० ಪೋಷಣೆ; ಸಮರ್ಥನೆ.
पुहुप, पु० ಪುಷ್ಪ; ಹೂ.
पूंछ, स्त्री० ಬಾಲ.
पूंछार, वि० ಬಾಲವುಳ್ಳ.
पूंजी, स्त्री० ಮೂಲಧನ; ಬಂಡವಾಳ; ಐಶ್ವರ್ಯ.
पूंजीपति, पु० ಬಂಡವಾಳಗಾರ.
पूआ, पु० ಹೋಳಿಗೆ.
पूछ, स्त्री० ಕೇಳುವಿಕೆ; ಪ್ರಶ್ನಿಸುವಿಕೆ.
पूछताछ, स्त्री० ವಿಚಾರಿಸುವಿಕೆ; ತನಿಖೆ; ವಿಚಾರಣೆ.
पूछना, स० ಕೇಳು; ಪ್ರಶ್ನಿಸು.
पूजन, पु० ಪೂಜೆ; ಮರ್ಯಾದೆ.
पूजना, स० ಪೂಜಿಸು; ಆರಾಧಿಸು. अ० ಪೂರ್ತಿಮಾಡು.
पूजा, स्त्री० ಪೂಜೆ; ಆರಾಧನೆ; **—पाठ** पु० ಪೂಜೆ ಪುನಸ್ಕಾರ.
पूजित, वि० ಪೂಜಿಸಲ್ಪಟ್ಟ.
पूज्य, वि० ಪೂಜನೀಯ; ಮಾನನೀಯ.
पूड़ी, स्त्री० ಪೂರಿ; ತಬಲದ ಮೇಲಿನ ಚರ್ಮ.
पूत, वि० ಪವಿತ್ರವಾದ. पु० ಮಗ; ಪುತ್ರ.
पूनी, स्त्री० ಹಿಂಜಿದ ಅರಳೆಯ ಬತ್ತಿ.
पूनो, स्त्री० ಹುಣ್ಣಿಮೆ; ಪೂರ್ಣಿಮೆಯ ತಿಥಿ.
पूर, पु० ಪ್ರವಾಹ; ತುಂಬುವಿಕೆ; ಹೂರಣ. वि० ಪೂರ್ಣ.
पूरण, पु० ತುಂಬುವಿಕೆ वि० ತುಂಬುವ; ಪೂರಕ.
पूरना, स० ತುಂಬು; ಭರ್ತಿಮಾಡು. **चौक-पूरना** ರಂಗೋಲಿಹಾಕು.

पूरब, पु० ಮೂಡಲು; ಪೂರ್ವದಿಕ್ಕು.

पूरबल, पु० ಬೆಳಗಿನ ಜಾವ; ಪೂರ್ವ ಜನ್ಮ.

पूरबी, वि० ಪೂರ್ವದಿಕ್ಕಿನ.

पूरा, वि० ತುಂಬಿದ; ಪರಿಪೂರ್ಣ;

पूरित, वि० ತುಂಬಲ್ಪಟ್ಟ; ಪರಿ ಪೂರ್ಣ.

पूरी, स्त्री० ಒಂದು ಬಗೆಯ ಭಕ್ಷ್ಯ; ಪೂರಿ.

पूर्ण, वि० ತುಂಬಿದ; ಪರಿಪೂರ್ಣ.

पूर्णता, स्त्री० ತುಂಬಿರುವಿಕೆ.

पूर्णविराम, पु० ವಾಕ್ಯವು ಪೂರ್ಣ ವಾಯಿತೆಂಬುದನ್ನು ಸೂಚಿಸುವ ಚಿಹ್ನೆ; ಪೂರ್ಣವಿರಾಮ.

पूर्णिमा, स्त्री० ಹುಣ್ಣಿಮೆ.

पूर्व, पु० ಮೂಡಲು. वि० ಮೊದಲಿನ; ಮುಂದಿನ; ಹಳೆಯಕಾಲದ.

पूर्वक, क्रि० ಸಹಿತವಾಗಿ; ಸಮೇತ.

पूर्ववत, क्रि० ಮೊದಲಿನಂತೆ.

पूर्ववर्ती, वि० ಮೊದಲಿನ; ಮುಂಚೆ ಇದ್ದ.

पूर्ववृत्त, पु० ಚರಿತ್ರೆ.

पूर्वापर, क्रि० ಹಿಂದೆ ಮುಂದೆ.

पूर्वी, वि० ಪೂರ್ವದಿಕ್ಕಿನ; ಪೌರ್ವಾತ್ಯ.

पूला, पु० ಹುಲ್ಲು, ದರ್ಭೆ ಮೊದಲಾದವುಗಳ ಕಟ್ಟು; ಹೊರೆ.

पूस, पु० ಪುಷ್ಯಮಾಸ.

पृथक, वि० ಬೇರೆ; ಭಿನ್ನವಾದ.

पृथक्करण, पु० ಬೇರೆಮಾಡುವಿಕೆ.

पृथु, वि० ವಿಶಾಲವಾದ.

पृथुल, स्त्री० ಚತುರತೆ; ಆಜಾನು ಬಾಹು.

पृष्ठ, पु० ಹಿಂಭಾಗ; ಬೆನ್ನು; ಪುಟ; ಪೇಜು.

पेंग, स्त्री० ಜೋಲಾಡುವಿಕೆ.

पेंगना, अ० ಜೋಲಾಡು; ಓಲಾಡು.

पेंडुकी, स्त्री० ಪಾರಿವಾಳ; ಊದು ಗೊಳವಿ.

पेंदा, पु० ತಳಭಾಗ; ಅಡಿ.

पेखना, स० ನೋಡು.

पेच, पु० ಸುತ್ತು; ಸಿಕ್ಕು; ತೊಡಕು; ಮೋಸ; ತಂತ್ರ; ಕೀಲು ಮೊಳೆ; ಕುಸ್ತಿಯಲ್ಲಿ ಒಂದು ಪಟ್ಟು.

पेचक, स्त्री० ದಾರದ ಉಂಡೆ.

पेचकश, पु० ತಿರುಗುಳಿ.

पेचताब, पु० ಮನಸ್ಸಿನಲ್ಲೇ ಅಡಗಿ ಸಿಟ್ಟ ಕೋಪ.

पेचदार, वि० ತೊಡಕಿನ; ಸಿಕ್ಕಿನ; ಸುತ್ತುಳ್ಳ; ಕೀಲುಳ್ಳ.

पेचवान, पु० ಹುಕ್ಕಾವಿನ ಉದ್ದವಾದ ನಳಿಗೆ.

पेचिश, स्त्री० ಹೊಟ್ಟೆ ನುಲಿ; ಶೀತ ಭೇದಿ.

पेचीदगी, स्त्री० ತೊಡಕು; ಸಿಕ್ಕು; ಪೀಕಲಾಟ.

पेचीदा } **पेचीला** } वि० ತೊಡಕಿನ; ಕಠಿಣವಾದ.

पेट, पु० ಹೊಟ್ಟೆ; ಬಸಿರು; ಹೊಟ್ಟೆ ಪಾಡು;—**चलना** ಭೇದಿಯಾಗುವುದು.

पेटारा, पु० ಬುಟ್ಟಿ; ಪೆಟಾರಿ.

पेटिका, स्त्री० ಪೆಟ್ಟಿಗೆ.

पेटी, स्त्री० ಸಣ್ಣ ಪೆಟ್ಟಿಗೆ; ಹಡಪ; ಕಮರ್‌ಬಂದು.

पेटू, वि० ಹೊಟ್ಟೆಬಾಕ.

पेठा, पु० ಬೂದುಗುಂಬಳ ಕಾಯಿ.

पेड़, पु० ಮರ; ವೃಕ್ಷ.

पेड़ा, पु० ಹಾಲುಖೋವಾ ಮತ್ತು ಸಕ್ಕರೆಯನ್ನು ಸೇರಿಸಿ ಮಾಡಿದ ಒಂದು ಮಿಠಾಯಿ.

पेडू, पु० ಕಿಬೊಟ್ಟೆ; ಗರ್ಭಾಶಯ.

पेन्हाना, स० ತೊಡಿಸು; ಉಡಿಸು.

पेबन्द, पु० ತೇಪೆ; ಜೋಡಿಸಿಹೊಲೆ ದದ್ದು.

पेय, वि० ಕುಡಿಯಬಹುದಾದ. पु० ಕುಡಿಯುವ ಪದಾರ್ಥ.

पेरना, स० ಹಿಂಡು; ಗಾಣವಾಡು; ಪೀಡಿಸು.

पेलना, स० ಒತ್ತು; ಅಮುಕು; ದೂಡು.

पेला, पु० ಜಗಳ; ತಕರಾರು; ತಪ್ಪು; ಮುತ್ತಿಗೆ.

पेवन्द, पु० दे० **पेबन्द.**

पेवस, पु० ಗಿಣ್ಣುಹಾಲು.

पेश, पु० ಮುಂಭಾಗ. क्रि० ಮುಂದೆ; ಮುಂದುಗಡೆ;—**आना** ಮುಂದೆ ಬರು, ವ್ಯವಹರಿಸು;—**करना** ಮುಂದಿಡು.

पेश-क़दमी, स्त्री० ಮುನ್ನಡೆ; ಮುಂದಾಳುತನ; ಆಕ್ರಮಣ.

पेशकश, स्त्री० ಹಿರಿಯರಿಗೆ ಅರ್ಪಿಸುವ ಕಾಣಿಕೆ.

पेश-कार, पु० ನ್ಯಾಯಾಧೀಶನ ಮುಂದೆ ಕಾಗದ ಪತ್ರಗಳನ್ನು ಇಡುವ ಅಧಿಕಾರಿ.

पेशगी, स्त्री० ಮುಂಗಡ.

पेशतर, क्रि० दे० **पेश्तर.**

पेश-दस्ती, स्त्री० ಮೊದಲು ನಡೆಸುವ ಏರ್ಪಾಡು.

पेश-बंदी, स्त्री० ಮೊದಲೇ ಯೋಚಿಸಿರುವ ಹಂಚಿಕೆ; ಪೀಠಿಕೆ.

पेशराज़, पु० ಕಲ್ಲು ಹೊರುವ ಆಳು.

पेशवा, पु० ಅಗ್ರಗಣ್ಯ; ಮುಖಂಡ; ಮಹಾರಾಷ್ಟ್ರದಲ್ಲಿನ ಮಂತ್ರಿಯ ಪದವಿ.

पेशवाई, स्त्री० ಎದುರುಗೊಂಡು ಹೋಗಿ ಸ್ವಾಗತಿಸುವುದು.

पेशवाज़, स्त्री० ನರ್ತಕಿಯರು ತಮ್ಮ ಮೇಲಿನ ಬಟ್ಟೆಗಳು ಮಾಸದಂತೆ ಒಳಗೆ ಉಟ್ಟುಕೊಳ್ಳುವ ಲಂಗ.

पेशा, पु० ವೃತ್ತಿ; ಕೆಲಸ; ಕಸುಬು.

पेशानी, स्त्री० ಹಣೆ; ಹಣೆಬರಹ

पेशाब, पु० ಮೂತ್ರ; ಉಚ್ಚೆ.

पेशाबख़ाना, पु० ಮೂತ್ರಿ.

पेशावर, पु० ಕಸುಬುದಾರ; ಕೆಲಸಗಾರ.

पेशी, स्त्री० ಮೊಕದ್ದಮೆಯು ನ್ಯಾಯಾಧೀಶನಮುಂದೆ ಬರುವಿಕೆ; ಹೀರಿಂಗು.

पेशीन-गोई, स्त्री० ಭವಿಷ್ಯವನ್ನು ಹೇಳುವುದು.

पेश्तर, क्रिं ಮೊದಲು ; ಪೂರ್ವದಲ್ಲಿ.

पैंजनी, स्त्री० ಹೆಜ್ಜೆಯಸರ ; ಪೈಜನ.

पैंठ, स्त्री० ಅಂಗಡಿಸಾಲು ; ಸಂತೆ.

पैंड़, पु० ಹೆಜ್ಜೆ.

पैंड़ा, पु० ದಾರಿ ; ಮಾರ್ಗ ; ರಸ್ತೆ ; ಲಾಯ;—**मारना** ಲೂಟಿಮಾಡುವುದು.

पैंत, स्त्री० ಪಣ ; ಪಂದ್ಯ.

पै, अव्य० ಆದರೆ ; ಅನಂತರ.

पैकर, स्त्री० ಮುಖ.

पैकार, पु० ಚಿಲ್ಲರೆಸಾಮಾನು ಮಾರುವವ.

पैख़ाना, पु० ಕಕ್ಕಸು; ಪಾಯಖಾನೆ.

पैगंबर, पु० ಧರ್ಮ ಪ್ರವರ್ತಕ.

पैग़ाम, पु० ಸಂದೇಶ.

पैज, स्त्री० ಪಣ ; ಪ್ರತಿಜ್ಞೆ.

पैजामा, पु० ಚಲ್ಲಣ ; ಷರಾಯಿ.

पैज़ार, पु० ಎಕ್ಕಡ ; ಮೆಟ್ಟು ; ಕೆರ.

पैठ, स्त्री० ಹೊಗುವಿಕೆ ; ಪ್ರವೇಶ.

पैठना, अ० ಹೊಗು ; ಪ್ರವೇಶಿಸು ; ನುಗ್ಗು.

पैड़ी, स्त्री० ಏಣಿ ; ನಿಚ್ಚಣಿಗೆ ; ಸೋಪಾನ ; ಮೆಟ್ಟಲು.

पैतरा, पु० ಕತ್ತಿವರಸೆ ಅಥವಾ ಕುಸ್ತಿಯಾಟದಲ್ಲಿ ಅತ್ತಿತ್ತತಿರುಗುವಾಗ ಕಾಲಿಡುವ ರೀತಿ.

पैतृक, वि० ತಂದೆಗೆ ಸಂಬಂಧಿಸಿದ ; ಪಿತ್ರಾರ್ಜಿತ.

पैदल, वि० ಕಾಲ್ನಡೆಯಿಂದ ಹೋಗುವ. **क्रिं** ಕಾಲ್ನಡೆಯಿಂದೆ. **पु०** ಕಾಲ್ನಡೆ.

पैदा, वि० ಹುಟ್ಟಿದ; ಉತ್ಪನ್ನವಾದ; ಗಳಿಸಲ್ಪಟ್ಟ.

पैदाइश, स्त्री० ಹುಟ್ಟು ; ಉತ್ಪತ್ತಿ ; ಜನ್ಮ.

पैदाइशी, वि० ಹುಟ್ಟಿದಾರಭ್ಯದ ; ಬಹಳ ಹಳೆಯ ; ಸ್ವಾಭಾವಿಕ.

पैदावार, स्त्री० ಬೆಳೆ.

पैना, वि० ಹರಿತವಾದ ; ತೀಕ್ಷ್ಣ.

पैमाइश, स्त्री० ಅಳತೆ.

पैमाना, पु० ಅಳೆಯುವ ಉಪಕರಣ; ಪರಿಮಾಣ ; ಅಳತೆ.

पैयाँ, स्त्री० ಕಾಲು ; ಪಾದ.

पैया, पु० ಜಳ್ಳು ; ನೀಚ.

पैर, पु० ಕಾಲು ; ಪಾದ ; ಹೆಜ್ಜೆಯ ಗುರುತು.

पैरगाड़ी, स्त्री० ಬೈಸಿಕಲ್ಲು.

पैरना, अ० ಈಸು ; ಈಜು.

पैरवी, स्त्री० ಅನುಸರಣೆ ; ಆಜ್ಞಾಪಾಲನೆ ; ಓಡಾಟ ; ಪ್ರಯತ್ನ.

पैरवीकार, पु० ಅನುಸರಿಸುವವ.

पैरा, पु० ಕಾಲಿಡುವಿಕೆ ; ಕಾಲಿಟ್ಟ ಘಳಿಗೆ.

पैराक, पु० ಈಜುಗಾರ.

पैराना, स० ಈಜಾಡಿಸು.

पैराव, पु० ಈಜುವುದಕ್ಕೆ ಸಾಕಾದಷ್ಟು ಆಳ.

पैरो, पु० ಅನುಯಾಯಿ ; ಶಿಷ್ಯ.

पैरोकार, पु० ಅನುಸರಿಸುವವ.

पैवंद, पु० ತೇಪೆ ; ಕಸಿ ; ಬೆಸಗೆ.

पैवंदी, वि० ಕಸಿಮಾಡಿದ.

पैवस्त, ವಿ೦ ಮಿಳಿತವಾದ; ಸೇರಿದ.
पैसना, ಅ೦ ಪ್ರವೇಶಿಸು; ಹೊಗು.
पैसा, ಪು೦ ಕಾಲಾಣೆ; ಬಿಲ್ಲೆ; ಹಣ.
पैसार, ಪು೦ ಪ್ರವೇಶ.
पैहम, ವಿ೦ ಸೇರಿಕೊಂಡಿರುವ. ಕ್ರಿ೦ ಒಂದೇಸಮನೆ.
पैहारी, ವಿ೦ ಸನ್ಯಾಸಿ; ವಿರಕ್ತ.
पोंगा, ಪು೦ ಬಿದುರಿನಕೊಳವಿ; ಗೊಟ್ಟ; ನಳಿಗೆ. ವಿ೦ ಪೊಳ್ಳು; ಟೊಳ್ಳು; ಮೂರ್ಖ.
पोंगी, ಸ್ತ್ರೀ೦ ಚಿಕ್ಕನಳಿಗೆ; ಕೊಳವಿ; ಕೊಳಲು.
पोंछन, ಪು೦ ಒರೆಸುವುದರಿಂದ ಬರುವ ಕೊಳೆ.
पोंछना, ಸ೦ ಒರೆಸು; ಉಜ್ಜು. ಪು೦ ಒರೆಸುವ ಬಟ್ಟೆ.
पोंटा, ಪು೦ ಸಿಂಬಳ; ಗೊಣ್ಣೆ.
पोआ, ಪು೦ ಹಾವಿನ ಮರಿ.
पोआना, ಸ೦ **पोना** ದ ಪ್ರೇರಣಾರ್ಥಕ ರೂಪ.
पोखरा, ಪು೦ ಕೊಳ; ಕುಂಟೆ.
पोच, ವಿ೦ ತುಚ್ಛ; ನೀಚ; ನಿಕೃಷ್ಟ.
पोची, ಸ್ತ್ರೀ೦ ನೀಚತ್ವ; ತುಚ್ಛತೆ.
पोछना, ಸ೦ ದೇ೦ **पोंछना**.
पोट, ಸ್ತ್ರೀ೦ ಗಂಟು; ಹೊರೆ; ಮೆದೆ; ಗುಡ್ಡೆ.
पोटना, ಸ೦ ಒಟ್ಟುಗೂಡಿಸು; ಶೇಖರಿಸು.
पोटली, ಸ್ತ್ರೀ೦ ಸಣ್ಣ ಗಂಟು.
पोढ़ा, ವಿ೦ ಪುಷ್ಟವಾದ; ದೃಢ.
पोत, ಪು೦ ಮರಿ; ಪಿಳ್ಳೆ; ನೆಯ್ಗೆ; ಹಡಗು; ಕಂದಾಯ; ಮನೆಯು
पोतदार, ಪು೦ ಖಜಾನೆಯ ಅಧಿಕಾರಿ.
पोतना, ಸ೦ ಸವರು; ಲೇಪಿಸು: ಸಾರಿಸು.
पोता, ಪು೦ ಮಗನಮಗ; ಮೊಮ್ಮಗ; ಅಂಡಕೋಶ.
पोती, ಸ್ತ್ರೀ೦ ಮಗನ ಮಗಳು; ಮೊಮ್ಮಗಳು.
पोथा, ಪು೦ ದೊಡ್ಡ ಪುಸ್ತಕ.
पोथी, ಸ್ತ್ರೀ೦ ಪುಸ್ತಕ.
पोद्दार, ಪು೦ ದೇ೦ **पोतदार**.
पोना, ಸ೦ ರೊಟ್ಟಿ ತಟ್ಟು; ರೊಟ್ಟಿ ಸುಡು; ಪೋಣಿಸು.
पोपला, ವಿ೦ ಮುದುಡಿಕೊಂಡ; ಹಲ್ಲುಗಳಿಲ್ಲದ; ಪೊಕ್ಕ.
पोपलाना, ಅ೦ ಬೊಕ್ಕಬಾಯಾಗು.
पोर, ಸ್ತ್ರೀ೦ ಬೆರಳ ಗೆಣ್ಣು; ಕಬ್ಬಿನ ಅಥವಾ ಬಿದುರಿನ ಗೆಣ್ಣು.
पोल, ಸ್ತ್ರೀ೦ ಬಾಗಿಲು; ಅಂಗಳ; ಶೂನ್ಯ; ಟೊಳ್ಳು; ಪೊಳ್ಳು; —**खुलना** ಗುಟ್ಟುರಟ್ಟಾಗು.
पोला, ವಿ೦ ಟೊಳ್ಳಾದ; ತಿರುಳಿಲ್ಲದ; ನಿಸ್ಸಾರ; ಮೆತ್ತನೆಯ.
पोलाव, ಪು೦ ದೇ೦ **पुलाव**.
पोशाक, ಸ್ತ್ರೀ೦ ಉಡಿಗೆ; ತೊಡಿಗೆ; ಡ್ರೆಸ್ಸು.
पोशीदगी, ಸ್ತ್ರೀ೦ ಮರೆಮಾಡುವಿಕೆ; ರಹಸ್ಯ; ಗುಟ್ಟು.

पोशीदा, वि० ಮರೆಮಾಚಿದ; ಗೋಪ್ಯವಾದ; ಗುಟ್ಟಿನ.

पोषक, वि० ಪೋಷಿಸುವವ; ಪಾಲಕ; ಸಹಾಯಕ.

पोषण, पु० ಪಾಲನೆ; ಸಹಾಯ.

पोषना, स० ಸಾಕು; ಪೋಷಿಸು.

पोषित, वि० ಸಾಕಲ್ಪಟ್ಟ.

पोष्य, वि० ಪೋಷಿಸ ಬೇಕಾದ.

पोष्यपुत्र, पु० ಸಾಕುಮಗ.

पोस, पु० ಪೋಷಿಸುವವರ ಮೇಲಿನ ಪ್ರೀತಿ ವಿಶ್ವಾಸ.

पोसना, स० ಪೋಷಿಸು; ಸಲಹು.

पोस्त, वि० ತೊಗಲು; ಚರ್ಮ; ಸಿಪ್ಪೆ; ತೊಗಟೆ.

पोता, पु० ಗಸೆಗಸೆ ಅಥವಾ ಅಫೀಮಿನ ಗಿಡ.

पोस्ती, पु० ಸೋಮಾರಿ.

पोस्तीन, पु० ಚರ್ಮದಿಂದ ತಯಾರಿಸಿದ ಉಡಿಗೆ.

पोहना, स० ಪೋಣಿಸು; ಒಳಿ.

पौ, स्त्री० ಅರವಟ್ಟಿಗೆ; ಪ್ರಕಾಶ; **—फटना** ಬೆಳಕು ಹರಿ;**—बारह** ಲಾಭವಾಗುವುದು; ಜಯಶಾಲಿಯಾಗುವುದು.

पौआ, पु० ಪಾವು; ಕಾಲುಸೇರು.

पौढ़ना, अ० ತೂಗಾಡು.

पौढ़ाना, स० ತೂಗಾಡಿಸು; ಮಲಗಿಸು; ಪವಳಿಸು.

पौत्र, पु० ಮೊಮ್ಮಗ.

पौद, स्त्री० ಚಿಕ್ಕಗಿಡ; ಸಸಿ; ನಡೆಮಡಿ.

पौदर, स्त्री० ಕಾಲುದಾರಿ.

पौधा, पु० ಚಿಕ್ಕಮರ; ಗಿಡ.

पौन, पु० ಗಾಳಿ. वि० ಮುಕ್ಕಾಲು.

पौनार, स्त्री० ತಾವರೆ ಹೂವಿನ ನಳಿಗೆ ಅಥವಾ ದಂಟು.

पौनी, स्त्री० ಮದುವೆ ಮೊದಲಾದ ಸಂದರ್ಭಗಳಲ್ಲಿ ಕೆಲಸಮಾಡಿ ಇನಾಮು ಪಡೆಯುವ ಜಾತಿಯ ಜನಗಳು.

पौने, वि० ಕಾಲು ಕಡಿಮೆ; ಮುಕ್ಕಾಲು.

पौर, स्त्री० ಬಾಗಿಲು. वि० ನಗರಕ್ಕೆ ಸಂಬಂಧಿಸಿದ.

पौरिया, पु० ದ್ವಾರಪಾಲಕ.

पौरी, स्त्री० ಬಾಗಿಲು; ಮೆಟ್ಟಲು.

पौवा, पु० ಕಾಲುಸೇರು; ಪಾವು.

पौष्टिक, वि० ಪುಷ್ಟಿಕೊಡತಕ್ಕ.

प्याऊ, पु० ಅರವಟ್ಟಿಗೆ.

प्याज़, पु० ಈರುಳ್ಳಿ; ನೀರುಳ್ಳಿ.

प्याजी, वि० ಈರುಳ್ಳಿಯಂಥ.

प्यादा, पु० ಕಾಲಾಳು; ಸಿಪಾಯಿ; ಪೇದೆ.

प्यार, पु० ಪ್ರೇಮ; ಪ್ರೀತಿ.

प्यारा, वि० ಪ್ರಿಯ; ಪ್ರೀತಿಯ.

प्याला, पु० ಬಟ್ಟಲು.

प्यास, स्त्री० ಬಾಯಾರಿಕೆ; ನೀರಡಿಕೆ.

प्यासा, वि० ಬಾಯಾರಿದ; ದಾಹಗೊಂಡ.

प्योसर, पु० ಗಿಣ್ಣುಹಾಲು.
प्योसार, पु० ತವರು ಮನೆ.
प्रकट, वि० ತಲೆದೋರಿದ; ಪ್ರತ್ಯಕ್ಷವಾದ; ಸ್ಪಷ್ಟ.
प्रकर्ष, पु० ದೊಡ್ಡಸ್ತಿಕೆ.
प्रकांड, वि० ಬಹಳ ದೊಡ್ಡ.
प्रकृत, वि० ವಾಸ್ತವಿಕ; ಪ್ರಕೃತಿಯ.
प्रकोप, पु० ವಿಶೇಷವಾದ ಕೋಪ; ವ್ಯಾಧಿಯ ಪ್ರಾಬಲ್ಯ.
प्रकोष्ठ, पु० ದೊಡ್ಡ ಅಂಗಳ; ಮುಂಬಾಗಿಲ ಬಳಿಯ ಕೋಣೆ.
प्रक्रिया, स्त्री० ಉಪಾಯ; ಯುಕ್ತಿ.
प्रक्षालन, पु० ತೊಳೆಯುವಿಕೆ.
प्रक्षिप्त, वि० ಎಸೆಯಲ್ಪಟ್ಟ.
प्रखर, वि० ತೀಕ್ಷ್ಣ; ಅತ್ಯಂತಪ್ರಕಾಶಪೂರ್ಣವಾದ.
प्रख्यात, वि० ಹೆಸರುವಾಸಿಯಾದ; ಪ್ರಸಿದ್ಧ.
प्रगटना, अ० ಹೊರಗೆಡಹು; ಪ್ರಕಟವಾಗು.
प्रगल्भ, वि० ಜಾಣ; ಚತುರ; ಪ್ರತಿಭಾಶಾಲಿ; ಧೈರ್ಯಶಾಲಿ.
प्रगाढ़, वि० ಬಲು ಹೆಚ್ಚು; ಬಹಳ ಆಳವಾದ.
प्रचार, पु० ಹೆಚ್ಚಾಗಿ ಬಳಕೆಯಲ್ಲಿರುವಿಕೆ; ವ್ಯಾಪನೆ.
प्रचुर, वि० ಬಹಳವಾದ; ಅಧಿಕ; ವಿಪುಲ.
प्रचुरता, स्त्री० ಹೇರಾಳವಾಗಿರುವಿಕೆ; ಅಧಿಕತೆ.
प्रच्छन्न, वि० ಪ್ರಕಟವಾದ.
प्रजा, स्त्री० ಮಕ್ಕಳು; ಮರಿ; ಸಂತಾನ; ಪ್ರಜೆಗಳು.
प्रज्ञ, पु० ಅರಿತವ; ವಿದ್ವಾಂಸ.
प्रज्वलित, वि० ಉರಿಯುತ್ತಿರುವ; ಬಹಳ ಸ್ಪಷ್ಟವಾದ.
प्रण, पु० ಪ್ರತಿಜ್ಞೆ; ಶಪಥ.
प्रणय, पु० ಪ್ರೇಮ; ಪ್ರೀತಿ.
प्रणयिनी, स्त्री० ಪ್ರೇಮಿಸಲ್ಪಟ್ಟವಳು; ಪ್ರೇಮಿಕೆ; ಹೆಂಡತಿ.
प्रणयी, पु० ಪ್ರೇಮಿ; ಗಂಡ; ಪತಿ.
प्रणाली, स्त्री० ಕಾಲುವೆ; ನಾಲೆ; ರೀತಿ; ಪರಿಪಾಟಿ; ಪದ್ಧತಿ; ವಿಧಾನ; ಪರಂಪರೆ.
प्रणीत, वि० ರಚಿಸಲ್ಪಟ್ಟ.
प्रणेता, पु० ರಚಿಸಿದವ.
प्रतारणा, स्त्री० ವಂಚನೆ; ಮೋಸ; ಕಪಟತನ; ಧೂರ್ತತೆ.
प्रति, वि० ವಿರುದ್ಧವಾದ; ಎದುರಿನ; ಬದಲಾಗಿ; ಪ್ರತಿಯೊಂದು.अव्य० ಎದುರಿನಲ್ಲಿ; ಕುರಿತು; ಕಡೆಗೆ. स्त्री० ನಕಲು; ಪ್ರತಿ.
प्रतिकार, पु० ಸೇಡು; ಚಿಕಿತ್ಸೆ; ಉಪಾಯ.
प्रतिकूल, वि० ಅನುಕೂಲವಲ್ಲದ; ವಿರುದ್ಧ.
प्रतिक्रिया, स्त्री० ವಿರೋಧವಾದ ಕ್ರಿಯೆ.
प्रतिद्वंद्व, वि० ವಿರೋಧ.
प्रतिद्वंद्वी, पु० ಎದುರಾಳಿ; ವಿರೋಧಿ.

प्रतिपक्ष, पुं० शत್ರು; ವೈರಿ; ವಿರೋಧ ಪಕ್ಷ.

प्रतिपादन, पुं० ಚೆನ್ನಾಗಿ ತಿಳಿಯಪಡಿಸುವಿಕೆ; ನಿರೂಪಣೆ; ಪ್ರಮಾಣ.

प्रतिफल, पुं० ಪರಿಣಾಮ.

प्रतिबंध, पुं० ತಡೆ; ಅಡಚಣೆ; ವಿಘ್ನ; ವಿಡ್ಡೂರ.

प्रतिबद्ध, वि० ಕಟ್ಟಲ್ಪಟ್ಟ; ನಿಯಂತ್ರಿತ.

प्रतिभा, स्त्री० ಬುದ್ಧಿ; ಅರಿವು; ದೀಪ್ತಿ; ಕಾಂತಿ.

प्रतियोगिता, स्त्री० ಪೋಟಿ; ಸ್ಪರ್ಧೆ; ವಿರೋಧ.

प्रतियोगी, पुं० ಪಾಲುದಾರ; ಭಾಗಿ.

प्रतिरोध, पुं० ವಿರೋಧ; ತಡೆ; ಆತಂಕ.

प्रतिलिपि, स्त्री० ಬರೆದುದರ ನಕಲು; ಕಾಪಿ.

प्रतिवाद, पुं० ವಾದ ವಿವಾದ; ಚರ್ಚೆ.

प्रतिशोध, पुं० ಹಗೆ ತೀರಿಸಿಕೊಳ್ಳುವಿಕೆ; ಸೇಡು.

प्रतिष्ठा, स्त्री० ಗೌರವ; ಆದರ.

प्रतिष्ठित, वि० ಆದರಣೀಯ; ಗಣ್ಯ; ಮಾನ್ಯ; ಮಾನನೀಯ.

प्रतिस्पर्द्धा, स्त्री० ಇನ್ನೊಬ್ಬರನ್ನು ಮೀರಿಸಬೇಕೆಂಬ ಇಚ್ಛೆ; ಪೈಪೋಟಿ.

प्रतिहंता, पुं० ಅಡ್ಡಿಮಾಡುವವ; ಆತಂಕಪಡಿಸುವವ.

प्रतिहत, वि० ತಡೆಯಲ್ಪಟ್ಟ.

प्रतिहारी, पुं० ದ್ವಾರಪಾಲಕ.

प्रतिहिंसा, स्त्री० ಸೇಡು ತೀರಿಸಿಕೊಳ್ಳುವುದಕ್ಕಾಗಿ ಮಾಡುವ ಹಿಂಸೆ.

प्रतीक, पुं० ಗುರುತು; ಚಿಹ್ನೆ.

प्रतीक्षा, स्त्री० ನಿರೀಕ್ಷೆ; ಕಾದಿರುವಿಕೆ.

प्रत्यंचा, स्त्री० ಧನುಸ್ಸಿನಹಗ್ಗ.

प्रत्यय, पुं० ನಂಬಿಕೆ; ವಿಶ್ವಾಸ; ವಿಚಾರ; ಭಾವನೆ; ವಿವೇಕ.

प्रत्यर्थी, पुं० ಪೈಪೋಟಿಮಾಡುವ.

प्रत्युत, अव्य० ಇದಲ್ಲದೆ.

प्रत्युत्तर, पुं० ಮಾರುತ್ತರ.

प्रत्येक, वि० ಪ್ರತಿಯೊಂದು; ಒಂದೊಂದು.

प्रथमतः, क्रि० ಮೊದಲು; ಮುಂಚಿತವಾಗಿ.

प्रथा, स्त्री० ರೀತಿ; ರೂಢಿ; ಪದ್ಧತಿ.

प्रदीप, पुं० ದೀಪ; ಬೆಳಕು.

प्रदीप्त, वि० ಉರಿಯುತ್ತಿರುವ; ಉಜ್ವಲ.

प्रपंच, पुं० ಸೃಷ್ಟಿ; ಭೂಲೋಕ; ಬೂಟಾಟಿಕೆ; ಆಡಂಬರ; ಮೋಸ.

प्रपंची, वि० ಮೋಸಗಾರ; ಕಪಟಿ.

प्रफुल्लना, अ० ಅರಳು.

प्रबंध, पुं० ಏರ್ಪಾಡು; ವ್ಯವಸ್ಥೆ.

प्रभात, पुं० ಬೆಳಗಿನ ಜಾವ.

प्रलोभन, पु० ಸಂತೋಷ; ಆಶೆ ತೋರಿಸುವಿಕೆ.

प्रशंसनीय वि० ಹೊಗಳಿಕೆಗೆ ಯೋಗ್ಯವಾದ; ಹೊಗಳತಕ್ಕ; ಸ್ತುತ್ಯ.

प्रवासी, वि० ಪರದೇಶದಲ್ಲಿರುವ.

प्रसन्नता, स्त्री० ಸಂತೋಷ.

प्रसूता / **प्रसूतिका** } स्त्री० ಬಾಣಂತಿ.

प्रस्तर, पु० ಕಲ್ಲು.

प्रस्तार, पु० ಹರಡುವಿಕೆ.

प्रस्ताव, पु० ಪ್ರಸ್ತಾಪ; ಗೊತ್ತುವಳಿ; ಠರಾವು.

प्रस्तावना, स्त्री० ಪೀಠಿಕೆ.

प्रस्तावित, वि० ಸೂಚಿಸಿದ.

प्रस्तुत, वि० ಸಿದ್ಧ; ತಯಾರು.

प्रहर, पु० ಜಾವ; ಝಾವ.

प्रहरी, पु० ಪಹರೆಯವನು.

प्रहसन, पु० ಚಿಕ್ಕನಾಟಕ; ಹಾಸ್ಯ.

प्रहार, पु० ಏಟು; ಹೊಡೆತ.

प्रांगन, पु० ಅಂಗಳ.

प्राक्कथन, पु० ಮುನ್ನುಡಿ.

प्राचीर, पु० ಆವರಣದ ಗೋಡೆ.

प्राप्त, वि० ಲಭ್ಯವಾದ.

प्राप्ति, स्त्री० ಪಡೆಯುವಿಕೆ.

प्रार्थना, स्त्री० ಬಿನ್ನಹ; ಅರಿಕೆ.

प्रार्थना-पत्र, पु० ಅರ್ಜಿ; ಮನವಿ.

प्रासाद, पु० ಅರಮನೆ; ಮಹಲು.

प्रीति, स्त्री० ಪ್ರೇಮ.

प्रीतिभोज, पु० ಔತಣ.

प्रेरणा, स्त्री० ಪ್ರೋತ್ಸಾಹಿಸುವುದು.

प्रेषण, पु० ಕಳಿಸುವಿಕೆ.

प्रोषित, वि० ಪರದೇಶದ.

प्रौढ़, वि० ಬಲಶಾಲಿಯಾದ; ಚತುರ; ಗಂಭೀರ.

प्लावन, पु० ಪ್ರವಾಹ; ತೊಳೆಯುವುದು; ಈಜುವುದು.

प्लीहा, स्त्री० ಗುಲ್ಮ; ಪ್ಲೀಹ.

फ

फंका, पु० ತುತ್ತು; ತುಂಡು.

फंकी, स्त्री० ಒಂದು ಸಾರಿಗೆ ಬೇಕಾಗುವಷ್ಟು ಔಷಧ.

फंद, पु० ಬಂಧನ; ಬಲೆ; ಮೋಸ; ರಹಸ್ಯ.

फंदवार, वि० ಬಲೆ ಬೀಸುವವ.

फंदा, पु० ಬಲೆ.

फँसना, स० ಸಿಕ್ಕು; ಸಿಕ್ಕಿಬೀಳು.

फँसाना, स० ಸಿಕ್ಕಿಸು; ಸಿಕ್ಕಿಬೀಳಿಸು.

फ़क, वि० ಬಿಳಿಯ.

फ़क़त, क्रि० ಕೇವಲ; ಮಾತ್ರ.

फ़क़ीर, पु० ಭಿಕ್ಷುಕ; ಸನ್ಯಾಸಿ; ಫಕೀರ.

फक्कड़, वि० ವ್ಯಂಗ್ಯವಾಗಿ ಮಾತನಾಡುವ; ಮಸ್ತಜೀವಿ; ಉಂ

फ़क्र, पु० ದಾರಿದ್ರ್ಯ; ಬಡತನ.

फ़ख़्र / **फ़ख़**, } पु० ಹೆಮ್ಮೆ; ಗರ್ವ; ಅಭಿಮಾನ.

फ़ख़िया, क्रि० ಅಭಿಮಾನ ಪೂರ್ವಕ.

फ़ग़ाँ, पु० ಅಳುವಿಕೆ; ಉದ್ಗಾರ.

फगुआ, पु० ಹೋಳಿ ಹಬ್ಬ.

फगुनाहट, स्त्री० ಫಾಲ್ಗುನಮಾಸದಲ್ಲಿ ಬೀಸುವ ಬಿರುಗಾಳಿ.

फ़ज़र, स्त्री० ಪ್ರಾತಃಕಾಲ ; ಮುಂಜಾನೆ.

फ़ज़्ल, पु० ಕೃಪೆ; ಅನುಗ್ರಹ.

फ़ज़ा, स्त्री० ಮೈದಾನ ; ಕಾಂತಿ.

फ़ज़ीलत, स्त्री० ಶ್ರೇಷ್ಠತೆ.

फ़ज़ीहत, स्त्री० ದುರವಸ್ಥೆ; ತೊಂದರೆ; ಫಜೀತಿ.

फ़ज़ूल, वि० ವ್ಯರ್ಥ ; ನಿರರ್ಥಕ; —गो ಬಕವಾದಿ.

फ़ज़ूलख़र्च, पु० ದುಂದುಗಾರ.

फ़ज़ूलख़र्ची, स्त्री० ದುಂದು ವೆಚ್ಚ.

फ़ज़्ल, पु० दे० **फ़ज़ल.**

फट, स्त्री० ಅನುಕರಣ ಶಬ್ದ ; ಒಡೆಯುವಿಕೆ.

फटक, पु० ಸ್ಫಟಿಕ.

फटकना, अ० ಸೇರು ; ತಲಪು. स० ಕೇರು ; ತೂರು.

फटकार, स्त्री० ಗದರಿಕೆ.

फटकारना, स० ದೂರಮಾಡು ; ಗದರಿಸು.

फटना, अ० ಒಡೆ ; ಬಿರಿ.

फटा, वि० ಹರಿದ; ಒಡೆದ. पु० ಬಿರುಕು ; ಒಡಕು.

फटिक, पु० ಸ್ಫಟಿಕ.

फट्टा, पु० ಬಿದಿರಿನ ಸೀಳು.

फड़, पु० ಜೂಜಾಟದ ಪಣ; ಪಂದ್ಯ; ಜೂಜುಕಟ್ಟೆ ; ದಳ್ಳಾಳಿಕಟ್ಟೆ.

फड़कना, अ० ಅದುರು ; ಬಡಿದುಕೊಳ್ಳು.

फड़नवीस, पु० ಮರಾಟರ ರಾಜ್ಯ ಕಾಲದ ಒಂದು ಪದವಿ.

फड़बाज़, पु० ಜೂಜು ಕಟ್ಟೆಯ ಒಡೆಯ.

फण, पु० ಹಾವಿನ ಹೆಡೆ.

फणिक } **फणी** } पु० ಹಾವು.

फणीश, पु० ಮಹಾಶೇಷ.

फ़तवा, पु० ಮುಸ್ಲಿಂ ಧರ್ಮಶಾಸ್ತ್ರದ ನ್ಯಾಯವಿಧಾನ.

फ़तह, स्त्री० ಗೆಲವು ; ಜಯ ;—याब ಜಯಶಾಲಿ.

फतहमन्द, वि० ವಿಜಯಶಾಲಿ; ಜಯಿಸಿದವ.

फ़तिंगा, पु० ಮಿಡತೆ ; ಪತಂಗ.

फ़तीर, पु० ಆಗತಾನೆ ನೀರಿನಲ್ಲಿ ಕಲಸಿನಾದಿದ ಹಿಟ್ಟು. (**खमीर का उल्टा**)

फ़तील-सोज़, पु० ದೀಪಸ್ತಂಭ; ದೀವಟಿಗೆ.

फ़तूर, पु० ವಿಕಾರ; ದೋಷ; ನಷ್ಟ; ತಂಟೆ.

फ़तूरिया, वि० ತಂಟೆಲುಮಾರಿ ; ಜಗಳಗಂಟಿ.

फ़तूही, स्त्री० ತೋಳಿಲ್ಲದ ಅಂಗಿ.

फ़तेह, स्त्री० ವಿಜಯ ; ಜಯ.

फन, पु० ಹೆಡೆ.

फ़न, पु० ಗುಣ; ವಿದ್ಯೆ; ಪ್ರಾವೀಣ್ಯ.

फना, स्त्री० ನಾಶ; ಹಾಳು.

फन्नी, स्त्री० ಬೆಣೆ.

फफोला, पु० ಗುಳ್ಳೆ; ಹೊಪ್ಪಳೆ. **दिल के फफोले फोड़ना** ಮನಸ್ಸಿನದುಗುಡವನ್ನು ಹೊರಹಾಕುವುದು.

फबना, अ० ಅಂದವಾಗಿ ಕಾಣು.

फबती, स्त्री० ಕಾಲೋಚಿತ ವ್ಯಂಗ್ಯ; **—कसना** ಹಾಸ್ಯಮಾಡುವುದು.

फबीला, वि० ಶೋಭಿಸುವ.

फ़र, पु० ಅಲಂಕಾರ; ತಳುಕು ಬೆಳಕು. **फ़र्रे व फ़र्रे** ಆಡಂಬರ.

फरऊन, पु० ಮೊಸಳೆ; ಅತ್ಯಾಚಾರಿ; ಅಹಂಕಾರಿ.

फ़रक़, पु० ವ್ಯತ್ಯಾಸ; ಭೇದ.

फरकना, अ० ತೋಚುವುದು.

फ़रज़न्द, पु० ಮಗ; ಪುತ್ರ.

फ़रज़ी, पु० ಚದುರಂಗದ ಆಟದಲ್ಲಿ ಮಂತ್ರಿ; ಬುದ್ಧಿವಂತ.

फ़रजीबंद, पु० ಚದುರಂಗದ ಆಟದಲ್ಲಿ ರಾಜನನ್ನು ಮಂತ್ರಿಯಿಂದ ತಡೆಗಟ್ಟುವಿಕೆ.

फरफंद, पु० ಮೋಸ; ಠಕ್ಕು; ವಂಚನೆ.

फ़रबा, वि० ಬಲಿತ; ಕೊಬ್ಬಿದ.

फ़रमांबरदार, वि० ಆಜ್ಞಾಪಾಲಕ.

फ़रमा, पु० ಚೌಕಟ್ಟು; ಪಡಿಯಚ್ಚು; ಅಚ್ಚಿನ ಫಾರಂ; **—रवाँ** ಚಕ್ರವರ್ತಿ; ಆಜ್ಞಾಪಿಸುವವ.

फ़रमाइश, स्त्री० ಅಪ್ಪಣೆ; ಆರ್ಡರು.

फ़रमाइशी, वि० ಆರ್ಡರು ಕೊಟ್ಟು ತಯಾರು ಮಾಡಿಸಿದ; ಉತ್ಕೃಷ್ಟವಾದ.

फरमान, पु० ಅಪ್ಪಣೆ; ರಾಜಾಜ್ಞೆ; ನಿರೂಪ.

फरमाना, स० ಆಜ್ಞಾಪಿಸು.

फरवी, स्त्री० ಅರಳು; ಪುರಿ; ಮಂಡಕ್ಕಿ.

फ़रश, पु० ಸಮತಲವಾದಭೂಮಿ; ಮೃದುವಾದ ಜಮಖಾನ; **—बन्द** ಗಚ್ಚುಗಾರೆಗಳನ್ನು ಹಾಕಿ ಸಮತಲಮಾಡಿದ ಭೂಮಿ.

फ़रशी, स्त्री० ಗುಡಗುಡಿ; ಹುಕ್ಕಾ.

फरसा, पु० ಕೊಡಲಿ.

फ़रहंग, स्त्री० ವಿವೇಕ; ಜ್ಞಾನ.

फ़रहत, स्त्री० ಆನಂದ; ಪ್ರಸನ್ನತೆ.

फरहरा, पु० ಬಾವುಟ.

फ़रहाद, पु० ಬೆಟ್ಟ ತೋಡುವವ.

फ़राक, पु० ವೈದಾನ; ಬಯಲು.

फ़राकत, वि० ವಿಸ್ತಾರವಾದ.

फ़राख़, वि० ವಿಶಾಲ; ಹೇರಳ.

फराग़, पु० ವಿರಾಮ.

फ़राग़त, स्त्री० ಬಿಡುಗಡೆ; ಅವಕಾಶ; ಪುರಸತ್ತು.

फ़रामोश, वि० ಮರೆತ. (**फ़र्ज़ का** बहु०)

फ़रायज़, पु० ಕರ್ತವ್ಯಗಳು.

फ़रार, वि० ಓಡಿಹೋದ.

फ़रारी, वि० ಪರಾರಿ; ಓಡಿಹೋದ.

फ़राहम, वि॰ ಶೇಖರಿಸಿದ; ಕೂಡಿಸಿದ.

फ़रियाद, स्त्री॰ ದೂರು; ಫಿರ್ಯಾದು.

फ़रियादी, वि॰ ದೂರು ಕೊಟ್ಟವ; ಫಿರ್ಯಾದು ಮಾಡಿದವ.

फ़रियाना, स॰ ಜಲಡಿಸು.

फ़रिश्ता, पु॰ ದೇವದೂತ; ದೇವತೆ.

फरी, स्त्री॰ ಗುರಾಣಿ; ಡಾಲು.

फ़रीक़, पु॰ ವಿರೋಧಿ; ಎದುರಾಳಿ.

फ़रीक़ैन, पु॰ ಎರಡೂ ಕಡೆಯವರು; ಉಭಯ ಪಕ್ಷದವರು.

फ़रूही, स्त्री॰ ಚಿಕ್ಕಗುದ್ದಲಿ; ಕಡೆಗೋಲು.

फ़रेंदा, पु॰ ನೇರಳೆಹಣ್ಣು.

फ़रेफ़्ता, वि॰ ಮೋಸಗಾರ.

फ़रेब, पु॰ ಕಪಟ; ಮೋಸ.

फ़रेबी, वि॰ ಮೋಸಗಾರ; ಕಪಟಿ.

फ़रोख़्त, स्त्री॰ ವಿಕ್ರಯ; ಮಾರಾಟ.

फ़रोश, वि॰ ಮಾರುವವ.

फ़र्क, पु॰ ವ್ಯತ್ಯಾಸ; ಅಂತರ; ಭೇದ.

फ़र्ज़, पु॰ ಕರ್ತವ್ಯ; ಧರ್ಮ.

फ़र्जन्, क्रि॰ ಭಾವಿಸೋಣ.

फर्ज़ानगी, स्त्री॰ ವಿಜ್ಞಾನ; ಪಾಂಡಿತ್ಯ; ಉತ್ತಮ.

फ़र्ज़ी, वि॰ ಹೆಸರಿಗೆ ಮಾತ್ರ; ಕಲ್ಪನೆಯ; ನಿಜವಲ್ಲದ.

फ़र्द, स्त्री॰ ವಿವರ; ಸೂಚಿ; ಚೀಟಿ; ಬಟ್ಟೆಯ ತುಂಡು; ರಜಾಯಿಯ ಒಂದು ಪರದ;—बातिल वि॰ ಅಯೋಗ್ಯ; ನಿರರ್ಥಕವಾದ; ಕೆಲಸಕ್ಕೆಬಾರದ. वि॰ ಒಂದು; ಒಬ್ಬ.

फ़र्दन्-फ़र्दन्, क्रि॰ ಒಬ್ಬೊಬ್ಬನಾಗಿ; ಬೇರೆಬೇರೆ.

फ़र्रा, स्त्री॰ ಕೊಂಬೆ.

फर्राटा, पु॰ ವೇಗ.

फर्रार, वि॰ ವೇಗವಾಗಿ ಓಡಬಲ್ಲ.

फ़र्राश, पु॰ ಜಮಖಾನೆ ಹಾಸುವವ; ಗುಡಿಸುವ ಸೇವಕ.

फ़र्रूख़, वि॰ ಉತ್ತಮ; ಸುಂದರ.

फ़र्श, पु॰ ಜಮಖಾನೆ; ಹಾಸುವ ಬಟ್ಟೆ; ನೆಲಗಟ್ಟು; ನೆಲ; ಸಮತಲವಾದ.

फर्शी, वि॰ ನೆಲಕ್ಕೆ ಸಂಬಂಧಿಸಿದ.

फल, पु॰ ಹಣ್ಣು; ಫಲಿತಾಂಶ.

फ़लक, पु॰ ಆಕಾಶ; ಸ್ವರ್ಗ; ಭಾಗ್ಯ.

फलकना, अ॰ ತುಳುಕು; ಉಕ್ಕು.

फलका, पु॰ ಹೊಪ್ಪಳ.

फलतः, अव्य ಫಲಸ್ವರೂಪವಾಗಿ; ಆದುದರಿಂದ.

फलद, वि॰ ಫಲ ಕೊಡತಕ್ಕ.

फलना, अ॰ ಫಲಿಸು; ಕಾಯಿಬಿಡು; ಹಣ್ಣಾಗು.

फ़लसफ़ा, पु॰ ವೇದಾಂತ; ದರ್ಶನಶಾಸ್ತ್ರ.

फलहरी, स्त्री॰ ಫಲ; ಹಣ್ಣುಹಂಪಲು.

फलां, वि॰ ಇಂತಹ; ಅಮುಕ.

फलांग, स्त्री॰ ನೆಗೆದಾಟ; ನಾಗಾಲೋಟ; ಜಿಗಿತ.

फलांगना, अ० ನೆಗೆ; ಹಾರು.

फलांश, पु० ತಾತ್ಪರ್ಯ; ಸಾರಾಂಶ.

फ़लाना, वि० ಇಂತಹ; ಅಮುಕ.

फलालैन, पु० ಫ್ಲಾನಲ್ ಬಟ್ಟೆ.

फलित, वि० ಫಲಿಸಿರುವ; ಸಂಪನ್ನವಾದ.

फली, स्त्री० ಬೀಜಕೋಶ; ಕಾಯಿ; ಅವರೆ ಮೊದಲಾದವುಗಳ ಕಾಯಿ.

फलीता, पु० ದೀಪದಬತ್ತಿ.

फ़व्वारा, पु० ಕಾರಂಜಿ; ಬುಗ್ಗೆ.

फसल, स्त्री० ಬೆಳೆ; ಋತು.

फसली, वि० ಋತು ಅಥವಾ ಬೆಳೆಗೆ ಸಂಬಂಧಿಸಿದ. पु० ಫಸಲಿ ವರ್ಷ.

फ़साद, पु० ಜಗಳ; ಕಲಹ; ಪಿತೂರಿ; ಒಳಸಂಚು.

फ़सादी, वि० ಪಿತೂರಿ ನಡೆಸುವವ; ಜಗಳಗಂಟಿ.

फसाना, पु० ಕಥೆ; ಕಾದಂಬರಿ.

फ़साहत, स्त्री० ವಾಕ್ಚಾತುರ್ಯ; ಭಾಷಣ; ಕಲೆ.

फ़सील, स्त्री० ಗೋಡೆ; ಪ್ರಾಕಾರ.

फ़सीह, पु० ಚೆನ್ನಾಗಿ ಮಾತನಾಡುವವನು; ವಾಚಾಳಿ.

फ़स्द, स्त्री० ರಕ್ತನಾಡಿಯನ್ನು ಸೀಳಿ ಕೆಟ್ಟ ರಕ್ತವನ್ನು ಹೊರಗೆ ತೆಗೆಯುವಿಕೆ;—**खुलवाना या लेना** ಕೆಟ್ಟರಕ್ತವನ್ನು ತೆಗೆಸುವುದು; ಪ್ರಜ್ಞೆಯುಂಟಾಗಲು ಔಷಧಿ ಕೊಡಿಸುವುದು.

फ़स्ले-बहार, स्त्री० ವಸಂತ ಋತು.

फ़स्साद, पु० ಶಸ್ತ್ರಚಿಕಿತ್ಸಕ.

फ़हम, स्त्री० ತಿಳಿವಳಿಕೆ; ಜ್ಞಾನ.

फ़हमाइश, स्त्री० ಎಚ್ಚರಿಕೆ.

फहराना, अ० ಹಾರು; ರೆಕ್ಕೆ; ಬಡಿ. स० ಹಾರಿಸು.

फहरिश्त, स्त्री० ಅನುಕ್ರಮಣಿಕೆ; ಸೂಚಿ.

फ़हश, वि० ಅಶ್ಲೀಲ.

फ़हीम, वि० ತಿಳಿವಳಿಕಸ್ಥ; ಜ್ಞಾನಿ.

फांक, स्त्री० ಹೋಳು; ತುಂಡು.

फाँकना, स० ಮುಕ್ಕು; ನುಂಗು.

फाँकी, स्त्री० ತೊಳೆ; ಹೋಳು.

फाँड़ा, पु० ಧೋತ್ರದ ಮಡಿಕೆ.

फाँद, स्त्री० ಹಾರುವಿಕೆ; ಜಿಗಿತ. पु० ಸರಗುಣಿಕೆ; ಬಲೆ.

फाँदना, अ० ಹಾರು; ಜಿಗಿ. स० ದಾಟು; ಸಿಕ್ಕಿಸು.

फाँदी, स्त्री० ಕಟ್ಟು; ಹೊರೆ.

फाँस, स्त्री० ಪಾಶ; ಉರಲು; ತೊಡಕು; ಬಲೆ.

फाँसना, स० ಸಿಕ್ಕಿಸು; ಬಲೆಯಲ್ಲಿ ಹಿಡಿ.

फाँसी, स्त्री० ನೇಣು; ಉರುಲು; —**देना** ಫಾಸಿಶಿಕ್ಷೆ ವಿಧಿಸು.

फ़ाक़, पु० ಬಾಣದಮೊನೆ.

फ़ाक़ा, पु० ಉಪವಾಸ; ಹೊಟ್ಟೆಗಿಲ್ಲದಿರುವುದು.

फ़ाक़ा-कश, वि० ಹೊಟ್ಟೆಗಿಲ್ಲದವ; ಬಡವ.

फ़ाक़ा-ज़द, वि० ಹೊಟ್ಟೆಗಿಲ್ಲದೆ ನರಳುವವ.

फ़ाका-मस्त, वि० ಹೊಟ್ಟೆಗಿಲ್ಲದಿದ್ದರೂ ನಿಶ್ಚಿಂತೆಯಾಗಿರುವವ.

फ़ाख़ता, पु० ಪಾರಿವಾಳ.

फ़ाख़िर, वि० ಜಂಬಗಾರ; ಬೆಲೆಯುಳ್ಳ.

फाग, पु० ಹೋಳಿ ಹಬ್ಬ.

फागुन, पु० ಫಾಲ್ಗುನ ಮಾಸ.

फ़ाज़िर, वि० ದುಷ್ಟ; ಪೋಲಿ.

फ़ाज़िल, वि० ಅಧಿಕ; ಹೆಚ್ಚು. पु० ಪಂಡಿತ; ವಿದ್ವಾಂಸ.

फाटक, पु० ದೊಡ್ಡ ಬಾಗಿಲು.

फाड़ना, स० ಹರಿ; ಸಿಗಿ; ಸೀಳು.

फ़ातिहा, पु० ಪ್ರಾರ್ಥನೆ; ಕಾರ್ಯಾರಂಭ; ಮುಸಲ್ಮಾನರು ಸಮಾಧಿಯ ಮೇಲೆ ಆತ್ಮಶಾಂತಿಗಾಗಿ ಮಾಡುವ ಪ್ರಾರ್ಥನೆ.

फ़ातेह, वि० ಜೀವಿಸಿರುವ; ಜೀವಂತ.

फ़ानी, वि० ನಶ್ವರವಾದ.

फ़ानूस, पु० ದೊಡ್ಡ ದೀಪ.

फ़ाम, पु० ಬಣ್ಣ.

फ़ायक़, वि० ಶ್ರೇಷ್ಠ; ಉಚ್ಚ.

फ़ायज़, वि० ಪಡೆಯುವ; ವಿಜಯಿ.

फ़ायदा, पु० ಲಾಭ.

फ़ायदेमन्द, वि० ಲಾಭವುಳ್ಳ.

फ़ायल, पु० ಯಜಮಾನ; ಕರ್ತಾ.

फ़ारख़ती, स्त्री० ಸಾಲ ತೀರಿದುದರ ಬರವಣಿಗೆ.

फ़ारस, पु० ಪರ್ಷಿಯಾ ದೇಶ.

फ़ारसी, स्त्री० ಪರ್ಷಿಯನ್ ಭಾಷೆ.

फ़ारिग़, वि० ನಿಶ್ಚಿಂತ; ಕೆಲಸದಿಂದ ಬಿಡುವು ಪಡೆದ.

फ़ाल, स्त्री० ಶಕುನ ನೋಡುವುದು.

फ़ालतू, वि० ಮಿಕ್ಕ; ಉಳಿದ; ಕೆಲಸವಿಲ್ಲದ.

फ़ालिज, स्त्री० ಪಾರ್ಶ್ವವಾಯು.

फ़ालूदा, पु० ಗೋಧಿ ಗಂಜಿ.

फावड़ा, पु० ಸಣಿಕೆ; ನಲಿಕೆ; ಮಮ್ಮಟಿ.

फ़ाश, वि० ಪ್ರಕಟವಾದ; ಸ್ಪಷ್ಟ.

फ़ासिला, पु० ದೂರ; ಫಾಸಲೆ.

फाहा, पु० ಮುಲಾಮಿನ ಪಟ್ಟಿ.

फ़ाहिश, पु० ಪೋಲಿ.

फ़ाहिशा, स्त्री० ವ್ಯಭಿಚಾರಿಣಿ.

फ़िकरा, पु० ಮರೆಸುವ ಮಾತು; ಮೋಸ; ಗೇಲಿ.

फ़िकरे-बाज, वि० ಮೋಸಗಾರ.

फ़िक्र, स्त्री० ಚಿಂತೆ; ಯೋಚನೆ.

फ़िक्रमन्द, वि० ಚಿಂತಾಮಗ್ನ; ಚಿಂತೆಗೊಳಗಾದ.

फ़िज़ूल, वि० ವ್ಯರ್ಥ.

फिटकार, वि० ಬೈಗಳು; ಧಿಕ್ಕಾರ; ನಿಂದೆ; ಶಾಪವಿಡುವುದು.

फिटकिरी, स्त्री० ಪಟಿಕಾರ.

फिटन, स्त्री० ಕುದುರೆ ಸಾರೋಟು.

फ़ितना, पु० ಜಗಳ; ಗಲಾಟೆ.

फ़ितर, पु० ಬೆಳಗಿನಿಂದ ನಿರಾಹಾರಿಯಾಗಿದ್ದು ಸಂಜೆಗೆ ಪಾರಣೆ ಮಾಡುವುದು. (ರಂಜಾನ್ಹಬ್ಬ) ईदुल-फितर ಸಂತೋಷದಿಂದಿರುವ ಹಬ್ಬದದಿನ.

फ़ितरत, स्त्री० ಸ್ವಭಾವ; ತಿಳಿವಳಿಕೆ; ಜ್ಞಾನ.

फ़ितरती, वि० ಸ್ವಾಭಾವಿಕ.

फ़ितूर, पु० ವಿಕಾರ; ದೋಷ; ಹಾನಿ.

फ़िद्वी, वि० ಸ್ವಾಮಿಭಕ್ತ. पु० ಸೇವಕ.

फ़िदा, वि० ಪ್ರಾಣವನ್ನೇ ಕೊಡತಕ್ಕ; ಅನುರಕ್ತ.

फ़िदाई, पु० ಪ್ರಾಣವನ್ನು ಅರ್ಪಿಸುವವ.

फ़िदिया, पु० ಸೆರೆಯಿಂದ ಬಿಡಿಸಲು ಕೊಡುವ ದಂಡ.

फिर, क्रि० ಮತ್ತೆ; ಪುನಃ;—**भी** ಮತ್ತೂ, ಆದಾಗ್ಯೂ.

फ़िरक़ा, पु० ಜಾತಿ; ಪಂಗಡ; ಸಂಪ್ರದಾಯ.

फ़िरकाबन्दी, स्त्री० ಜಾತಿಯ ಕಟ್ಟುಪಾಡು.

फिरता, पु० ಹಿಂದಕ್ಕೆ ಕೊಡುವುದು; ಒಪ್ಪಿಕೊಳ್ಳುವುದು.

फ़िरदौस, पु० ತೋಟ; ಸ್ವರ್ಗ.

फिरना, अ० ಅಲೆ; ತಿರುಗು; ಮರಳು.

फ़िरनी, स्त्री० ರುಬ್ಬಿದ ಅಕ್ಕಿಪಾಯಸ.

फ़िराक़, पु० ವಿರಹ; ವಿಯೋಗ.

फिराव, पु० ತಿರುಗುವಿಕೆ; ತಿರುಗಾಟ.

फ़िरासत, स्त्री० ತೀಕ್ಷ್ಣಬುದ್ಧಿ.

फ़िल्-जुमला, क्रि० ಸಾರಾಂಶವಿಷ್ಟೇ; ಸಂಕ್ಷೇಪದಲ್ಲಿ.

फ़िल-फ़ौर, क्रि० ತಕ್ಷಣ.

फ़िल-हक़ीक़त, क्रि० ವಾಸ್ತವದಲ್ಲಿ.

फ़िल-हाल, क्रि० ಈ ಸಮಯದಲ್ಲಿ; ಈ ನಡುವೆ; ಸದ್ಯದಲ್ಲಿ.

फिल्ली, स्त्री० ಮೊನಖಂಡ; ಕಣಕಾಲು.

फिशाँ, वि० ಕಾರುವ; ಸುರಿಸುವ. **आतिश-फिशाँ** ಬೆಂಕಿಕಾರುವ.

फिस, अव्य० ಏನೂ ಇಲ್ಲ.

फिसड्डी, वि० ಏನೂ ಮಾಡಲಾಗದವ; ಹಿಂದುಳಿದವ.

फिसलना, अ० ಜಾರು; ಸರಿ.

फ़िसाद, पु० ಒಳಸಂಚು; ಜಗಳ; ಕಲಹ; ಪಿತೂರಿ.

फ़िहरिस्त, स्त्री० ಪಟ್ಟಿ; ಸೂಚೀ; ಸೂಚೀಪತ್ರ.

फ़ी, अव्य० ಪ್ರತಿಯೊಂದು; ತಲಾ.

फीका, वि० ಸಪ್ಪೆ; ನಿಸ್ಸಾರ.

फीकापन, पु० ರುಚಿಕರವಲ್ಲದ; ನೀರಸತ್ವ.

फ़ीता, पु० ಲಾಡಿ; ನವಾರ.

फ़ीरोज़ा, पु० ಇಂದ್ರನೀಲ ಮಣಿ.

फ़ीरोज़ी, वि० ಇಂದ್ರನೀಲ ವರ್ಣದ.

फ़ील, पु० ಆನೆ.

फ़ील-ख़ाना, पु० ಗಜಶಾಲೆ.

फ़ील-पा, पु० ಆನೆಕಾಲು ವ್ಯಾಧಿ; ಹುತ್ತಗಾಲು.

फ़ील-पाया, पु० ಸ್ತಂಭ; ಕಂಬ.

फील-वान, पु० ಮಾವುಟಿಗ.

फ़ीली, स्त्री० ಮೊನುಖಂಡ.

फ़ी-सदी, क्रि० ಶೇಕಡ.

फुँकना, अ० ಊದಲ್ಪಡು; ಭಸ್ಮವಾಗು.

फूँकनी, स्त्री० ಊದುಗೊಳವೆ.

फुँकरना, ಅಂ. ಬುಸುಗುಟ್ಟು.
फुँकार, पुं० ಬುಸುಗುಟ್ಟುವಿಕೆ.
फुगाँ, पुं० दे० **फगाँ**.
फुँदना, पुं० ಗೊಂಚಲು ; ಕುಚ್ಚು.
फुँदी, स्त्री० ಗಂಟು ; ಕಟ್ಟು.
फुंसी, स्त्री० ಬೊಬ್ಬೆ ; ಗುಳ್ಳೆ.
फुट, वि० ಒಂಟಿ ; ಬೇರೆಯಾದ ; ವಿಷಮ. पुं० ಅಡಿ.
फुटकर / **फुटकल** } वि० ವಿಷಮ ; ಚಿಲ್ಲರೆ.
फुटका, पुं० ಗುಳ್ಳೆ ; ಬಾಸುಂಡೆ.
फुदकना, अं० ನಲಿದಾಡು.
फुदकी, स्त्री० ಕುಣಿತ ; ಒಂದುಪಕ್ಷಿ.
फुनगी, स्त्री० ಚಿಗುರು ; ತೆನೆ.
फुप्फुस, पुं० ಶ್ವಾಸಕೋಶ.
फुफकार, पुं० ಬುಸುಗುಟ್ಟುವಿಕೆ.
फुफकारना, अं० ಬುಸುಗುಟ್ಟು.
फुफिया, वि० ಸೋದರತ್ತೆಯ ಸಂಬಂಧವುಳ್ಳ.
फुफेरा, वि० ಸೋದರತ್ತೆಯ ಕಡೆ ಸಂಬಂಧದ.
फुर, वि० ಸರಿಯಾದ ; ನಿಜ.
फुरक़त, स्त्री० ವಿರಹ.
फुरती, स्त्री० ತ್ವರೆ ; ವೇಗ.
फुरतीला, वि० ಚಟುವಟಿಕೆಯುಳ್ಳ ; ಚುರುಕಾದ.
फुरफुराना, स० ರೆಕ್ಕೆ ಜಾಡಿಸು.
फुरसत, स्त्री० ಬಿಡುವು ; ವಿರಾಮ ; ಅವಕಾಶ.
फुरहरी, स्त्री० ಅದುರುವಿಕೆ; ಕಂಪನ.
फुलका, पुं० ಹೊಪ್ಪಳೆ; ತೆಳುವಾದ ಚಪಾತಿ.
फुलकारी, स्त्री० ಬುಟ್ಟಾ ಕೆಲಸ.
फुलझड़ी, स्त्री० ಹೂ ಬಾಣ.
फुलवर, पुं० ಕಸೂತಿ ಕೆಲಸವಮಾಡಿದ ಒಂದು ತೆಳುವಾದ ಬಟ್ಟೆ.
फुलवारी, स्त्री० ಹೂದೋಟ; ಉದ್ಯಾನವನ.
फुलाना, स० ಉಬ್ಬಿಸು ; ಹಿಗ್ಗಿಸು ; ಅರಳಿಸು.
फुलाव, पुं० ಉಬ್ಬು ; ಉಬ್ಬಟೆ.
फुलिंग, पुं० ಕಿಡಿ ; ಕೆಂಡ.
फुलेल, पुं० ಪರಿಮಳ ತೈಲ.
फुलेहरा, पुं० ತೋರಣ; ಗೊಂಚಲು.
फुलौरी, स्त्री० ಒಂದು ಬಗೆಯ ಬೋಂಡ.
फुल्ल, वि० ಅರಳಿದ; ವಿಕಸಿತವಾದ.
फुसफुसा, स्त्री० ಪಿಸುಪಿಸು ಮಾತು.
फुसफुसाना, स० ಪಿಸುಪಿಸು ಮಾತಾಡು.
फुसलाऊ, वि० ಪುಸಲಾಯಿಸುವ.
फुसलाना, स० ಪುಸಲಾಯಿಸು ; ಬುಲ್ಲವಿಸು.
फुसलाव, पुं० ಪುಸಲಾಯಿಸುವಿಕೆ ; ಬುಲ್ಲವಣೆ.
फुहार, स्त्री० ಹನಿ ; ತುಂತುರು.
फुहारा, पुं० ಕಾರಂಜಿ.
फूँकना, स० ಊದು.
फूट, स्त्री० ಒಡಕು; ಬಿರುಕು; ಕಲಹ.
फूटना, अं० ಒಡೆ ; ಬಿರಿ ; ಮುರಿ.

फूटा, वि० ಒಡೆದ.

फूफा, पु० ಸೋದರತ್ತೆಯ ಗಂಡ.

फूफी, स्त्री० ಸೋದರತ್ತೆ.

फूल, पु० ಹೂವು; ಪುಷ್ಪ; ಬುಟ್ಟಾ ಕೆಲಸ; ಕಂಚು.

फूलगोभी, स्त्री० ಹೂ ಕೋಸು.

फूलदान, पु० ಹೂವಿನ ಕುಚ್ಚಿಡುವ ಪಾತ್ರೆ.

फूलदार, वि० ಬುಟ್ಟಾಕೆಲಸ ಮಾಡಿದ; ಹೂಗಳುಳ್ಳ.

फूलना, अ० ಹೂ ಬಿಡು; ಹೂವಾಗು; ಅರಳು; ಉಬ್ಬು; ಹಿಗ್ಗು.

फूला, वि० ಅರಳಿದ; ಉಬ್ಬಿದ; ಹಿಗ್ಗಿದ.

फूली, स्त्री० ಕಣ್ಣಿನ ಹೂ.

फूस, पु० ಒಣಹುಲ್ಲು; ಹುಲ್ಲುಕಡ್ಡಿ.

फूसी, स्त्री० ಹೊಟ್ಟು; ಬೂಸ.

फूहड़, वि० ಅಶಿಕ್ಷಿತ; ಅಗಡು; ಬಂಡ.

फेंकना, स० ಎಸೆ; ಒಗೆ; ಬಿಸಾಡು.

फेंकैत, पु० ಮೋಸಗಾರ.

फेंट, स्त्री० ಸೊಂಟ; ನಡು.

फेंटना, स० ಕಲಸು; ತೀಯು.

फेंटा, पु० ನಡುಕಟ್ಟು.

फेंटी, स्त्री० ನೂಲಿನ ಕಂಡು.

फेन, पु० ನೊರೆ; ಬುರುಗು.

फेनिल, वि० ನೊರೆಯುಳ್ಳ.

फेनी, स्त्री० ಒಂದು ಭಕ್ಷ್ಯ; ಫೇಣಿ.

फेफड़ा, पु० ಶ್ವಾಸಕೋಶ; ಉಸಿರಿನ ಚೀಲ.

फेर, पु० ಸುತ್ತು; ಬದಲಾವಣೆ; ಸಿಕ್ಕು; ತೊಡಕು; ಯುಕ್ತಿ; **हेर—**ಬದಲಾವಣೆ.

फेरना, स० ತಿರುಗಿಸು; ಸವರು; ವಾಪಸುಮಾಡು.

फेरफार, पु० ಬದಲಾವಣೆ; ಮಾರ್ಪಾಡು; ಅದಲು ಬದಲು.

फेरा, पु० ಸುತ್ತುವಿಕೆ; ಪರ್ಯಟನ; ಸಂಚಾರ; ಮಡಿಕೆ.

फेरी, स्त्री० ಪ್ರದಕ್ಷಿಣೆ; ಸಂಚಾರ; ಗಸ್ತು.

फेरीवाला, पु० ಸಾಮಾನುಗಳನ್ನು ಮಾರಲು ಹೊತ್ತುಕೊಂಡು ತಿರುಗುವವ.

फ़ेल, पु० ಕೆಲಸ; ಕಾರ್ಯ; ಕ್ರಿಯಾಪದ;**—मुतअद्दी,** पु० ಸಕರ್ಮಕ ಕ್ರಿಯೆ;**—लाज़िमी,** ಅಕರ್ಮಕ ಕ್ರಿಯೆ.

फ़ेल-जामिनी, स्त्री० ನೇಕ್‌ಚಾಲ್ ಮುಚ್ಚಳಿಕೆ; ಒಳ್ಳೆ ನಡತೆಯಲ್ಲಿರುವುದಾಗಿ ಬರೆದುಕೊಡುವ ಪತ್ರ.

फेली, वि० ಕೆಟ್ಟನಡತೆಯುಳ್ಳ.

फ़ेहरिस्त, स्त्री० ಸೂಚಿ; ಪಟ್ಟಿ.

फ़ैज़, पु० ಪರೋಪಕಾರ; ಉಪಕಾರ; ಹಿತ; ಲಾಭ.

फ़ैज़-रसाँ, पु० ಪರೋಪಕಾರಿ.

फ़ैज़े-आम, पु० ಲೋಕೋಪಕಾರ; ಜನೋಪಕಾರ.

फ़ैयाज़, वि० ದಾನಿ; ಉದಾರ.

फ़ैयाज़ी, स्त्री०, ದಾನಶೀಲತೆ.
फ़ैल, पु० ಕೆಲಸ; ಆಟ.
फैलना, अ० ಹರಡು; ಹರವು; ಹಬ್ಬು;
फ़ैलसूफ़, पु० ವಿದ್ವಾಂಸ; ಜಾಣ; ಮೋಸಗಾರ.
फैलाना, स० ಹರಡು; ಹರವು; ಹಬ್ಬಿಸು.
फैलाव, पु० ವಿಸ್ತಾರ; ಹರವು; ಪ್ರಚಾರ.
फ़ैसला, पु० ತೀರ್ಪು; ತೀರ್ಮಾನ; ನಿರ್ಣಯ.
फोकट, वि० ಉಚಿತವಾಗಿ; ಬಿಟ್ಟಿ; ಪುಗಸಟ್ಟೆ; ಪುಕ್ಕಟೆ;—में ಉಚಿತವಾಗಿ; ಪುಕ್ಕಟೆಯಾಗಿ.
फोकल, वि० ಬರಿದು; ಶೂನ್ಯ.
फोकला पु० ತೊಗಲು.
फोड़ना, स० ಒಡೆ; ಮುರಿ.
फोड़ा, पु० ಕುರು; ಬೊಬ್ಬೆ.
फोड़िया, स्त्री० ಗುಳ್ಳೆ.
फोता, पु० ಚೀಲ; ಅಂಡಕೋಶ; ಕಂದಾಯ; ಖಜಾನೆ.
फ़ोतेदार, पु० ಕೋಶಾಧ್ಯಕ್ಷ.
फ़ोला, पु० ಹತ್ತಿಯ ಹಂಜಿ.
फ़ौक़, वि० ಶ್ರೇಷ್ಠ; ಉತ್ತಮ.
फ़ौज, स्त्री० ದಳ; ಪಡೆ; ಸೈನ್ಯ; ದಂಡು.
फ़ौजदार, पु० ದಳಪತಿ.
फौजदारी, स्त्री० ಜಗಳ; ದೊಂಬಿ; ಕ್ರಿಮಿನಲ್ ಕೋರ್ಟು; ಕ್ರಿಮಿನಲ್ ವ್ಯಾಜ್ಯ.
फ़ौजी, वि० ಸೇನೆಗೆ ಸಂಬಂಧಿಸಿದ.
फ़ौत, स्त्री० ಅಳಿವು; ನಾಶ; ಮೃತ್ಯು. वि० ಗತಿಯಾದ.
फ़ौती, स्त्री० ಮೃತ್ಯು.
फ़ौर, पु० ಸಮಯ; ಹೊತ್ತು.
फौरन, क्रि० ಬೇಗನೆ; ತಕ್ಷಣ.
फ़ौलाद, पु० ಉಕ್ಕು.
फ़ौलादी, वि० ಉಕ್ಕಿನ.
फौव्वारा, पु० ತುಂತುರು; ಹನಿ; ಕಾರಂಜಿ.
फ्रांसीसी, वि० ಫ್ರಾನ್ಸ್ ದೇಶದ.

ब

बंक, वि० ಬಾಗಿದ; ಡೊಂಕಾದ ವಕ್ರ. पु० ಬ್ಯಾಂಕು.
बंका, वि० ಬಾಗಿದ.
बंगला, पु० ಬಂಗಲೆ. स्त्री० ಬಂಗಾಳಿ ಭಾಷೆ.
बंचक, पु० ಮೋಸಗಾರ.
बंचवाना, स० ಓದಿಸು.
बंजर, पु० ಬಂಜರು ಭೂಮಿ.
बँटना, अ० ಹಂಚಲ್ಪಡು; ವಿಂಗಡಿಸಲ್ಪಡು.
बँटवाना, स० ಹಂಚಿಸು.
बँटवारा, पु० ಹಂಚುವಿಕೆ; ಬಟವಾಡೆ.
बँटाई, स्त्री० ಹಂಚುವಿಕೆ; ಹಂಚಿದುದಕ್ಕೆ ಕೂಲಿ; ವಾರದ ಸಾಗುವಳಿ.
बँटाना, स० ಹಂಚು; ಪಾಲು ಮಾಡು; ಬಟವಾಡೆ ಮಾಡು; हाथ—ನೆರವಾಗು.

बंडी, स्त्री० ಒಳ ಅಂಗಿ.

बंद, वि० ಮುಚ್ಚಿದ; ಕಟ್ಟಲ್ಪಟ್ಟ; ನಿಂತ; ಮುಗಿದ. पु० ಕಟ್ಟು; ಸೆರೆ.

बंदगी, स्त्री० ನಮಸ್ಕಾರ; ಸಲಾಮು; ಸೇವೆ.

बंदगोभी, स्त्री० ಕೋಸುಗೆಡ್ಡೆ.

बंदनवार, पु० ತೋರಣ.

बंदना, स्त्री० ವಂದನೆ; ಸ್ತುತಿ; ನಮಸ್ಕರಿಸುವುದು. स० ವಂದಿಸು; ನಮಸ್ಕರಿಸು.

बंदर, पु० ಮಂಗ; ಕೋತಿ; ಕಪಿ; ವಾನರ; ರೇವು; ಬಂದರು.

बंदरगाह, पु० ರೇವು; ಬಂದರು.

बंदा, पु० ಅಡಿಯಾಳು; ಗುಲಾಮು; ಸೇವಕ; ದಾಸ.

बंदिश, स्त्री० ಕಟ್ಟು; ಏರ್ಪಾಡು; ವ್ಯವಸ್ಥೆ.

बंदी, पु० ವಂದಿ ಮಾಗಧ; ಸೆರೆಯಾಳು; ಕೈದಿ. स्त्री० ದಾಸಿ.

बंदीख़ाना, पु० ಸೆರೆಮನೆ; ಕಾರಾಗೃಹ; ಬಂದಿಖಾನೆ.

बंदीवान, पु० ಕೈದಿ.

बंदूक, स्त्री० ತುಪಾಕಿ; ಬಂದೂಕು.

बंदूकची, पु० ತುಪಾಕಿ ಹಾರಿಸುವವನು.

बंदोबस्त, पु० ಏರ್ಪಾಡು; ವ್ಯವಸ್ಥೆ; ಕಂದಾಯದ ನಿರ್ಧಾರ.

बंध, पु० ಬಂಧನ; ಕಟ್ಟು.

बंधक, पु० ಅಡಮಾನ; ಅಡವು.

बंधन, पु० ಕಟ್ಟು; ಬಂಧನ; ಸೆರೆ; ಕಾರಾಗೃಹ.

बंधना, अ० ಕಟ್ಟಲ್ಪಡು; ಕಟ್ಟಿಹೋಗು; ಬದ್ಧನಾಗು; ಕಟ್ಟಿಬೀಳು.

बंधवाना, स० ಕಟ್ಟಿಸು.

बंधाई, स्त्री० ಕಟ್ಟುವಿಕೆ.

बंधान, पु० ನಿಯಮ; ಕಟ್ಟಳೆ.

बंधाना, स० ಕಟ್ಟಿಸು; ಬಿಗಿಸು.

बंधु, पु० ಸೋದರ; ನೆಂಟ.

बंधुआ, पु० ಕೈದಿ; ಬಂದಿ.

बंधुता, स्त्री० } ಬಾಂಧವ್ಯ.
बंधुत्व, पु० }

बंधेज, पु० ಕಟ್ಟಳೆ; ಕಟ್ಟು; ತಡೆ; ಪ್ರತಿಬಂಧ.

बंपुलिस, स्त्री० ಸಾರ್ವಜನಿಕ ಕಕ್ಕಸು.

बंब, स्त्री० ಸಿಡಿಮದ್ದಿನ ಗುಂಡು; ಬಾಂಬು.

बंबा, पु० ನೀರು ಕೊಳಾಯಿ; ಪಂಪು.

बंसलोचन, पु० ಬಿದಿರಗಿಣ್ಣು.

बंसी, स्त्री० ಕೊಳಲು; ಪಿಳ್ಳಂಗೋವಿ.

बंहगी, स्त्री० ಅಡ್ಡೆ; ಕಾವಡಿ.

बक, पु० ಕೊಕ್ಕರೆ. स्त्री० ಹರಟೆ; ಗೋಳು.

बक़चा, पु० ಚಿಕ್ಕಮೂಟೆ.

बकझक, स्त्री० ಒದರಾಟ; ಬಿರುಸಾದ ಮಾತುಗಳು.

बकतर, पु० ಯುದ್ಧ ಕವಚ.

बकध्यान, पु० ಕಪಟ ವೇಷ.

बकना, स० ಒದರಾಡು; ಹರಟು; ಬೊಗಳು.

बकबक, स्त्री० ಹರಟೆ; ಒದರಾಟ.

बक़र, पु० ಹಸು; ಎತ್ತು.

बकरा, पु० ಹೋತ.

बकरी, स्त्री० ಆಡು; ಮೇಕೆ.

बकला, पु० ತೊಗಟೆ; ತಿಗಡು.

बकवाद } **बकवास** } स्त्री० ಪೊಳ್ಳು ಹರಟೆ; ಅರ್ಥವಿಲ್ಲದೆ ಮಾತನಾಡುವುದು; ವೃಥಾಲಾಪ.

बकसना, स० ದಯಪಾಲಿಸು; ಕ್ಷಮಿಸು.

बकसाना, स० ಕ್ಷಮಿಸು.

बकसीस, स्त्री० ಇನಾಮು.

बक़ाया, पु० ಉಳಿತಾಯ; ಶೇಷ.

बकावल, पु० ಅಡಿಗೆಯಭಟ್ಟ.

बकावली, स्त्री० ಸುಗಂಧರಾಜಹೂ.

बक़िया, वि० ಉಳಿದಿದ್ದು.

बकुचना, अ० ಮುದರಿಹೋಗು.

बकुचा, पु० ಚಿಕ್ಕ ಗಂಟು.

बकुल, पु० ಬಕುಲ ಮರ.

बकोटना, स० ಚಿವುರು; ಕೆದಕು.

ब-क़ौल, क्रि० ಯಾವನಾದರೊಬ್ಬನ ಮಾತಿಗನುಸಾರ; ಮಾತಿನ ಮೇರೆಗೆ.

बक्कल, पु० ತೊಗಟೆ; ತಿಗಡು.

बक़्क़ाल, पु० ಕಿರಾಣಿ ಅಂಗಡಿಯವ.

बक्की, पु० ಹರಟೆ ಮಲ್ಲ.

बक्स, पु० ಪೆಟ್ಟಿಗೆ.

बक्सना, स० दे० **बकसना.**

बखरा, पु० ಪಾಲು; ಭಾಗ.

बखसीस, स्त्री० दे० **बकसीस.**

बखान, पु० ವರ್ಣನೆ; ಸ್ತುತಿ.

बखानना, स० ವರ್ಣಿಸು; ಬಣ್ಣಿಸು.

बखार, पु० ಉಗ್ರಾಣ; ಕಣಜ.

बख़िया, पु० ಗಟ್ಟಿಯಾದ ಒಂದು ಬಗೆಯ ಹೊಲಿಗೆ.

बख़ील, वि० ಲೋಭಿ; ಕೃಪಣ.

बख़ीली, स्त्री० ಕಾರ್ಪಣ್ಯ.

ब-ख़ूबी, क्रि० ಸರಿಯಾಗಿ; ಚೆನ್ನಾಗಿ.

बख़ूर, पु० ಸುಗಂಧಿ.

बखेड़ा, पु० ರಗಳೆ; ತಂಟೆ; ಜಗಳ; ತಕರಾರು.

बखेड़िया, वि० ಜಗಳಗಂಟ.

बखेरना, स० ಚಲ್ಲು; ಚದರಿಸು.

बख़ैर, क्रि० ಕ್ಷೇಮವಾಗಿ; ಕುಶಲವಾಗಿ.

बख़्त, पु० ಅದೃಷ್ಟ; ಹಣೆಬರಹ; ಭಾಗ್ಯ.

बख़्तर, पु० ಕವಚ.

बख़्तावर, वि० ಭಾಗ್ಯಶಾಲಿ; ಅದೃಷ್ಟವಂತ.

बख़्शाना, स० ದಯಪಾಲಿಸು; ಕೊಡು; ಬಿಡು; ಕ್ಷಮಿಸು.

बख़्शिश, पु० ಇನಾಮು; ಬಹುಮಾನ; ದಾನ.

बख़्शिश-नामा, पु० ದಾನಪತ್ರ.

बख़्शी, पु० ಸಂಬಳ ಹಂಚುವ ಅಧಿಕಾರಿ.

बगई, स्त्री० ನಾಯಿ ತೊಣಚಿ.

बगल्लुट } क्रिं० ಸರಸರನೆ; ಬೇಗ
बगट्टुट, } ಬೇಗನೆ.

बगड़ा, पुं० ಠಕ್ಕು; ಮೋಸ.

बगमेल, पुं० ಜೋಡಿ ಕುದುರೆಗಳು ಸಮವಾಗಿ ಹೋಗುವಿಕೆ.

बगरना, अ० ಹರಡು; ಚದರು.

बगराना, स० ಚಲ್ಲು; ಚದರಿಸು.

बग़ल, स्त्री० ಕಂಕುಳು; ಕಕ್ಷ; ತೆಕ್ಕೆ; ಪಕ್ಕ; ಮಗ್ಗಲು; ಪಾರ್ಶ್ವ; —**गरम करना** ಸುಖಭೋಗಿಸುವುದು;—**मे मुंह डलना** ನಾಚಿಕೆ ಪಡುವುದು. **बग़लें झांकना** ನಾಚಿ ಓಡಲು ಯತ್ನಿಸು. **बगलें बजाना** ಬಹಳವಾಗಿ ಆನಂದಪಡುವುದು.

बग़ल-गीर, वि० ಪಕ್ಕದಲ್ಲಿರುವವ.

बगलबंदी, स्त्री० ಒಂದು ಬಗೆಯ ಅಂಗಿ.

बगला, पुं० ಕೊಕ್ಕರೆ;—**भगत** ಠಕ್ಕ; ಮೋಸಗಾರ.

बगलियाना, अ० ಪಕ್ಕಕ್ಕೆ ಸರಿ; ಮಗ್ಗಲಿಗೆ ಹೋಗು. स० ಪಕ್ಕಕ್ಕೆ ಸರಿಸು.

बग़ली, स्त्री० ದರ್ಜಿಯು ಸೂಜಿದಾರ ಮೊದಲಾದುವನ್ನು ಇಟ್ಟುಕೊಳ್ಳುವ ಚೀಲ; ತೋಳುಪಟ್ಟಿ; ಕುಸ್ತಿಯ ಒಂದು ಪಟ್ಟು. वि० ಕಂಕುಳಿನ; ಪಕ್ಕದ.

बगार, पुं० ದೊಡ್ಡಿ; ಕೊಟ್ಟಿಗೆ.

बगारना, स० ಹರಡಿಸು; ಚದರಿಸು.

बग़ावत, स्त्री० ಪಿತೂರಿ; ವಿದ್ರೋಹ.

बगिया } स्त्री० ಉಪವನ; ಉದ್ಯಾನ
बगीचा } ವನ.

बगुला, पुं० ಕೊಕ್ಕರೆ.

बगेरी, स्त्री० ಗುಬ್ಬಚ್ಚಿ.

बग़ैर, अव्य० ಅಲ್ಲದೆ; ಹೊರತಾಗಿ.

बग्गी } स्त्री० ಕುದುರೆ ಸಾರೋಟು.
बग्घी }

बघंबर, पुं० ಹುಲಿ ಚರ್ಮ.

बघनहां, पुं० ವ್ಯಾಘ್ರನಖವೆಂಬ ಆಯುಧ; ಹುಲಿಯ ಉಗುರವನಿಟ್ಟು ಮಾಡಿದ ಚಿನ್ನದ ಆಭರಣ.

बघार, पुं० ಒಗ್ಗರಣೆ.

बघारना, स० ಒಗ್ಗರಣೆಹಾಕು; **शेखी**— ಜಂಭ ಕೊಚ್ಚು.

बचत, स्त्री० ಉಳಿತಾಯ; ಲಾಭ.

बचन, पुं० ಮಾತು; ವಚನ; ಪ್ರತಿಜ್ಞೆ.

बचना, स० ಉಳಿ; ತಪ್ಪಿಸಿಕೊಳ್ಳು; ದೂರವಾಗಿರು.

बचपन, पुं० ಎಳೆತನ; ಚಿಕ್ಕಂದು; ಬಾಲ್ಯ.

बचाना, स० ಮಿಗಿಸು; ಉಳಿಸು; ಕಾಪಾಡು; ಬಚ್ಚಿಡು.

बचाव, पुं० ರಕ್ಷಣೆ.

बचा, पुं० ಮಗು; ಹಸುಳೆ; ಮರಿ.

बछ } पुं० ಕರು.
बछड़ा }

बछनाग, पुं० ವತ್ಸನಾಭಿ.

बछरा, पुं० दे० **बछड़ा.**

बछेड़ा, पुं० ಕುದುರೆ ಮರಿ.

बजंत्री, पुं० ವಾದ್ಯ ಬಾರಿಸುವವ.

बजका, पुं° ಒಂದು ಬಗೆಯ ಪಕೋಡ.

बजना, अ० ಶಬ್ದವಾಗು; (ಘಂಟೆ) ಹೊಡಿ; ಮೊಳಗು.

बजनियाँ, पुं० ವಾದ್ಯಗಳನ್ನು ಬಾರಿಸುವವ.

बजबजाना, अ० ಹಳಸಿ ಹೋಗು.

बजरा, पुं० ದೊಡ್ಡ ನಾವೆ; ದೋಣಿ. ರಾಗಿಯಂತಹ ಸಜ್ಜೆಯೆಂಬ ಒಂದು ಧಾನ್ಯ.

बजवाई, स्त्री० ವಾದ್ಯಗಾರನ ಮಜೂರಿ.

बजवाना, स० ಬಾರಿಸಿಸು.

बजा, वि० ಸರಿ; ಉಚಿತ; ಯುಕ್ತ; ತಕ್ಕ;—**लाना** ಪೂರ್ತಿಮಾಡು; ಪಾಲಿಸು.

बजाज़, पुं० ಬಟ್ಟೆಗಳ ವ್ಯಾಪಾರಿ

बजाज़ा, पुं० ಬಟ್ಟೆ ವ್ಯಾಪಾರಿಗಳ ಅಂಗಡಿ ಸಾಲು.

बजाज़ी, स्त्री० ಬಟ್ಟೆಗಳ ವ್ಯಾಪಾರ; ಜವಳಿ ವ್ಯಾಪಾರ.

बजाना, स० ಬಾರಿಸು; ಮೊಳಗಿಸು.

बजाय, अव्य० ಬದಲಾಗಿ; ಪ್ರತಿಯಾಗಿ; ಸ್ಥಾನದಲ್ಲಿ.

बज़ार, पुं० दे० बाज़ार.

ब-जिन्स, क्रि० ಹಾಗೆಯೇ; ತದ್ರೂಪ.

बजुज़, क्रि० ಇದಲ್ಲದೆ.

बज्र, पुं० ವಜ್ರ.

बज़्ज़, पुं० ಬಟ್ಟೆಗಳು; ಸಾಮಾನುಗಳು.

बज़्म, स्त्री० ನಾಟಕಶಾಲೆ; ಸಭೆ.

बझना, अ० ಸಿಕ್ಕಿಕೊಳ್ಳು; ಕಟ್ಟಿಬೀಳು.

बझाना, स० ಸಿಕ್ಕಿಸು.

बझाव, पुं० ತೊಡಕು; ಗಂಟು; ಸಿಕ್ಕು; ಗೋಜು.

बट, पुं० ದಾರಿ; ಮಾರ್ಗ; ಹಗ್ಗದ ಹುರಿ; ಆಲದ್ಮರ.

बटखरा, पुं० ತೂಕದ ಬಟ್ಟು.

बटना, स० ಹೊಸೆ; ತಿರಿಚು. अ० ಅರೆಯಲ್ಪಡು.

बटपार / **बटमार**, पुं० ಹಾದಿಗಳ್ಳ.

बटमारी, स्त्री० ದರೋಡೆ.

बटला, पुं० ದೊಡ್ಡ ಕೊಳದಪ್ಪಲೆ; ಗಂಗಾಳ.

बटली / **बटलोई**, स्त्री० ಸಣ್ಣ ಕೊಳದಪ್ಪಲೆ.

बटवाना, स० ಹಂಚಿಸು; ಹೊಸೆಯಿಸು.

बटवार, पुं० ಕಾವಲುಗಾರ.

बटाई, स्त्री० ಹೊಸೆಯುವಿಕೆ; ಹೊಸೆಯುವುದಕ್ಕೆ ಕೊಡುವ ಕೂಲಿ.

बटाऊ, पुं० ಹಾದಿಹೋಕ; ಪ್ರಯಾಣಿಕ.

बटी, स्त्री० ಮಾತ್ರೆ; ಗುಳಿಗೆ; ವಡೆ.

बटु, पुं० दे० वटु.

बटुआ, पुं० ಹಣದ ಚೀಲ; ಚಿಕ್ಕ ತಪ್ಪಲೆ.

बटुक, पुं० दे० वटु.

बटुवा, पु० दे० बटुआ.

बटेर, स्त्री० ಬುರಲಿ ಹಕ್ಕಿ.

बटोर, पु० ರಾಶಿ; ಗುಡ್ಡೆ.

बटोरना, स० ರಾಶಿಮಾಡು; ಗುಡ್ಡೆ ಮಾಡು.

बटोही, पु० ದಾರಿಗ; ಪ್ರಯಾಣಿಕ.

बट्टा, पु० ಸೋಡಿ; ವಟ್ಟ;—**लगना** ಕಳಂಕಿತವಾಗುವುದು; — **खाता** ನಷ್ಟವಾದ್ದನ್ನು ಬರೆದಿಡುವ ಲೆಕ್ಕದಪುಸ್ತಕ.

बट्टी, स्त्री० ಸಣ್ಣ ತುಂಡು.

बड़, पु० ಆಲದಮರ.

बड़प्पन, पु० ದೊಡಸ್ತಿಕೆ; ಮಹತ್ವ; ಗೌರವ.

बड़बड़ाना, अ० ಕನವರಿಸು; ಬಡಬಡಿಸು.

बड़बड़िया, वि० ಬಾಯಿಹರಕ.

बड़बोल } **बड़बोला** } वि० ಹರಟೆಗಾರ; ಜಂಭಗಾರ; ಬೊಗಳೆಕೆಂಚ.

बड़भाग } **बड़भागी** } वि० ಅದೃಷ್ಟಶಾಲಿ; ಭಾಗ್ಯವಂತ.

बड़वाग्नि } **बड़वानल** } पु० ನೀರ್ಕಿಚ್ಚು; ಬಡಬಾಗ್ನಿ.

बड़ा, वि० ದೊಡ್ಡ; ಹಿರಿಯ; ಶ್ರೇಷ್ಠ; ಬಹಳ; ಹೆಚ್ಚು.

बड़ाई, स्त्री० ದೊಡ್ಡಸ್ತಿಕೆ; ಹೊಗಳಿಕೆ; ಪ್ರಶಂಸೆ.

बड़ी, स्त्री० ಸಂಡಿಗೆ.

बड़ेलाट, पु० ವೈಸರಾಯರು.

बढ़, वि० ಹೆಚ್ಚು; ಅಧಿಕ;—**कर** ಹೆಚ್ಚಿದ; ಒಳ್ಳೆಯ.

बढ़ई, पु० ಮರಗೆಲಸದವ; ಬಡಗಿ.

बढ़ती, स्त्री० ವೃದ್ಧಿ; ಹೆಚ್ಚುವಳಿ; ಬೆಳವಣಿಗೆ; ಆದಾಯ; ಲಾಭ.

बढ़ना, अ० ಬೆಳೆ; ಹೆಚ್ಚು; ಅಭಿವೃದ್ಧಿಯಾಗು; ವ್ಯಾಪಿಸು; ಮುಂದುವರಿ.

बढ़नी, स्त्री० ಪೊರಕೆ; ಕಸಬರಲು.

बढ़ाना, स्त्री० ಬೆಳೆಯಿಸು; ಹೆಚ್ಚಿಸು; ಮುಂದುವರಿಸು; ಅಭಿವೃದ್ಧಿಗೆ ತರು; ಹರಡಿಸು.

बढ़ाव, पु० ಬೆಳವಣಿಗೆ; ವಿಸ್ತಾರ; ವ್ಯಾಪ್ತಿ; ವೃದ್ಧಿ.

बढ़ावा, पु० ಪ್ರೋತ್ಸಾಹ; ಉತ್ತೇಜನೆ.

बढ़िया, वि० ಒಳ್ಳೆಯ; ಉತ್ತಮವಾದ; ಪ್ರಶಸ್ತವಾದ.

बढ़ियाल, पु० ಪೂರ; ಪ್ರಳಯ.

बढ़ोतरी, स्त्री० दे० बढ़ती.

बणिक्, पु० ವ್ಯಾಪಾರಿ.

बतंगड़, पु० ರಗಳೆ; ಹಗರಣೆ.

बतक, पु० ಬಾತುಕೋಳಿ.

बतकही, स्त्री० ಮಾತುಕತೆ.

बतक्कड़, पु० ಹರಟೆಮಲ್ಲ; ಮಾತುಗಾರ.

बतख, पु० ಬಾತುಕೋಳಿ.

बतराना, अ० ಮಾತಾಡು; ಸಂಭಾಷಿಸು.

बतलाना } **बताना** } स० ತಿಳಿಯಪಡಿಸು; ಹೇಳು; ತೋರಿಸು.

बतास, स्त्री० ಗಾಳಿ; ವಾಯು; ವಾತರೋಗ.

बतासा, पुं० ಬತ್ತಾಸು.
बतिया, स्त्री० ಹೀಚು; ಮಿಡಿಗಾಯಿ.
बतियाना, स० ಮಾತಾಡು; ಸಂಭಾಷಿಸು.
बतियार, पुं० ಮಾತುಕತೆ; ಸಂಭಾಷಣೆ.
बतौर, क्रि० ವಿಧವಾಗಿ; ಪ್ರಕಾರವಾಗಿ; ಅಂತೆ.
बत्ती, स्त्री० ಮೇಣದ ಬತ್ತಿ; ದೀಪ.
बथान, पुं० ದನದಕೊಟ್ಟಿಗೆ.
बथुआ, पुं० ಒಂದು ಸೊಪ್ಪು.
बद, वि० ಕೆಟ್ಟ.
बद-अमली, स्त्री० ಕೆಟ್ಟ ಆಡಳಿತ.
बद-इख़लाक़ी, स्त्री० ದುರಾಚಾರ.
बद-इन्तज़ामी, स्त्री० ಕೆಟ್ಟ ವ್ಯವಸ್ಥೆ.
बद-कार, वि० ಕೆಟ್ಟನಡತೆಯುಳ್ಳ.
बद-ख़्वाह, वि० ಕೆಟ್ಟದ್ದನ್ನು ಬಯಸುವ.
बद-गुमान, वि० ಸಂದೇಹಪಡುವ.
बद गो, वि० ದುರ್ಭಾಷೆಯನ್ನಾಡುವ; ಚಾಡೀಖೋರ; ಅಪಶಕುನ.
बद-चलन, वि० ದುರಾಚಾರಿ.
बद-ज़बान, वि० ದುರ್ಭಾಷೆಯನ್ನಾಡುವ.
बद-ज़ात, वि० ನೀಚಕುಲದ; ದುಷ್ಟ; ಕೆಟ್ಟವ.
बद-तमीज़, वि० ಅಸಭ್ಯ; ಕೆಟ್ಟನಡತೆಯ.
बद-तर, वि० ಅದಕ್ಕಿಂತ ಕೆಟ್ಟ.
बद-दयानत, वि० ಅಪ್ರಾಮಾಣಿಕ.
बद-दुआ, स्त्री० ಶಾಪ.
बदन, पुं० ಶರೀರ; ದೇಹ; ಮೈ.
बद-नसीब, वि० ಮಂದಭಾಗ್ಯ.
बद-नसीबी, स्त्री० ದುರ್ಭಾಗ್ಯ.
बदना, स० ಹೇಳು; ವರ್ಣಿಸು.
वर्जन, पु० ಬಿಡುವಿಕೆ; ತ್ಯಾಗ; ಬೇಡವೆನ್ನುವಿಕೆ; ನಿಷೇಧ.

वर्जनीय, वि० ಬಿಟ್ಟುಬಿಡಲು ಯೋಗ್ಯವಾದ; ನಿಷೇಧಿಸಲರ್ಹವಾದ.

वर्जित, वि० ಬಿಡಲ್ಪಟ್ಟ; ತ್ಯಜಿಸಲ್ಪಟ್ಟ.

वर्ज्य, वि० दे० वर्जनीय.

वर्ण, पु० ಬಣ್ಣ; ರಂಗು; ಅಕ್ಷರ; ಬ್ರಾಹ್ಮಣ ಕ್ಷತ್ರಿಯ ಮುಂತಾದ ಜಾತಿಭೇದ.

वर्णन, पु० ಬಣ್ಣಹಾಕುವಿಕೆ; ಚಿತ್ರಿಸುವಿಕೆ; ಬಣ್ಣಿಸುವಿಕೆ; ವರ್ಣನೆ.

वर्णमाला, स्त्री० ಅಕ್ಷರಮಾಲೆ.

वर्णित, वि० ವರ್ಣಿಸಲ್ಪಟ್ಟ.

वर्त्तन, पु० ವ್ಯವಹಾರ; ವರ್ತನೆ; ವೃತ್ತಿ; ಪಾತ್ರೆ.

वर्तमान, वि० ಈಗ ನಡೆದು ಬರುತ್ತಿರುವ. पु० ಸಮಾಚಾರ; ವೃತ್ತಾಂತ.

वर्त्तुल, वि० ಗುಂಡಾಗಿರುವ; ದುಂಡನೆಯ.

वर्दी, स्त्री० दे० वरदी.

वर्द्धक, वि० ಬೆಳೆಯಿಸುವಂಥ; ವೃದ್ಧಿಪಡಿಸುವ.

वर्द्धन, पु० ಬೆಳವಣಿಗೆ; ಉನ್ನತಿ.

वर्ना, अव्य० दे० वरना.

वर्म, पु० ಕವಚ; ಬತ್ತಳಿಕೆ.

वर्ष, पु० ವರುಷ; ಸಂವತ್ಸರ.

वर्षगांठ, स्त्री० ಹುಟ್ಟಿದ ಹಬ್ಬ ; ಜನ್ಮ ದಿನ.

वर्षा, स्त्री० ಮಳೆ.

वर्षाकाल, पु० ಮಳೆಗಾಲ.

वलय, पु० ಮಂಡಲ; ಸುತ್ತು; ಆವರಣ.

वलयित, वि० ಸುತ್ತಿಕೊಂಡಿರುವ; ಗುಡಿಕಟ್ಟಿದ.

वलवला, पु० ಆವೇಶ; ಭಾವೋದ್ರೇಕ.

वलाका, स्त्री० ಕೊಕ್ಕರೆ; ಬಕಪಕ್ಷಿ.

वली, स्त्री० ಸುಕ್ಕು; ನಿರಿಗೆ; ಗೆರೆ; ರೇಖೆ; ಸಾಲು. पु० ಒಡೆಯ; ಸ್ವಾಮಿ; ಸಾಧು.

वल्कल, पु० ಮರದ ತೊಗಟೆ; ನಾರುಮಡಿ.

वल्द, पु० ಮಗ; ಪುತ್ರ.

वल्दियत, स्त्री० ತಂದೆಯ ಹೆಸರನ್ನು ಹೇಳುವುದು; ಪ್ರವರ.

वल्मीक, पु० ಹುತ್ತ; ವಾಲ್ಮೀಕಿ ಋಷಿ.

वल्लरि } **वल्लरी** } स्त्री० ಬಳ್ಳಿ; ಲತೆ.

वल्लाह, अव्य० ಸತ್ಯವಾಗಿ; ದೇವರ ಆಣೆ.

वल्लिका } **वल्ली** } स्त्री० ಬಳ್ಳಿ; ಲತೆ.

वश, पु० ಅಂಕೆ; ಅಧಿಕಾರ;—**चलना** ಯತ್ನನಡೆ.

वशवर्ती, वि० ಅಂಕೆಯಲ್ಲಿರುವ; ಅಧೀನವಾದ.

वशीकरण, पु० ವಶಪಡಿಸಿಕೊಳ್ಳುವಿಕೆ.

वशीकृत, वि० ವಶಪಡಿಸಿಕೊಳ್ಳಲ್ಪಟ್ಟ.

वशीभूत, वि० ವಶಕ್ಕೊಳಗಾದ; ಅಧೀನನಾದ.

वसअत, स्त्री० ಶಕ್ತಿ; ಸಾಮರ್ಥ್ಯ.

वसन, पु० ಬಟ್ಟೆ; ವಸ್ತ್ರ.

वसह, पु० ಎತ್ತು; ಬಸವ.

वसीक़ा, पु० ತನ್ನ ಸಂಬಂಧಿಕರಿಗಾಗಿ ಅಥವಾ ಧರ್ಮಕಾರ್ಯಕ್ಕಾಗಿ ವಿನಿಯೋಗವಾಗಲೆಂದು ಸರಕಾರದ ಬಳಿ ಇಡುವ ಠೇವಣಿ ಹಣ ಅಥವಾ ಆ ಹಣದಮೇಲೆ ಬರುವ ಬಡ್ಡಿ.

वसीयत, स्त्री० ಮರಣ ಶಾಸನ.

वसीयतनामा, पु० ಮರಣ ಶಾಸನವನ್ನು ಬರೆದ ಪತ್ರ; ಉಯಿಲು.

वसीला, पु० ಆಶ್ರಯ; ಸಹಾಯ; ಸಾಧನ; ಉಪಾಯ.

वसुंधरा } **वसुधा** } स्त्री० ಭೂಮಿ; ಪೃಥ್ವಿ.

वसूक, पु० ದೃಢ; ನಂಬಿಕೆ; ಪರಿಶ್ರಮ.

वसूल, वि० ದೊರೆತ; ಪ್ರಾಪ್ತ; ಪಾವತಿಯಾದ. पु० ಪಾವತಿ; ಸಂದಾಯ ವಸೂಲು.

वसूली, स्त्री० ಪಾವತಿ; ವಸೂಲಿ.

वस्तु, स्त्री० ಸತ್ಯ; ಗೋಚರವಾಗುವ ಪದಾರ್ಥ; ನಾಟಕದ ಕಥನ.

वस्तुतः, अव्य० ನಿಜವಾಗಿಯೂ; ಯಥಾರ್ಥವಾಗಿಯೂ

वस्फ़, पुं० ವಿಶೇಷತೆ; ಗುಣ; ಹೊಗಳಿಕೆ; ಸ್ತುತಿ.

वस्ल, पुं० ಎರಡು ವಸ್ತುಗಳ ಕೂಡುವಿಕೆ; ಸೇರುವಿಕೆ; ಸಂಧಿಸುವಿಕೆ.

वहदत, स्त्री० ಒಂದಾಗುವುದು; ಐಕ್ಯವಾಗುವುದು; ಏಕತ್ವ.

वहन, पुं० ಹೊರುವಿಕೆ.

वहम, पुं० ತಪ್ಪುತಿಳಿವಳಿಕೆ; ಅನುಮಾನ; ಭ್ರಾಂತು; ಸಂಶಯ.

वहशत, स्त्री० ಅನಾಗರಿಕತೆ; ಹುಚ್ಚು; ಮಂಕುತನ; ಜೀವಕಳೆ ಇಲ್ಲದಿರುವಿಕೆ.

वहशी, वि० ಕಾಡಿನ; ವನ್ಯ; ಅನಾಗರಿಕ.

वहाँ, क्रि० ಅಲ್ಲಿ; ಆ ಸ್ಥಳದಲ್ಲಿ.

वहिरंग वि० दे० बहिरंग.

वहिष्कृत, वि० ಹೊರಗೆ ಹಾಕಲ್ಪಟ್ಟ; ಬಹಿಷ್ಕರಿಸಲ್ಪಟ್ಟ.

वहीं, अव्य० ಅಲ್ಲಿಯೇ; ಅದೇಸ್ಥಾನದಲ್ಲಿ.

वही, स्त्री० ಈಶ್ವರನು ತನ್ನ ಪೈಗಂಬರರಿಗೆ ಅಥವಾ ದೂತರಿಗೆ ಮಾಡುವ ಆಜ್ಞೆ. सर्व० ಅವನೇ; ಅವಳೇ; ಅದೇ.

वहीद, वि० ಸಾಟಿಯಿಲ್ಲದ; ಎಣೆಯಿಲ್ಲದ; ಅದ್ಭುತ.

वांछनीय वि० ಕೋರಬಹುದಾದ; ಬಯಸುವಂಥ; ಅಪೇಕ್ಷಿಸತಕ್ಕ.

वांछा, स्त्री० ಕೋರಿಕೆ; ಅಪೇಕ್ಷೆ; ಬಯಕೆ.

वांछित, वि० ಕೋರಿದ; ಬಯಸಿದ; ಅಪೇಕ್ಷಿಸಲ್ಪಟ್ಟ.

वांति, स्त्री० ಕಾರುವಿಕೆ; ವಮನ; ವಾಂತಿ.

वा, अव्य० ಅಥವಾ.

वाइज़ पुं० ಧರ್ಮೋಪದೇಶಕ; ಉಪದೇಶಕ.

वाइदा, पुं० दे० वादा.

वाक़ई, वि० ನಿಜವಾದ; ಯಥಾರ್ಥವಾದ; ವಾಸ್ತವವಾದ. अव्य० ನಿಜವಾಗಿಯೂ; ವಾಸ್ತವವಾಗಿ.

वाक़फ़ियत, स्त्री० ತಿಳಿವು; ಅರಿವು; ಪರಿಜ್ಞಾನ; ಪರಿಚಯ.

वाक़या, पुं० ಘಟನೆ; ವೃತ್ತಾಂತ; ಸಮಾಚಾರ.

वाक़या-नवीस, पुं० ಸುದ್ದಿಗಾರ; ಬಾತ್ಮೀದಾರ.

वाक़ा, वि० ಸಂಭವಿಸಲಿರುವ; ಘಟಿಸುವ; ಕಟ್ಟಲ್ಪಟ್ಟ.

वाक़िफ़, वि० ಅರಿತ; ತಿಳಿದ; ಪರಿಚಿತ; ಅನುಭವವುಳ್ಳ.

वाकिफ़कार, वि० ಅನುಭವಿ; ಬಲ್ಲವ.

वाक्पटु, वि० ಮಾತಿನಲ್ಲಿ ಚತುರನಾದವ.

वागीश, पुं० ಬ್ರಹ್ಮ; ಕವಿ.

वाग्जाल, पुं० ಮಾತುಗಳ ಆಡಂಬರ.

वाग्दान, पुं० ಮಾತು ಕೊಡುವಿಕೆ; ವಾಗ್ದಾನ.

वाग्मी, पुं० ಚೆನ್ನಾಗಿ ಮಾತನಾಡಬಲ್ಲವ.

वाचक, वि० ತೋರಿಸುವ; ಸೂಚಿಸುವ; ಓದುವವ; ವಾಚಕ.

वाचन, पु० ಓದುವಿಕೆ; ಪಠನ.

वाचयिता, वि० ಓದುವವ; ವಾಚಕ.

वाचा, स्त्री० ಮಾತು; ನುಡಿ; ವಾಕ್ಯ; ವಚನ.

वाचाल, वि० ಮಾತುಗಾರ; ವಾಚಾಳಿ; ವಾಕ್ಪಟು.

वाची, वि० ಸೂಚಿಸುವ; ಬೋಧಪಡಿಸುವ; ವ್ಯಕ್ತಗೊಳಿಸುವ.

वाच्य, वि० ಹೇಳಬಹುದಾದ.

वाज़, पु० ಉಪದೇಶ.

वाजिब, **वाजिबी** वि० ಯೋಗ್ಯವಾದ; ತಕ್ಕ; ಉಚಿತವಾದ.

वाजी, पु० ಕುದುರೆ; ಒಡೆದ ಹಾಲಿನ ನೀರು.

वाट, पु० ದಾರಿ; ಮಾರ್ಗ; ಕಟ್ಟಡ.

वाटिका, स्त्री० ತೋಟ; ಉದ್ಯಾನ.

वाण, पु० ಅಂಬು.

वाणिज्य, पु० ವ್ಯಾಪಾರ.

वात, पु० ಗಾಳಿ; ವಾಯು.

वातायन, पु० ಸಣ್ಣ ಕಿಟಕಿ; ಜಾಳಂದ್ರ.

वातुल, पु० ಹುಚ್ಚ; ಉನ್ಮತ್ತ.

वात्सल्य, पु० ತಂದೆ ತಾಯಿಗಳ ಹೃದಯದಲ್ಲಿ ಮಕ್ಕಳ ಮೇಲಿರುವ ಪ್ರೀತಿ; ಮಮತೆ.

वाद, पु० ಚರ್ಚೆ; ವಿವಾದ.

वादविवाद, पु० ವಾಗ್ವಾದ; ಚರ್ಚೆ.

वादा, पु० ವಚನ; ಮಾತು; ಪ್ರತಿಜ್ಞೆ, ವಾಗ್ದಾನ.

वादी, पु० ಫಿರ್ಯಾದಿ; ವಾದಿ.

वानर, पु० ಕೋತಿ; ಮಂಗ.

वापस, वि० ಹಿಂದಿರುಗಿದ; ಹಿಂದಿರುಗಿಸಲ್ಪಟ್ಟ; ತಿರುಗಿಬರುವ.

वापसी, वि० ತಿರುಗಿಬರುವ; ವಾಪಸು ಬರುವ. स्त्री० ಹಿಂತಿರುಗುವಿಕೆ.

वापी, स्त्री० ಭಾವಿ.

वाम, वि० ಎಡಗಡೆಯ; ಎಡ; ವಿರುದ್ಧ; ಡೊಂಕಾದ.

वामन, वि० ಗಿಡ್ಡ; ಕುಳ್ಳ.

वामा, स्त्री० ಹೆಂಗಸು; ಸ್ತ್ರೀ.

वारंवार, अव्य० दे० **बारंबार.**

वार, पु० ಬಾಗಿಲು: ತಡೆ; ಸಲ; ಪ್ರಹಾರ; ಕ್ಷಣ; ದಿವಸ; ಧಾಳಿ —करना ಧಾಳಿಮಾಡು. वि० ಸಮಾನವಾದ.

वारदात, स्त्री० ದುರ್ಘಟನೆ; ಅನಾಹುತ; ದೊಂಬಿ; ದಂಗೆ.

वारना, स० ನಿವಾಳಿಸು; ಬಲಿಕೊಡು.

वारपार, पु० ನದಿಯ ಇಕ್ಕಡೆಯ ದಂಡೆಗಳು; ತುದಿಮೊದಲು; ಕೊನೆ.

वारफेर, स्त्री० ಬಲಿ; ಆತ್ಮಾರ್ಪಣೆ; ನಿವಾಳಿ.

वारांगना, स्त्री० ವೇಶ್ಯೆ; ಸೂಳೆ.

वारा, पु० ಉಳಿತಾಯ; ಮಿತವ್ಯಯ; ಪ್ರಯೋಜನ; ಲಾಭ. वि० ಅಗ್ಗವಾದ; ಲಾಭಕರವಾದ.

वारा-न्यारा, पु० ತೀರ್ಮಾನ; ನಿರ್ಣಯ; ನಿಷ್ಕರ್ಷೆ.

वारिस, पुं॰ ದಾಯಾದ; ಉತ್ತರಾಧಿಕಾರಿ; ವಾರಿಸು.

वारुणी, स्त्री॰ ಸೇಂದಿ; ಸಾರಾಯಿ.

वार्त्ता, स्त्री॰ ಸುದ್ದಿ; ಮಾತು.

वार्त्तालाप, पुं॰ ಮಾತುಕತೆ; ಸಂಭಾಷಣೆ.

वार्द्धक्य, पुं॰ ಮುಪ್ಪು.

वाला प्रत्य॰ ಸಂಬಂಧ ಸೂಚಕ ಪ್ರತ್ಯಯ. ಉದಾ: मकानवाला.

वालदैन, पुं॰ ತಾಯಿ ತಂದೆಗಳು.

वालिद, पुं॰ ತಂದೆ.

वालिदा, स्त्री॰ ತಾಯಿ.

वावेला, पुं॰ ಗೋಳಾಟ; ರೋದನ; ಗದ್ದಲ.

वासना, स्त्री॰ ಬಯಕೆ; ಇಚ್ಛೆ.

वासर, पुं॰ ದಿನ; ದಿವಸ.

वास्ता, पुं॰ ಸಂಬಂಧ; ಮೈತ್ರಿ; ಸ್ನೇಹ.

वास्ते, अव्य॰ ಓಸ್ಕರ; ಸಲುವಾಗಿ; ನಿಮಿತ್ತ.

वाह, अव्य॰ ಭಲೆ; ಭಳಿರೆ; ಸೈ.

वाहवाही, स्त्री॰ ಕೊಂಡಾಟ; ಹೊಗಳಿಕೆ.

वाहिद, वि॰ ಏಕ; ಒಂಟಿ. पुं॰ ಈಶ್ವರ; ಏಕವಚನ.

वाहिनी, स्त्री॰ ಸೈನ್ಯ.

वाहिब, वि॰ ಉದಾರವಾದ.

वाहिमा, पुं॰ ಕಲ್ಪನಾಶಕ್ತಿ.

वाहियात, वि॰ ಉಪಯೋಗವಿಲ್ಲದ; ...ರ್ಥ; ಕೆಟ್ಟ; ನೀಚ.

वाही, वि॰ ನಿರರ್ಥಕ; ನಿಷ್ಪ್ರಯೋಜಕ; ಮೂರ್ಖ. स्त्री॰ ಬೈಗಳು.

वाही-तबाही, वि॰ ಅಸಂಬದ್ಧ. स्त्री॰ ಬೈಗಳ.

विकट, वि॰ ಭಯಂಕರವಾದ; ಡೊಂಕಾದ; ಕಠಿಣ.

विकराल, वि॰ ಭಯಾನಕವಾದ; ಭಯಂಕರ.

विकल, वि॰ ಕಳವಳಗೊಂಡ.

विकल्प, पुं॰ ಭ್ರಾಂತಿ.

विकसना, अ॰ ಅರಳು; ವಿಕಸಿಸು.

विकास, पुं॰ ಪ್ರಸಾರ; ಅರಳುವಿಕೆ; ಕ್ರಮೇಣ ಉನ್ನತಿಯನ್ನು ಹೊಂದುವಿಕೆ.

विकीर्ण, वि॰ ಚಲ್ಲಾಪಿಲ್ಲಿಯಾದ.

विकृत, वि॰ ಕೆಟ್ಟುಹೋದ; ಅಸ್ವಾಭಾವಿಕ.

विक्रमाब्द, पुं॰ ವಿಕ್ರಮಾದಿತ್ಯ ಶಕೆಯ ವರ್ಷ; ವಿಕ್ರಮ ಸಂವತ್ಸರ.

विक्रमी, वि॰ ಬಲಶಾಲಿ.

विक्रेता, पुं॰ ಮಾರುವವ.

विक्षिप्त, वि॰ ಹುಚ್ಚುಹಿಡಿದ; ಮನಶ್ಶಾಂತಿಯಿಲ್ಲದ.

विक्षुब्ध, वि॰ ದುಃಖಗೊಂಡ.

विख्यात, वि॰ ಖ್ಯಾತಿಹೊಂದಿದ; ಪ್ರಸಿದ್ಧ.

विगत, वि॰ ಕಳೆದ; ಕಳೆದುಹೋದ; ಗತಿಸಿದ.

विग्रह, पुं॰ ಜಗಳ; ಕಲಹ; ಮೂರ್ತಿ; ಪ್ರತಿಮೆ.

विगलित, वि० ಕೊಳೆತ ; ಕರಗಿದ.
विघ्न, पु० ತಡೆ; ಅಡಚಣೆ; ತೊಂದರೆ.
विचरण, पु० ನಡೆಯುವಿಕೆ; ಓಡಾಡುವಿಕೆ ; ಸಂಚರಿಸುವಿಕೆ.
विचरना, अ० ಓಡಾಡು; ತಿರುಗಾಡು ; ಅಡ್ಡಾಡು.
विचलना, अ० ಅಧೈರ್ಯಪಡು ; ಘಾಬರಿಗೊಳ್ಳು.
विचलित, वि० ಅಸ್ಥಿರವಾದ ; ಚಂಚಲ.
विचार, पु० ಭಾವನೆ ; ಅಭಿಪ್ರಾಯ; ವಿಚಾರ.
विचारशील, पु० ವಿಚಾರವಂತ ; ಒಳ್ಳೆಯ ಆಲೋಚನೆಗಳನ್ನುಳ್ಳವ.
विचारणीय, वि० ಆಲೋಚಿಸಬೇಕಾದ.
विचारना, स० ಯೋಚಿಸು ; ವಿಚಾರಿಸು.
विचाराधीन, वि० ಗಮನದಲ್ಲಿರುವ.
विच्छिन्न, वि० ಕತ್ತರಿಸಿಹೋದ ; ತುಂಡರಿಸಲ್ಪಟ್ಟ.
विछोह, पु० ವಿರಹ ; ವಿಯೋಗ.
विजन, वि० ಏಕಾಂತ ; ಬೀಸಣಿಗೆ.
विजय, स्त्री० ಗೆಲುವು; ಜಯ.
विजाति, वि० ಬೇರೆ ಜಾತಿಗೆ ಸೇರಿದ; ಅನ್ಯಜಾತಿಯ.
विजातीय, वि० ತನ್ನ ಜಾತಿಗೆ ಸೇರದ; ಬೇರೆ ಜಾತಿಯ.
विजारत, स्त्री० ಮಂತ್ರಿತ್ವ ; ದಿವಾನಗಿರಿ.
विजेता, पु० ಗೆದ್ದವ ; ಜಯಶೀಲನಾದವ.
विज्ञ, वि० ಅರಿತವ; ಬಲ್ಲವ; ವಿದ್ವಾಂಸ ; ಪಂಡಿತ.
विज्ञप्ति स्त्री० ಜಾಹಿರಾತು; ಪ್ರಕಟಣೆ ; ಇಸ್ತಿಹಾರು.
विज्ञापन, पु० ಜನರ ತಿಳಿವಳಿಕೆಗಾಗಿ ಹೊರಪಡಿಸುವ ಸೂಚನೆ; ಪ್ರಕಟಣೆ.
विटप, पु० ಮರ.
विडंबना, स्त्री० ಅನುಕರಣಮಾಡುವಿಕೆ; ಅಣಕಿಸುವಿಕೆ; ಎಗತಾಳಿ ಮಾಡುವಿಕೆ.
विड़रना, अ० ಚದರಿಹೋಗು; ಚಲ್ಲಾಪಿಲ್ಲಿಯಾಗು; ಓಡಿಹೋಗು.
विडारना, स० ಚದರಿಸು; ಚಲ್ಲಾಪಿಲ್ಲಿಯಾಗಿಮಾಡು; ನಷ್ಟಪಡಿಸು; ಓಡಿಸು; ಅಟ್ಟು.
विडाल, पु० ಬೆಕ್ಕು.
वितरण, पु० ಕೊಡುವಿಕೆ; ದಾನಮಾಡುವಿಕೆ; ಹಂಚುವಿಕೆ.
वितरना, स० ಹಂಚು.
वितर्क, पु० ಸಂದೇಹ; ಅನುಮಾನ.
वितान, पु० ಮಂಡಪ.
वित्त, पु० ಹಣ ; ಐಶ್ವರ್ಯ.
विद, पु० ಅರಿತವ; ಬಲ್ಲವ; ಪಂಡಿತ.
विद्‌रना, अ० ಹರಿದುಹೋಗು. स० ಹರಿ.

विदा, स्त्री० ಹೊರಡುವಿಕೆ; ಪ್ರಸ್ಥಾನ; ಬೀಳ್ಕೊಳ್ಳುವಿಕೆ; ಹೊರಡಲು ಅನುಮತಿ;—**होना** ಬೀಳ್ಕೊಳ್ಳು, ಹೊರಡು.

विदाई, स्त्री० ಅಗಲುವಿಕೆ; ಹೊರಡುವಿಕೆ; ಬೀಳ್ಕೊಳ್ಳುವಿಕೆ; ಹೊರಡಲು ಅಪ್ಪಣೆ.

विदारना, स० ಹರಿ; ಸೀಳು; ಸಿಗಿ.

विदारित, वि० ಹರಿಯಲ್ಪಟ್ಟ; ಸೀಳಲ್ಪಟ್ಟ.

विदित, वि० ಮನವರಿಕೆಯಾದ; ತಿಳಿದ; ಅರಿತ.

विदीर्ण, वि० ಹರಿಯಲ್ಪಟ್ಟ; ಒಡೆದು ಹೋದ.

विदूषना, स० ಪೀಡಿಸು; ಕಾಡು.

विद्यालय, पु० ಪಾಠಶಾಲೆ.

विद्युत्, स्त्री० ವಿದ್ಯುಚ್ಛಕ್ತಿ.

विद्रुम, पु० ಹವಳ.

विद्रोह, पु० ಪಿತೂರಿ; ಬಂಡಾಯ.

विद्रोही, पु० ಪಿತೂರಿಗಾರ; ಬಂಡಾಯಗಾರ.

विद्वेष, पु० ದ್ವೇಷ; ಹಗೆತನ; ವೈರ.

विधना, स्त्री० ಸಂಭವಿಸಲಿರುವದು; ಆಗಲಿರುವುದು; ವಿಧಿ. पु० ಬ್ರಹ್ಮ.

विधाता, पु० ಮಾಡುವವ; ಸೃಷ್ಟಿಕರ್ತ; ಬ್ರಹ್ಮ.

विधान, पु० ವ್ಯವಸ್ಥೆ; ರಾಜ್ಯಾಂಗ ವ್ಯವಸ್ಥೆ; ಕಟ್ಟುಪಾಡು; ಪದ್ಧತಿ.

विधायक, पु० ಮಾಡುವವ; ರಚಿಸುವವ; ಏರ್ಪಾಡು ಮಾಡುವವ. वि० ರಚನಾತ್ಮಕ.

विधि, स्त्री० ಕ್ರಮ; ನಿಯಮ; ವಿಧಾನ.

विधिवत्, क्रि० ನಿಯಮದಂತೆ; ವಿಧಿಪೂರ್ವಕವಾಗಿ; ಉಚಿತವಾದ ರೀತಿಯಲ್ಲಿ.

विधुर, वि० ಹೆಂಡತಿ ಸತ್ತವ.

विनति, विनती स्त्री० ಬಿನ್ನಹ; ಪ್ರಾರ್ಥನೆ; ವಿನಂತಿ.

विनम्र, वि० ಬಾಗಿದ; ವಿನಯದಿಂದ ಕೂಡಿದ.

विनय, स्त्री० ಪ್ರಾರ್ಥನೆ; ಬಿನ್ನಹ.

विनसना, अ० ಹಾಳಾಗು; ನಶಿಸು.

विना, अव्य० ಇಲ್ಲದೆ; ಹೊರತಾಗಿ; ವಿನಹ.

विनाश, पु० ಅಳಿವು; ನಾಶ.

विनिमय, पु० ಒಂದು ವಸ್ತುವನ್ನು ಕೊಟ್ಟು ಅದರ ಬದಲು ಮತ್ತೊಂದನ್ನು ತೆಗೆದುಕೊಳ್ಳುವಿಕೆ; ಅದಲುಬದಲು; ಪರಿವರ್ತನ.

विनियोग, पु० ಉಪಯೋಗ; ಪ್ರಯೋಗ.

विनीत, वि० ವಿನಯಶೀಲ.

विनोद, पु० ತಮಾಷೆ; ಪರಿಹಾಸ್ಯ; ಆನಂದ.

विन्यास, पु० ಇರಿಸುವುದು; ಅಲಂಕರಿಸುವುದು.

विपक्ष, पुं० ಪ್ರತಿ ಪಕ್ಷ; ವಿರೋಧ ಪಕ್ಷ; ಪ್ರತಿವಾದಿ; ಶತ್ರು.
विपत्ति, स्त्री० ಸಂಕಟ; ಕಷ್ಟ.
विपन्न, वि० ಕಷ್ಟದಲ್ಲಿ ಸಿಕ್ಕಿಬಿದ್ದ; ದುಃಖಿತ.
विपरीत, वि० ಅನುಗುಣವಾಗಿಲ್ಲದ; ವಿರುದ್ಧವಾದ; ಪ್ರತಿಕೂಲವಾದ.
विपर्यय, पुं० ವ್ಯತ್ಯಾಸವಾದ; ಹಿಂದು ಮುಂದಾದ.
विपिन, पुं० ಕಾಡು; ಅಡವಿ; ಅರಣ್ಯ.
विपुल, वि० ಬಹಳವಾದ; ಹೇರಳವಾದ; ಅಗಾಧವಾದ.
विप्लव, पुं० ಕ್ರಾಂತಿ; ಚಳವಳ; ಬಂಡಾಯ; ದಂಗೆ.
विभक्त, वि० ಬೇರೆಮಾಡಲ್ಪಟ್ಟ.
विभव, पुं० ಐಶ್ವರ್ಯ; ಧನ; ಸಿರಿ.
विभाग, पुं० ಭಾಗ; ಪಾಲು; ಅಂಶ; ಕಾರ್ಯಕ್ಷೇತ್ರ; ಇಲಾಖೆ.
विभाजन, पुं० ಭಾಗಿಸುವಿಕೆ; ಹಂಚುವಿಕೆ.
विभ्रांत, वि० ಭ್ರಮೆಯಲ್ಲಿ ಬಿದ್ದ.
विभिन्न, वि० ಬೇರೆಮಾಡಲ್ಪಟ್ಟ; ಪ್ರತ್ಯೇಕವಾದ; ನಾನಾಪ್ರಕಾರದ; ಬಗೆಬಗೆಯ.
विभिन्नता, स्त्री० ಭೇದ; ವ್ಯತ್ಯಾಸ.
विभीषिका, स्त्री० ಭಯಂಕರನೋಟ.
विभेद, पुं० ಭೇದ; ವ್ಯತ್ಯಾಸ.
विमर्श, पुं० ಸಮೀಕ್ಷಣೆ; ಸಲಹೆ; ವಿಮರ್ಶೆ; ಪರೀಕ್ಷೆ.
विमर्शन, पुं० ಗುಣದೋಷಗಳನ್ನು ಪರಿಶೀಲಿಸುವಿಕೆ.
विमल, वि० ಕೊಳೆಯಿಲ್ಲದ; ಸ್ವಚ್ಛ; ನಿರ್ಮಲ.
विमाता, स्त्री० ತಂದೆಯ ಎರಡನೆಯ ಹೆಂಡತಿ; ಮಲತಾಯಿ.
विमुक्त, वि० ಬಿಡುಗಡೆಹೊಂದಿದ.
विमुख, वि० ಪ್ರತಿಕೂಲ; ಮುಖ ತಿರುಗಿಸಿದ.
विमोचन, पुं० ಬಿಡುಗಡೆ.
विमोह, पुं० ಅಜ್ಞಾನ; ಭ್ರಾಂತು.
वियोग, पुं० ಅಗಲಿಕೆ; ವಿರಹ.
वियोगी, वि० ತನ್ನ ಇನಿಯಳನ್ನು ಅಗಲಿರುವ.
विरक्त, वि० ಮನಸ್ಸಿಲ್ಲದ; ಅನಾಸಕ್ತ; ಅಪೇಕ್ಷೆಯಿಲ್ಲದ; ಉದಾಸೀನ.
विरक्ति, स्त्री० ವೈರಾಗ್ಯ; ಬೇಸರ; ಉದಾಸೀನತೆ.
विरचित, वि० ರಚಿಸಲ್ಪಟ್ಟ; ಬರೆಯಲ್ಪಟ್ಟ.
विरत, वि० ಮನಸ್ಸಿಲ್ಲದ.
विरमना, अ० ಮನಸ್ಸಿಡು; ಅನುರಕ್ತನಾಗು; ನಿಲ್ಲು; ವಿಶ್ರಾಂತಿ ತೆಗೆದುಕೊಳ್ಳು.
विरल, वि० ಸುಲಭವಾಗಿ ಸಿಕ್ಕದ; ದುರ್ಲಭವಾದ; ತಿಳಿಯಾದ; ತೆಳುವಾದ; ತುಸ; ಸ್ವಲ್ಪ.
विरले, अव्य० ಬಹಳ ಕಡಿಮೆ; ದುರ್ಲಭ.
विरस, वि० ಸಪ್ಪೆ; ನಿಸ್ಸಾರ.
विरह, पुं० ಅಗಲಿಕೆ; ವಿಯೋಗ.

विराग, पु॰ ಇಷ್ಟವಿಲ್ಲದಿರುವಿಕೆ; ವೈರಾಗ್ಯ; ವಿರಕ್ತಿ.

विराजना, अ॰ ಶೋಭಿಸು; ಹಾಜರ್ಾಗಿರು; ಮಂಡಿಸು.

विराजित, वि॰ ಸುಶೋಭಿತವಾದ; ಪ್ರಕಾಶಿಸಲ್ಪಟ್ಟ.

विराजमान, वि॰ ಪ್ರಕಾಶಮಾನವಾದ; ಶೋಭಾಯಮಾನ.

विराट, वि॰ ಬಹಳದೊಡ್ಡ.

विराम, पु॰ ತಡೆಯುವಿಕೆ; ನಿಲ್ಲುವಿಕೆ; ವಿಶ್ರಾಮ.

विरासत, स्त्री॰ ಪಿತ್ರಾರ್ಜಿತ; ವಾರಸು.

विरुद, पु॰ ಬಿರುದು; ಕೀರ್ತಿ.

विरुद्ध, वि॰ ವಿರೋಧವಾದ.

विरेचक, वि॰ ಭೇದಿಯನ್ನುಂಟುಮಾಡುವ.

विरेचन, पु॰ ಭೇಧಿ; ಜುಲಾಬು.

विरोध, पु॰ ಹಗೆತನ; ವಿರೋಧ.

विरोधी, वि॰ ವಿರೋಧಿಸುವ. पु॰ ಹಗೆ; ಶತ್ರು; ವೈರಿ.

विलंब, पु॰ ತಡ; ಸಾವಕಾಶ; ವಿಳಂಬ.

विलक्षण, वि॰ ಅದ್ಭುತವಾದ; ಅಪೂರ್ವವಾದ; ವಿಚಿತ್ರವಾದ.

विलखना, अ॰ ದುಃಖಿತನಾಗು; ವ್ಯಾಕುಲಗೊಳ್ಳು. स॰ ಕಂಡುಕೊಳ್ಳು; ಪತ್ತೆಮಾಡು.

विलपना, अ॰ ಅಳು; ವಿಲಾಪಿಸು.

विलमना, अ॰ ತಡಮಾಡು.

विलसना, अ॰ ಕಂಗೊಳಿಸು; ಶೋಭಿಸು; ವಿಲಾಸದಿಂದಿರು; ಆನಂದಿಸು.

विलाप, पु॰ ಗೋಳಿಡುವಿಕೆ.

विलापना अ॰ ಗೋಳಿಡು; ಶೋಕಿಸು.

विलायत, पु॰ ಹೊರದೇಶ; ಪರದೇಶ ಸೀಮೆ.

विलायती, वि॰ ಪರದೇಶದಲ್ಲಿ ತಯಾರಾದ; ವಿದೇಶಿ; ಪರದೇಶಿ.

विलास, पु॰ ಸುಖಭೋಗ.

विलीन, वि॰ ಅದೃಶ್ಯವಾದ; ಬೆರತುಹೋದ.

विलोकना, स॰ ನೋಡು; ಅವಲೋಕಿಸು.

विलोचन, पु॰ ಕಣ್ಣು.

विलोल, वि॰ ಚಂಚಲ; ಸುಂದರ.

विवरण, पु॰ ತಪಶೀಲು; ವಿವರಣೆ.

विवर्तन, पु॰ ಬದಲಾವಣೆ.

विवश, वि॰ ಯತ್ನವಿಲ್ಲದ; ನಿರ್ವಾಹವಿಲ್ಲದ.

विवाह, पु॰ ಮದುವೆ; ಲಗ್ನ.

विवाहिता, वि॰ ಮದುವೆಯಾದವಳು.

विविध, वि॰ ಬಗೆಬಗೆಯ; ನಾನಾಪ್ರಕಾರದ.

विवेक, पु॰ ತಿಳಿವಳಿಕೆ; ಬುದ್ಧಿ; ಅರಿವು; ಜ್ಞಾನ.

विवेचन, पु॰ / **विवेचना,** स्त्री॰ } ಪರಿಶೀಲನೆ; ವಿಮರ್ಶೆ.

विशद, वि० ಸ್ವಚ್ಛವಾದ; ನಿರ್ಮಲವಾದ; ಸ್ಪಷ್ಟವಾದ; ಬಿಳಿಯ; ವಿಸ್ತೃತವಾದ.

विशारद, वि० ಪೂರ್ಣ ಪಾಂಡಿತ್ಯವನ್ನು ಪಡೆದವ; ಕಾರ್ಯಕುಶಲ; ದಕ್ಷ.

विशिष्ट, वि० ಕೂಡಿದ; ಯುಕ್ತ; ವಿಶೇಷತೆಯುಳ್ಳ.

विशृंखल, वि० ತಡೆಯಿಲ್ಲದ; ಸ್ವೇಚ್ಛೆಯ.

विशेषता, स्त्री० ಹೆಚ್ಚುಗಾರಿಕೆ; ಅಸಾಮಾನ್ಯತೆ; ವಿಶೇಷತೆ.

विश्लेषण, पु० ಬೇರೆಬೇರೆಯಾಗಿ ವಿಂಗಡಿಸುವಿಕೆ.

विश्व, पु० ಜಗತ್ತು; ಪ್ರಪಂಚ.

विश्वसनीय, वि० ನಂಬಬಹುದಾದ.

विश्वास, पु० ನಂಬಿಕೆ.

विश्वासघात, पु० ಮೋಸ; ದ್ರೋಹ.

विश्वासपात्र, पु० ನಂಬಿಕೆಗೆ ಯೋಗ್ಯನಾದವ.

विश्वासी, वि० ನಂಬಿಕಸ್ಥ.

विषम, वि० ಭೀಷಣ; ಬೆಸ (ಸಂಖ್ಯೆ).

विषयक, वि० ಸಂಬಂಧಪಟ್ಟ; ವಿಷಯದ.

विषैला, वि० ವಿಷವುಳ್ಳ.

विष्टा, स्त्री० ಮಲ; ಹೆಂಟೆ.

विसर्जन, पु० ಬಿಡುವಿಕೆ; ಮುಕ್ತಾಯ.

विसाल, पु० ಕೂಡಿಕೆ; ಸೇರಿಕೆ.

विस्तार, पु० ಹರಪು; ವಿಸ್ತಾರ.

विस्तारना, स० ಹರಡಿಸು; ವಿಸ್ತರಿಸು.

विस्फोट, पु० ಹೆಚ್ಚು ಬಿಸಿತಾಗಿ ಒಡೆಯುವುದು.

विस्मय, पु० ಆಶ್ಚರ್ಯ.

विहंग, पु० ಹಕ್ಕಿ.

विहरना, अ० ತಿರುಗಾಡು; ವಿಹರಿಸು.

विहार, पु० ತಿರುಗಾಡುವಿಕೆ.

विह्वल, वि० ವ್ಯಾಕುಲಗೊಂಡ.

वीरता, स्त्री० ಶೌರ್ಯ.

वीरान, वि० ಬೆಂಗಾಡಾದ; ಪಾಳಾದ; ಹಾಳುಬಿದ್ದ.

वेतन, पु० ಸಂಬಳ; ಪಗಾರ; ತಲಬು.

वेदना, स्त्री० ಪೀಡೆ; ನೋವು.

वेदी, स्त्री० ಅಟ್ಟ; ವೇದಿಕೆ.

वेधना स० ಚುಚ್ಚು; ಕೊರೆ.

वेधशाला, स्त्री० ನಕ್ಷತ್ರಶಾಲೆ; ಯಂತ್ರಶಾಲೆ; ಖಗೋಳಶಾಸ್ತ್ರ ಶೋಧನಾಲಯ.

वेला, स्त्री० ಸಮಯ; ಹೊತ್ತು; ವೇಳೆ.

वेश } पु० ಬೇಷ; ಸೋಗು; ಅಲಂಕಾರ; ರೂಪ.
वेष }

वैदेशिक, वि० ಪರದೇಶದ.

वैद्य, पु० ವೈದ್ಯ; ಚಿಕಿತ್ಸಕ.

वैध, वि० ವಿಧಿಪೂರ್ವಕ.

वैधानिक, वि० ಶಾಸನ ಸಮ್ಮತವಾದ.

वैर पु० ಹಗೆತನ.

वैसे, क्रि० ಹಾಗೆ; ಸುಮ್ಮನೆ.

व्यंग } **व्यंग्य** } पु० ಎಗತಾಳಿ; ವ್ಯಂಗ್ಯ; ಗೂಡಾರ್ಥ.
व्यंजना, स्त्री० ಸಾಮಾನ್ಯ ಅರ್ಥ ವನ್ನು ಬಿಟ್ಟು ಬೇರೆ ಅರ್ಥವನ್ನು ತೋರ್ಪಡಿಸುವುದು.
व्यक्त, वि० ಸ್ಪಷ್ಟ.
व्यग्र, वि० ಕಳವಳಗೊಂಡ.
व्यय, पु० ವೆಚ್ಚ; ನಾಶ.
व्यवस्था, स्त्री० ಏರ್ಪಾಡು; ವ್ಯವಸ್ಥೆ.
व्याख्यान, पु० ಭಾಷಣ; ಉಪನ್ಯಾಸ.
व्याध, पु० ಬೇಟೆಗಾರ.
व्यापना, अ० ವ್ಯಾಪಿಸು; ಹರಡು.
व्यापार, पु० ಕೆಲಸ; ಕಾರ್ಯ.
व्युत्पत्ति, स्त्री० ಶಬ್ದದಮೂಲರೂಪ.
व्रण, पु० ಹುಣ್ಣು.
व्रीड़ा, स्त्री० ನಾಚಿಕೆ; ಲಜ್ಜೆ.

श

शंका, स्त्री० ಸಂದೇಹ; ಸಂಶಯ.
शंकित, वि० ಹೆದರಿದ; ಸಂದೇಹ ದಿಂದ ಕೂಡಿದ.
शंख, पु० ಶಂಖ; ಕಂಬು.
शंबर, पु० ಯುದ್ಧ.
शंबल, पु० ಪ್ರಯಾಣಕಾಲದಲ್ಲಿ ದಾರಿಯಲ್ಲಿ ಉಪಯೋಗಿಸಲು ಬೇಕಾದ ಭೋಜನ ಸಾಮಗ್ರಿ; ಬುತ್ತಿ; ಪಾಥೇಯ.
शंबा, पु० ಶನಿವಾರ.
शंबुक, पु० ಮುತ್ತಿನ ಚಿಪ್ಪು; ಚಿಪ್ಪೆ ಗಲ್ಲು; ಬಸವನ ಹುಳು; ಕವಡೆ; ದೊಡ್ಡಶಂಖ.
शअबान, पु० ಅರಬೀವರ್ಷದ ಎಂಟ ನೆಯ ತಿಂಗಳು.
शआर, पु० ರೀತಿ; ಪದ್ಧತಿ.
शऊर, पु० ತಿಳಿವಳಿಕೆ; ಜ್ಞಾನ; ಬುದ್ಧಿ; ಅರಿವು;—दार ದಕ್ಷ.
शक, पु० ಶಂಕೆ; ಸಂದೇಹ; ಭಯ.
शकट, पु० ಎತ್ತಿನ ಗಾಡಿ; ಹೊರೆ; ಭಾರ; ಶರೀರ.
शकरकंद, पु० ಸಿಹಿಗೆಣಸು.
शकरपाला, पु० ಶಂಕರಪೋಳಿ ಮಿಠಾಯಿ.
शकरलब, वि० ಮಿತಭಾಷಿ; ಸಿಹಿ ಮಾತಿನವ.
शकल, स्त्री० ಆಕೃತಿ; ಸ್ವರೂಪ; ಮೋರೆ; ವೇಷ; ಮುಖಭಾವ; —सूरत ಮುಖಾಕೃತಿ.
शकील, वि० ಅಂದವಾದ; ಸುಂದರ ವಾದ.
शकोह, पु० ದೊಡ್ಡಸ್ತಿಕೆ; ಭಯ; ಸಂದೇಹ; ಪ್ರತಾಪ.
शक्कर, स्त्री० ಸಕ್ಕರೆ; ಕಲ್ಲುಸಕ್ಕರೆ.
शक्की वि० ಸಂದೇಹಪಡುವ; ಸಂಶ ಯಾತ್ಮ.
शक्त, वि० ಶಕ್ತಿಯುಳ್ಳವ; ಸಮರ್ಥ.
शक्ति, स्त्री० ಬಲ; ಪ್ರಭಾವ.
शक्य, वि० ಸಾಧ್ಯವಾದ; ಮಾಡ ಲ್ಪಡಬಹುದಾದ; ಸಂಭವವಾಗ ತಕ್ಕ.
शक्ल स्त्री० दे० शकल.
शख्स, पु० ಮನುಷ್ಯ; ವ್ಯಕ್ತಿ.

शख़्सियत, स्त्री० ವ್ಯಕ್ತಿತ್ವ.

शख़्सी, वि० ವ್ಯಕ್ತಿಗತ; ವೈಯಕ್ತಿಕ.

शग़ल, पु० ವ್ಯಾಪಾರ; ವೃತ್ತಿ; ಕಸುಬು; ವಿನೋದ.

शगुन, पु० ಶಕುನ.

शगुनियाँ, पु० ಶಕುನ ಹೇಳಬಲ್ಲವ; ಜೋಯಿಸ.

शगूफ़ा, पु० ಮೊಗ್ಗು; ಮುಗುಳು; ಹೂ; ಆಶ್ಚರ್ಯಕರವಾದ ಹೊಸ ಘಟನೆ.

शगुफ़्ता, वि० ಅರಳಿದ; ವಿಕಸಿತ.

शजर, पु० ಮರ; ವೃಕ್ಷ.

शजरा, पु० ವಂಶವೃಕ್ಷ; ವಂಶಾವಳಿ; ಮರ; ಗಿಡ; ನಕಾಶೆ.

शठ, वि० ಧೂರ್ತ; ಪಟಿಂಗ; ಮೂರ್ಖ.

शतदल, पु० ಕಮಲ.

शतरंज, पु० ಚದುರಂಗ.

शतरंजबाज़, पु० ಚದುರಂಗದ ಆಟಗಾರ.

शतरंजी, स्त्री० ಜಮುಖಾನೆ; ರತ್ನಗಂಬಳಿ; ಚದುರಂಗದ ಹಾಸು.

शतांश, पु० ನೂರನೇ ಒಂದು ಭಾಗ.

शताब्दी स्त्री० ನೂರು ವರ್ಷಗಳ ಕಾಲ; ಶತಮಾನ.

शतायु, पु० ನೂರು ವರ್ಷಗಳು ಜೀವಿಸಿರುವವ.

शत्रु, पु० ಆಗದವ; ಹಗೆ; ವೈರಿ.

शत्रुता, स्त्री० ಹಗೆತನ; ವೈರ.

शदीद, वि० ಬಹಳ; ಅತಿ; ಕಡು.

शनाख़्त, स्त्री० ಗುರುತು; ಪರಿಚಯ.

शनास, वि० ಗುರುತಿಸುವವ.

शनैः, क्रि० ಮೆಲ್ಲನೆ; ನಿಧಾನವಾಗಿ; **शनैः शनैः** ಮೆಲ್ಲಮೆಲ್ಲನೆ.

शपथ, स्त्री० ಆಣೆ; ಪ್ರಯಾಣ; ಶಪಥ.

शफ़क़, स्त्री० ಸಂಜೆಗೆಂಪು; ಅರುಣೋದಯ.

शफ़क़त, स्त्री० ಕೃಪೆ; ದಯೆ.

शफ़ा, स्त्री० ಆರೋಗ್ಯ; ದೇಹಸೌಖ್ಯ.

शफ़ाअत, स्त्री० ಆಸೆ; ಶಿಫಾರಸು.

शफ़ाखाना, पु० ಆಸ್ಪತ್ರೆ; ಚಿಕಿತ್ಸಾಲಯ.

शफ़ी, वि० ಶಿಫಾರಸು ಮಾಡುವವ; ನಡುವೆ ಬಂದು ಅಪರಾಧವನ್ನು ಕ್ಷಮಿಸುವವ.

शफ़ीक़, वि० ದಯಾಳು.

शफ़्क़ा पु० दे० **शगूफ़ा.**

शफ़्फ़ाक़, वि० ಶುಭ್ರವಾದ; ಪಾರದರ್ಶಿ.

शब, स्त्री० ರಾತ್ರಿ; ಇರುಳು.

शबनम, स्त्री० ಮಂಜು; ಇಬ್ಬನಿ; ಒಂದು ಬಗೆಯ ನಯವಾದ ಬಟ್ಟೆ.

शबनमी, स्त्री० ಸೊಳ್ಳೆಪರದೆ.

शबबरात, स्त्री० ಮುಸಲ್ಮಾನರ ಒಂದು ಹಬ್ಬ. ಆದಿನ ರಾತ್ರಿ ದೇವದೂತರು ಜನರಿಗೆ ಐಶ್ವರ್ಯ ಆರೋಗ್ಯ ಮುಂತಾದುವನ್ನು ದಯಪಾಲಿಸುವರೆಂದು ನಂಬಲಾಗಿದೆ.

शवला, स्त्री॰ ಕಾಮಧೇನು.

शबाब, पु॰ ಯೌವನ; ತಾರುಣ್ಯ; ಚೆಲುವು; ಹೋಲುವಿಕೆ.

शबाहत, स्त्री॰ ಆಕೃತಿ; ಮುಖಾಕೃತಿ; ಮುಖಭಾವ.

शबिस्ताँ, पु॰ ಮಲಗುವ ಕೋಣೆ.

शबीह, स्त्री॰ ಚಿತ್ರ; ಭಾವ ಚಿತ್ರ.

शबोरोज़, अव्य॰ ಹಗಲಿರಳೂ; ಅಹೋರಾತ್ರಿ.

शब्बो, स्त्री॰ ರಜನೀಗಂಧ.

शम पु॰ ಕ್ಷಮೆ; ಶಾಂತಿ; ತಾಳ್ಮೆ.

शमन, पु॰ ಅಡಗುವಿಕೆ; ಶಾಂತಿ; ದಮನ.

शमला, पु॰ ರುಮಾಲೆ.

शमशेर, स्त्री॰ ಕತ್ತಿ.

शमा, स्त्री॰ ಮೇಣದ ಬತ್ತಿ.

शमादान, पु॰ ಮೇಣದ ಬತ್ತಿಯ ಸಮೆ.

शमी, पु॰ ಬನ್ನಿಮರ; ಶಮೀವೃಕ್ಷ.

शमीम, स्त्री॰ ಸುಗಂಧ; ಪರಿಮಳ.

शम्बा, पु॰ ಶನಿವಾರ.

शम्मा, वि॰ ತುಸ; ಸ್ವಲ್ಪ.

शम्स, पु॰ ಸೂರ್ಯ.

शयन, पु॰ ಮಲಗುವಿಕೆ; ನಿದ್ರಿಸುವಿಕೆ.

शयनागार, पु॰ ಶಯನಗೃಹ; ಮಲಗುವ ಕೋಣೆ.

शय्या, स्त्री॰ ಹಾಸಿಗೆ; ಮಂಚ.

शर, पु॰ ಅಂಬು; ಬಾಣ.

शरअ, स्त्री॰ ಮತ; ಧರ್ಮ; ಮಾರ್ಗ; ಉಪಾಯ; ಮುಸಲ್ಮಾನರ ಧರ್ಮಶಾಸ್ತ್ರ.

शरई, वि॰ ಮುಸಲ್ಮಾನೀ ಧರ್ಮಾನುಸಾರವಾದ;—**पाजामा** ಉದ್ದವಾದ ಇಜಾರು;—**दाढ़ी**, ಬಹಳ ಉದ್ದವಾದ ಗಡ್ಡ.

शरण, स्त्री॰ ಮರೆ; ಆಶ್ರಯ.

शरणागत, वि॰ ಮರೆಹೊಕ್ಕ; ಶರಣಾಗತನಾದ.

शरत्, स्त्री॰ ವರ್ಷ; ಸಂವತ್ಸರ; ಚಳಿ; ಶರದೃತು.

शरत्काल, पु॰ ಶರದೃತು.

शरद, स्त्री॰ दे॰ **शरत्**.

शरबत, पु॰ ಷರಬತ್ತು ಪಾನಕ; ರಸ.

शरभ, पु॰ ಮಿಡತೆ.

शरम, स्त्री॰ ನಾಚಿಕೆ; ಲಜ್ಜೆ; ಸಂಕೋಚ; ಮಾನ; ಗೌರವ.

शरमाऊ, वि॰ ಬಹಳವಾಗಿ ನಾಚಿಕೊಳ್ಳುವ; ಲಜ್ಜಾಶೀಲ.

शरमाना, अ॰ ನಾಚಿಕೆಗೊಳ್ಳು; ಲಜ್ಜಿತನಾಗು. स॰ ನಾಚಿಕೆಗೊಳಿಸು; ಮಾನ ತೆಗೆ; ಲಜ್ಜಿತನನ್ನಾಗಿ ಮಾಡು.

शरमालू, वि॰ दे॰ **शरमीला**.

शरमा } **शरमी** } क्रि॰ ನಾಚಿಕೆಗೊಂಡು; ಲಜ್ಜೆಯ ದೆಸೆಯಿಂದ.

शरमिन्दगी, स्त्री॰ ನಾಚಿಕೆಗೊಳ್ಳುವಿಕೆ.

शरमिन्दा, वि० ನಾಚಿಕೆಗೊಂಡ; ಲಜ್ಜಿತ.

शरमीला, वि० ನಾಚಿಕೆಯುಳ್ಳ; ಲಜ್ಜಾಲು.

शरर, पु० ಬೆಂಕಿಯ ಕಿಡಿ.

शरह, स्त्री० ಟಿಪ್ಪಣಿ; ಟೀಕೆ; ಬೆಲೆ; ದರ.

शराकत, स्त्री० ಸೇರಿರುವಿಕೆ; ಭಾಗ.

शराफ़त, स्त्री० ಸೌಜನ್ಯ; ದೊಡ್ಡಸ್ತಿಕೆ.

शराब, स्त्री० ಸಾರಾಯಿ; ಮದ್ಯ.

शराबखाना, पु० ಸಾರಾಯಿ ಅಂಗಡಿ.

शराबख़ोरी, स्त्री० ಕುಡುಕತನ.

शराबी, वि० ಕುಡುಕ.

शराबोर वि० ತೊಯ್ದ; ನೆನೆದ.

शरार, पु० ಬೆಂಕಿ ಕಿಡಿ.

शरारत, स्त्री० ತುಂಟತನ; ಕೀಟಲೆ; ಕುಚೇಷ್ಟೆ.

शरीअत, स्त्री० ಮುಸಲ್ಮಾನರ ಧರ್ಮಶಾಸ್ತ್ರ.

शरीक, वि० ಸೇರಿದ; ಸಮ್ಮಿಳಿತ; ಜೊತೆಗಾರ; ಭಾಗಸ್ಥ.

शरीफ़, वि० ಪವಿತ್ರ. पु० ಕುಲೀನ; ಸಭ್ಯ; ಗೌರವಸ್ಥ.

शरीफ़ा, पु० ಸೀತಾಫಲ.

शरीर, पु० ದೇಹ. वि० ದುಷ್ಟ; ದುರುಳ.

शरीरी पु० ಶರೀರಧಾರಣೆ ಮಾಡಿದವ; ಆತ್ಮ; ಜೀವ; ಪ್ರಾಣಿ.

शर्करा, स्त्री० ಸಕ್ಕರೆ; ಕಲ್ಲುಸಕ್ಕರೆ.

शर्त, स्त्री० ಪಣ; ಕರಾರು; ನಿಬಂಧನೆ.

शर्तिया क्रि० ಖಂಡಿತವಾಗಿ; ದಿಟವಾಗಿ. वि० ನಿಶ್ಚಯವಾದ.

शर्म, स्त्री० दे० शरम.

शर्मीला, वि० दे० शरमीला.

शर्वरी, वि० ಸಾಯಂಕಾಲ; ರಾತ್ರಿ.

शलग़म, शलजम } पु० ಒಂದು ಬಗೆಯ ಸಿಹಿ ಮೂಲಂಗಿ.

शलभ, पु० ಮಿಡತೆ.

शलल, पु० ಮುಳ್ಳು ಹಂದಿಯ ಮುಳ್ಳು.

शलाका, स्त्री० ಕಡ್ಡಿ; ಸರಳು; ಸಲಾಕು; ಬಾಣ; ತಾಳೆ ಎಲೆಯ ಮೇಲೆ ಬರೆಯಲು ಉಪಯೋಗಿಸುವ ಉಕ್ಕಿನಮುಳೆ.

शलीता, पु० ಒಂದು ಬಗೆಯ ದಪ್ಪನಾದ ಬಟ್ಟೆ.

शल्का, पु० ಅರೆತೋಳಿನ ಒಂದು ಬಗೆಯ ಕುಪ್ಪಸ.

शल्य, पु० ಒಂದು ಬಾಣ; ಅಸ್ತ್ರಚಿಕಿತ್ಸೆ; ಎಲುಬು; ಮೂಳೆ.

शल्यक्रिया, स्त्री० ಶಸ್ತ್ರಚಿಕಿತ್ಸೆ.

शव, पु० ಹೆಣ; ನೀರು.

शवदाह, पु० ದಹನಕ್ರಿಯೆ; ದಾಹಸಂಸ್ಕಾರ.

शश, पु० ಮೊಲ; ಚಂದ್ರನಲ್ಲಿ ಕಾಣುವ ಕಲೆ ಅಥವಾ ಕಳಂಕ.

शशक, पु० ಮೊಲ.

शशमाही, वि० ಆರುತಿಂಗಳ; ಅರ್ಧ॰ ವಾರ್ಷಿಕ.

शश-व-पंज, पु० ಚಿಂತೆ; ಅಸಮಂಜಸ; ವಿಚಾರ; ತೊಡಕು.

शशांक
शशि } पु० ಚಂದ್ರ.

शष्प, स्त्री० ಗರಿಕೆಹುಲ್ಲು.

शस्त, पु० ಗುರಿ. स्त्री० ಹೆಬ್ಬೆರಳು; ನಕ್ಕಿ; ಮೀನು ಹಿಡಿಯುವ ಮುಳ್ಳುಗಾಳ.

शस्त्र, पु० ಆಯುಧ; ಶಸ್ತ್ರ.

शस्त्रक्रिया, स्त्री० ಹುಣ್ಣು ಕುರು ಘಾಯ ಇವುಗಳಿಗೆ ಮಾಡುವ ಶಸ್ತ್ರಚಿಕಿತ್ಸೆ.

शस्त्रधर, पु० ಸಿಪಾಯಿ; ಸೈನಿಕ.

शस्त्रधारी, वि० ಶಸ್ತ್ರವನ್ನು ಧರಿಸಿದ; ಆಯುಧಪಾಣಿಯಾದ. पु० ಸಿಪಾಯಿ; ಸೈನಿಕ.

शस्त्रागार, पु० ಆಯುಧಶಾಲೆ.

शस्य, पु० ಎಳೆಹುಲ್ಲು; ಬೆಳೆ; ಪೈರು.

शहंशाह, पु० ಮಹಾರಾಜಾಧಿರಾಜ; ಚಕ್ರವರ್ತಿ; ಸಾರ್ವಭೌಮ.

शहंशाही, वि० ಚಕ್ರವರ್ತಿಗೊಪ್ಪುವ. स्त्री० ಸಾರ್ವಭೌಮತ್ವ.

शह, पु० ರಾಜಾಧಿರಾಜ; ಸಮ್ರಾಟ. वि० ಸರ್ವೋತ್ತಮವಾದ; ಶ್ರೇಷ್ಠತರವಾದ. स्त्री० ಚದುರಂಗದಾಟದಲ್ಲಿ ಯಾವುದಾದರೊಂದು ಕಾಯನ್ನು ಶಹ (ರಾಜ)ನಿಗೆ ಅಪಾಯವಾಗುವಂಥ ಸ್ಥಾನದಲ್ಲಿ ಡುವಿಕೆ.

शहज़ादा, पु० ರಾಜಕುಮಾರ.

शहज़ोर, वि० ಬಲಿಷ್ಠ; ಶಕ್ತಿವಂತ.

शहज़ोरी, स्त्री० ಬಲ; ಶಕ್ತಿ; ಅತ್ಯಾಚಾರ.

शहत पु०, दे० **शहद.**

शहतीर, पु० ನಾಟ; ದೂಲ; ರಿಪೀಸು.

शहतूत, पु० ಹಿಪ್ಪಲಿ ನೇರಳೆ; ಕಂಬಳಿ ಹಣ್ಣು.

शहद, पु० ಜೇನು ತುಪ್ಪ; ಮಧು.

शहना, पु० ನಗರ ರಕ್ಷಕ; ಕೊತ್ವಾಲ.

शहनाई, स्त्री० ಒಂದುವಾದ್ಯ; ನಾ[illegible] ಸ್ವರ.

शहबत, स्त्री० ಕಾಮ; ಸಂಭೋಗ.

शहबाला, पु० ವಿವಾಹಕಾಲದಲ್ಲಿ ಮದವಣಿಗನ ಸಂಗಡ ಬರುವ ಸಣ್ಣಬಾಲಕ.

शहर, पु० ಪಟ್ಟಣ; ನಗರ.

शहरियत, स्त्री० ನಾಗರಿಕತೆ ನಾಜೋಕು.

शहरी, वि० ಪಟ್ಟಣದ; ಪಟ್ಟಣಿಗ; ನಾಗರಿಕ.

शहवत, स्त्री० दे० **शहबत.**

शहादत, स्त्री० ಸಾಕ್ಷ್ಯ; ಪ್ರಮಾಣ; ರುಜುವಾತು.

शहाब, पु० ಅಚ್ಚಗೆಂಪು.

शहामत, स्त्री० ದೊಡ್ಡಸ್ತಿಕೆ; ಮಹತ್ವ.

शहीद, पु० ಸತ್ಯ ಅಥವಾ ನ್ಯಾಯಕ್ಕಾಗಿ ಪ್ರಾಣವನ್ನು ತೆತ್ತವ; ಸತ್ಯಸಾಕ್ಷಿ.

शांत, वि० ಸೌಮ್ಯವಾದ; ಸದ್ದಿಲ್ಲದ; ಉದ್ವೇಗವಿಲ್ಲದ; ಉದ್ರೇಕವಿಲ್ಲದ; ಸ್ಥಿರವಾದ.

शाइस्तगी, स्त्री० ಶಿಷ್ಟತೆ; ಸಹೃದಯತೆ; ಮನುಷ್ಯತ್ವ.

शाइस्ता, वि० ಸಭ್ಯ; ಶಿಷ್ಟ; ವಿನಯವುಳ್ಳ; ನಮ್ರನಾದ.

शाक, पु० ಕಾಯಿ ಪಲ್ಯ; ತರಕಾರಿ.

शाक़, वि० ಗಡುಸಾದ; ಅಸಹ್ಯವಾದ; ಕಷ್ಟವಾದ.

शाकट, पु० ಗಾಡಿಗೆ ಹೂಡುವ ಪ್ರಾಣಿ.

शाकल, पु० ಹವನದ ಸಾಮಗ್ರಿ; ನಮಿತ್ತು.

शकाहार, पु० ಸಸ್ಯಾಹಾರ.

शाकाहारी, पु० ಸಸ್ಯಾಹಾರಿ.

शाकिर, वि० ಕೃತಜ್ಞ; ಸಂತುಷ್ಟ; ತೃಪ್ತ.

शाकी, वि० ದೂರು ಹೇಳುವವ; ದಾವೆಮಾಡುವವ; ಚಾಡಿಖೋರ.

शाख़, स्त्री० ಕೊಂಬೆ; ಟೊಂಗೆ; ತುಂಡು; ವಿಭಾಗ; ಕೊಂಬು; ಕೋಡು.

शाखा, स्त्री० ಕೊಂಬೆ; ಟೊಂಗೆ; ಶಾಖೆ; ವಿಭಾಗ.

शाखी, वि० ಕೊಂಬೆಗಳುಳ್ಳ.

शागिर्द, पु० ಶಿಷ್ಯ.

शागिर्दी, स्त्री० ಶಿಷ್ಯತ್ವ; ಸೇವೆ.

शाठ्य, पु० ಮೋಸ; ಕಪಟ.

शाण, पु० ಸಾಣೆಗಲ್ಲು.

शात, वि० ಸಾಣೆ ಹಿಡಿಯಲ್ಪಟ್ಟ; ಮಸೆದ; ಬಡಕಲಾದ.

शातिर, पु० ಧೂರ್ತ; ಮೋಸಗಾರ.

शाद, वि० ಪ್ರಸನ್ನನಾದ; ಸಂತುಷ್ಟ; ತುಂಬಿದ. पु० ಪತನ.

शादमान, वि० ಸಂತೋಷದಿಂದಿರುವ; ಪ್ರಸನ್ನನಾದ.

शादमानी, स्त्री० ಸಂತೋಷ; ಪ್ರಸನ್ನತೆ.

शादाब, वि० ಪೈರುಪಚ್ಚೆಗಳಿಂದ ಕೂಡಿದ.

शादियाना, पु० ಮಂಗಳವಾದ್ಯ; ಆನಂದೋತ್ಸವ.

शादी, स्त्री० ಸಂತೋಷ; ಆನಂದ; ಮದುವೆ; ವಿವಾಹ.

शान, स्त्री० ವಿಜೃಂಭಣೆ; ಠೀವಿ; ಥಳಕು; ಒನಪು; ಒಯ್ಯಾರ.

शानदार, वि० ಠೀವಿಯ; ಬೆಡಗಿನ; ಭವ್ಯ.

शान-शौकत, स्त्री० ತಳಕುಬೆಳಕು; ಆಡಂಬರ; ವೈಖರಿ.

शाना, पु० ಬಾಚಣಿಗೆ.

शाप, पु० ಶಾಪ; ಜರೆಯುವ ನುಡಿ; ಧಿಕ್ಕಾರ.

शापग्रस्त, वि० ಶಾಪಕ್ಕೆ ಗುರಿಯಾದ

शापमुक्त, वि० ಶಾಪದಿಂದ ಬಿಡುಗಡೆ ಹೊಂದಿದ.

शाफ़ी, वि० ಗುಣಪಡಿಸುವ; ಹಿತ ಕಾರಿ.

शाबाश, अ० ಭೇಷ್! ಭಳಿರೆ! ಶಹ ಭಾಸ್!

शाबाशी, स्त्री० ಹೊಗಳಿಕೆ; ಪ್ರಶಂಸೆ. वि० ಸಾಧುವಾದ.

शाम, स्त्री० ಸಂಜೆ; ಬೈಗು. पु० ಅರಬೀದೇಶದ ಉತ್ತರಭಾಗದ ಹೆಸರು.

शामत, स्त्री० ದುರದೃಷ್ಟ; ದೌರ್ಭಾಗ್ಯ; ವಿಪತ್ತು; ಕೇಡುಗಾಲ; ದುರ್ದಶೆ.

शामतज़दा, वि० ಅದೃಷ್ಟಹೀನ; ಮಂದಭಾಗ್ಯ; ನಿರ್ಭಾಗ್ಯ.

शामियाना, पु० ಚಪ್ಪರ; ಡೇರೆ.

शामिल, वि० ಕೂಡಿದ; ಸಮ್ಮಿಳಿತವಾದ; ಸೇರಿದ.

शामिलात, स्त्री० ಹುದುವು; ಪಾಲುದಾರಿಕೆ; ಸೇರಿರುವಿಕೆ.

शामी, स्त्री० ಬೆತ್ತ ದೊಣ್ಣೆ ಮುಂತಾದುವುಗಳಿಗೆ ಹಾಕುವ ಲೋಹದ ಹಿಡಿ; ಅಣಸು; ಕಬ್ಬಿಣದ ಬಳೆ.

शायक, पु० ಅಂಬು; ಬಾಣ; ಕತ್ತಿ.

शायक़, वि० ಸೊಗಸಿದ; ಷೋಕಿನ; ಅಭಿಲಾಷಿ.

शायद, अव्य० ಬಹುಶಃ.

शायर, पु० ಕವಿ.

शायरा, स्त्री० ಕವಯಿತ್ರಿ.

शायरी, स्त्री० ಕವಿತ್ವ; ಕವಿತೆ; ಕಾವ್ಯ.

शाया, वि० ಪ್ರಕಟವಾದ; ಪ್ರಕಾಶಿಸಲ್ಪಟ್ಟ.

शायी, वि० ಮಲಗುವವ; ನಿದ್ರಿಸುವವ.

शारंगी, स्त्री० ಸಾರಂಗಿಯೆಂಬ ವಾದ್ಯ.

शारिका, स्त्री० ಮೈನಾ ಎಂಬ ಪಕ್ಷಿ.

शारीरक / शारीरिक वि० ಶರೀರಕ್ಕೆ ಸಂಬಂಧಿಸಿದ; ದೈಹಿಕ.

शाल, पु० ತೇಗದ ಮರ; ಸಾಗವಾನಿ. स्त्री० ಶಾಲು; ಶಾಲುವೆ ಸಕಲಾತಿ.

शावक, पु० ಮರಿ.

शासक, पु० ಆಳುವವ.

शासन, पु० ಆಜ್ಞೆ; ಕಟ್ಟಳೆ; ಆಳ್ವಿಕೆ; ಆಡಳಿತ; ದಂಡನೆ; ಶಿಕ್ಷೆ.

शासित, वि० ಆಳ್ವಿಕೆಗೊಳಗಾದ.

शास्ति, स्त्री० ಶಾಸನ; ಶಿಕ್ಷೆ; ದಂಡನೆ.

शाहंशाह, पु० ಮಹಾರಾಜಾಧಿರಾಜ; ಚಕ್ರವರ್ತಿ; ಸಾರ್ವಭೌಮ.

शाहंशाही, स्त्री० ಮಹಾರಾಜಾಧಿರಾಜನ ಪದವಿ; ಸಾರ್ವಭೌಮತ್ವ.

शाह, पु० ರಾಜಾಧಿರಾಜ; ಮಹಾರಾಜ; ಬಾದಶಹ.

शाहज़ादा, पु० ರಾಜಕುಮಾರ.

शाहज़ादी, स्त्री० ರಾಜಕುಮಾರಿ.

शाहबाज़, पु० ಒಂದು ಬಗೆಯ ಬಿಳಿಯ ಬಣ್ಣದ ದೊಡ್ಡ ಗಿಡಗ.

शाहाना, वि० ರಾಜಯೋಗ್ಯವಾದ.

शाहिद, पुं० ಸಾಕ್ಷಿಗಾರ; ಸಾಕ್ಷಿ. वि० ಸುಂದರವಾದ.

शाही, वि० ಅರಸನ; ರಾಜನ; ರಾಜಾರ್ಹ. स्त्री० ಶಾಸನ; ಆಳಿಕೆ.

शिकंजा, पुं० ಒತ್ತುವ ಅಥವಾ ಬಿಗಿಯುವ ಯಂತ್ರ; ಕೋಳದಮರ.

शिकन, स्त्री० ಮುದುರುವಿಕೆ; ಉಡುಗುವಿಕೆ; ನಿರಿಗೆ; ಸುಕ್ಕು.

शिकम, पुं० ಹೊಟ್ಟೆ; ಉದರ.

शिकमी, वि० ಹೊಟ್ಟೆಯ ಸಂಬಂಧವಾದ; ಹುಟ್ಟಿದಾಗಿನಿಂದಿನ; ಆಗರ್ಭ; ಒಳಗಿನ.

शिकमी-काश्तकार, पुं० ಒಬ್ಬ ರೈತನಿಂದ ವಾರಕ್ಕೆ ಸಾಗುವಳಿ ಮಾಡಲು ಜಮೀನನ್ನು ತೆಗೆದುಕೊಂಡ ಮತ್ತೊಬ್ಬ ರೈತ.

शिकरा, पुं० ಡೇಗೆ; ಗಿಡಗ.

सिकवा, पुं० ದೂರು; ನಿಂದೆ; ಚಾಡಿ.

शिकस्त, स्त्री० ಸೋಲು; ಅಪಜಯ; —देना ಸೋಲಿಸು; —खाना ಸೋಲು.

शिकस्ता, वि० ಒಡೆದ; ಮುರಿದ; ಭಗ್ನವಾದ; ಮೋಡಿ (ಬರಹ).

शिकायत, स्त्री० ದೂರು; ಚಾಡಿ; ನಿಂದೆ; ರೋಗ.

शिकार, स्त्री० ಬೇಟೆ; ಬೇಟೆಯಲ್ಲಿ ಕೊಲ್ಲಲ್ಪಟ್ಟ ಪ್ರಾಣಿ; ಮಾಂಸ; ಆಹಾರ; ಭಕ್ಷ್ಯ; —खेलना ಬೇಟೆಯಾಡು.

शिकार-गाह, स्त्री० ಬೇಟೆಯಾಡುವ ಸ್ಥಳ.

शिकारी, पुं० ಬೇಟೆಗಾರ; ಬೇಡರವ.

शिक्षक, पुं० ಓದು ಕಲಿಸುವವ; ಗುರು; ಉಪಾಧ್ಯಾಯ.

शिक्षण, पुं० ವಿದ್ಯಾಭ್ಯಾಸ.

शिक्षा, स्त्री० ವಿದ್ಯೆ; ಶಿಕ್ಷೆ; ದಂಡನೆ.

शिक्षाप्रद, वि० ಶಿಕ್ಷಣ ಕೊಡುವಂಥ.

शिक्षार्थी, पुं० ವಿದ್ಯಾರ್ಥಿ.

शिक्षाविभाग, पुं० ಸರಕಾರದ ವಿದ್ಯಾಭ್ಯಾಸದ ಇಲಾಖೆ.

शिक्षित, वि० ಓದುಕಲಿತ; ಶಿಕ್ಷಣವನ್ನು ಪಡೆದ; ವಿದ್ವಾಂಸ; ಪಂಡಿತ.

शिखंड, पुं० ನವಿಲಗರಿ; ಜುಟ್ಟು.

शिखर, पुं० ಬೆಟ್ಟದ ತುದಿ; ಶಿಖರ; ಗೋಪುರ; ಕಲಶ.

शिखा, स्त्री० ಜುಟ್ಟು; ಶಿಖೆ; ದೀಪದ ಕುಡಿ.

शिखि, पुं० ನವಿಲು; ಮಯೂರ.

शिगाफ़, पुं० ಕೊಯ್ದ ಘಾಯ; ಬಿರುಕು; ಪಾಳ; ಸೀಳು; ಒಡಕು; ತೂತು.

शिगुफ़्ता, वि० ಅರಳಿದ.

शिगूफ़ा, पुं० ಮೊಗ್ಗೆ; ಮುಗುಳು; ಹೂವು; ವಿಚಿತ್ರವಾದ ಸಂಗತಿ; —खिलाना ತಮಾಷೆಗೆ ಏನಾದರೊಂದು ಮಾತನ್ನು ಹುಟ್ಟಿಸು.

शिताब, क्रि० ಬೇಗನೆ; ಶೀಘ್ರವಾಗಿ.

शिताबी, स्त्री० ಆವಸರ.

शिति, वि॰ ಬಿಳಿಯ.

शिथिल, वि॰ ಸಡಿಲವಾದ; ದುರ್ಬಲ.

शिद्दत, स्त्री॰ ವೇಗ; ಚುರುಕು; ಉಗ್ರತೆ; ಆಧಿಕ್ಯ.

शिनाख़्त, स्त्री॰ ಗುರುತು; ಪರಿಚಯ; ಪರಿಜ್ಞಾನ.

शिनास, वि॰ ಗುರುತಿಸುವವನು.

शिफ़र, पु॰ ಗುರಾಣಿ.

शिर, पु॰ ತಲೆ; ಹಣೆ; ಶಿಖರ.

शिरकत, स्त्री॰ ಪಾಲು; ಭಾಗ; ಹಿಸ್ಸೆ.

शिरमौर, पु॰ ಕಿರೀಟ; ಅಧಿಪತಿ; ನಾಯಕ.

शिरस्त्राण, पु॰ ಯುದ್ಧದ ಕಾಲದಲ್ಲಿ ತಲೆಗೆ ಆಯುಧಗಳ ಪೆಟ್ಟು ತಾಗದಂತೆ ಧರಿಸಿಕೊಳ್ಳುವ ಕಬ್ಬಿಣದ ಶಿರಸ್ತ್ರಾಣ. ನೊಕವಾಡ; ಶಿರಸ್ತ್ರಾಣ.

शिराकत, स्त्री॰ ಪಾಲುದಾರಿಕೆ; ವ್ಯಾಪಾರ ಆಸ್ತಿ ಇತ್ಯಾದಿಗಳಲ್ಲಿಯ ಜಂಟಿ ಅಧಿಕಾರ; ಭಾಗ; ಸಹಕಾರ; ವೈಯಕ್ತಿಕವಲ್ಲದ್ದು.

शिरीष, पु॰ ಸಿರೀಸಮರ; ಬಾಗೇಹೂ.

शिरोधार्य, वि॰ ತಲೆಯಲ್ಲಿ ಧರಿಸತಕ್ಕ; ಆದರದೊಡನೆ ಅಂಗೀಕರಿಸಲು ಯೋಗ್ಯವಾದ.

शिलवट, स्त्री॰ दे॰ सिलवट.

शिला, स्त्री॰ ಕಲ್ಲು; ಬಂಡೆ.

शिलाजीत, पु॰ ಶಿಲಾಜಿತ್ತು; ಕಲ್ಲು ಬಂಡೆಗಳಲ್ಲಿ ದೊರೆಯುವ ಒಂದು ಔಷಧ.

शिलालेख, पु॰ ಶಿಲಾಶಾಸನ.

शिल्प, पु॰ ಕೈ ಕಸುಬು; ಕುಶಲ ವಿದ್ಯೆ; ಕಲ್ಲುಕೆತ್ತನೆಯ ಕೆಲಸ.

शिल्पी, पु॰ ಶಿಲ್ಪಿಕಾರ; ಮನೆ ಕಟ್ಟುವವ; ಶಿಲ್ಪಿ; ಚಿತ್ರಗಾರ.

शिविका, स्त्री॰ ಪಲ್ಲಕ್ಕಿ; ಡೋಲಿ.

शिविर, पु॰ ಗುಡಾರ; ಡೇರೆ; ಶಿಬಿರ.

शिष्ट, वि॰ ಧರ್ಮಶೀಲ; ಶಾಂತ; ಧೀರ; ಸುಶೀಲ; ಸಭ್ಯ; ಶ್ರೇಷ್ಠ.

शिष्टाचार, पु॰ ಸಾಧುವಾದ ನಡವಳಿಕೆ; ವಿಧೇಯತೆ.

शिस्त, स्त्री॰ ಮೀನು ಹಿಡಿಯುವ ಕೊಕ್ಕೆ; ಗಾಳ; ಗುರಿ; ಲಕ್ಷ್ಯ; ಶಿಸ್ತು.

शीकर, पु॰ ಹನಿ; ತುಂತುರು; ಗಾಳಿ; ನೀರಿನ ಹನಿ.

शीघ्र, क्रि॰ ಬೇಗನೆ.

शीतज्वर, पु॰ ಚಳಿಜ್ವರ.

शीतल, वि॰ ತಣ್ಣಗಿರುವ; ತಂಪಾದ; ತೃಪ್ತ. पु॰ ತಂಪು.

शीतला, स्त्री॰ ಸಿಡುಬು; ವೈಲಿಗೆ.

शीर, पु॰ ಹಾಲು.

शीरगर्म, वि॰ ಸ್ವಲ್ಪ ಬೆಚ್ಚಗಿರುವ; ಉಗುರು ಬೆಚ್ಚಗಿರುವ; ಕವೋಷ್ಣ.

शीरा, पु॰ ಸಣ್ಣ ರಕ್ತನಾಳ; ಷರಬತ್ತು; ಬೆಲ್ಲದ ಪಾಕ; ಕ್ಷೀರ.

शीराज़, पु॰ ಏರ್ಪಾಡು.

शीरीं, वि॰ ಸಿಹಿಯಾದ; ಮಧುರವಾದ; ಪ್ರಿಯ; ಪ್ರೇಮದ.

शीरीज़बाँ, स्त्री॰ ನಲ್ಮಾತು; ಸವಿನುಡಿ.

शीरीनी, स्त्री० ಸವಿ; ಮಾಧುರ್ಯ.

शीर्ण, वि० ಭಗ್ನವಾದ; ಹರುಕು ಬರುಕಾಗಿರುವ; ಕೃಶವಾದ.

शीर्ष, पु० ತಲೆ; ಹಣೆ; ತುದಿ.

शीर्षक, पु० ಶಿರೋನಾಮೆ.

शील, पु० ನಡೆನುಡಿ; ಆಚರಣೆ; ಸ್ವಭಾವ; ಒಳ್ಳೆಯ ನಡತೆ; ಜಾಣ.

शीलवान्, वि० ಶೀಲವಂತ; ಒಳ್ಳೆಯ ಆಚರಣೆಯುಳ್ಳ.

शीशम, पु० ಒಂದು ವೃಕ್ಷಜಾತಿ; ಬೀಟೀಮರ.

शीशमहल, पु० ಗಾಜಿನ ಮನೆ.

शीशा, पु० ಗಾಜು; ಕನ್ನಡಿ.

शीशी, स्त्री० ಗಾಜಿನ ಬುಡ್ಡಿ; ಸೀಸೆ; ಬಾಟ್ಲಿ.

शुंड, पु० ಆನೆಯ ಸೊಂಡಿಲು.

शुक, पु० ಗಿಣಿ.

शुकराना, पु० ಕೃತಜ್ಞತೆ; ಕಾರ್ಯವು ಮುಗಿದನಂತರ ಕೃತಜ್ಞತೆಯಿಂದ ಕೊಡುವ ಹಣ.

शुक्त, वि० ಹುಳಿಯಾದ; ಹುಳ್ಳಗಿರುವ. पु० ಮಜ್ಜಿಗೆಯ ನೀರು.

शुक्ति, स्त्री० ಮುತ್ತಿನ ಚಿಪ್ಪು; ಶಂಖ.

शुक्र, वि० ಬಿಳಿಯ. पु० ಒಂದು ಗ್ರಹ; ವೀರ್ಯ; ಪೌರುಷ.

शुक्र, पु० ಕೃತಜ್ಞತಾ ಪ್ರಕಟಣೆ; ಧನ್ಯವಾದ.

शुक्रगुज़ारी, स्त्री० ಉಪಕಾರಸ್ಮರಣೆ; ಕೃತಜ್ಞತೆ.

शुक्रिया, पु० ಧನ್ಯವಾದ.

शुक्ल, वि० ಬಿಳಿಯ.

शुजा, वि० ವೀರ; ಪರಾಕ್ರಮಿ.

शुजाअत, स्त्री० ಶೌರ್ಯ; ಪರಾಕ್ರಮ.

शुतुर, पु० ಒಂಟೆ;—**कीना** ಹಗೆತನವನ್ನು ಸಾಧಿಸುವವ;—**गमज़ा** ಮೋಸ; ಕಪಟ.

शुतुरगाव, पु० ಜರಾಫೆ.

शुतुरमुर्ग, पु० ಉಷ್ಟ್ರ ಪಕ್ಷಿ.

शुद, वि० ಪುರಾತನ. पु० ಯಾವುದಾದರೂ ಕೆಲಸದ ಪ್ರಾರಂಭ.

शुदनी, स्त्री० ಸಂಭವಿಸಲಿರುವ ಮಾತು.

शुद्धिपत्र, पु० ತಪ್ಪೋಲೆ.

शुफ़ा, पु० ನೆರೆಯುವ.

शुबहा, पु० ಸಂದೇಹ; ಸಂಶಯ; ಭ್ರಾಂತಿ.

शुभ, वि० ಮಂಗಳಕರವಾದ. पु० ಮಂಗಳ; ಶುಭ.

शुभचिंतक, वि० ಹಿತೈಷಿ.

शुभा, स्त्री० ಶೋಭೆ; ಕಾಂತಿ.

शुभ्र, वि० ಬಿಳಿಯ; ಉಜ್ವಲ.

शुमार, पु० ಸಂಖ್ಯೆ; ಎಣಿಕೆ; ಲೆಕ್ಕ; ಲೆಕ್ಕಾಚಾರ.

शुमारी, स्त्री० ಎಣಿಕೆ.

शुमाल, स्त्री० ಉತ್ತರ ದಿಕ್ಕು.

शुरू, पु० ಮೊದಲು; ಪ್ರಾರಂಭ.

शुल्क, पुं० ಸುಂಕ; ಹಾಸಲು; ಫೀಜು; ರುಸುಂ.

शुश्रूषा, स्त्री० ಸೇವೆ; ಪರಿಚರ್ಯೆ.

शुष्क, वि० ಒಣಗಿದ; ನೀರಸವಾದ.

शूकर, पुं० ಹಂದಿ.

शून्य, पुं० ಸೊನ್ನೆ; ಖಾಲಿ; ಏನೂ ಇಲ್ಲದ ಸ್ಥಳ. वि० ಏನೂಯಿಲ್ಲದ; ಖಾಲಿಯಾದ; ವಿಹೀನ; ರಹಿತ.

शूप, पु ಮೊರ.

शूम, वि० ಅವಲಕ್ಷಣವಾದ; ಕೆಟ್ಟದ್ದು; ನಿರ್ಭಾಗ್ಯ; ಲೋಭಿ.

शूर, पुं० ವೀರ; ಸೂರ್ಯ.

शूल, पुं० ಮುಳ್ಳು; ಶೂಲ.

शृंखला, स्त्री० ಕ್ರಮ; ವರಿಸೆ; ಸರಪಳಿ; ಸಂಕೋಲೆ; ಡಾಬು.

शृंग, पुं० ಶಿಖರ; ಗೋಪುರ; ಕಲಶ.

शृंगार, पुं० ನವರಸಗಳಲ್ಲೊಂದು; ಅಲಂಕಾರ.

शृगाल, पुं० ನರಿ. वि० ಹೇಡಿ; ಅಂಜುಬುರುಕ.

शेख़, पुं० ಮೊಹಮ್ಮದ್ ಪೈಗಂಬರನ ವಂಶಸ್ಥರ ಬಿರುದು; ಧರ್ಮಗುರು; ಆಚಾರ್ಯ.

शेख़चिल्ली, पुं० ಗಾಂಪರೊಡೆಯ; ಮೂರ್ಖ.

शेखर, पुं० ತಲೆ; ಹಣೆ.

शेखी, स्त्री० ಅಹಂಕಾರ; ಗರ್ವ; ಠೀವಿ; ದರ್ಪ; ಜಂಭ; ದುರಭಿಮಾನ;—बघारना या मारना ಜಂಭ ಕೊಚ್ಚಿಕೊಳ್ಳು.

शेफ़्तगी, स्त्री० ಆಸಕ್ತಿ.

शेफ़्ता, वि० ಆಸಕ್ತಿಯುಳ್ಳ.

शेर, पुं० ಸಿಂಹ; ವೀರಪುರುಷ; ಉರ್ದುವಿನಲ್ಲಿ ಎರಡು ಚರಣದ.

शेरवानी, स्त्री० ನಿಲುವಂಗಿ; ಅಂಗಿ.

शेष, पुं० ಉಳಿತಾಯ; ಬಾಕಿ; ಮರಣ.

शेवा, पुं० ರೀತಿ; ಪದ್ಧತಿ.

शै, स्त्री० ವಸ್ತು; ಪದಾರ್ಥ.

शैतान, पुं० ಸೈತಾನ; ಮನುಷ್ಯರನ್ನು ದುರ್ಮಾರ್ಗಕ್ಕೆ ಳೆಯುವ [illegible]

शैतानी, स्त्री० ದುಷ್ಟತನ; ತುಂಟತನ; ಉಪದ್ರವ.

शैदा, वि० ಪ್ರೀತಿಸಿದವ; ಪ್ರೇಮಿ.

शैदाई, पुं० ಪ್ರೇಮಮಾಡುವವ.

शैल, पुं० ಬೆಟ್ಟ; ಪರ್ವತ; ಬಂಡೆ.

शैली, स्त्री० ಬಗೆ; ಕ್ರಮ; ಪದ್ಧತಿ; ಬರೆಯುವ ವಿಧಾನ; ಶೈಲಿ.

शैवाल पुं० ಪಾಚಿ.

शैशव, वि० ಎಳೆತನದ. पुं० ಎಳೆತನ; ಚಿಕ್ಕಂದು; ಬಾಲ್ಯ.

शोकाकुल } **शोकार्त्त** } वि० ಶೋಕದಿಂದ ಕಂಗೆಟ್ಟ.

शोख़, वि० ಜಂಭವುಳ್ಳ.

शोख़ी, स्त्री० ಜಂಭ.

शोच, पुं० ದುಃಖ; ಚಿಂತೆ.

शोचनीय, वि० ದುಃಖಪಡಬೇಕಾದ.

शोणित, वि० ಕೆಂಪು ಬಣ್ಣದ. पुं० ರಕ್ತ.

शोथ, पु० ಬಾವು.

शोध, पु० ಹುಡುಕುವಿಕೆ; ಶೋಧನೆ.

शोधपत्र, पु० ತಪ್ಪೋಲೆ.

शोधक, पु० ಶುದ್ಧಿ ಮಾಡುವವ.

शोधन, पु० ಶುದ್ಧ ಮಾಡುವಿಕೆ; ಹುಡುಕುವಿಕೆ; ಪರಿಶೀಲಿಸುವಿಕೆ.

शोधना, स० ಶುದ್ಧ ಮಾಡು; ಹುಡುಕು; ಶೋಧಿಸು.

शोभना, अ० ಶೋಭಿಸು.

शोभा, स्त्री० ಕಾಂತಿ; ಸೌಂದರ್ಯ; ಸೊಬಗು; ಅಲಂಕಾರ.

शोभायमान } वि० ಸುಂದರ; ಶೋಭಿ
शोभित } ಸುವ.

शोर, पु० ಗದ್ದಲ; ಕೋಲಾಹಲ; ಗಡಿಬಿಡಿ.

शोरगुल, पु० ಗದ್ದಲ; ಗೌಜಿ.

शोरबा, पु० ಮಾಂಸದ ನೀರು; ಮಾಂಸದ ಸಾರು.

शोरा, पु० ಸೋರುಪ್ಪು; ಚವುಳು.

शोरिश, स्त्री० ಗದ್ದಲ.

शोला, पु० ಬೆಂಕಿಯ ಜ್ವಾಲೆ.

शोशा, पु० ಹೊರಗಡೆ ಬಂದಿರುವ ಭಾಗ; ಅದ್ಭುತವಾದ ಮಾತು.

शोषक, वि० ಬತ್ತಿಸುವಂಥ; ಹಿಂಗಿಸುವಂಥ; ಹೀರುವ. पु० ನಾಶ ಮಾಡುವವ.

शोषण, पु० ಶೋಷಿಸುವಿಕೆ; ಹೀರುವಿಕೆ.

शोषित वि० ಶೋಷಿಸಲ್ಪಟ್ಟ; ಒಣಗಿಸಲ್ಪಟ್ಟ; ಬತ್ತಿಹೋದ.

शोहदा, पु० ಪುಂಡ; ಪೋಕರಿ; ಸೊಗಸುಗಾರ.

शोहरत, स्त्री० } ಪ್ರಸಿದ್ಧಿ; ವಿಖ್ಯಾತಿ;
शोहरा, पु० } ಹೆಸರುವಾಸಿ.

शौक़, पु० ಗೀಳು; ಚಾಳಿ; ಷೋಕು; —से ಆನಂದವಾಗಿ, ಖುಷಿಯಾಗಿ.

शौक़त, स्त्री० ಠೀವಿ; ಪ್ರತಿಷ್ಠೆ; ದರ್ಪ; ವೈಖರಿ.

शौक़िया, क्रि० ಖುಷಿಯಾಗಿ; ಷೋಕಾಗಿ. वि० ಷೋಕಿನ.

शौक़ीन, स्त्री० ಷೋಕಿನವ; ಸೊಗಸುಗಾರ; ವಿಲಾಸಿ.

शौक़ीनी, स्त्री० ಷೋಕಿ; ಮೋಜು; ವ್ಯಭಿಚಾರ.

शौच, पु० ಸ್ವಚ್ಛತೆ; ಶುಚಿಯಾಗಿರುವಿಕೆ; ಮಲವಿಸರ್ಜನೆ.

शौर्य, पु० ಪರಾಕ್ರಮ.

शौहर, पु० ಗಂಡ; ಭರ್ತ.

श्मशान, पु० ಸುಡುಗಾಡು; ಸ್ಮಶಾನ.

श्यामल, वि० ಕಪ್ಪು ಬಣ್ಣದ.

श्यामसुंदर, पु० ಶ್ರೀಕೃಷ್ಣ.

श्येन, पु० ಹದ್ದು.

श्रद्धा, स्त्री० ಪೂಜ್ಯಭಾವ; ಅಕ್ಕರೆ; ಆಸ್ಥೆ; ಭಕ್ತಿ.

श्रद्धालु, वि० ಶ್ರದ್ಧೆಯನ್ನುಳ್ಳ.

श्रद्धेय, वि० ಶ್ರದ್ಧೆಗೆ ಪಾತ್ರನಾದ; ಪೂಜನೀಯ.

श्रम, पु० ಪರಿಶ್ರಮ; ಆಯಾಸ; ಬಳಲಿಕೆ; ವ್ಯಾಯಾಮ.

श्रमकण, पु० ಬೆವರ ಹನಿ.

श्रमजल, पु० ಬೆವರು.

श्रमजीवी, पु० ಕೂಲಿಗಾರ.

श्रमण, पु० ಬೌದ್ಧಮತದ ಸನ್ಯಾಸಿ.

श्रमी, वि० ಕಷ್ಟಪಟ್ಟು ಕೆಲಸಮಾಡು ವವ. पु० ಕೂಲಿಗಾರ.

श्रवना, अ० ಸೋರು; ಸ್ರವಿಸು.

श्रांति, स्त्री० ಪರಿಶ್ರಮ; ಆಯಾಸ; ಬಳಲಿಕೆ; ದುಃಖ.

श्रेणि } **श्रेणी** } स्त्री० ಸಾಲು; ಪಂಕ್ತಿ; ಮೆಟ್ಟುವರಿಸೆ.

श्रेणिबद्ध, वि० ಸಾಲಾಗಿರುವ; ಪಂಕ್ತಿಯಲ್ಲಿರುವ.

श्रेणियुद्ध, पु० ಆರ್ಥಿಕ ವರ್ಗಗಳ ಸಂಘರ್ಷ.

श्रेय, पु० ಶ್ರೇಯಸ್ಸು; ಕೀರ್ತಿ.

श्रोता, पु० ಆಲಿಸುವವ.

श्लाघनीय, वि० ಪ್ರಶಂಸೆಗೆ ಯೋಗ್ಯವಾದ; ಸ್ತುತ್ಯರ್ಹ.

श्लाघा, स्त्री० ಪ್ರಶಂಸೆ; ಹೊಗಳಿಕೆ; ಮುಖಸ್ತುತಿ.

श्लेष, पु० ಎರಡು ಅರ್ಥಗಳನ್ನು ಕೊಡುವ ಶಬ್ದಗಳ ಪ್ರಯೋಗ.

श्लेष्मा, पु० ಶ್ಲೇಷ್ಮ; ಕಫ.

श्वपच, पु० ಚಂಡಾಲ.

श्वसुर, पु० ಮಾವ.

श्वान, पु० ನಾಯಿ.

श्वापद, पु० ಹಿಂಸೆಮಾಡುವ ಜೀವಿಗಳು.

श्वास, पु० ಉಸಿರು.

ष

षंड, पु० ನಪುಂಸಕ.

षट्, वि० ಆರು. पु० ಆರನೆ ಸಂಖ್ಯೆ.

षट्कोण, वि० ಆರು ಮೂಲೆಗಳುಳ್ಳ.

षट्पद, वि० ಆರುಕಾಲುಗಳುಳ್ಳ.

षडंघ्रि, पु० ತುಂಬಿ; ಭ್ರಮರ.

षडानन, पु० ಕಾರ್ತಿಕೇಯ.

षड्यंत्र, पु० ಒಳಸಂಚು; ಪಿತೂರಿ.

षण्मुख, पु० ಕಾರ್ತಿಕೇಯ.

षाण्मासिक, वि० ಆರುತಿಂಗಳ; ಅರ್ಧವರ್ಷದ.

षोड़श, वि० ಹದಿನಾರು.

षोड़शी, स्त्री० ಹದಿನಾರು ವರ್ಷದ ಹೆಣ್ಣು.

स

संकट, पु० ದುಃಖ; ತೊಂದರೆ; ವಿಪತ್ತು. वि० ಇರುಕಾದ; ಇಕ್ಕಟ್ಟಾದ.

संकना, अ० ಶಂಕಿಸು.

संकर, पु० ಬೆರಕೆ; ಮಿಶ್ರಣ.

संकरा, वि० ಇಕ್ಕಟ್ಟಾದ; ಸಂಕೀರ್ಣ. पु० ದುಃಖ; ವಿಪತ್ತು. स्त्री० ಸರಪಳಿ; ಸಂಕೋಲೆ.

संकराना, स० ಮುಚ್ಚು.

संकरी, वि० ಬೆರಕೆ ಜಾತಿಯವ.

संकर्षण, पु० ಎಳೆಯುವಿಕೆ; ಜಗ್ಗುವಿಕೆ.

संकल, स्त्री० ಚಿಲಕ; ಸರಪಳಿ.

संकलन, पु० ಒಟ್ಟುಗೂಡಿಸುವಿಕೆ; ಕೂಡುವಿಕೆ; ಕೂಡುವ ಲೆಕ್ಕ.

संकलित, वि० ಸಂಗ್ರಹಿಸಲ್ಪಟ್ಟ; ಒಟ್ಟುಗೂಡಿಸಲ್ಪಟ್ಟ.

संकल्प, पु० ವಿಚಾರ; ಇಚ್ಛೆ; ದೃಢ ನಿಶ್ಚಯ.

संकार, स्त्री० ಸನ್ನೆ; ಇಂಗಿತ.

संकारना, स० ಸನ್ನೆಮಾಡು.

संकीर्ण, वि० ಇಕ್ಕಟ್ಟಾದ.

संकीर्तन, पु० ಭಜನೆ.

संकुचित, वि० ಮುದಡಿಕೊಂಡ; ಸಂಕುಚಿಸಿದ.

संकुल, वि० ಒತ್ತಾಗಿರುವ; ದಟ್ಟವಾದ. पु० ಸಮೂಹ; ಗುಂಪು.

संकेत, पु० ಸನ್ನೆ; ಗುರುತು; ಚಿನ್ಹೆ.

संकोच, पु० ನಾಚಿಕೆ; ಲಜ್ಜೆ ಭಯ.

संकोचना, अ० ಸಂಕೋಚಮಾಡು.

संकोची, वि० ಸಂಕೋಚವುಳ್ಳವ.

संक्रमण, पु० ನಡೆಯುವಿಕೆ; ಸಂಚರಿಸುವಿಕೆ.

संक्रामक, वि० ಮುಟ್ಟುವುದರಿಂದ ಒಬ್ಬರಿಂದೊಬ್ಬರಿಗೆ ಬರುವ (ರೋಗ); ಅಂಟುರೋಗ.

संक्रामी, वि० ಅಂಟುರೋಗವನ್ನು ಹರಡಿಸುವ (ಮನುಷ್ಯ ಅಥವಾ ಕ್ರಿಮಿ).

संक्षिप्त, वि० ಸಂಕ್ಷೇಪಿಸಲ್ಪಟ್ಟ.

संक्षेपतः / **संक्षेपतया** } अव्य० ಸಂಕ್ಷೇಪವಾಗಿ ಸ್ವಲ್ಪದರಲ್ಲಿಯೇ.

संखिया, पु० ಶಂಖ ಪಾಷಾಣ; ಗೌರೀಪಾಷಾಣ.

संग, पु० ಕಲ್ಲು; ಶಿಲೆ; ಜೊತೆ; ಕೂಟ. क्रि० ಜೊತೆಯಲ್ಲಿ; ಸಂಗಡ.

संगठन, पु० ಒಟ್ಟುಗೂಡಿಸುವಿಕೆ; ಸಂಘಟನೆ.

संगत, स्त्री० ಸಂಗ; ಜತೆ; ಸಂಗಾತಿ.

संग-तराश, पु० ಕಲ್ಲುಕುಟಿಗ.

संगति, स्त्री० ಸೇರುವಿಕೆ; ಸಂಘ; ಕೂಟ.

संग-दिल, वि० ಕಲ್ಲೆದೆಯು; ಕ್ರೂರ.

संग-दिली, स्त्री० ಕಲ್ಲೆದೆ; ಕ್ರೌರ್ಯ.

संग-पुश्त, पु० ಆಮೆ; ಆವೆ.

संग-मरमर, पु० ಅಮೃತ ಶಿಲೆ; ಹಾಲುಗಲ್ಲು.

संग-रेज़ा, पु० ಕಲ್ಲು ಹರಳು.

संग-मूसा, पु० ಕರಿಕಲ್ಲು.

संगाती, पु० ಸಂಗಡಿಗ; ಗೆಳೆಯ; ಮಿತ್ರ.

संगिनी, स्त्री० ಹೆಂಡತಿ.

संगी, पु० ಗೆಳೆಯ; ಸ್ನೇಹಿತ. वि० ಕಲ್ಲಿನ.

संगीन, वि० ಕಲ್ಲಿನಂತಹ; ಗಟ್ಟಿಯಾದ; ಬಾಳಿಕೆಬರುವ.

संगे-मसानो, पु० ಮೂತ್ರಾಶಯದಲ್ಲಿ ರೋಗದಿಂದ ಉಂಟಾಗುವ ಕಲ್ಲು.

संगृहीत, वि० ಸಂಗ್ರಹಿಸಲ್ಪಟ್ಟ.

संगृहीता, पु० ಒಟ್ಟುಗೂಡಿಸುವವ.

संग्रह, पु० ಕೂಡುಹಾಕುವಿಕೆ; ಅನೇಕ ವಿಷಯಗಳನ್ನು ಒಟ್ಟುಗೂಡಿಸಿರುವ ಗ್ರಂಥ.

संग्रही, पु॰ ಸಂಗ್ರಹಿಸುವವ.

संग्राम, पु॰ ಯುದ್ಧ.

संघ, पु॰ ಸಮೂಹ; ಸಮುದಾಯ; ಕೂಟ.

संघट } पु॰ ಒಟ್ಟುಗೂಡಿಸುವಿಕೆ;
संघटन } ಮಿಳನ; ಸಂಯೋಗ; ಪರಸ್ಪರ ತಿಕ್ಕಾಟ; ಜಗಳ; ಯುದ್ಧ.

संघटित, वि॰ ರಚಿಸಲ್ಪಟ್ಟ.

संघर्ष } पु॰ ತಿಕ್ಕಾಟ; ಸಂಘ
संघर्षण } ರ್ಷಣೆ

संघात, पु॰ ಪೆಟ್ಟು; ಹೊಡೆತ; ಕೊಲೆ.

संघातक, वि॰ ಕೊಲ್ಲುವ; ಪ್ರಾಣವನ್ನು ತೆಗೆಯುವ; ನಾಶಪಡಿಸುವ.

संघाती, पु॰ ಸಂಗಡಿಗ; ಜತೆಗಾರ; ಮಿತ್ರ; ಪ್ರಾಣನಾಶಕ.

संघारना, स॰ ನಾಶಪಡಿಸು; ಕೊಲ್ಲು; ಸಂಹರಿಸು.

संघाराम, पु॰ ಬೌದ್ಧ ಭಿಕ್ಷು ಮತ್ತು ಶ್ರಮಣರು ವಾಸಿಸುವ ಮಠ.

संघोष, पु॰ ದೊಡ್ಡ ಶಬ್ದ.

संचना, स॰ ಸಂಗ್ರಹಮಾಡು; ಸಂರಕ್ಷಿಸು.

संचय, पु॰ ರಾಶಿ; ಗುಡ್ಡೆ; ಕೂಡಿಡುವಿಕೆ.

संचयन, पु॰ ಸಂಗ್ರಹಿಸುವಿಕೆ.

संचरण, पु॰ ಸಂಚರಿಸುವಿಕೆ.

संचरना, अ॰ ತಿರುಗಾಡು; ಸಂಚರಿಸು.

संचार, पु॰ ತಿರುಗಾಟ; ಸಂಚಾರ; ಹರಡುವಿಕೆ.

संचारक, पु॰ ಸಂಚರಿಸುವವ; ಮುಂದಾಳು.

संचारित, वि॰ ನಡೆಸಲ್ಪಟ್ಟ.

संचालक, पु॰ (ಕಾರ್ಯ) ನಿರ್ವಾಹಕ.

संचालन, पु॰ ನಡೆಸುವಿಕೆ; ಮೇಲ್ವಿಚಾರಣೆ; ನಿರ್ವಹಣೆ.

संचित, वि॰ ಕೂಡಿಟ್ಟ; ಒಟ್ಟುಗೂಡಿಸಿದ; ರಾಶಿಮಾಡಲ್ಪಟ್ಟ.

संजम, पु॰ दे॰ **संयम**.

संजमी, वि॰ दे॰ **संयमी**.

संजात, वि॰ ಹುಟ್ಟಿದ.

संजाफ़, स्त्री॰ ಅಂಚು; ಕುಚ್ಚು.

संजीदगी, स्त्री॰ ಗಾಂಭೀರ್ಯ; ಘನತೆ; ಗಂಭೀರತೆ.

संजीदा, वि॰ ಗಂಭೀರವಾದ.

संजीवन, पु॰ ಬದುಕಿಸುವವ.

संजीवी, वि॰ ಸತ್ತವನ್ನು ಬದುಕಿಸುವವ.

संजोग, पु॰ दे॰ **संयोग**.

संजोना, स॰ ಸಜ್ಜುಗೊಳಿಸು.

संज्ञा, स्त्री॰ ಎಚ್ಚರ; ಜ್ಞಾನ; ಹೆಸರು; ನಾಮಪದ; ಸನ್ನೆ; ಸಂಕೇತ.

संझा, स्त्री॰ ಸಂಜೆ; ಸಾಯಂಕಾಲ.

संड़सी, स्त्री॰ ಪಟಕಾರು; ಇಕ್ಕಳ.

संडा, वि॰ ಕೊಬ್ಬಿದ; ಹೃಷ್ಟಪುಷ್ಟ. पु॰ ಕೋಣೆಯ.

संडास, पुं० ಪಾಯಖಾನೆಯ ಕುಣಿ.
संतत, अ० ಯಾವಾಗಲೂ; ನಿರಂತರ.
संतप्त, वि० ಕಾದ; ಸುಡಲ್ಪಟ್ಟ; ದುಃಖಿತ.
संतरा, पुं० ದೊಡ್ಡ ಕಿತ್ತಲೆ ಹಣ್ಣು.
संतरी, पुं० ಕಾವಲುಗಾರ; ಪಹರೇದಾರ.
संतान, स्त्री० ಮಕ್ಕಳು ಮರಿ; ಸಂತತಿ.
संताप, पुं० ಉರಿ; ಬೇಗೆ ತಾಪ; ದುಃಖ; ಮನೋವ್ಯಥೆ.
संतुष्ट, वि० ತೃಪ್ತಿಹೊಂದಿದ.
संतोख } पुं० ತೃಪ್ತಿ; ಸಂತೋಷ; ಹರ್ಷ; ಆನಂದ.
संतोष }
संतोषी, पुं० ತೃಪ್ತಿಹೊಂದಿದವ.
संदर्भ, पुं० ರಚನೆ; ಲೇಖನ; ಪ್ರಬಂಧ; ಸಂಬಂಧ; ಸಂದರ್ಭ.
संदल, पुं० ಶ್ರೀಗಂಧ; ಚಂದನ.
संदिग्ध, वि० ಸಂದೇಹಪೂರ್ಣವಾದ; ಎಡವಟ್ಟಾದ.
संदूक़, पुं० ಪೆಟ್ಟಿಗೆ.
संदूकचा, पुं० } ಸಣ್ಣ ಪೆಟ್ಟಿಗೆ; ಕೈ ಪೆಟ್ಟಿಗೆ.
संदूकची, स्त्री० }
संदेश, पुं० ಸುದ್ದಿ; ಸಮಾಚಾರ; ಒಂದು ಬಗೆಯ ಮಿಠಾಯಿ.
संदेशा } पुं० ಸುದ್ದಿ; ಸಮಾಚಾರ.
संदेसा }
संदेह, पुं० ಸಂಶಯ; ಸಂದೇಹ.
संदोह, पुं० ಗುಂಪು; ಹಿಂಡು.
संधान, पुं० ಗುರಿಯಿಡುವಿಕೆ; ಹುಡುಕುವಿಕೆ.
संधानना, स० ಗುರಿಯಿಡು.
संधि, स्त्री० ಸೇರುವಿಕೆ; ಮಿಲನ; ಒಪ್ಪಂದ; ಮೈತ್ರಿ.
संपत्-संपत्ति } स्त्री० ಸಿರಿ; ಸಂಪತ್ತು; ಐಶ್ವರ್ಯ; ಸಿದ್ಧಿ; ಸೌಭಾಗ್ಯ; ಪ್ರಾಪ್ತಿ; ಲಾಭ.
संपद्-संपदा }
संपन्न, वि० ಪೂರ್ಣವಾದ; ಸಾಧಿಸಲ್ಪಟ್ಟ; ನೆರವೇರಿದ; ಕೂಡಿದ; ಸಹಿತ; ಶ್ರೀಮಂತ; ಧನವಂತ.
संपर्क, पुं० ಸೇರುವಿಕೆ; ಮಿಶ್ರಣ; ಸಂಸರ್ಗ; ಸ್ನೇಹ.
संपा, स्त्री० ವಿದ್ಯುಚ್ಛಕ್ತಿ; ಮಿಂಚು.
संपात, पुं० ಒಮ್ಮೆಗೆ ಬೀಳುವಿಕೆ.
संपादक, पुं० ಸಿದ್ಧಗೊಳಿಸುವವ; ಸಂಪಾದಕ; ಎಡಿಟರು.
संपादकीय, वि० ಸಂಪಾದಕನಿಗೆ ಸಂಬಂಧಿಸಿದ. पुं० ವೃತ್ತಪತ್ರಿಕೆಯಲ್ಲಿಯ ಅಗ್ರ ಲೇಖನ ಮತ್ತು ಪ್ರಚಲಿತ ವಿಷಯಗಳ ಮೇಲಿನ ಟೀಕೆ ಟಿಪ್ಪಣಿ.
संपादन, पुं० ಸಜ್ಜುಗೊಳಿಸುವಿಕೆ; ಸರಿಪಡಿಸುವಿಕೆ; ಪ್ರಕಟಿಸುವಿಕೆ.
संपादिका, स्त्री० ಸಂಪಾದಕಿ.
संपादित, वि० ತಯಾರಾದ.
संपुट, पुं० ಸಣ್ಣ ಪೆಟ್ಟಿಗೆ; ಡಬ್ಬಿ; ಭರಣಿ; ಬೊಗಸೆ.
संपूर्ण, वि० ಎಲ್ಲಾ; ಪೂರ್ತಿಯಾದ.

संपूर्णतया, क्रि० ಪೂರ್ಣವಾಗಿ; ಪೂರಾ; ಚೆನ್ನಾಗಿ.

सँपेरा, पु० ಹಾವಾಡಿಗ.

सँपोला, पु० ಹಾವಿನ ಮರಿ.

सँपोलिया, पु० ಹಾವುಗಳನ್ನು ಹಿಡಿಯುವವ; ಹಾವಾಡಿಗ.

संप्रति, अव्य० ಈಗಲೇ; ಪ್ರಕೃತ.

संप्रदान, पु० ದಾನ ಕೊಡುವಿಕೆ.

संप्रदाय, पु० ಒಂದು ವಿಶಿಷ್ಟ ಧಾರ್ಮಿಕ ಮತ; ಪಂಗಡ; ಮಾರ್ಗ; ಪಥ; ರೂಢಿ; ಪರಿಪಾಟಿ.

संबंध, पु० ನೆಂಟಸ್ತನ; ಬಾಂಧವ್ಯ; ಮಿಳನ; ಮದುವೆ.

संबंधी, वि० ಸಂಬಂಧಪಟ್ಟ; ವಿಷಯವನ್ನು ಕುರಿತ. पु० ನೆಂಟ; ಬಳಗದವ.

संबद्ध, वि० ಕೂಡಿಸಿದ; ತಾಗಿದ; ಸಂಬಂಧಿಸಿರುವ.

संबल, पु० ಪಾಥೇಯ; ದಾರೀ ಖರ್ಚು.

संबोधन, पु० ಕರೆ; ಆಹ್ವಾನ.

संभलना, अ० ನಿರ್ವಹಿಸಲ್ಪಡು; ಸಾಗು; ಚೇತರಿಸಿಕೊಳ್ಳು; ಹುಷಾರಾಗು.

संभव, पु० ಹುಟ್ಟು; ಜನ್ಮ.

संभवतः, क्रि० ಬಹುಶಃ.

संभवनीय, वि० ಒದಗಬಹುದಾದ; ಸಂಭವಿಸಬಹುದಾದ.

संभर, पु० ತಡೆ; ಎಚ್ಚರಿಕೆ; ರಕ್ಷಣೆ.

संभारना, स० दे० संभालना.

संभाल, स्त्री० ಮೇಲ್ವಿಚಾರಣೆ; ರಕ್ಷಣೆ; ಏರ್ಪಾಡು.

संभालना, स० ನಿಭಾಯಿಸು; ಸಂಬಾಳಿಸು; ನಿರ್ವಹಿಸು; ಹಿಡಿದುಕೊಳ್ಳು; ತಾಳು; ಸಹಿಸು; ಕಾಪಾಡು.

संभावना, स्त्री० ನಡೆಯಬಹುದಾದ್ದು; ಕಲ್ಪನೆ; ಗೌರವ.

संभाषण, पु० ಮಾತುಕತೆ.

संभ्रम, पु० ತಿರುಗುವಿಕೆ; ಸುತ್ತುವಿಕೆ; ಕಳವಳ; ಪ್ರಮಾದ.

संभ्रांत, पु० ಕಳವಳಗೊಂಡ; ಉದ್ವಿಗ್ನ; ಶಿಷ್ಟ.

संभ्रांति, स्त्री० ಕಳವಳ; ಉದ್ವೇಗ; ಆತುರ.

संमेलन, पु० दे० सम्मेलन.

संयम, पु० ತಡೆ; ಅಂಕೆ; ಇಂದ್ರಿಯ ನಿಗ್ರಹ; ನಿರೋಧ; ಕಟ್ಟು; ಬಂಧನ.

संयमी, वि० ಮನಸ್ಸು ಮತ್ತು ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡವ; ಜಿತೇಂದ್ರಿಯ; ಯೋಗಿ.

संयुक्त, वि० ಸೇರಿಕೊಂಡಿರುವ; ಒಡಗೂಡಿದ; ಸಹಿತ.

संयोग, पु० ಸೇರುವಿಕೆ; ಮಿಶ್ರಣ; ದೈವ ಘಟನೆ;—से ದೈವ ವಶದಿಂದ.

संयोजक, पु० ಕೂಡಿಸುವವ; ಜೋಡಿಸುವವ; ಸಭೆ ಸೇರಿಸುವವ.

संयोजन, ಪುಂ ಸೇರಿಸುವಿಕೆ; ಏರ್ಪಾ ಟು; ವ್ಯವಸ್ಥೆ.

संयोजित, ವಿಂ ಸೇರಿಸಲ್ಪಟ್ಟ.

संरक्षक, ಪುಂ ಕಾಪಾಡುವವ; ಸಾಕು ವವ; ರಕ್ಷಕ.

संरक्षण, ಪುಂ ಪಾಲನೆ; ಸಂರಕ್ಷಣೆ; ಅಧಿಕಾರ; ಅಂಕೆ.

संलग्न, ವಿಂ ಚೆನ್ನಾಗಿ ಅಂಟಿಕೊಂ ಡಿರುವ.

संलाप, ಪುಂ ಮಾತುಕತೆ; ಸಂಭಾ ಷಣೆ.

संलिप्त, ವಿಂ ಮಗ್ನನಾದ; ತಲ್ಲೀನ ನಾದ.

संवत्, ಪುಂ ವರ್ಷ; ಸಂವತ್ಸರ.

संवत्सर, ಪುಂ ವರ್ಷ.

संवरण, ಪುಂ ದೂರ ಮಾಡುವಿಕೆ; ಬಚ್ಚಿಡುವಿಕೆ; ಆರಿಸುವಿಕೆ.

संवरणीय, ವಿಂ ನಿವಾರಿಸಲ್ಪಡತಕ್ಕ; ಮದುವೆಗೆ ಯೋಗ್ಯವಾದ.

संवरना, ಅಂ ಸಿಂಗರಿಸಿಕೊಳ್ಳು; ಅಲಂಕೃತವಾಗು.

संवर्त्तन, ಪುಂ ಸುತ್ತುವಿಕೆ.

संवर्त्तित, ವಿಂ ಸುರುಳಿಮಾಡಲ್ಪಟ್ಟ; ಸುತ್ತಲ್ಪಟ್ಟ.

संवर्द्धन, ಪುಂ ಬೆಳೆಸುವಿಕೆ; ಅಭಿ ವೃದ್ಧಿ; ಸಾಕುವಿಕೆ; ಪೋಷಣೆ.

संवर्द्धित, ವಿಂ ಬೆಳೆಸಲ್ಪಟ್ಟ; ಅಭಿ ವೃದ್ಧಿಗೆ ತರಲ್ಪಟ್ಟ.

संवाद, ಪುಂ ಮಾತುಕತೆ; ಸಂಭಾ ಷಣೆ; ಸುದ್ದಿ; ಸಮಾಚಾರ.

संवाददाता, ಪುಂ ಸುದ್ದಿಗಾರ; ಬಾತ್ಮೀ ದಾರ.

संवारना, ಸಂ ಸಿಂಗರಿಸು; ಅಲಂಕ ರಿಸು; ಸರಿಪಡಿಸು.

संविधान, ಪುಂ ರಚನೆ; ಏರ್ಪಾಡು.

संवेदन, ಪುಂ ಅನುಭವಿಸುವಿಕೆ.

संवेदना, ಸ್ತ್ರೀಂ ಪರಿತಾಪ.

संवेष्टन, ಪುಂ ಸುತ್ತುವಿಕೆ; ಸುರುಳಿ ಸುತ್ತುವಿಕೆ; ಆವರಿಸುವಿಕೆ.

संशय, ಪುಂ ಸಂದೇಹ.

संशयात्मक, ವಿಂ ಸಂದೇಹವುಳ್ಳ; ಸಂದಿಗ್ಧ; ಅನಿಶ್ಚಿತವಾದ.

संशोधक, ಪುಂ ತಿದ್ದುಪಾಟು ಮಾಡು ವವ.

संशोधन, ಪುಂ ತಿದ್ದುಪಡಿ; ಸರಿಪಡಿಸು ವಿಕೆ.

संशोधित, ವಿಂ ತಿದ್ದಲ್ಪಟ್ಟ; ತಿದ್ದು ಪಡಿಯಾದ.

संशोषण, ಪುಂ ಚೆನ್ನಾಗಿ ಹೀರುವಿಕೆ.

संसर्ग, ಪುಂ ಸಂಪರ್ಕ; ಸಹವಾಸ.

संसर्गदोष, ಪುಂ ಸಹವಾಸದೋಷ.

संसार, ಪುಂ ಪ್ರಪಂಚ; ಜಗತ್ತು.

संसृति, ಸ್ತ್ರೀಂ ಸೃಷ್ಟಿ.

संस्करण, ಪುಂ ಸರಿಪಡಿಸುವಿಕೆ; ಸುಧಾ ರಣೆ; ಪುಸ್ತಕದ ಮುದ್ರಣ; ಆವೃತ್ತಿ.

संस्कृति, ಸ್ತ್ರೀಂ ಸ್ವಚ್ಛತೆ; ಪರಿಷ್ಕಾರ; ಅಂತಃಕರಣಗಳ ಬೆಳವಣಿಗೆಯ ರೂಪ.

संस्था, ಸ್ತ್ರೀಂ ಸಮಾಜ; ಮಂಡಳಿ.

संस्थापक, ಪುಂ ಸ್ಥಾಪಿಸಿದವ.

संस्थापन, पुं० ಸ್ಥಾಪನೆ ; ನಿರ್ಮಿಸು ವಿಕೆ ; ಕೂಡಿಸುವಿಕೆ.

संस्थापित, वि० ಸ್ಥಾಪಿಸಲ್ಪಟ್ಟ ; ಜಾರಿಗೆ ತರಲ್ಪಟ್ಟ.

संस्मरण, पुं० ಒಳ್ಳೆಯ ನೆನಪು.

संहारक, पुं० ಕೊಲ್ಲುವವ.

संहारना, स० ನಾಶಪಡಿಸು; ಕೊಲ್ಲು; ಸಂಹರಿಸು.

सअद, पुं० ಸೌಭಾಗ್ಯ.

सआदत, स्त्री० ಸೌಭಾಗ್ಯ; ಅದೃಷ್ಟ; ಒಳ್ಳಿತು; ಹಿತ.

सआदत-मन्द, वि० ಭಾಗ್ಯಶಾಲಿ; ವಿಧೇಯ.

सई, स्त्री० ಪ್ರಯತ್ನ; ಶಿಫಾರಿಸು.

सईद, वि० ಶುಭಕರ; ಮಂಗಳ; ಭಾಗ್ಯವಂತ.

सईस, पुं० ಕುದುರೆಯ ಆಳು.

सकत, स्त्री० ಬಲ; ಶಕ್ತಿ.

सकना, अ० ಶಕ್ಯವಾಗು; ಸಾಧ್ಯ ವಾಗು.

सकपकाना, अ० ಬೆರಗಾಗು; ಕಕ್ಕಾ ಬಿಕ್ಕಿಯಾಗು; ನಾಚು; ಹಿಂಜರಿ.

सकाना, अ० ಶಂಕಿಸು; ಹಿಂಜರಿ; ಶೋಕಿಸು.

सकारना, स० ಸ್ವೀಕರಿಸು.

सकारे, क्रि० ಮುಂಜಾನೆಯೇ; ಬೆಳ ಗಾಗುತ್ತಲೆ.

सकालत, स्त्री० ದೊಡ್ಡಸ್ತಿಕೆ; ಭಾರ ವಾಗಿರುವುದು.

सकाश, अव्य० ಹತ್ತಿರ; ಸಮೀಪ ದಲ್ಲಿ.

सक़ीम, वि० ರೋಗಿ; ದೋಷ ಪೂರ್ಣವಾದ.

सक़ील, वि० ಬೇಗನೆ ಜೀರ್ಣವಾಗದ (ಊಟ); ಭಾರವಾದ.

सकुच, पुं० ಸಂಕೋಚ; ಲಜ್ಜೆ.

सकुचना, अ० ಸಂಕೋಚಪಡು; ನಾಚಿಕೊಳ್ಳು; ಮುಚ್ಚಿಕೊಳ್ಳು; ಮುದುಡಿಕೊಳ್ಳು.

सकुचाना, अ० ಸಂಕೋಚಪಡು; ಲಜ್ಜಿಸು. स० ಮುಚ್ಚಿಸು.

सकुचीला, वि० ಸಂಕೋಚ ಪ್ರಕೃ ತಿಯ.

सकुड़ना, अ० दे० सिकुड़ना.

सकुन, पुं० ಹಕ್ಕಿ; ಪಕ್ಷಿ; ಶಕುನ.

सकूनत, स्त्री० ವಾಸಸ್ಥಾನ; ಮೇಲ್ವಿ ಚಾಸ; ಪತ್ತೆ.

सकेलना, स० ಕೂಡು ಹಾಕು; ಕೂಡಿಸು.

सक़्क़ा, पुं० ನೀರು ಹೊರುವವ.

सक्रिय, वि० ಭಾಗವಹಿಸಿ ಕೆಲಸ ಮಾಡುವ.

सक्षम, वि० ತಾಳ್ಮೆಯುಳ್ಳ; ಬಲ ಶಾಲಿ; ಸಮರ್ಥ.

सखरा, पुं०, **सखरी**, स्त्री० } ತೈಲಪಕ್ವವಲ್ಲದ ಅಡಿಗೆ; ಮುಸುರೆ ಅಡಿಗೆ.

सखा, पुं० ಜೊತೆಗಾರ; ಗೆಳೆಯ; ಮಿತ್ರ.

सख़ावत, स्त्री० ಉದಾರತೆ; ಔದಾರ್ಯ; ದಾನಶೀಲತೆ.

सखी, स्त्री० ಜೊತೆಗಾರ್ತಿ; ಗೆಳತಿ.

सख़ी, वि० ಕೊಡುಗೈ; ದಾನಿ.

सखुआ, पु० ಶಾಲವೃಕ್ಷ.

सख़ुन, पु० ಮಾತುಕತೆ; ಸಂಭಾಷಣೆ; ಕವಿತೆ; ಕಾವ್ಯ; ಮಾತು; ವಚನ; ಹೇಳಿಕೆ; ಕಥನ.

सख़ुन-तकिया, पु० ಮಾತನಾಡುವಾಗ ಹಲವರು ಅಭ್ಯಾಸದಮೇಲೆ ಪದೇ ಪದೇ ಹೇಳುವ ಶಬ್ದ ಅಥವಾ ವಾಕ್ಯಾಂಶ.

सख़ुन-दाँ, वि० ಕಾವ್ಯರಸಿಕ; ಕವಿ.

सख़ुन-परवर, वि० ಕೊಟ್ಟಮಾತನ್ನು ನೆರವೇರಿಸುವವ; ಹಠಿ.

सख़ुन-फ़हम, वि० ಮಾತಿನ ಮರ್ಮವನ್ನು ಅರಿತವ; ಜಾಣ; ಚತುರ.

सख़ुन-साज़, पु० ಸುಣ್ಣನೆಯ ಮಾತುಗಳನ್ನಾಡುವವ; ಮಾತುಗಾರ.

सख़्त, वि० ಕಠಿಣ; ಕಡುದು; ಕ್ರೂರ; ನಿರ್ದಯ. क्रि० ಬಹಳ ಹೆಚ್ಚು; ಅಧಿಕ; ನಖತ್ತು.

सख़्त-जान, वि० ಕಠಿಣವಾದ ಮನಸ್ಸುಳ್ಳವ; ಕಷ್ಟವನ್ನು ಸಹಿಸುವವ.

सख़्त-दिल, वि० ಕಠಿಣವಾದ ಹೃದಯವುಳ್ಳವ; ನಿರ್ದಯಿ.

सख़्ती, स्त्री० ಕಾಠಿಣ್ಯ; ಗಡುಸು; ಕ್ರೂರವಾದ ವ್ಯವಹಾರ.

सगबग, क्रि० ಬೇಗನೆ; ತಟಕ್ಕನೆ. वि० ತೊಯ್ದು; ನೆನದ.

सगरा } **सगल** } वि० ಸಕಲ; ಸಮಸ್ತ; ಇಡೀ.

सगा, वि० ಒಡಹುಟ್ಟಿದ; ಖಾಸಾ; ಸ್ವಂತ;—भाई ಖಾಸಾ ತಮ್ಮ.

सगाई, स्त्री० ನಿಶ್ಚಯತಾಂಬೂಲ; ನಿಶ್ಚಿತಾರ್ಥ; ಸಂಬಂಧ.

सग़ीर, वि० ಚಿಕ್ಕ; ಸಣ್ಣ; ಸ್ವಲ್ಪ.

सघन, वि० ದಟ್ಟವಾದ; ನಿಬಿಡವಾದ.

सच, वि० ನಿಜವಾದ. पु० ಸತ್ಯ.

सचमुच, क्रि० ನಿಜವಾಗಿಯೂ; ಯಥಾರ್ಥವಾಗಿಯೂ; ನಿಶ್ಚಯವಾಗಿ; ನಿಸ್ಸಂದೇಹವಾಗಿ.

सचाई, स्त्री० ಸತ್ಯತೆ; ವಾಸ್ತವಿಕತೆ.

सचान, पु० ಗಿಡಗ.

सचिंत, वि० ಚಿಂತೆಯುಳ್ಳ.

सचिक्कन } **सचिक्कन** } वि० ಬಹಳ ನುಣುಪಾಗಿರುವ; ಮುಟ್ಟಿದರೆ ಜಾರುವಂಥ.

सचिव, पु० ಮಿತ್ರ; ಸ್ನೇಹಿತ; ಮಂತ್ರಿ; ಸಚಿವ; ಸಹಾಯಕ.

सचेत, वि० ಎಚ್ಚರವಾದ; ಹುಷಾರಾದ; ಚೇತರಿಸಿಕೊಂಡ.

सचेष्ट, वि० ಕದಲುಮೆದಲುವ; ಜಾಗರೂಕ.

सचरित्र, वि० ಒಳ್ಳೆಯ ಗುಣಶೀಲಗಳನ್ನುಳ್ಳ.

सच्चा, वि० ನಿಜವನ್ನೇ ಹೇಳುವ; ಸತ್ಯವಾದಿ; ನಿಜವಾದ; ವಾಸ್ತವಿಕವಾದ.

सच्चाई, स्त्री० दे० सचाई.

सज, स्त्री० ಅಲಂಕರಿಸುವಿಕೆ; ಅಂದ; ರೂಪ; ಸೊಗಸು; ಶೃಂಗಾರ; ಸೌಂದರ್ಯ.

सजग, वि० ಎಚ್ಚರವುಳ್ಳ; ಜಾಗರೂಕನಾದ.

सजधज, स्त्री० ಅಂದಚಂದ; ಅಲಂಕಾರ; ಶೃಂಗಾರ.

सजन, पु० ಸಜ್ಜನ; ಸದ್ಗೃಹಸ್ಥ; ಗಂಡ; ಪತಿ; ಇನಿಯ; ಪ್ರಿಯ.

सजना, अ० ಸಿಂಗರಿಸಿಕೊಳ್ಳು; ಅಲಂಕಾರಮಾಡಿಕೊಳ್ಳು; ಅಲಂಕರಿಸು.

सजल, वि० ನೀರು ತುಂಬಿದ; ನೀರನ್ನೊಳಗೊಂಡ; ಕಣ್ಣೀರು ತುಂಬಿದ; ಅಶ್ರುಪೂರ್ಣ.

सजवाना, स० ಅಲಂಕರಿಸು; ಸುಸಜ್ಜಿತವನ್ನಾಗಿ ಮಾಡು.

सज़ा, स्त्री० ಶಿಕ್ಷೆ; ದಂಡನೆ.

सजाई, स्त्री० ಅಲಂಕರಿಸುವಿಕೆ; ಸಿಂಗರಿಸುವಿಕೆ.

सज़ा ए-मौत, स्त्री० ಮರಣ ದಂಡನೆ.

सजातीय, वि० ಒಂದೇ ಜಾತಿ ಅಥವಾ ಗೋತ್ರದ.

सजाना, स० ಸಿಂಗರಿಸು; ಅಲಂಕರಿಸು.

सज़ाय, स्त्री० दे० **सज़ा.**

सज़ायाफ़्ता, वि० ಶಿಕ್ಷೆಗೆ ಗುರಿಯಾದವ; ದಂಡಿಸಲ್ಪಟ್ಟವ.

सजाव, पु० ಒಂದು ಬಗೆಯ ಮೊಸರು. स्त्री० ಅಲಂಕಾರ.

सजावट, स्त्री० ಅಲಂಕೃತಿ; ಶೃಂಗಾರ; ಶೋಭೆ; ತಯ್ಯಾರಿ; ಸಿದ್ಧತೆ.

सज़ावार, वि० ಉಚಿತ; ಉಪಯುಕ್ತ.

सजीला, वि० ಸೊಗಸಿನ; ಶೃಂಗಾರಪ್ರಿಯ.

सजीव, वि० ಪ್ರಾಣವುಳ್ಳ; ಬದುಕಿರುವ; ಜೀವಂತ; ಚುರುಕಾದ; ಸ್ಫೂರ್ತಿಯುಳ್ಳ.

सज्जन, पु० ಸತ್ಪುರುಷ; ಇನಿಯ; ಪ್ರಿಯತಮ.

सज्जनता, स्त्री० ಸೌಜನ್ಯತೆ.

सज्जा, स्त्री० ಅಲಂಕೃತಿ; ವೇಷಭೂಷೆ; ಮಂಚ.

सज्जित, वि० ಅಲಂಕೃತವಾದ; ಸಜ್ಜುಗೊಳಿಸಲ್ಪಟ್ಟ; ಸಿದ್ಧವಾದ.

सज्ञान, पु० ಬುದ್ಧಿವಂತ; ಜಾಣ; ವಯಸ್ಸಬಂದವ; ಪ್ರೌಢ. वि० ಜ್ಞಾನವುಳ್ಳ; ಜಾಣನಾದ; ಬುದ್ಧಿವಂತನಾದ; ಜಾಗರೂಕನಾದ.

सटक, स्त्री० ಜಾರಿಕೊಳ್ಳುವಿಕೆ; ನುಸುಳುವಿಕೆ; ಹುಕ್ಕದ ಉದ್ದವಾದ ನಳಿಗೆ

सटकना, अ० ನುಸುಳು; ಜಾರಿಕೊಳ್ಳು; ಪರಾರಿಯಾಗು.

सटकारना, स० ಚಾವಟಿಯಿಂದ ಹೊಡೆ; ಸೆಳೆ..

सटना अ० ಅಂಟು; ಹತ್ತಿಕೊಳ್ಳು; ಮೆತ್ತಿಕೊಳ್ಳು; ಒಂದುಗೂಡು.

सटपट, स्त्री० ಘಾಬರಿ; ಇಬ್ಬಂದಿ.

सटपटाना, अ० ದಿಗಿಲು ಬೀಳು; ಬೆರಗಾಗು; ಸಂಕೋಚಗೊಳ್ಳು.

सटरपटर, वि० ಸಣ್ಣಪುಟ್ಟ; ತುಚ್ಛ; ಅಲ್ಪ.

सटान, स्त्री० ಅಂಟಿಕೊಂಡಿರುವಿಕೆ; ಎರಡು ವಸ್ತುಗಳು ಒಂದಕ್ಕೊಂದು ಕೂಡಿಕೊಂಡಿರುವ ಸ್ಥಳ; ಜಾಯಿಂಟು.

सटाना, स० ಜೋಡಿಸು; ಸೇರಿಸು.

सटीक, वि० ಮೂಲ ಮತ್ತು ಅರ್ಥ ಎರಡೂ ಇರುವ; ಟೀಕಾ ಸಹಿತವಾದ; ಮನಸ್ಸಿಗೆ ಒಪ್ಪಿಗೆಯಾಗುವ ರೀತಿಯ; ಸರಿಯಾದ.

सट्टा पुं० ಒಪ್ಪಂದಪತ್ರ; ಕರಾರುನಾಮೆ; ಅಂಗಡಿಸಾಲು; ಬಜಾರು.

सट्टाबट्टा, पुं० ಅಪ್ತಸ್ನೇಹ; ತನ್ನ ಕಾರ್ಯ ಸಿದ್ಧಿಗಾಗಿ ಮಾಡಲ್ಪಡುವ ಒಳಸಂಚು; ಪಿತೂರಿ.

सठियाना, अ० ಅರವತ್ತು ವರ್ಷದವನಾಗು; ಷಷ್ಟಿ ಪೂರ್ತಿಯಾಗು; ಮುದುಕನಾಗು; ಅರಳುಮರುಳಾಗು.

सड़क, स्त्री० ರಾಜಮಾರ್ಗ; ಬೀದಿ; ರಸ್ತೆ; ಮಾರ್ಗ.

सड़ना, अ० ಕೊಳೆ; ಕೊಳೆತು ಹೋಗು.

सड़सी, स्त्री० दे० **संड़सी.**

सड़ान, स्त्री० ಕೊಳೆಯುವಿಕೆ.

सड़ाना, स० ಕೊಳೆಯಿಸು; ಕೊಳೆ ಹಾಕು.

सड़ियल, वि० ಕೊಳೆತ; ಕೆಲಸಕ್ಕೆ ಬಾರದ; ನಿಷ್ಪ್ರಯೋಜಕವಾದ.

सतत, अव्य० ಎಲ್ಲಕಾಲಕ್ಕೂ; ಸದಾ; ನಿರಂತರ.

सतदल, पुं० ಕಮಲ; ನೂರು ದಳದ ಪದ್ಮ.

सतरंज, स्त्री० दे० **शतरंज.**

सतर, स्त्री० ಗೆರೆ; ರೇಖೆ; ಸಾಲು; ಪಂಕ್ತಿ. वि० ಸೊಟ್ಟೆಯಾಗಿರುವ; ಡೊಂಕಾದ; ವಕ್ರ; ಸಿಟ್ಟುಮಾಡಿಕೊಂಡಿರುವ.

सतराना, अ० ಕೋಪಿಸಿಕೊಳ್ಳು; ಮುನಿಸಿಕೊಳ್ಳು.

सतरौहाँ, वि० ಸಿಟ್ಟಿಗೆದ್ದ; ಕೋಪಗೊಂಡ; ಕುಪಿತನಾದ.

सतर्क, वि० ಜಾಗರೂಕನಾದ; ಎಚ್ಚರದಿಂದಿರುವ.

सतर्कता, स्त्री० ಜಾಗರೂಕತೆ; ಎಚ್ಚರಿಕೆ.

सतसई, स्त्री० ಏಳು ನೂರು ಪದ್ಯಗಳನ್ನುಳ್ಳ ಕಾವ್ಯ ಅಥವಾ ಗ್ರಂಥ; ಸಪ್ತಶತಿ.

सतह, स्त्री० ಪದರು; ಪರೆ; ಯಾವುದಾದರೊಂದು ವಸ್ತುವಿನ ಹೊರಭಾಗ; ಹೊರಮೈ; ಮೇಲ್ಮೈ.

सताना, स० ಕಾಡಿಸು; ಪೀಡಿಸು; ಸತಾಯಿಸು.

सतालू, पुं० ಒಂದು ಫಲ ವಿಶೇಷ; ಪಿಚ್ಚೀಸು ಹಣ್ಣು.

सतावर, स्त्री० ಶತಾವರಿಕೆ ಎಂಬ ಒಂದು ಔಷಧಿಯ ಗಿಡ.

सती, वि० ಗರತಿ; ಪತಿವ್ರತೆ; ಸಾಧ್ವಿ. —होना ಸಹಗಮನಮಾಡು. स्त्री० ಪತಿವ್ರತೆಯಾದ ಹೆಂಗಸು.

सतीत्व, पु० ಪಾತಿವ್ರತ್ಯ.

सतुआ, पु० ಅರಳಿಟ್ಟು.

सतून, पु० ಕಂಬ; ಸ್ತಂಭ.

सत्कार, पु० ಆದರ; ಸನ್ಮಾನ; ಆತಿಥ್ಯ.

सत्त, पु० ತಿರುಳು; ಸತ್ವ.

सत्ता, स्त्री० ಇರುವಿಕೆ; ಅಸ್ತಿತ್ವ; ಶಕ್ತಿ; ಪ್ರಾಣ; ಅಧಿಕಾರ; ಪ್ರಭುತ್ವ.

सत्ताधारी, पु० ಅಧಿಕಾರಿ; ಆಫೀಸರು.

सत्तू, पु० ಸತ್ತುಗ; ತಂಬಿಟ್ಟು

सत्पथ, पु० ಒಳ್ಳೆಯದಾರಿ.

सत्य, वि० ನಿಜವಾದ; ಯಥಾರ್ಥವಾದ. पु० ಸತ್ಯ.

सत्यतः, अव्य० ನಿಜವಾಗಿ; ಯಥಾರ್ಥವಾಗಿ.

सत्याग्रह, पु० ನ್ಯಾಯಕ್ಕೆಂದು ಅಹಿಂಸಾಯುತವಾಗಿ ನಡೆಯುವ ಹೋರಾಟ; ಸತ್ಯಾಗ್ರಹ.

सत्याग्रही, वि० ಸತ್ಯಾಗ್ರಹ ಮಾಡಲು ಯೋಗ್ಯನಾದವ; ಸತ್ಯಾಗ್ರಹ ಮಾಡುವವ.

सत्यनाश, पु० ಸರ್ವನಾಶ; ಧ್ವಂಸ.

सत्यनाशी, वि० ಸರ್ವನಾಶಮಾಡುವವ; ಅದೃಷ್ಟಹೀನ.

सत्र, पु० ಧರ್ಮಸತ್ರ; ಛತ್ರ; ಶಾಲಾ ಕಾಲೇಜುಗಳಲ್ಲಿ ಪಾಠ್ಯದಿನಗಳ ವಿಭಾಗ; ಟರ್ಮು.

सत्व, पु० ಇರುವಿಕೆ; ಅಸ್ತಿತ್ವ; ಸಾರ; ತಿರುಳು; ತತ್ವ; ಮೂಲ ಗುಣ; ವಿಶೇಷತೆ.

सत्वर, अव्य० ಬೇಗನೆ; ಶೀಘ್ರವಾಗಿ;

सद, वि० ನೂರು. स्त्री० ಸ್ವಭಾವ; ಪ್ರಕೃತಿ.

सदक़ा, पु० ದಾನ; ನಿವಾಳಿ.

सदन, पु० ಮನೆ; ಭವನ.

सदमा, पु० ಪೆಟ್ಟು; ಆಘಾತ; ದುಃಖ; ದೊಡ್ಡನಷ್ಟ.

सदय, वि० ದಯೆಯುಳ್ಳವ.

सदर, पु० ಎದೆ; ಮುಂಭಾಗ; ಅಂಗಳ; ಪ್ರಧಾನ; ಮುಖ್ಯಸ್ಥ; ಮುಂದಾಳು; ಅಧ್ಯಕ್ಷ. वि० ಶ್ರೇಷ್ಠ; ದೊಡ್ಡ.

सदर-आज़म, पु० ಮುಖ್ಯ ಮಂತ್ರಿ; ಪ್ರಧಾನ ಮಂತ್ರಿ.

सदर-आला, पु० ಸಹಾಯಕ ಜಡ್ಜಿ.

सदर-नशीन, पु० ಸಭಾಪತಿ; ಅಧ್ಯಕ್ಷ.

सदर-सुद्रर, पु० ಪ್ರಧಾನ ಜಡ್ಜಿ.

सदरी, स्त्री० ತೋಳುಗಳಿಲ್ಲದ ಅಂಗಿ.

सदहा, वि० ನೂರಾರು; ಬಹಳ.

सदा, अव्य० ಯಾವಾಗಲೂ; ನಿರಂತರ. स्त्री० ಪ್ರತಿಧ್ವನಿ; ಮಾರ್ದನಿ; ಕೂಗು.

सदाक़त, स्त्री० ಸತ್ಯತೆ; ನಿಜ; ಸಾಕ್ಷ್ಯ.

सदाचरण, सदाचार } पु० ಒಳ್ಳೆ ನಡತೆ.

सदाबरत } पुं० ಅನ್ನದಾನ; ಬಡ
सदाबर्त } ಬಗ್ಗರಿಗೆ ಭಿಕ್ಷೆಕೊಡುವುದು.

सदाबहार, वि० ಯಾವಾಗಲೂ ಪುಷ್ಪಿತವಾಗಿರುವ.

सदारत, स्त्री० ಅಧ್ಯಕ್ಷತೆ.

सदासुहागिन, वि० ನಿತ್ಯಸುಮಂಗಲಿ; ಯಾವಾಗಲೂ ಮುತ್ತೈದೆಯಾಗಿರುವ. स्त्री० ಸೂಳೆ; ವೇಶ್ಯೆ.

सदी, स्त्री० ನೂರುವರ್ಷಗಳ ಕಾಲ; ಶತಮಾನ; ಶತಾಬ್ದಿ; ನೂರರ ಸಮೂಹ; ಶೇಕಡ.

सदृश, वि० ಸಮಾನವಾದ; ಅನುರೂಪವಾದ; ಸಮನಾದ.

सदेह, क्रि० ದೇಹದೊಡನೆ.

सदैव, अव्य० ಯಾವಾಗಲೂ; ಸದಾ.

सद्य } अव्य० ಇಂದೇ; ಈಗಲೇ;
सद्यः } ಕೂಡಲೇ; ತತ್ಕಾಲದಲ್ಲಿ.

सधना, अ० ಸಿದ್ಧಿಯಾಗು; ಸಾಧಿಸಲ್ಪಡು; ನೆರವೇರು; ಈಡೇರು; ಅಭ್ಯಾಸವಾಗು; ಕುದುರು; ಅಳತೆಗೆ ತಕ್ಕಂತಿರು.

सधवा, स्त्री० ಮುತ್ತೈದೆ; ಸುಮಂಗಲಿ.

सधाना स० ಸಾಧಿಸುವಂತೆಮಾಡು.

सन्, पुं० ವರ್ಷ; ಸಂವತ್ಸರ; ಯಾವುದಾದರೊಂದು ಶಕೆಗೆ ಸಂಬಂಧಿಸಿದ ವರ್ಷ.

सन, पुं० ಸೆಣಬಿನಗಿಡ. वि० ನಿಶ್ಶಬ್ದ; ಸ್ತಬ್ಧ; ಮಾತಾಡದ; ಮೌನ.

सनअत, स्त्री० ಕೆಲಸಗಾರಿಕೆ; ಕಲಾಕೌಶಲ್ಯ.

सनई, स्त्री० ಸಣ್ಣಜಾತಿಯ ಸೆಣಬು.

सनक, स्त्री० ಗೀಳು; ಮರಳು; ಆಸಕ್ತಿ; ಹುಚ್ಚು.

सनकना, अ० ಹುಚ್ಚನಾಗು; ಗಾಳಿಯಲ್ಲಿ ವೇಗವಾಗಿ ಹೋಗು.

सनकाना, स० ಹುಚ್ಚನಾಗಿಮಾಡು; ಹುಚ್ಚುಹಿಡಿಸು.

सनकी, वि० ಹುಚ್ಚ; ಮರುಳ.

सनद, स्त्री० ಪ್ರಮಾಣ; ರುಜುವಾತು; ಸರ್ಟಿಫಿಕೇಟು; ಸನ್ನದ್ದು.

सनद-याफ़्ता, वि० ಯೋಗ್ಯತಾ ಪತ್ರವನ್ನು ಪಡೆದ; ಪರೀಕ್ಷೆಯಲ್ಲಿ ಉತ್ತೀರ್ಣನಾದ.

सनना, अ० ಮೆತ್ತಿಕೊಳ್ಳು; ಬೆರೆ; ಕಲೆ; ಬೆರೆತುಹೋಗು.

सनम, पुं० ಪ್ರಿಯನು; ಪ್ರತಿಮೆ.

सनमान, पुं० ಆದರ; ಗೌರವ.

सनमुख, अव्य० ಎದುರಿಗೆ; ಎದುರಿನಲ್ಲಿ.

सनसनी, स्त्री० ಜೋಮುಹಿಡಿದಂತಾಗುವಿಕೆ; ಉದ್ವೇಗ; ಘಾಬರಿ; ನಿಶ್ಶಬ್ದತೆ; ನೀರವತೆ.

सनहकी, स्त्री० ಮುಸಲ್ಮಾನರು ಉಪಯೋಗಿಸುವ ಒಂದು ಬಗೆಯ ಮಣ್ಣಿನ ಪಾತ್ರೆ.

सनाअत, स्त्री० ಹಸ್ತಕೌಶಲ.

सनाय, स्त्री० ಸೋನಾಮುಖಿಯೆಂಬ ವಿರೇಚನಕಾರಿಯಾದ ಒಂದು ಸೊಪ್ಪು.

सनाह, पु० ಕವಚ.
सनेह, पु० ಸ್ನೇಹ; ಪ್ರೇಮ.
सनेही, वि० ಸ್ನೇಹಿ; ಪ್ರೇಮಿ. पु० ಪ್ರೀತಿಸುವವ; ಸ್ನೇಹಿತ.
सन्दूक, पु० दे० संदूक.
सन्न, वि० ಬೆಚ್ಚಿ ಬಿದ್ದ ಸ್ತಬ್ಧ; ಮಾತೇ ಇಲ್ಲದ; ಕಡುಮೌನವಾದ.
सन्नद्ध, वि० ಕಟ್ಟಲ್ಪಟ್ಟ; ಬಿಗಿಸಲ್ಪಟ್ಟ; ಸಿದ್ಧನಾದ; ತಯಾರಾಗಿರುವ; ಹತ್ತಿರದ; ಸಮೀಪದ.
सन्नाटा, पु० ನಿಶ್ಶಬ್ದತೆ; ಸ್ತಬ್ಧತೆ; ನಿಶ್ಚಲತೆ.
सन्नाह पु० ಕವಚ; ಉಕ್ಕಿನಂಗಿ; ಪ್ರಯತ್ನ; ಸನ್ನಾಹ.
सन्निकट अव्य० ಹತ್ತಿರ; ಸಮೀಪ.
सन्निपात, पु० ವಾತ ಪಿತ್ತ ಶ್ಲೇಷ್ಮ ಇವುಮೂರರ ದೋಷವೂ ಒಂದೇ ಕಾಲದಲ್ಲಿ ಉಂಟಾಗುವಿಕೆ; ತ್ರಿದೋಷ.
सन्निविष्ट, पु० ಜೊತೆಯಲ್ಲಿ ಕೂತಿರುವ; ಇಡಲ್ಪಟ್ಟ.
सन्मान, पु० ಆದರ; ಗೌರವ.
सन्मुख, अव्य० ಎದುರಿಗೆ; ಎದರಿನಲ್ಲಿ.
सपत्नी, स्त्री० ಗಂಡನ ಎರಡನೆಯ ಹೆಂಡತಿ; ಸವತಿ.
सपत्नीक, वि० ಪತ್ನಿಸಮೇತ.
सपथ, पु० दे० शपथ.
सपन
सपना } ಪು० ಕನಸು: ಸ.ಪ.
सपरदाई, पु० ವೇಶ್ಯೆಯು ಹಾಡುತ್ತಿರುವಾಗ ಪಕ್ಕವಾದ್ಯವನ್ನು ಬಾರಿಸುವವ.
सपरना, अ० ಮುಗಿ; ಪೂರ್ತಿಯಾಗು; ಸಾಧ್ಯವಾಗು; ಪೂರೈಸು
सपराना, स० ಪೂರೈಸು; ಮುಗಿಸು; ಮಾಡಲು ಸಾಧ್ಯವಾಗು.
सपाट, वि० ಸಮತಳವಾದ; ನುಣ್ಣಗಿರುವ.
सपाटा, पु० ವೇಗ; ಓಟ; ಓಡಾಟ; ತಿರುಗಾಟ.
सपुर्द, स्त्री० ರಕ್ಷಣಾರ್ಥವಾಗಿ ಯಾವುದಾದರೊಂದು ವಸ್ತುವನ್ನು ಮತ್ತೊಬ್ಬರ ವಶಕ್ಕೆ ಒಪ್ಪಿಸುವುದು.
सपूत, पु० ಕರ್ತವ್ಯಪರಾಯಣನಾದ ಮಗ; ಸತ್ಪುತ್ರ.
सपेत
सपेद } वि० दे० सफ़ेद.
सपेरा पु० दे० सँपेरा.
सपेला
सपोला } पु० दे० सँपोला.
सप्ताह, पु० ಒಂದುವಾರ; ಏಳು ದಿನಗಳ ಕಾಲ.
सफ़, स्त्री० ಪಂಕ್ತಿ; ಸಾಲು.
सफ़-आरा, वि० ಸೈನ್ಯವನ್ನು ಸಾಲಾಗಿ ನಿಲ್ಲಿಸುವ ಅಧಿಕಾರಿ.

सफ़गोल, पु० ಇಸಕೋಲೆ ಬೀಜ.

सफ़-जंग, स्त्री० ವ್ಯೂಹರಚನೆ.

सफ़र, पु० ಯಾತ್ರೆ; ಪ್ರಯಾಣ; ಸಂಚಾರ.

सफ़रदाई पु० दे० सफरदाई.

सफ़रा, पु० ಪಿತ್ತ.

सफ़री, वि० ಯಾತ್ರೆಯಲ್ಲಿ ಉಪಯೋಗಕ್ಕೆ ಬರುವ. पु० ದಾರಿ ಖರ್ಚು; ದಾರಿಯಲ್ಲಿ ಬೇಕಾದ ಸಾಮಾನು; ಸೀಬೆಹಣ್ಣು.

सफल, वि० ಸಾರ್ಥಕವಾದ; ಫಲಕಾರಿ; ಕೃತಕಾರ್ಯನಾದ.

सफलता, ಕಾರ್ಯಸಿದ್ಧಿ; ಜಯ.

सफ़हा, पु० ಪುಟ; ಹಾಳೆ.

सफ़ा, वि० ತಿಳಿಯಾದ; ಸ್ವಚ್ಛವಾದ; ಪವಿತ್ರವಾದ.

सफ़ाई, स्त्री० ನಿರ್ಮಲತೆ: ಸ್ವಚ್ಛತೆ; ಸಾಲವು ತೀರಿಹೋಗುವಿಕೆ; ತೀರ್ಮಾನ; ನಿರ್ಣಯ.

सफ़ा-चट, वि० ಚೊಕ್ಕಟವಾದ; ಅತ್ಯಂತ ಸ್ವಚ್ಛವಾದ.

सफ़ाया, पु० ಫೈಸಲು; ತೀರ್ಮಾನ; ನಾಶ.

सफ़ी वि० ಪವಿತ್ರವಾದ; ಶುದ್ಧವಾದ.

सफ़ीना, पु० ದೋಣಿ; ನೋಟ್ ಬುಕ್ಕು; ಕೋರ್ಟಿನ ಸಮನ್ಸು.

सफ़ीर, पु० ರಾಜದೂತ; ರಾಯಭಾರಿ. स्त्री० ಪಕ್ಷಿಗಳ ಕಲರವ ಧ್ವನಿ.

सफ़ूफ़, पु० ಚೂರ್ಣ; ಪುಡಿ.

सफ़ेद, वि० ಬಿಳಿಯ; ಶುಭ್ರ.

सफ़ेद-पोश, वि० ಶುಭ್ರವಾದ ವಸ್ತ್ರ ಧರಿಸಿದವ; ಮರ್ಯಾದಸ್ಥ.

सफ़ेदा, पु० ವಂಗಭಸ್ಮ; ಒಂದು ಬಗೆಯ ಮಾವಿನ ಹಣ್ಣು; ಒಂದು ಬಗೆಯ ಕರಬೂಜದ ಹಣ್ಣು.

सफ़ेदी, स्त्री० ಬಿಳುಪು; ಶುಭ್ರತೆ; ಬೆಳಕು ಹರಿಯುವಿಕೆ; ಸುಣ್ಣ ಬಳಿಯುವಿಕೆ.

सफ़्फ़ा, वि० ಸ್ಪಷ್ಟ; ನಾಶವಾದ.

सफ़्फ़ाक, वि० ಕೊಲೆಗಡುಕ; ನಿರ್ದಯಿ; ಕಟುಕ.

सब, अव्य० ಎಲ್ಲಾ; ಇಡೀ; ಸಮಸ್ತ.

सबक़, पु० ಪಾಠ; ಶಿಕ್ಷಣ; ಉಪದೇಶ

सबक़त, स्त्री० ಒಂದು ಕೆಲಸದಲ್ಲಿ ಮತ್ತೊಬ್ಬನಿಗಿಂತ ಮುಂದುವರಿಯುವುದು.

सबब, पु० ಕಾರಣ; ಹೇತು.

सबर, पु० दे० सब्र.

सबल वि० ಬಲಶಾಲಿ. पु० ಕಣ್ಣಿನ ಒಂದು ರೋಗ.

सबहा, पु० ಮಾಲೆಯ ಮಣಿಗಳು.

सबा, स्त्री० ಮೂಡಣ ಗಾಳಿ.

सबात, पु० ಸ್ಥಿರತೆ; ಧೃಢತೆ.

सबाह, स्त्री० ಪ್ರಾತಃಕಾಲ; ಬೆಳಗ್ಗೆ.

सबाहत, स्त्री० ಬಿಳಿಪು; ಸೌಂದರ್ಯ.

सबील, स्त्री० ದಾರಿ; ಮಾರ್ಗ; ಉಪಾಯ.

सबीह, वि० ಬಿಳಿಯ ಬಣ್ಣದ.

सबू, पु० ಮಡಕೆ.

सबूचा, पु० ಚಿಕ್ಕ ಮಡಕೆ.

